ಸಂಪುಟ ೮
ಸಂಚಿಕೆ ೨

ಕರ್ನಾಟಕ ಭಾರತಿ

ರಾಜ್ಯೋತ್ಸವ ಸಂಚಿಕೆ

೧೯೭೫

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ, ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ- ೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯತೃತಿಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಡಿಮಾಂಡ್‌ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ-೫೮೦೦೦೩

ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೨

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೨

ನವ್ಹಂಬರ ೧೯೭೫

ರಾಜ್ಯೋತ್ಸವ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಮುದ್ರಕರು :

ಸೋಮಶೇಖರ ಅಕಳವಾಡಿ
ಮನೋಹರ ಮುದ್ರಣಾಲಯ, ಧಾರವಾಡ

ಪರಿವಿಡಿ

೧ ಅನುಭವ ಸಾಲದೆನ್ನುವ ಅಭಿವ್ಯಕ್ತಿ (ಕವನ) ೧–೨

— ಎ. ಸಿದ್ಧೇಶ್ವರ

೨ ಕನ್ನಡ ವ್ಯಾಕರಣ ವಿಚಾರ : ಒಂದು ವಿವೇಚನೆ ೩–೯

— ಲಿಂಗದೇವರು ಹಳೆಮನೆ

— ಎಂ. ಎಸ್. ಲೀಲಾವತಿ

೩ ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು ೧೦–೨೨

— ಅ. ಸುಂದರ

೪ ಸಂಶೋಧನೆ (ಕವನ) ೨೩–೨೪

— ಬಸವರಾಜ ಸಬರದ

೫ ವೈದಿಕ ಛಂದಸ್ಸು ೨೫–೩೩

— ವಿಷ್ಣು ಸುತ

೬ ಪಂಪ : ಒಂದು ಅಧ್ಯಯನ (ವಿವೇಚನೆ) ೩೪–೪೩

— ಗೌರೀಶ ಕಾಯ್ಕಿಣಿ

೭ ಅಕ್ಕಮಹಾದೇವಿಯ ಗಂಡ ಕೌಶಿಕನನ್ನು ೪೪–೫೮
ಇತಿಹಾಸದಲ್ಲಿ ಗುರುತಿಸುವ ಒಂದು ಪ್ರಯತ್ನ

— ಎಂ. ಚಿದಾನಂದಮೂರ್ತಿ

೮ ಬಿಜ್ಜಾವರ ಮತ್ತು ಸಿದ್ಧಾಪುರ ೫೯–೬೪

— ಬಿ. ಶಿವಮೂರ್ತಿ ಶಾಸ್ತ್ರಿ

೯ ಅಂಶಗಣದ ಇತಿಹಾಸ ೬೫–೭೨

— ಎಂ. ಎಂ. ಕಲಬುರ್ಗಿ

೧೦ ಗಂಡ–ಹೆಂಡರಿಗೆ ಮುಗದಾವ ಆ ಕ್ವಾಟಿ (ಜಾನಪದ ದುರಂತಗೀತ) ೭೩–೭೫

— ಎಚ್. ಬಾಲರಾಜು

— ಎಸ್. ಎಸ್. ಹಿರೇಮಠ

೧೧ ಕವಿ ಶಾಂತಿಕೀರ್ತಿ ಮುನಿ ೭೬–೮೦

— ಬಿ. ಬಿ. ಮಹೀಶವಾಡಿ

೧೨ ಕೆಳದಿ ಅರಸರ ಕಾಲ ನಿರ್ಣಯ — ೮೧–೧೦೦
— ಗುಂಡಾ ಜೋಯಿಸ್

೧೩ ದ್ರಾವಿಡ ಸಂಧ್ಯಕ್ಷರಗಳು (ಪರಿಶೀಲನೆ) — ೧೦೧–೧೦೬
— ಸಂಗಮೇಶ ಸವದತ್ತಿಮಠ

೧೪ ಪಂಚವಿ (ಕವನ) — ೧೦೭
— ಸಿದ್ಧಲಿಂಗ ದೇಸಾಯಿ

೧೫ ಕವಿ ಚಿಕ್ಕಮಲ್ಲಣನ ಅಳ್ನಾವರ ನಿಷಿಧಿಶಾಸನ — ೧೦೮–೧೧೪
— ಆರ್. ಎನ್. ಗುರವ

೧೬ ಪ್ರಾಚೀನ ಭಾರತದಲ್ಲಿ ನ್ಯಾಯಾಡಳಿತ — ೧೧೫–೧೩೦
— ಕಂಠೀರಾವ್

೧೭ ಕರೀಮ್‌ನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು — ೧೩೧–೧೪೧
— ಸೀತಾರಾಮ ಜಾಗೀರ್‌ದಾರ್

೧೮ ಮೈಸೂರು ಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಹಾಗೂ ಅಪ್ರಕಟಿತ ಶಾಸನಗಳ ಸೂಚಿ — ೧೪೨–೧೫೩
— ಎಸ್. ಶೆಟ್ಟರ್
— ಎಸ್. ರಾಜಶೇಖರ

೧೯ ಒರೆಗಲ್ಲು : — ೧೫೪–೧೫೬

ದೇವವ್ರತ, ಬಿಮ್ಮನಸೆ
— ಸಿ. ಪಿ. ಕೆ.

ಲೀಲಾವತಿಯ ಒಂದು ಪದ್ಯ
— ಎಸ್. ಶಿವಣ್ಣ

೨೦ ಗ್ರಂಥಾವಲೋಕನ — ೧೫೭–೧೬೨
— ಶ್ರೀನಿವಾಸ ಕುಲಕರ್ಣಿ

೨೧ ಸತ್ಕಾರಕ್ಕೆ ಕೃತಜ್ಞತೆ : ಡಾ. ದೇ. ಜ. ಗೌ. — ೧೬೩–೧೬೫

೨೨ ಸಂಪಾದಕೀಯ — ೧೬೬–೧೬೮

೨೩ ಸಾದರ ಸ್ವೀಕಾರ — ೧೬೯–೧೭೦

೨೪ ಈ ಸಂಚಿಕೆಯ ಲೇಖಕರು — ೧೭೧–೧೭೨



ಕೇಂದ್ರ ಶಿಕ್ಷಣಸಚಿವರಾದ ಮಾನ್ಯ ಡಾ. ನೂರುಲ್ ಹಸನ್ ಅವರಿಂದ ಘಟಿಕೋತ್ಸವ ಭಾಷಣ



ಇಪ್ಪತ್ತಾರನೆಯ ಘಟಿಕೋತ್ಸವದ ಒಂದು ದೃಶ್ಯ

ಫೋಟೋ : ಪ್ರಭಾಕರ ನಾಯಕ

ಅನುಭವ ಸಾಲದೆನ್ನುವ ಅಭಿವ್ಯಕ್ತಿ

ಎ. ಸಿದ್ಧೇಶ್ವರ

'ಕಲಿ ಕರ್ಣನಂತೆ
ಕಲಿತ ವಿದ್ಯೆಯನೆಲ್ಲ
ನಿರರ್ಥಕಗೊಳಿಸಿ'
ಭವಿಷ್ಯದ ಯಾವುದೋ....
ಬತ್ತಲು ಕುದುರೆಯ ಬೆನ್ನುತ್ತಿ
ಬದುಕಿನ ಹೊಸ ತಿರುವಿನಲ್ಲಿ
ಹೊರಳಬೇಕಾದ........
ನಾನು——
ನಡುಹಗಲಲ್ಲಿಯೇ
ಮೊಳಕೆ ಒಡೆಯುವ ಮುನ್ನವೆ
ಬದುಕಿನ ಅಮೂರ್ತದಲ್ಲಿಯೇ
[ಅ]ನಿಶ್ಚಿತ ರೂಪಕೊಟ್ಟು
ಮಣ್ಣಿನಲ್ಲಿಯೇ ನನ್ನ
ಅಭಿವ್ಯಕ್ತಿಯನ್ನು ಕಂಡು–
ಕೊಳ್ಳಲು; ನಾನೀಗ
ಕೃಷಿಗಿಳಿದಿದ್ದೇನೆ.
ಅನುಭವ ಸಾಲದೆನ್ನುವ, ಹಸಿ–
ವ್ಯೆಯಲ್ಲಿಯ ಬಿಸಿ–ಬಿಸಿ–
ರಕ್ತ–ಮಾಂಸಲಗಳು
ಶಬ್ದ–ಶಬ್ದವಾಗಿ, ಸರ–
ಮಾಲೆಯಾಗಿ ಚೆಲ್ಲನೆ ಚಿಮ್ಮದೆ,
ಹನಿ–ಹನಿ, ಅಕ್ಷ–ಅಕ್ಷರಗಳಾಗಿ
ತೊಟ್ಟಿಕ್ಕುತ್ತಾS........
ಶುಷ್ಕ ಬದುಕಿನ ಭೂಮಿಗೆ
ಎದೆಯ ಮಾಂಸವ ಮಣ್ಣಿಕ್ಕಿ

ಕೆಂಧೂಳೆಬ್ಬಿಸುತ್ತ; ಹಲವಾರು ಆಸೆ-
ಕೈಗಳಿಂದ ಮಣ್ಣನ್ನು ಬಾಚಿ-
ತಬ್ಬುತ್ತ; 'ಅವಳ ಬರೀ ಮೈಯಲ್ಲಿ'
ನೂರೆಂಟು ಕನಸುಗಳ—
ಕನವರಿಸುತ್ತ; 'ಮೂಕ ಬಸವ'ನಂತೆ
ಬೆವರಿಳಿಸುತ್ತ; ಮೈ ಮುರಿದು
ದುಡಿಯುತ್ತಿದ್ದೇನೆ.

■ ■

ಕನ್ನಡ ವ್ಯಾಕರಣ ವಿಚಾರ : ಒಂದು ವಿವೇಚನೆ

ಲಿಂಗದೇವರು ಹಳೆಮನೆ
ಎಂ. ಎಸ್. ಲೀಲಾವತಿ

'ಪ್ರಯೋಗ ಶರಣಂ ವೈಯಾಕರಣಂ' ಎಂದು ಘೋಷಿಸಿದ ಕೇಶಿರಾಜ ತನ್ನ ವ್ಯಾಕರಣಕ್ಕೆ ಪೂರ್ವಕವಿಗಳ ಪ್ರಯೋಗಗಳನ್ನು ಬಳಸಿಕೊಂಡಿದ್ದಾನೆ. ವರ್ಣನಾತ್ಮಕ ಭಾಷಾವಿಜ್ಞಾನಿಯಾಗಿ ತನ್ನ ವ್ಯಾಕರಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾನೆ. ಈ ದೃಷ್ಟಿಯಿಂದಲೇ ಅವನ 'ಶಬ್ದಮಣಿದರ್ಪಣ' ಕನ್ನಡದ ವ್ಯಾಕರಣಗಳಲ್ಲೆಲ್ಲಾ ಅತ್ಯಂತ ಉಪಾದೇಯವಾದುದು. ಅವನ ದೃಷ್ಟಿ ವೈಜ್ಞಾನಿಕವಾದರೂ ಭಾಷೆಯ ಸಾಂಪ್ರದಾಯಿಕ ಕಟ್ಟುಪಾಡಿಗೆ ಒಳಗಾದ ಅವನು ಕೆಲವೊಮ್ಮೆ ನಮಗೆ ಊನವಾಗಿ ಕಂಡು ಬಿಡುವುದು ಉಂಟು. ಆದರೆ ವಿಮರ್ಶಕ, ವೈಜ್ಞಾನಿಕ ಹಾಗೂ ಸಾಂಪ್ರದಾಯಿಕ ಧೋರಣೆಗಳನ್ನು ಒಕ್ಕೆಡೆಯಲ್ಲಿ ಕಾಣುವಾಗ ಅಲ್ಲಿನ ಲೋಪಗಳೇ ಮುಂದಿನ ಪ್ರಗತಿಗೆ ಮುಖ್ಯ ದಾರಿಸೂಚಕಗಳಾಗಿ ಕಾಣುತ್ತವೆ. ಈ ದೃಷ್ಟಿಯಿಂದ 'ಶಬ್ದಪಾರಮಾರ್ಗಮ-ಶಕ್ಯಂ' ಎಂದುಕೊಳ್ಳುತ್ತಲೇ ಹೊಸಹೊಸ ವಿವರಣೆಗಳು ಹುಟ್ಟಿಕೊಳ್ಳುವುದುಂಟು. ಅದರಲ್ಲೂ ಆಧುನಿಕ ಭಾಷಾವಿಜ್ಞಾನ ಪ್ರಗತಿಗೊಂಡಿರುವ ಇಂದು ಇಂಥವೆಲ್ಲಾ ಹೆಚ್ಚು ನಿಕಷಕ್ಕೆ ಒಳಗಾಗುತ್ತಿವೆ.

ಕೆಲವೊಮ್ಮೆ ವ್ಯಾಕರಣದ ಶುದ್ಧ ದೃಷ್ಟಿಯಿಂದ ಯಾವುದು ಭಾಷೆಯಲ್ಲಿ ಸಾಧ್ಯವಾಗದೋ ಅಂಥದು ಕವಿವೃಷಭರ ಕೃತಿಗಳಲ್ಲಿ ಮೈತಳೆದು ಇನ್ನೊಂದು ಸೂತ್ರವನ್ನೇ ನಿರೂಪಿಸುವಷ್ಟು ಸಮರ್ಥವಾಗುತ್ತದೆ. ಇಂಥ ಕಡೆಯಲ್ಲಿ ಕವಿಗಳು ಶಾಸಕರಾಗುತ್ತಾರೆ; ಭಾಷೆ ಅವರನ್ನು ಪಾಲಿಸುತ್ತದೆ. ಹೀಗೆ ಬಳಕೆಗೊಂಡ ರೂಪ ಕ್ರಮೇಣ ಭಾಷೆಯಲ್ಲಿ ಒಂದಾಗಿ ಸಹಜವೆನಿಸುತ್ತದೆ. ಹೀಗೆ ಗ್ರಂಥಸ್ಥವಾಗಿ ಆಡುನುಡಿಯಲ್ಲಿ ಬಂದ ಒಂದು ಸಮಸ್ಯೆಯನ್ನು ಎತ್ತಿಕೊಂಡು ಇಲ್ಲಿ ಚರ್ಚಿಸಲಾಗಿದೆ.

ಸಧ್ಯ ಕೇಶಿರಾಜನ ೧೫೨ನೆಯ ಸೂತ್ರಕ್ಕೆ ಬರೋಣ.

ಕೂಡಿನಡೆವೆಡೆಯೊಳೆಂದುಂ
ಕೂಡದು ಲಿಂಗತ್ರಯಕ್ಕೆ ತರತಮಭಾವಂ
ನೀಡುಂ ವಾಕ್ಯದ ಕಡೆಯೊಳ್
ಕೂಡಿರ್ದುದದಾವುದದುವೆ ಮುಖ್ಯಮೆನಿಕ್ಕುಂ

ಇಲ್ಲಿ ಗಮನಿಸಬೇಕಾದ ಅಂಶ ಎರಡು :

(೧) ಜೊತೆಜೊತೆಯಾಗಿ ಬರುವ ಲಿಂಗಕ್ಕೆ ಭೇದಭಾವವಿಲ್ಲ.

(೨) ವಾಕ್ಯದ ಕಡೆಯ ಕರ್ತೃಪದದ ಗುಣಕ್ಕೆ ತಕ್ಕಂತೆ ಕ್ರಿಯಾಪದ ಹೊಂದಿಕೊಳ್ಳುತ್ತದೆ.

ಇದಕ್ಕೆ ಕೇಶಿರಾಜ ಕೊಡುವ ಉದಾಹರಣೆ :

ಸೇನೆಯುಮರಸಿಯುಮರಸನುಂ ಬಂದರ್
ಆನೆಯುಮರಸನುಮರಸಿಯುಂ ಬಂದರ್
ಅರಸನುಮರಸಿಯುಂ ಚತುರಂಗಬಲಮುಂ ಬಂದವು.

ಮೇಲಿನ ಉದಾಹರಣೆಯಲ್ಲಿ ಅರಸ, ಅರಸಿ, ಚತುರಂಗಬಲ ಇದಕ್ಕೆ ಲಿಂಗಭೇದವಿಲ್ಲ. ಅಂದರೆ ಈ ಮೂರೂ ಒಟ್ಟಿಗೆ ಬಂದಾಗ ಎಂಬುದು ಇಲ್ಲಿ ಅಧ್ಯಾಹಾರ. ಇದನ್ನು ವೈಜ್ಞಾನಿಕವಾಗಿ ಪರಿಶೀಲಿಸಿದಾಗ ಇಲ್ಲಿಯ ಅಸಂಗತತೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆಧುನಿಕ ಕನ್ನಡ ವೈಯಾಕರಣಿಗಳೂ ರೂಢಿಗತವಾದ ರೂಪವನ್ನೇ ಅನುಮೋದಿಸುತ್ತಾ ಭಿನ್ನಭಿನ್ನವಾದ ಅನೇಕ ಕರ್ತೃಪದಗಳು ಒಂದು ಕ್ರಿಯೆಗೆ ಇರುವಾಗ ಕರ್ತೃಪದದ ಲಿಂಗವೇ ಕ್ರಿಯಾಪದಕ್ಕೆ ಬರುವುದು ಎಂದು ಹೇಳಿ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅಂಥ ಕೆಲವು ಉದಾಹರಣೆಗಳನ್ನು ಈಗ ಪರಿಶೀಲಿಸೋಣ.

೧. (ಅ) ನಾಯಿ, ಬೆಕ್ಕು, ಹುಡುಗ ಬಂದರು.

(ಬ) ನಾಯಿಗಳು, ಬೆಕ್ಕುಗಳು, ಹುಡುಗರು ಬಂದರು.

೨. ನಾಯಿಗಳೂ ಬೆಕ್ಕುಗಳೂ ಹುಡುಗರೂ ಬಂದರು.

೩. ನಾಯಿಗಳು, ಬೆಕ್ಕುಗಳು ಮತ್ತು ಹುಡುಗರು ಬಂದರು.

೧ (ಅ) ನಲ್ಲಿ ನಾಯಿ, ಬೆಕ್ಕು, ಹುಡುಗ ಎನ್ನುವ ಕರ್ತೃಪದಗಳು ಏಕವಚನದಲ್ಲಿದ್ದರೂ ಕ್ರಿಯೆ ಬಹುವಚನದಲ್ಲಿ ಕೊನೆಗೊಂಡಿದೆ. ಕರ್ತೃಪದಗಳು ಒಂದಕ್ಕಿಂತ ಹೆಚ್ಚಾದ್ದರಿಂದ ಕ್ರಿಯಾಬಹುವಚನ ಉಂಟಾಗಿದೆ.

೧ (ಬ) ಈ ವಾಕ್ಯದಲ್ಲಿ ನಾಯಿಗಳು, ಬೆಕ್ಕುಗಳು, ಹುಡುಗರು ಬಂದರು. ಎನ್ನುವಾಗ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಒಂದೊಂದು ಕರ್ತೃವೂ ಇವೆ. ಯಥಾಪ್ರಕಾರ ಕ್ರಿಯಾಬಹುವಚನ ಮಹತ್ ಕರ್ತೃವಿನೊಡನೆ ಹೊಂದಿಕೊಂಡಿದೆ.

೨ ಮತ್ತು ೩ನೆಯ ವಾಕ್ಯದಲ್ಲಿ ಸಂಬಂಧಸೂಚಕಾವ್ಯಯಗಳನ್ನು ಬಳಸಿಕೊಂಡು, ಇವೆಲ್ಲಾ ಬಂದವು ಎಂದು ತಿಳಿಸಲಾಗಿದೆ. ಈ ಎರಡು ವಾಕ್ಯಗಳೂ ರಚನೆಯಲ್ಲಿ

ಮೊದಲೆರಡು ವಾಕ್ಯಗಳಿಗಿಂತ ಸ್ಪಷ್ಟವಾಗಿವೆ. ನಾಯಿಗಳೂ ಬೆಕ್ಕುಗಳೂ ಹುಡುಗರೂ ಬಂದರು. ಇಲ್ಲಿ 'ಊ' ಸಮುಚ್ಚಯ ಒಂದೊಂದು ಕರ್ತೃಗಳಿಗಿರುವ ಸಂಬಂಧವನ್ನು ಸೂಚಿಸುತ್ತದೆ. ಆದರೂ ಹುಡುಗರ ಜೊತೆ ನಾಯಿಗಳು, ಬೆಕ್ಕುಗಳು ಬಂದವು ಎಂಬ ಗೊಂದಲಾತೀತ ರಚನೆಯಾಗಿ ಕಂಡುಬರುವುದಿಲ್ಲ. ಹಾಗೆಯೇ ವಾಕ್ಯ ೩ ಸಹ. ಈ ವಾಕ್ಯಗಳಲ್ಲಿ ಮೂರು ವಾಕ್ಯಗಳಿವೆ ಎಂದಿಟ್ಟುಕೊಂಡರೆ,

ನಾಯಿಗಳು ಬಂದವು.

ಬೆಕ್ಕುಗಳು ಬಂದವು.

ಹುಡುಗರು ಬಂದರು.

ಎಂಬ ಸರಳ ವಾಕ್ಯಗಳು ಸಿಗುತ್ತವೆ. ಈ ಸರಳ ವಾಕ್ಯವನ್ನೇ ಸಂಕೀರ್ಣ ವಾಕ್ಯವನ್ನಾಗಿಸುವಾಗ ಹುಡುಗರ ಜೊತೆ ನಾಯಿ, ಬೆಕ್ಕುಗಳು ಬಂದವು ಎಂದು ಹೇಳಿ, ಇಲ್ಲಿಯ ಸಮಸ್ಯೆಯನ್ನು ಹೋಗಲಾಡಿಸಬಹುದು. ಇದಕ್ಕೆ ಸಮರ್ಥನೆ ಕೊಡಲು ಮುಂದೆ ತಮಿಳಿನ ಉದಾಹರಣೆಯನ್ನು ತೆಗೆದುಕೊಂಡಿದ್ದೇವೆ.

೪. ಹುಡುಗರು, ನಾಯಿಗಳು, ಬೆಕ್ಕುಗಳು ಬಂದವು.

ಇಲ್ಲಿ ಕ್ರಿಯಾಪದದ ಆಖ್ಯಾತಪ್ರತ್ಯಯ ನಪುಂಸಕಲಿಂಗದ ಬಹುವಚನದಿಂದ ಕೂಡಿದೆ.

ಕನ್ನಡದ ಜ್ಞಾತಿಭಾಷೆಯಾದ ತಮಿಳಿನಲ್ಲಿ ಇದಕ್ಕೆ ತದ್ವಿರುದ್ಧವಾದ ವಿಧಾನವನ್ನು ಕಾಣುತ್ತೇವೆ. ದ್ರಾವಿಡ ಭಾಷೆಯ ಮೂಲ ಲಕ್ಷಣದ ಚಹರೆ ತಮಿಳಿನಲ್ಲಿ ಇನ್ನೂ ಉಳಿದುಕೊಂಡು ಬಂದಿದೆ. ಉದಾಹರಣೆಗೆ ತಮಿಳಿನಲ್ಲಿ (ಆಡುನುಡಿ)

ನಾಯಿ, ಬೆಕ್ಕು, ಹುಡುಗ ಬಂದರು.

ಎಂದು ಬಳಸಬಹುದು. ಆದರೆ,

ಹುಡುಗ, ನಾಯಿ, ಬೆಕ್ಕು ಬಂದವು.

ಎಂದು ಬಳಸಲು ಸಾಧ್ಯವಿಲ್ಲ.

ಅಂದರೆ ಹುಡುಗನು ನಾಯಿ, ಬೆಕ್ಕುಗಳಿಗಿಂತ ಶ್ರೇಷ್ಠನಾದ್ದರಿಂದ ಅವನು ಅವುಗಳನ್ನು ಆಕ್ರಮಿಸಿಕೊಳ್ಳುತ್ತಾನೆ. ಈ ವಿಧಾನವನ್ನು ನೋಡಿದಾಗ ಮಹತ್ ಅಮಹತ್‌ಗಳಿಗಿರುವ ಭೇದ ಹೇಗೆ ಭಾಷಾ ರಚನೆಯಲ್ಲಿ ಮಹತ್ತರ ವ್ಯತ್ಯಾಸವನ್ನುಂಟುಮಾಡುತ್ತದೆ ಎಂದು ತಿಳಿಯುತ್ತದೆ. ಉತ್ತಮಪುರುಷ, ಮಧ್ಯಮಪುರುಷದ ಮೇಲೆ, ಮಧ್ಯಮ–

ಪುರುಷ ಪ್ರಥಮಪುರುಷದ ಮೇಲೆ ಪ್ರಭಾವ ಬೀರಿ ಅವುಗಳನ್ನು ಹೇಗೆ ಗೌಣವಾಗಿಸುತ್ತವೆ ಎಂಬುದನ್ನು ಕೆಳಗಿನ ಉದಾಹರಣೆಯೊಂದಿಗೆ ಕಾಣಬಹುದು.

೫. ನಾನೂ ನೀನೂ ಬಂದೆವು.


೬. ನೀನೂ ಅವನೂ ಬಂದಿರಿ.

ಇಲ್ಲಿ ಮಧ್ಯಮಪುರುಷ ಉತ್ತಮಪುರುಷವನ್ನೂ, ಪ್ರಥಮಪುರುಷ ಮಧ್ಯಮಪುರುಷವನ್ನೂ ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ ಅವುಗಳ ಸ್ಥಾನಪಲ್ಲಟ ಸಾಧ್ಯ.

೭. ಹುಡುಗರು, ನಾಯಿಗಳು ಬಂದವು. ಈ ವಾಕ್ಯದಲ್ಲಿ ಮಹತ್ ಅಮಹತ್ತಿನ ಪ್ರಶ್ನೆ ಏಳುವುದಿಲ್ಲ. ಧಾತುವಿನ ಹಿಂದೆ ಬರುವ ಕರ್ತೃ ಧಾತು ಸಹ ಕ್ರಿಯೆಯಲ್ಲಿ ಭಾಗವಹಿಸಿಕೊಳ್ಳುತ್ತದೆ.

ತಮಿಳಿನ ಆಡುನುಡಿಯಲ್ಲಿ ಕಂಡುಬರುವ ರೂಪವೇ ದ್ರಾವಿಡ ಭಾಷೆಯ ಮೂಲ ಲಕ್ಷಣವಾಗಿದ್ದು, ಬಹುಶಃ ಅದು ಹಳಗನ್ನಡದಲ್ಲಿ ಕವಿಗಳ ಮುಖಾಂತರ ಪಲ್ಲಟಗೊಂಡಿರಬಹುದು ಎಂಬ ಊಹೆಯನ್ನು ಮಾಡಬಹುದು. ನನ್ನ ವಾದದ ತಿರುಳು ಇಷ್ಟು: ಲಿಂಗ ವ್ಯವಸ್ಥೆಯಲ್ಲಿ ತರತಮಭಾವದ ಮೂಲಕ ಉಂಟಾದ ಧೋರಣೆ, ಕ್ರಮೇಣ ವಾಕ್ಯ ರಚನೆಯಲ್ಲಿ ಬದಲಾವಣೆ ಹೊಂದಿದೆ. ಈ ಬದಲಾವಣೆ ಶಿಷ್ಟಭಾಷೆಯಲ್ಲಿ ಮೊದಲು ರೂಢಿಗೆ ಬಂದಿರಬಹುದು.

ಈ ರೀತಿಯ ವಾಕ್ಯ ರಚನೆಗಳನ್ನು ಆಧುನಿಕ ಭಾಷಾವಿಜ್ಞಾನದ ರೀತಿಯಿಂದ ವಿಶ್ಲೇಷಿಸುವಾಗ ವಾಕ್ಯದ ಮೇಲ್ಮೈ ರಚನೆ (surface level) ಮತ್ತು ಆಂತರಿಕ ರಚನೆ (deeper level)ಗಳ ಪರಿಣಾಮಕಾರಿ ಅಧ್ಯಯನ ಹೆಚ್ಚಿನ ತಿಳುವಳಿಕೆಯನ್ನು ನೀಡುತ್ತದೆ. ಇಲ್ಲಿ ಪದದ ಮೂಲಾರ್ಥ ಮತ್ತು ರಚನಾರ್ಥ ಎರಡೂ ಪ್ರಮುಖ ಗಣನೆಗೆ ಬರುತ್ತವೆ. ಅದನ್ನು ಈ ಕೆಳಕಂಡ ಎರಡು ರೀತಿಯಿಂದ ತೋರಿಸಬಹುದು.



ಇಲ್ಲಿ ಹುಡುಗರು, ನಾಯಿ ಬೆಕ್ಕಿಗಿಂತ ಶ್ರೇಷ್ಠ ಅಲ್ಲದೆ ಅನು ಕ್ರಿಯೆಯ ಹಿಂದೆ ಬಂದಿರುವುದರಿಂದ 'ರು' ಎನ್ನುವ ಆಖ್ಯಾತಪ್ರತ್ಯಯ ಬಳಕೆಯಾಗಿದೆ. ಆದರೆ,

ಹುಡುಗರು ನಾಯಿಗಳು ಬೆಕ್ಕುಗಳು ಬಂದವು.

ಇಲ್ಲಿ ಹುಡುಗ ಶ್ರೇಷ್ಠನಾದರೂ ಕ್ರಿಯೆಯೊಂದಿಗೆ ಹೋಗುವ ಕರ್ತೃ ಬೇರೆ. ಆದ್ದರಿಂದ ಕರ್ತೃವಿನ ಮೂಲ ಮೌಲ್ಯಕ್ಕಿಂತ ವಾಕ್ಯದಲ್ಲಿಯ ಕರ್ತೃವಿನ ಮೇಲೆ ಇಲ್ಲಿಯ ರಚನೆ ರೂಪುಗೊಂಡಿದೆ. ಆದರೆ ಮೇಲೆ ಹೇಳಿದ ಯಾವ ಉದಾಹರಣೆಗಳೂ ಗ್ರಾಂಥಿಕ ತಮಿಳಿನಲ್ಲಿ ಸಾಧ್ಯವಿಲ್ಲ. ಅಂದರೆ ಸಹಜನಾಮಪ್ರಕೃತಿಗಳಲ್ಲಿ ಮನುಷ್ಯ ಸೂಚಿ ಕರ್ತೃಪದ ಮನುಷ್ಯೇತರ ಕರ್ತೃವಿನೊಂದಿಗೆ ಸೇರುವುದಿಲ್ಲ. ಹಾಗೆ ಸೇರಿದರೆ ಅದು ವ್ಯಾಕರಣ ದೋಷ.

ಹುಡುಗರು, ನಾಯಿಗಳು, ಬೆಕ್ಕುಗಳು ಬಂದವು.

ಇದು ಗ್ರಾಂಥಿಕ ತಮಿಳಿನಲ್ಲಿ ಸಾಧ್ಯವಿಲ್ಲ. ಆದರೆ ಸಂಗಮ್ ಕಾಲದ ತಮಿಳು ಗ್ರಂಥ 'ಶಿಲಪ್ಪದಿಕಾರಂ'ನಲ್ಲಿ 'ಹಸುಗಳು ಬ್ರಾಹ್ಮಣರುಗಳು ಎನ್ನುವ ಇವರುಗಳು ಬಂದರು,........' ಎಂಬ ಪ್ರಯೋಗವೊಂದು ಸಿಕ್ಕುತ್ತದೆ. ಇದು ಕವಿ ಪ್ರಯೋಗವೆಂದೂ ಕವಿಗಳಿಗೆ ಕೆಲವೊಮ್ಮೆ ಕಟ್ಟುಪಾಡನ್ನು ಮೀರುವ ಹಕ್ಕಿದೆಯೆಂದೂ ತಮಿಳಿನ ವಿದ್ವಾಂಸರ ಅಭಿಪ್ರಾಯ. ಆದರೆ ಗ್ರಾಂಥಿಕವಾಗಿ ಯಾವ ಬಳಕೆ ಅಸಾಧುವೆಂದು ತಮಿಳರು ಭಾವಿಸುತ್ತಾರೋ ಅದೇ ಪ್ರಯೋಗ ಆಡುನುಡಿಯಲ್ಲಿ ಉಪಾದೇಯವಾಗಿರುವುದು ಗಮನಾರ್ಹ.


ಆಡುನುಡಿಯಲ್ಲಿ,

ಹುಡುಗರು, ನಾಯಿಗಳು, ಬೆಕ್ಕುಗಳು ಬಂದರು.

ಅಥವಾ,

ಬೆಕ್ಕುಗಳು, ನಾಯಿಗಳು, ಹುಡುಗರು ಬಂದರು.

ಎನ್ನುವ ರೂಪ ಬಳಕೆಯಲ್ಲಿ ಉಂಟು. ಇದೇ ವಾಕ್ಯವನ್ನು ಬರೆವಣಿಗೆಯಲ್ಲಿ ಬಳಸುವಾಗ ಅವರು ಬೆಕ್ಕು, ನಾಯಿಗಳನ್ನು ಒಂದು ಭಾಗವನ್ನಾಗಿಯೂ ಹುಡುಗನನ್ನು ಒಂದು ಭಾಗವನ್ನಾಗಿಯೂ ಪ್ರತ್ಯೇಕಿಸಿ ಹುಡುಗನೊಡನೆ ನಾಯಿ, ಬೆಕ್ಕು ಬಂದವು ಎಂದು ಬರೆಯುತ್ತಾರೆ. ಇಲ್ಲಿನ ವಾಕ್ಯದಲ್ಲಿ ತಲೆದೋರಬಹುದಾದ ಗೊಂದಲವನ್ನು ತಪ್ಪಿಸಲು 'ಒಡನೆ' ಎಂಬ ಸಂಘಟನಾತ್ಮಕ ಪ್ರತ್ಯಯ (coordinative suffix)ನ್ನು ಸೇರಿಸಿ ಹುಡುಗನಿಗೆ ಪ್ರಾಮುಖ್ಯತೆ ಕೊಟ್ಟು ಆತನ ಜೊತೆ ನಾಯಿಗಳು, ಬೆಕ್ಕುಗಳು ಬಂದವು ಎಂದು ಹೇಳುತ್ತಾರೆ. ಇದರ ವಿವರಣೆಯನ್ನು ಕೆಳಗೆ ಕೊಟ್ಟಿರುವ ವಿಶ್ಲೇಷಣೆಯಿಂದ ಚೆನ್ನಾಗಿ ತಿಳಿದುಕೊಳ್ಳಬಹುದು.



S = Sentence
NP = Noun Phrase
VP = Verb Phrase
Pl = Plural
MV = Main Verb
AV = Auxillary Verb
Pa.T = Past Tense
PT = Pronominal termination

ವಾಕ್ಯ : ಹುಡುಗರು, ನಾಯಿಗಳು, ಬೆಕ್ಕುಗಳು ಬಂದರು.

ಇಲ್ಲಿಯ ಕರ್ತೃಪದಗಳ ಗುಣ ವಿಶೇಷಣಗಳನ್ನು ನೋಡೋಣ.

ಹುಡುಗರು	ನಾಯಿಗಳು	ಬೆಕ್ಕುಗಳು
+ animal	+ animal	+ animal
+ human	— human	— human
+ male	± male	± male
+ plural	+ plural	+ plural

+ human ಎನ್ನುವುದಷ್ಟರಿಂದಲೇ ಇಲ್ಲಿಯ ಕರ್ತೃ, ಬೇರೆ ಕರ್ತೃಗಳ ಮೇಲೆ ಹತೋಟಿ ಸಾಧಿಸಿದೆ; ಪ್ರಧಾನ ಕರ್ತೃವಾಗಿದೆ. ಈ ಲಕ್ಷಣ ದ್ರಾವಿಡ ಭಾಷೆಗಳಲ್ಲಿ ಪ್ರಮುಖವಾಗಿ ಕಂಡುಬರುವಂತಹುದು. ಆದ್ದರಿಂದ ಕನ್ನಡ ಭಾಷೆಯಲ್ಲಿ ನಡೆದ ಈ ವಿವಕ್ಷೆಗೆ ನಾವು ಅಪವಾದವನ್ನು ಹೇಳಬೇಕಾಗುತ್ತದೆ. ಈಗ ಈ ಕೆಳಗಂಡ ನಿರ್ಧಾರಕ್ಕೆ ಬರಬಹುದು.

೧. ಈ ಪ್ರಯೋಗ ಮೊದಲು ಕಾವ್ಯಗಳಲ್ಲಿ ಬಳಕೆಯಾಗಿ ನಂತರ ಅದು ಆಡುನುಡಿಗೆ ಬಂದಿರಬೇಕು. ತಮಿಳಿನಲ್ಲಿ ಮೊದಲು ಶಿಷ್ಟಭಾಷೆಯಲ್ಲಿ ಪ್ರಯೋಗವಾಗಿದ್ದರೂ ಕ್ರಮೇಣ ಅದು ಗ್ರಾಂಥಿಕವಾಗಿ ಖಿಲವಾಗಿ ಆಡುನುಡಿಯಲ್ಲಿ ಮಾತ್ರ ಉಳಿದುಕೊಂಡಿದೆ.

(೨) ಈ ಪ್ರಯೋಗ ಕನ್ನಡದಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆದುಕೊಂಡಿದೆ. ಕರ್ತೃಪದ ಯಾವುದೇ ಆಗಿರಲಿ ಕ್ರಿಯೆಯು ಹಿಂದೆ ಬಂದಾಗ ಅದು ಕ್ರಿಯಾಪದವನ್ನು ನಿಯಂತ್ರಿಸಿ ಕ್ರಿಯಾಬಹುವಚನದ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. *

■ ■

* ಈ ಲೇಖನವನ್ನು ಬರೆಯುವಾಗ ಡಾ. ರಂಗನ್, ಡಾ. ರಾಜಪುರೋಹಿತ. ಡಾ. ಜ್ಞಾನಸುಂದರಂ, ಡಾ. ಪನ್ನೀರ್ ಸೆಲ್ವಂ ಮತ್ತು ಡಾ. ರಾಜಾರಾಮ್ ಇವರುಗಳ ಸಲಹೆಗೆ ನಾವು ಕೃತಜ್ಞರಾಗಿದ್ದೇವೆ.

ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು

ಅ. ಸುಂದರ

ಹೋದ ವರ್ಷ ಡಿಸೆಂಬರ್ ಹಾಗು ಇದೇ ವರ್ಷ ಏಪ್ರಿಲ್-ಡಿಸೆಂಬರ್ ತಿಂಗಳು ಗಳಲ್ಲಿ ಶಿವಮೊಗ್ಗ, ಉತ್ತರ ಕನ್ನಡ, ಬೆಳಗಾಂವ್, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳ ಕೆಲವೊಂದು ಪ್ರದೇಶಗಳಲ್ಲಿ ಪುರಾತತ್ವ ಅನ್ವೇಷಣೆ ಕಾರ್ಯವನ್ನು ನಾನು ಕೈಗೊಂಡಿದ್ದೆ. ನನ್ನ ಈ ಶೋಧನೆಗಳಲ್ಲಿ ಕಂಡುಬಂದ ಪುರಾತತ್ವ ಅವಶೇಷಗಳಲ್ಲಿ ಕೆಲವು ಮಹತ್ವದ್ದಾಗಿದ್ದು ಅವುಗಳ ಬಗ್ಗೆ ಟಿಪ್ಪಣಿಗಳನ್ನು ಕೆಳಗೆ ಕೊಡಲಾಗಿದೆ.

೧. ಪುರಾತತ್ವ ನೆಲೆಗಳು :

೧. ನೂತನ ಶಿಲಾಯುಗದ ನೆಲೆ (ಕ್ರಿ. ಪೂ. ೧೮೦೦-೧೦೦೦)

ಕೆಳದಿ ಶಿವಪ್ಪ ನಾಯಕನ ರಾಜಧಾನಿಯಾಗಿದ್ದ ಹಳೆನಗರ (ಹೊಸನಗರ ತಾ. ಶಿವಮೊಗ್ಗ ಜಿ.) ದಲ್ಲಿ, ಕೆಳದಿ ನಾಯಕರ ಕಾಲದ ಪಂಚಮುಖಿ ಹನುಮಂತನ ದೇವಾಲಯವಿದೆ. ಇದರ ದಕ್ಷಿಣಕ್ಕೆ ಬತ್ತ ಬೆಳೆಯುವ ಗದ್ದೆಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಬೂದು ವರ್ಣದ ಮಣ್ಣಿನ ಪಾತ್ರೆಗಳ ಚೂರುಗಳಿವೆ. ಈ ಅವಶೇಷ ಗಳಿಂದ ಇಲ್ಲಿ ನೂತನ ಶಿಲಾಯುಗ ಜನರ ಸಣ್ಣ ವಸತಿಯಿದ್ದಿರಬೇಕೆಂದು ತೋರುವುದು. ಈ ಊರಿಂದ ಸುಮಾರು ೯ ಕಿ. ಮೀ ದೂರದಲ್ಲಿರುವ ನಿಲಸುಕಲ್ಲು ಎಂಬಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ನಿಲುಸುಗಲ್ಲುಗಳಿವೆ, (Menhirs). ಅಲ್ಲಿ ೧೯೬೯ರಲ್ಲಿ ಒಂದು ನೂತನ ಶಿಲಾಯುಗದ ನೆಲೆಯುನ್ನು ಶೋಧಿಸಿದ್ದೆ.

೨. ಬೃಹತ್ ಶಿಲಾ ಸಂಸ್ಕೃತಿ ನೆಲೆಗಳು (ಕ್ರಿ. ಪೂ. ೭೦೦-೨೦೦)

ಹಳೆನಗರದಿಂದ ಸುಮಾರು ೫ ಕಿ. ಮಿ. ದೂರದಲ್ಲಿ ಬಂಗ್ಲೆ ಎಂಬಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ನಿಲುಸುಗಲ್ಲುಗಳಿವೆ. ಇವು ನಿಲುಸುಕಲ್ಲು ಹಳ್ಳಿಯಲ್ಲಿರುವ ನಿಲುಸು ಗಲ್ಲುಗಳನ್ನು ಹೋಲುತ್ತವೆ.

ಭಂಡೀಗಣೆ (ತೀರ್ಥಳ್ಳಿ ತಾ. ಶಿವಮೊಗ್ಗ ಜಿ.) ಯಲ್ಲಿ ಕಮ್ಮರಡಿ - ಹರಿಹರ ಪುರದ ಅಸ್‌ಫಾಲ್ಟ್ ರಸ್ತೆಯ ಎಡಬದಿಯಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಒಂದು

(ಕಂಡಿ) ಕೋಣೆಗೋರಿಯ (port - holed chamber) ಅವಶೇಷಗಳಿವೆ. ಹಿಂದೆ ಇಲ್ಲಿ ಇಂಥ ಹಲವು ಕಲ್ಗೋರಿಗಳು ಇದ್ದುವೆಂದು ಇದು ಸೂಚಿಸುತ್ತದೆ.

ಹಲಶಿ (ಖಾನಾಪುರ ತಾ. ಬೆಳಗಾಂವ್ ಜಿ.) ಗ್ರಾಮದ ಉತ್ತರಕ್ಕೆ ಬತ್ತದ ಗದ್ದೆಗಳಿವೆ. ಇವುಗಳ ಅಂಚಿನಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಕಂಡಿ ಕೋಣೆಗೋರಿಗಳ ಕಲ್ಲು ಹಲಗೆಗಳನ್ನು (orthostats) ನಿಲ್ಲಿಸಲಾಗಿದೆ. ಈ ಭೂಮಿಯನ್ನು ಗದ್ದೆಗಳಾಗಿ ಮಾರ್ಪಾಡು ಮಾಡುವ ಮುಂಚೆ ಇಲ್ಲಿ ಹಲವು ಕಂಡಿ ಕೋಣೆಗೋರಿಗಳಿದ್ದವು. ಗದ್ದೆಗಳನ್ನು ಮಾಡುವ ಕಾಲದಲ್ಲಿ ಇವುಗಳನ್ನು ಕಿತ್ತು ಕೆಲವು ಕಲ್ಲು ಹಲಗೆಗಳನ್ನು ಅಂಚಿನಲ್ಲಿ ನಲ್ಲಿ ನೆಡಲಾಯಿತೆಂಬುದು ಸ್ಪಷ್ಟ. ಕರ್ನಾಟಕದ ವಾಯುವ್ಯ ಭಾಗದಲ್ಲಿ ಈ ವಿಧದ ಕಲ್ಗೋರಿಗಳು ಕಂಡು ಬಂದುದು ಇದೇ ಮೊದಲು. ಈ ಗದ್ದೆಗಳ ದಕ್ಷಿಣದ ಹದ್ದಿನಲ್ಲಿ ಬಹಳ ಹಾಳು ಮಣ್ಣು ಇದೆ. ಇದರಲ್ಲಿ ಮಧ್ಯಯುಗೀನ, ಇತಿಹಾಸ ಪ್ರಾರಂಭ ಕಾಲದ ಮತ್ತು ಬೃಹತ್ ಶಿಲಾ ಸಂಸ್ಕೃತಿಯ ಗಡಿಗೆ ಮಡಿಕೆಗಳ ಹಾಗು ಇತರ ವಿವಿಧ ಅವಶೇಷಗಳು ಹೇರಳವಾಗಿ ಇವೆ.

೩. ಪ್ರಾಗೈತಿಹಾಸಿಕ ವರ್ಣ ಚಿತ್ರಿತ ಗವಿಗಳು

ಇಂದುರ್ಗಿ (ಗಂಗಾವತಿ ತಾ. ರಾಯಚೂರು ಜಿ.) ಗುಡ್ಡಗಳಲ್ಲಿಯ (ಮೋರಿಯರ ಬೆಟ್ಟ) 'ವಾರೆ ಹನುಮಪ್ಪನ ಗುಡ್ಡ', 'ಎರೆಹುಳುಕಿನ ಬಂಡಿ ಗವಿ' ಭಾಗಗಳಲ್ಲಿ ಮೂರು ನೈಸರ್ಗಿಕ ಗವಿಗಳಲ್ಲಿ ಪ್ರಾಗೈತಿಹಾಸಿಕ (?) ಕಾಲದ ಕೆಮ್ಮಣ್ಣು ಬಣ್ಣದ ಕೆಲವು ರೇಖಾಚಿತ್ರಗಳ, ಪಕ್ಷಿಗಳ, ಪ್ರಾಣಿಗಳ ಚಿತ್ರಗಳಿವೆ. ಇದರಂತೆಯೆ, ಲಿಂಗಸುಗೂರಿನ ಹತ್ತಿರವಿರುವ "ಭಿಲ್ಲಮ್ಮರಾಯನ" ಗುಡ್ಡಗಳಲ್ಲಿ ಕುಟ್ಟಿ ತೆಗೆದ ಚಿತ್ರಗಳಿವೆ (Rock-Bruisings). ಕೊಪ್ಪಳದಲ್ಲಿ ನಾವು ಒಟ್ಟಿಗೆ ಅನ್ವೇಷಣೆ ನಡೆಸುತ್ತಿದ್ದಾಗ ನನ್ನೊಡನೆ ಕೆಲಸ ಮಾಡುತ್ತಿದ್ದ ಯು. ಜಿ. ಸಿ. ಜೂನಿಯರ್ ಫೆಲೊ ಆಗಿ ಕೆಲಸ ಮಾಡುತ್ತಿದ್ದ ಶ್ರೀ ಲಕ್ಷ್ಮೀಕಾಂತ್ ಇವರು ಈ ಚಿತ್ರಗಳನ್ನು ಶೋಧಿಸಿದರು. ಕೊಪ್ಪಳ ಗುಡ್ಡದ ಸೀನೀರಿನ ಕೆರೆಯ ಹತ್ತಿರ ಒಂದು ಗವಿಯಲ್ಲಿ ಬಿಳಿ ಬಣ್ಣದ ರೇಖಾ ಚಿತ್ರಗಳಿವೆ.

ಬಾದಾಮಿ (ಬಾದಾಮಿ ತಾ. ಬಿಜಾಪುರ ಜಿ.) ಯಲ್ಲಿ ಮಾಲೆಗಿತ್ತಿ ಶಿವಾಲಯ ಮತ್ತು ಮೇಗಣ ಶಿವಾಲಯ ನಡುವಿನ ಗುಡ್ಡದ ವಟ್ಟುಗಳಲ್ಲಿ ಬಾದಾಮಿ ಚಾಲುಕ್ಯ ಕಾಲದ ಮತ್ತು ಅನಂತರ ಕಾಲದ ಬೇರೆ ವಿಧದ ಕೆಂಪು ಬಣ್ಣದ ಚಿತ್ರಗಳಿವೆ.

೪. ಇತಿಹಾಸ ಪ್ರಾರಂಭ– ಬಾದಾಮಿ ಚಾಲುಕ್ಯರ ಪೂರ್ವ ಕಾಲದ ನೆಲೆಗಳು (ಕ್ರಿ. ಪೂ. ೨ – ಕ್ರಿ. ಶ. ೫ನೇ ಶತಮಾನ)

ಹಲಶಿ ಗ್ರಾಮದ " ಬೋಡಕೆ ಟೆಂಬೆ " ಎಂದು ಸ್ಥಳಿಕವಾಗಿ ಕರೆಯಲ್ಪಟ್ಟ ಗುಡ್ಡ ಪ್ರದೇಶದಲ್ಲಿ, ಬಳ್ಳಿಗಾವೆಯ ಹಾಳುಬಿದ್ದ ಮಳೆ ಮಲ್ಲೇಶ್ವರ ಅಥವಾ ಬ್ರಹ್ಮ

ದೇವ ಗುಡಿ – ಪಾರ್ಶ್ವನಾಥ ಜೋಗಿಮಯ್ಯ ಪ್ರದೇಶದಲ್ಲಿ (ಚಿತ್ರ 1; ೧, ೨) ಇತಿಹಾಸ ಪ್ರಾರಂಭ ಕಾಲದಿಂದ ಚಾಲುಕ್ಯ ಪೂರ್ವ ಕಾಲದ ವರೆಗಿನ ಪ್ರಾಚೀನ ನೆಲೆಗಳಿವೆ. ಇವುಗಳಲ್ಲಿ ಶಾತವಾಹನ ಮತ್ತು ಅನಂತರ ಕಾಲದ ಸುಟ್ಟ ಇಟ್ಟಿಗೆ ಕಟ್ಟಡಗಳ ಅವಶೇಷಗಳಿವೆ. (ಚಿತ್ರ 1; ೨, ೪). ಹಲಶಿಯಲ್ಲಿ ಇಟ್ಟಿಗೆಯಿಂದ ಕಟ್ಟಿದ ದುಂಡು ಭಾವಿಯು ಒಂದು ಗದ್ದೆಯಲ್ಲಿ ಗುಂಡಿ ತೆಗೆದಾಗ ಅಲ್ಲಿ ಸಿಕ್ಕಿತೆಂದು ಸ್ಥಳಿಕರು ತಿಳಿಸಿದರು. ಬಾದಾಮಿಯಲ್ಲಿ ೧ನೇ ಪುಲಕೇಶಿ ಶಾಸನವಿರುವ ಪ್ರದೇಶದಲ್ಲಿಯೂ ಇತಿಹಾಸ ಪ್ರಾರಂಭ ಕಾಲದಲ್ಲಿ ಜನವಸತಿಯಿದ್ದ ಕುರುಹುಗಳಾದ ಕೆಂಪು – ಕಪ್ಪು ದ್ವಿವರ್ಣದ ಗಡಿಗೆ ಮಡಿಕೆ ಚೂರುಗಳು, ಇಟ್ಟಿಗೆ ತುಂಡುಗಳಿವೆ.

ಹಲಶಿ, ಕುಪ್ಪಟೂರಿ (ಸೊರಬ ತಾ., ಶಿವಮೊಗ್ಗ ಜಿ.) ನ ನರಸಿಂಹ ದೇವಾಲಯದ ಸುತ್ತುಮುತ್ತಲಿನ ಪ್ರದೇಶದಲ್ಲಿ, ಹುಂಚ (ತೀರ್ಥಳ್ಳಿ ತಾ.) ದ ಬೋಗಾರ ಬಸದಿಯ ಹತ್ತಿರದಲ್ಲಿ ಪ್ರಾಯಶಃ ಕದಂಬ–ಚಾಲುಕ್ಯರ ಕಾಲದೆನ್ನಬಹುದಾದ ಮಣ್ಣಿನ ಕೋಟೆಗಳ, ಕಂದುಕಗಳ, ಕೋಟೆಯೊಳಗಿನ ಮನೆಗಳ ತಳಪಾಯಗಳ ಅವಶೇಷಗಳಿವೆ. ಹೊಸ ಮಹಾಕೂಟದಲ್ಲಿ ದೇವಾಲಯ ಪ್ರಾಕಾರದ ಆಗ್ನೇಯಕ್ಕೆ ಒಂದು ಹಾಳುಬಿದ್ದ ೫ನೇ ಶತಮಾನದ ದೇವಾಲಯ, ಶಿವಲಿಂಗಗಳು ಇವೆಯಷ್ಟೆ. ಈ ಪ್ರದೇಶದಲ್ಲಿ ಅನಾನಸ್ ಬೆಳೆಯಲು ಕಾಲುವೆಗಳನ್ನು ಇತ್ತೀಚೆಗೆ ತೋಡಲಾಗಿದೆ. ಈ ಕಾಲುವೆಗಳಲ್ಲಿ ಸು. ೪ – ೬ ಶತಮಾನಗಳ ಇಟ್ಟಿಗೆ ಕಟ್ಟಡಗಳ ಅವಶೇಷಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ಯಾವ ಕಲ್ಲಿನ ಕಟ್ಟಡಗಳ ಅವಶೇಷಗಳಿಲ್ಲದೆ ಸುಮಾರು ೧೫, ೨೦ ಶಿವಲಿಂಗಗಳು ಒಂದೇ ತರಹವಿದ್ದು ತಲೆಯಭಾಗ ಗುಂಡಾಗಿದ್ದು ಮಧ್ಯನಾಡಿಯುಳ್ಳ ಬಾಣಾಕಾರದ ಬ್ರಹ್ಮಸೂತ್ರ ರೇಖೆಯುಳ್ಳದ್ದಾಗಿವೆ. ಎಲ್ಲವುದಕ್ಕೂ ವೃತ್ತಾಕಾರದ ಪೀಠವಿದೆ. ಆದ್ದರಿಂದ ಇವು ೪–೬ನೇ ಶತಮಾನದ್ದೆಂದು ತೋರುವುದು. ಇವುಗಳ ಸುತ್ತುಮುತ್ತಲೂ ಕಂಡುಬಂದ ಇಟ್ಟಿಗೆ ಕಟ್ಟಡಗಳ ಅವಶೇಷಗಳು ಈ ಶಿವಲಿಂಗಗಳ ಸಣ್ಣ ಸಣ್ಣ ದೇವಾಲಯಗಳದ್ದಾಗಿರಬೇಕೆಂದು ಕಾಣುವುದು. ಇವುಗಳ ಸಮೀಪದ ಕೊಳ್ಳದಲ್ಲಿ ಶಾತವಾಹನ–ಚಾಲುಕ್ಯರ ಕಾಲದ ಇಟ್ಟಿಗೆ ಕಟ್ಟಡಗಳ ಅವಶೇಷಗಳು, ಗಡಿಗೆ ಮಡಿಕೆ ಚೂರುಗಳುಳ್ಳ ಪ್ರಾಚೀನ ನೆಲೆಯೊಂದನ್ನು ಶೋಧಿಸಿ ಬೇರೆಡೆಯಲ್ಲಿ ವರದಿ ಮಾಡಿದ್ದೇನೆ. ಇದೇ ತರಹದ ಇಟ್ಟಿಗೆ ಕಟ್ಟಡಗಳ ಮೃತ್‌ಪಾತ್ರೆ ಅವಶೇಷಗಳುಳ್ಳ ನೆಲೆಯೊಂದನ್ನು ಬಾದಾಮಿಯ ನಾಗನಾಥ ದೇವಾಲಯದ ಹಿಂದೆ ಹಾಗು ಕೊಳ್ಳದಲ್ಲಿ ೧೯೬೫ರಲ್ಲಿ ನನ್ನ ಪುರಾತತ್ವ ಶೋಧನೆಯಲ್ಲಿ ಕಂಡುಬಂದಿದೆ.

೨. ಶಿಲ್ಪಗಳು :

೧. ವಾಸ್ತು ಶಿಲ್ಪಗಳು

i) ನೇರಲಗಿಯ (ಸೊರಬ ತಾ.) ಹಾಳುಬಿದ್ದ ಶಿವಾಲಯವು ಅದರ ತಳ

ವಿನ್ಯಾಸ, ಬಾಗಿಲು ಚೌಕಟ್ಟಿನ ಲಕ್ಷಣಗಳಿಂದಲೂ (ಚಿತ್ರ 4; ೨, ೩), ಲಿಂಗದ ಆಕಾರ ಹಾಗು ಅದರ ಮೇಲಿನ ಬ್ರಹ್ಮಸೂತ್ರದ ಮಾದರಿಯಿಂದಲೂ ಮತ್ತು ಒಡೆದು ಬಿದ್ದಿರುವ ದ್ವಿಭುಜ ಗಣೇಶನ ಮೂರ್ತಿಯಿಂದಲೂ (ಚಿತ್ರ 5; ೧) ದೇವಾಲಯವೂ ಬನವಾಸಿ ಕದಂಬರ ಕಾಲ ಅಂದರೆ ೪–೫ನೇ ಶತಮಾನದ್ದೆಂದು ತೋರುವುದು.

ii) ಕುಮಟಾದ ಹತ್ತಿರ ಸಮುದ್ರದ ದಂಡೆಯ ಮೇಲಿರುವ ಧಾರೇಶ್ವರ (ಕುಮಟಾ ತಾ. ಉತ್ತರ ಕನ್ನಡ ಜಿ.) ಪುರಾಣ ಪ್ರಸಿದ್ಧ ಸ್ಥಳವಷ್ಟೆ. ಧಾರೇಶ್ವರ ದೇವಾಲಯವು ವಾಸ್ತುಶಿಲ್ಪದಿಂದ ೧೧–೧೨ನೇ ಶತಮಾನದ್ದು. ಇದರಲ್ಲಿ ಗಣೇಶನ ಮೂರ್ತಿ ನಿಜಕ್ಕೂ ಕಲ್ಯಾಣ ಚಾಲುಕ್ಯ ಕಾಲದ ಸುಂದರ ಶಿಲ್ಪ.

ಈ ದೇವಾಲಯದ ಹೊರಗೆ ನೈಋತ್ಯಕ್ಕೆ ಪ್ರಾಕಾರದೊಳಗೆ ಒಂದು ಸಣ್ಣ ಪ್ರಮಾಣದ ಹಸಿರು ಮೋಡಿಯ (Schist) ಕಲ್ಲಿನ ದೇವಾಲಯವಿದೆ. ಇದನ್ನು ಆದಿ ಧಾರೇಶ್ವರ ಎಂದು ಕರೆಯಲಾಗಿದೆ. ಎತ್ತರದ ಅಧಿಷ್ಠಾನ. ಗರ್ಭಗೃಹ ಮತ್ತು ಅಂತರಾಳ: ಎರಡೇ ಭಾಗಗಳು. ಇದರ ಕಡುಮಾಡು ಕರಾವಳಿ ಮತ್ತು ಮಲೆನಾಡುಗಳಲ್ಲಿಯ ದೇವಾಲಯಗಳಲ್ಲಿಯ ಹಾಗೆ, ಕಲ್ಲು ಹಲಗೆಗಳಿಂದ ಜೋಡಿಸಿ ಮಾಡಿದ್ದಾಗಿದೆ. ಗರ್ಭಗುಡಿಯ ಛತ್ತಿನ ಜೋಡಣೆ, ಮೂಲೆಗಂಬಗಳ, ಅಂತರಾಳದ ಛತ್ತಿನಲ್ಲಿರುವ ಕಮಲ ಪುಷ್ಪ ಚಿತ್ರದ, ಹೊರಗೋಡೆಗಳ ಮೇಲಿನ ಮಕರ ತೋರಣ ಚಿತ್ರದ ಮತ್ತು ಕಡುಮಾಡನ್ನು ಕಟ್ಟಿದ ಶೈಲಿಯ ಲಕ್ಷಣಗಳು ಇದು ಧಾರೇಶ್ವರ ದೇವಾಲಯಕ್ಕಿಂತ ಹಿಂದಿನದೆಂದು ಸೂಚಿಸುತ್ತವೆ. (ಚಿತ್ರ 6; ೪, ೫, ೬). ಗರ್ಭಗುಡಿಯಲ್ಲಿ ನಂತರ ಕಾಲದ ಒಂದು ಪೀಠಸ್ತ ಲಿಂಗವಿದೆ. ದೇವಾಲಯವು ತೀರ ಸರಳವಾಗಿದ್ದರೂ ಅಚ್ಚುಕಟ್ಟಾಗಿ ಮನಸ್ಸಿಗೆ ಹಿಡಿಯುವ ಹಾಗಿದೆ. ಇದರ ಮೂಲಲಿಂಗ ಈಗ ಅಲ್ಲೆ ಮೇಲೆ ಮಲ್ಲಿಕಾರ್ಜುನನ ಸಣ್ಣ ಗುಡಿಯಲ್ಲಿರುವುದೆಂದು ಕಾಣುವುದು.

೨. ಮೂರ್ತಿ ಶಿಲ್ಪಗಳು

i) ತೊಗರ್ಸಿಯ ಪ್ರಾಚೀನ ದೀಪಸ್ತಂಭ (ಚಿತ್ರ 3; ೨)

ಇಲ್ಲಿಯ ಮಳಿಮಠದ ಆವರಣದಲ್ಲಿರುವ ೧೧–೧೨ನೇ ಶತಮಾನದ ಮಲ್ಲಿಕಾರ್ಜುನ ದೇವಾಲ್ಯಯದ ಉತ್ತರ ಬದಿಯಲ್ಲಿ 'ಗಂಗೆ ಹೊಂಡ' ಎಂಬ ಕೊಳವಿದೆ. ದೇವಾಲಯದ ಕಡೆಯ ಇದರ ಅಂಚಿನಲ್ಲಿ ಎಣ್ಣೆ ಜಿಗುಟಿನಿಂದ ಅಸ್ಪಷ್ಟವಾದ ಒಂದು ಕಲ್ಲಿನ ದೀಪಸ್ತಂಭವಿದೆ. ನೆಲದಿಂದ ೧ ಮಿ. ಎತ್ತರವಿದೆ. ಇದರಲ್ಲಿ ಮೂರು ಭಾಗಗಳಿವೆ. ಮೇಲಿನ ಭಾಗದಲ್ಲಿ ಒಬ್ಬ ಕುಬ್ಜ ಯಕ್ಷನು ತಲೆಯ ಮೇಲೆ ದೀಪದ ಹಣತೆಯನ್ನು ಹೊತ್ತು ನಿಂತಿದ್ದಾನೆ. ಇದು ದುಂಡು ಶಿಲ್ಪದಲ್ಲಿದೆ. ಎರಡು ಬದಿಗಳಿಂದಲೂ ಈ ಕುಬ್ಜನ ಮುಂಭಾಗವನ್ನು ತೋರಿಸಲಾಗಿದೆ. ಮಧ್ಯಭಾಗವು ಆಯತಾಕಾರವಾಗಿದೆ.

(೩೦ × ೧೭ ಸೆ. ಮೀ.). ಇದರ ಮುಂಭಾಗ ಮತ್ತು ಹಿಂಭಾಗದ ಮುಖಪಟ್ಟಿಕೆಗಳಲ್ಲಿ ಕ್ರಮವಾಗಿ ಬುದ್ಧನ ಅವನ ಅನುಯಾಯಿಗಳ, ರಾಜಪುರುಷ(?)ನ ಉಬ್ಬು ಚಿತ್ರಗಳಿವೆ. ಕೆಳಭಾಗವು ಅಸ್ಪಷ್ಟವಾಗಿ ಅಷ್ಟಕೋನವಾಗಿದ್ದು ಚಿತ್ರಗಳಿಲ್ಲದೆ ಸರಳವಾಗಿದೆ. ಬಲಗೈಯನ್ನು ಇಳಿಬಿಟ್ಟು ಎಡಗೈಯಲ್ಲಿ ಮೇಲಿನ ವಸ್ತ್ರವನ್ನು ಹಿಡಿದು ನಿಂತ ಬುದ್ಧನ ಚಿತ್ರವು ಅಮರಾವತಿಯ ೨ನೇ ಶತಮಾನದ ಒಂದು ಬೌದ್ಧ ಫಲಕದ ಬುದ್ಧನಿಗೆ[೪] ಹೋಲುತ್ತದೆ. ಕುಬ್ಜಯಕ್ಷನ ಲಕ್ಷಣಗಳಿಂದ ಈ ಸ್ತಂಭವು ೨-೩ನೇ ಶತಮಾನದ್ದಾಗಿರಬಹುದು. ಈ ವಿಧದ ಬೌದ್ಧ ದೀಪಸ್ತಂಭ ಸಿಗುತ್ತಿರುವುದು ಇದೇ ಮೊದಲು.

ii) ಹೈಗುಂದದ ಬುದ್ಧನ ಮೂರ್ತಿಗಳು (ಚಿತ್ರ 2; ೨)

ಹೈಗುಂದ (ಹೊನ್ನಾವರ ತಾ., ಉತ್ತರ ಕನ್ನಡ ಜಿ.) ದಲ್ಲಿ ಇಟ್ಟಿಗೆ ಕಟ್ಟಡಗಳ ಅವಶೇಷಗಳುಳ್ಳ ಒಂದು ಇತಿಹಾಸ ಪ್ರಾರಂಭ ಕಾಲದ ನೆಲೆಯನ್ನು, ಒಂದು ಅಪೂರ್ವ ಭವ್ಯ ಯಕ್ಷ (ಚಿತ್ರ 2; ೧. ೧.೬೯ × ೦.೫೬ ಮೀ.), ಕುಬ್ಜಯಕ್ಷ (ಚಿತ್ರ 2; ೨. ೬೫ × ೨೮ ಸೆ. ಮೀ.), ಸೂರ್ಯ (? ಚಿತ್ರ 2; ೪. ಸು. ೧.೭೦ × ೦.೨೦ ಮೀ .), ಜನಾರ್ಧನ (ಚಿತ್ರ 3; ೨, ೧.೧೫ × ೦.೬೫ ಮೀ.) ಮತ್ತು ಶಿವಲಿಂಗಗಳನ್ನು ಹೋದವರ್ಷ ಮೇ ತಿಂಗಳಲ್ಲಿ ಶೋಧಿಸಿದ್ದೆ.[೫] ಇವೆಲ್ಲವು ದುಂಡುಶಿಲ್ಪದಲ್ಲಿವೆ. ಡಿಸೆಂಬರ್ '೭೪ರಲ್ಲಿ ಮತ್ತೆ ಈ ನೆಲೆಯನ್ನು ಶೋಧಿಸಿದಾಗ ೨–೩ನೇ ಶತಮಾನದ ನಿಂತ ಭಂಗಿಯಲ್ಲಿರುವ ಬುದ್ಧ (ಚಿತ್ರ 2; ೨, ೧.೩೦ × ೦.೫೦ ಮೀ.) ನ ಎರಡು ಮೂರ್ತಿಗಳು ಸಿಕ್ಕವು. ಎರಡೂ ಒಂದೇ ಮಾದರಿಯದಾಗಿದ್ದು ದುಂಡು ಶಿಲ್ಪದಲ್ಲಿದೆ. ಕೈಗಳು ಮತ್ತು ಒಂದರ ಕಾಲುಗಳು ಮುರಿದು ಹೋಗಿವೆ. ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈಯಲ್ಲಿ ಭುಜದಿಂದ ಇಳಿಬಿದ್ದ ವಸ್ತ್ರವಿದೆ. ಕನ್ಹೇರಿ, ಕಾರ್ಲೆ, ಅಜಂತಾ ಶಿಲ್ಪದ ಮಾದರಿಗೆ ಹೆಚ್ಚು ಹೋಲುತ್ತವೆ. ಕರ್ನಾಟಕದಲ್ಲಿ ಇಷ್ಟು ಪ್ರಾಚೀನ ಬುದ್ಧನ ಮೂರ್ತಿಗಳು ಸಿಗುತ್ತಿರುವುದು ಇದೇ ಪ್ರಥಮ.

iii) ಕೊಪ್ಪಳ : ಒಂದು ಅಪೂರ್ವ ಶಿಲ್ಪ (ಚಿತ್ರ 1; ೨)

ಇಲ್ಲಿಯ ಕಾಳಿಕಾಗುಡಿಯ ಮುಂದಿರುವ ಪೌಳಿಯೊಳಗಿನ ಕಟ್ಟೆಯ ಮೇಲೆ ಸುಣ್ಣಕಲ್ಲಿನ (Lime stone) ಭಗ್ನ ಮೂರ್ತಿಯೊಂದನ್ನು ಇಡಲಾಗಿದೆ. ಇದು ಅಲ್ಲಲ್ಲಿ ಸವೆದು ಹೋಗಿದೆ. ಕಂಬಗಳ ಮಂಡಪದಲ್ಲಿ ಹಿಗ್ಗಿದ ವೃತ್ತಾಸನದ ಮೇಲೆ ಸವ್ಯ ಲಲಿತಾಸನದಲ್ಲಿ ಕುಳಿತ ದ್ವಿಭುಜ ದೇವತೆ. ಎರಡು ಕೈಗಳಲ್ಲಿ ಹಿಡಿದ ವಸ್ತುಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಇಳಿಬಿಟ್ಟ ಬಲಗಾಲಿನ ಬುಡದಲ್ಲಿ ಧರ್ಮಚಕ್ರವಿದೆ. ಬೌದ್ಧ ಶಿಲ್ಪಗಳಲ್ಲಿ ಈ ಮಾದರಿಯ ಕೆತ್ತನೆಗಳಿವೆ. ಅಶೋಕ ಮೌರ್ಯನ ಶಾಸನವುಳ್ಳ ಮಸ್ಕಿಯ ಮೊದಲಿನ ಉತ್ಖನನದಲ್ಲಿಯೂ ಧ್ಯಾನ ಮುದ್ರೆಯಲ್ಲಿ ಪದ್ಮಾಸನದಲ್ಲಿರುವ ಬುದ್ಧನ ಗೊಂಬೆಯೊಂದು[೬] ಸಿಕ್ಕಿದೆ. ಕೊಪ್ಪಳದ ಈಶಾನ್ಯಕ್ಕೆ ಸುಮಾರು ೧೫೦ ಕಿ.ಮೀ.

ದೂರದಲ್ಲಿರುವ ಸನ್ನತ್ತಿಯಲ್ಲಿಯ ಸುಣ್ಣ ಕಲ್ಲಿನ ಬೌದ್ಧ ಶಿಲ್ಪ ಮತ್ತು ಸ್ತೂಪಗಳ ಅವಶೇಷಗಳನ್ನು, ಕೊಪ್ಪಳದ ಅಶೋಕ ಮೌರ್ಯನ ಶಾಸನವನ್ನು ಗಮನಿಸಿದಾಗ ಈ ಭಾಗದಲ್ಲೆಲ್ಲ ಬೌದ್ಧ ಮತವು ೨ನೇ ಶತಮಾನದ ವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ತೋರುವುದು. ಆದ್ದರಿಂದ ಕೊಪ್ಪಳದ ಈ ಶಿಲ್ಪವು ಸುಣ್ಣಕಲ್ಲಿನಿಂದ ಮಾಡಿದ್ದರಿಂದಲೂ ಮತ್ತು ಧರ್ಮಚಕ್ರ ಪ್ರವರ್ತನವನ್ನು ಸೂಚಿಸುವ ಇದರ ಧರ್ಮಚಕ್ರಕ್ಕೆ ಸರಪಣಿಯಿದ್ದ ಹಾಗಿರುವುದರಿಂದಲೂ ಇದು ಆ ಕಾಲದ ಒಂದು ಶಿಲ್ಪ ಫಲಕದ ತುಂಡಾಗಿರಬಹುದೆಂದು ಅನುಮಾನವಾಗುವುದು.

iv) ಕೊಂತಪಾಲ(ಹೊನ್ನಾವರ ತಾ.) : ದ ವಿಷ್ಣು (ಚಿತ್ರ 3; ೧)

ದುಂಡು ಶಿಲ್ಪದಲ್ಲಿರುವ ಈ ವಿಷ್ಣುಮೂರ್ತಿ (೫೦ × ೪೦ ಸೆ. ಮಿ.) ಸಮಭಂಗದಲ್ಲಿದೆ. ಕೇವಲ ಎರಡೇ ಭುಜಗಳು. ಬಲಗೈಯಲ್ಲಿ ಚಕ್ರ, ಸೊಂಟದ ಮೇಲಿರುವ ಎಡಗೈಯಲ್ಲಿ ಶಂಖವು ಇದೆ. ವಿಷ್ಣುವಿಗೆ ಯಾವಾಗಲೂ ಕಿರೀಟ ಮುಕುಟವಿರಬೇಕು. ಆದರೆ ಈ ಮೂರ್ತಿಯಲ್ಲಿ ಕಿರೀಟವಿಲ್ಲದೆ ಹಣೆಯ ಮೇಲಂಚಿನಲ್ಲಿ ಅಡ್ಡಪಟ್ಟಿಯಿದೆ. ಕರ್ಣಕುಂಡಲಗಳು, ಹರಳಿನ ಕಂಠಾಭರಣ, ಯಜ್ಞೋಪವೀತ ಮತ್ತು ಕೈಕಡಗಗಳು; ಇವಿಷ್ಟು ಆಭರಣಗಳು. ಮುಂಭಾಗದಲ್ಲಿ ಮಾಲಾಕಾರವಾಗಿ ಹಾಗು ಮಂಡಿಯಂತನಕ ಮತ್ತು ಸೊಂಟದ ಎರಡು ಬದಿಗಳಿಂದ ಇಳಿಬಿಟ್ಟ ಧೋತ್ರ. ಇದರ ಮೈಕಟ್ಟು ಆಭರಣಗಳು, ಉಡಿಗೆ ಮತ್ತು ಚಕ್ರದ ಮಾದರಿ ೧ – ೨ನೇ ಶತಮಾನದ ವಿಶಿಷ್ಟ ಶಿಲ್ಪ ಲಕ್ಷಣಗಳಿಗೆ ಬಹಳ ಸಮೀಪವಾಗಿವೆ. ೪–೫ನೇ ಶತಮಾನದಿಂದ (ಅಂದರೆ ಗುಪ್ತರ ಕಾಲದಿಂದ) ವಿಷ್ಣುವನ್ನು (ವಿಶೋಬ ರೂಪ ಹೊರತು) ಕಾಲಮಾನದುದ್ದಕ್ಕೂ ಚತುರ್ಭುಜನಾಗಿಯೂ, ಕಿರೀಟ ಮುಕುಟ ಸಹಿತ ಅಲಂಕೃತನಾಗಿಯೂ ಮೂರ್ತಿ ಶಿಲ್ಪದಲ್ಲಿ ತೋರಿಸಲಾಗಿದೆ. ಆದುದರಿಂದ ಪ್ರಾಯಶಃ ಇದು ೨-೪ನೇ ಶತಮಾನದ್ದಾಗಿರಬಹುದು. ಮತ್ತು ಕರ್ನಾಟಕದಲ್ಲಿ ಇದುವರೆಗೆ ತಿಳಿದವಟ್ಟಿಗೆ ಇದೇ ಪ್ರಾಚೀನ ವಿಷ್ಣು ಶಿಲ್ಪ.

v) ಹೊಡ್ಕೆ ಶಿರೂರು (ಹೊನ್ನಾವರ ತಾ.) : ದ್ವಾರಪಾಲಕ (4; ೧, ೪)

ದುಂಡು ಶಿಲ್ಪದಲ್ಲಿರುವ (೪೮×೨೧ ಸೆ.ಮಿ.) ಇದು ನಿಂತ ಭಂಗಿಯಲ್ಲಿದೆ. ಬಲಗೈಯಲ್ಲಿ ಆಳೆತ್ತರದ ದಂಡ. ಎಡಗೈಹಸ್ತ ಸೊಂಟದ ಮೇಲಿರಿಸಿದೆ. ತಲೆಯ ಮೇಲೆ ಮಧ್ಯದಲ್ಲಿ ಗೊಂಡೆಯು ಅಂಚಿನಲ್ಲಿ ಪಟ್ಟಿಯಿರುವ ಮುಕುಟ, ಕರ್ಣಕುಂಡಲ, ಹರಳಿನ ಪದಕದ ಕಂಠಾಭರಣ ಮತ್ತು ಕೈಕಡಗಗಳು ಇದರ ಆಭರಣಗಳು. ಸೊಂಟದ ಮೇಲೆ ಒಡದೆದ್ದು ಕಾಣುವ ಅಡ್ಡಪಟ್ಟಿಯುಳ್ಳ ಧೋತ್ರದ ಉಡಿಗೆ. ಬೊಗಸೆ ಕಣ್ಣುಗಳು, ದಪ್ಪ ತುಟಿಗಳು, ಮೈಕಟ್ಟು ಮತ್ತು ಆಭರಣಗಳ ಉಡಿಗೆಯ ಶೈಲಿಯು ೧-೨ನೇ ಶತಮಾನದ ಶಿಲ್ಪ ಶೈಲಿಗೆ ಸಮೀಪವಾಗಿವೆ. ಈ ಮೂರ್ತಿ ಪ್ರಾಯಶಃ ೨–೪ನೇ ಶತಮಾನದ್ದಾಗಿರಬಹುದು. ಇದು ಬಹು ಪ್ರಾಚೀನ ಸ್ಕಂದನ ಮೂರ್ತಿಯಿರಬಹುದೆ ?

ಮೇಲಿನ ವಿಷ್ಣು ಮತ್ತು ದ್ವಾರಪಾಲಕನ ಮೂರ್ತಿಗಳು ಈಗ ಶ್ರೀ ಚಿತ್ರಾಪುರ (ಹೊನ್ನಾವರ ತಾ.) ಮಠದ ವಸ್ತು ಸಂಗ್ರಹಾಲಯದಲ್ಲಿವೆ.

vi) ಹಿನ್ನೂರು (ಹೊನ್ನಾವರ ತಾ.) : ಮಹಿಷಾಸುರಮರ್ದಿನಿ (ಚಿತ್ರ 6; ೧)

ಇದನ್ನು ಇತ್ತೀಚೆಗೆ ಕಟ್ಟಿದ ಈಶ್ವರ ದೇವಾಲಯದ ಗರ್ಭಗುಡಿಯ ಮುಂದೆ ಎಡಬದಿಯಲ್ಲಿ ಇಡಲಾಗಿದೆ. ಇದನ್ನು ಈ ಗ್ರಾಮದ ಆಗ್ನೆಯಕ್ಕೆ ಸುಮಾರು ೨ ಕಿ. ಮಿ. ದೂರದಲ್ಲಿರುವ ಕೊಂಡದಕುಳಿ ಎಂಬ ಗ್ರಾಮದಿಂದ ತರಲಾಯಿತಂತೆ. ದುಂಡು ಶಿಲ್ಪ, ಚತುರ್ಭುಜ. ಕ್ರಮವಾಗಿ ಕೆಳಬಲಗೈಯಿಂದ ತ್ರಿಶೂಲ, ಪ್ರಯೋಗ ಚಕ್ರ, ಶಂಖ ಹಸ್ತಗಳಲ್ಲಿ ಇವೆ. ಕೆಳಎಡಗೈಯಿಂದ ಬೆನ್ನು ಮೇಲಾಗಿ ಮುಗ್ಗರಿಸಿದ ಮಹಿಷಾಸುರನ ತಲೆಯನ್ನು ಹಿಡಿಯಲಾಗಿದೆ. ಕಾಲಿನಿಂದ ಬೆನ್ನನ್ನು ಅದುಮಿ ತುಳಿಯಲಾಗಿದೆ. ಈ ಶಿಲ್ಪದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮಹಿಷಾಸುರನ ಚಿತ್ರ. ಕೋಣನ ರುಂಡ ಮನುಷ್ಯ ದೇಹ. ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದ ಇಂಥ ಶಿಲ್ಪದಲ್ಲಿ ಉದ್ದಕ್ಕೂ ಅಸುರನನ್ನು ಪೂರ್ಣವಾಗಿ ಮಹಿಷ(ಕೋಣ)ನ ರೂಪ ದಲ್ಲಿ ಅಥವಾ ಕೇವಲ ಕೋಡುಗಳುಳ್ಳ ಮನುಷ್ಯನ ರೂಪದಲ್ಲಿ ತೋರಿಸಲಾಗಿದೆ. ಉದಾ : ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ, ಬಾದಾಮಿಯ ಶೈವ ಗುಹೆಯ ಈ ಶಿಲ್ಪಗಳು. ಆದುದರಿಂದ ಮೇಲಿನ ಮೂರ್ತಿ ಇವೆಲ್ಲಕ್ಕಿಂತ ಭಿನ್ನವಾಗಿದ್ದು ವಿಶಿಷ್ಟ ವಾಗಿದೆ. ಆದರೆ ಈ ರೀತಿಯ ಶಿಲ್ಪ ಬಾದಾಮಿ ಚಾಲುಕ್ಯರ ಕಾಲದ ಆಲಂಪುರದ ದೇವಾಲಯಗಳಲ್ಲಿದೆ. ಮತ್ತು ತಮಿಳು ನಾಡಿನ ಮಹಾಬಲಿಪುರದಲ್ಲಿಯೂ ಕಂಚಿಯ ಪಲ್ಲವರ ಕಾಲದ ೭ನೇ ಶತಮಾನದ ಶಿಲ್ಪದಲ್ಲಿಯೂ ಇದೆ. ಮೊದಲು ಬನವಾಸಿ ಕದಂಬ–ಪಲ್ಲವ ನಂತರ ಚಾಲುಕ್ಯ–ಪಲ್ಲವ ಪರಸ್ಪರ ಶಿಲ್ಪಕಲೆಯೂ ಸೇರಿ ಸಂಬಂಧ ವಿದ್ದರೂ ಪಲ್ಲವರ ಶಿಲ್ಪದಲ್ಲಿ ೭ನೇ ಶತಮಾನದ ಪೂರ್ವದಲ್ಲಿ ಈ ತರಹದ ಶಿಲ್ಪ ಕಂಡು ಬಂದಿಲ್ಲ. ಹಾಗೆಯೇ ಕರ್ನಾಟಕ ಶಿಲ್ಪದಲ್ಲಿ ೬ನೇ ಶತಮಾನದ ನಂತರ ಶಿಲ್ಪದಲ್ಲಿ ಇದು ಇಲ್ಲ. ಈ ಐತಿಹಾಸಿಕ ಸಂದರ್ಭವನ್ನು ಮತ್ತು ಹಿನ್ನೂರಿನ ಮೂರ್ತಿಯ ಲಕ್ಷಣಗಳನ್ನು ಗಮನಿಸಿದಾಗ, ಇದು ಬನವಾಸಿ ಕದಂಬ ಕಾಲದ್ದಾಗಿರಬಹುದೆಂದು ಅನುಮಾನವಾಗುವುದು. ಈ ತರಹದ ಮತ್ತೊಂದು ಉಬ್ಬು ಶಿಲ್ಪವು ಗೇರುಸೊಪ್ಪೆ ಯಿಂದ ಸುಮಾರು ೧೦ ಕಿ. ಮಿ. ಉತ್ತರ–ವಾಯುವ್ಯಕ್ಕೆ ಮಹಿಮೆ (ಹೊನ್ನಾವರ ತಾ.) ಯಲ್ಲಿದೆ.

vii) ಮುಗದೂರು (ಸಿರ್ಸಿ ತಾ.) : ಕೋಣನ ತಲೆ (ಚಿತ್ರ 6; ೨)

ಒಂದು ಅಗಲವಾದ ಕಲ್ಲು ಚಪ್ಪಡಿಯ ಮೇಲೆ ಕೋಣನ ತಲೆಯ ಉಬ್ಬು ಚಿತ್ರ ವನ್ನು ದೊಡ್ಡದಾಗಿ ಎದ್ದು ಕಾಣುವ ಹಾಗೆ ಮೂಡಿಸಿದ ಈ ಶಿಲ್ಪ. ಇಂಥ ಶಿಲ್ಪಗಳು ಕುಪ್ಪಗದ್ದೆ (ಸೊರಬ ತಾ.), ಕಂಪಟೂರಿನಲ್ಲಿ ಇವೆ. ಇದನ್ನು ಸ್ಥಳಿಕವಾಗಿ 'ಕೋಣನ

ತಲೆ' ಎಂದು ಕರೆಯಲಾಗಿದೆ. ಈ ಚಿತ್ರದಲ್ಲಿ ಕೋಣನ ಬಾಯಿಯಿಂದ ನಾಲಿಗೆ ಹೊರ ಚಾಚಿರುತ್ತದೆ. ಕುಪಟೂರಿನ ಚಿತ್ರದಲ್ಲಿ ಕೋಡುಗಳ ಮಧ್ಯದಲ್ಲಿ ಅರಳಿದ ಕಮಲದ ಚಿತ್ರವಿದೆ. ಬಹುಶಃ ಇದು ಮಹಿಷಮರ್ದಿನಿ ಶಿಲ್ಪಕ್ಕೆ ಸಂಬಂಧಪಟ್ಟಿರಬೇಕು. ಮಹಿಷ ಮರ್ದಿನಿ ಶಿಲ್ಪದ ಮುಂದೆ ಪ್ರತ್ಯೇಕ ಇಂಥ ಶಿಲ್ಪವನ್ನು ಇಡುವ ಪದ್ಧತಿ ಬಹಳ ಹಿಂದೆ ಇದ್ದಿರಬಹುದೆ ? ಇವು ಸಿರ್ಸಿ–ಸೊರಬ ಪ್ರದೇಶದಲ್ಲಿ ಅಂದರೆ ಬನವಾಸಿ ಕದಂಬ ಸಾಮ್ರಾಜ್ಯದ ಕೇಂದ್ರ ಪ್ರದೇಶದಲ್ಲಿ ಮಾತ್ರ ಇದುವರೆಗೆ ಕಂಡುಬಂದಿದೆ. ತಮಿಳು ನಾಡಿನಲ್ಲಿ ಚೋಳರ ಕಾಲದ ಶಿಲ್ಪದಲ್ಲಿ ಮಹಿಷಮರ್ದಿನಿ ಕೋಣನ ತಲೆಯ ಮೇಲೆ ನಿಂತ ಹಾಗೆ ತೋರಿಸಲಾಗಿದೆ. ಈ ಶಿಲ್ಪದ ಪೂರ್ವಭಾವಿ ಕಲ್ಪನೆಯನ್ನು ಸೂಚಿ ಸುತ್ತದೆಯೆನೊ ಎಂಬಂತಿದೆ ಈ ಕೋಣನ ತಲೆ ಶಿಲ್ಪ. ಕುಪಟೂರಿನ ಶಿಲ್ಪದಲ್ಲಿರುವ ಕಮಲದ ಶೈಲಿಯನ್ನು ಮತ್ತು ಈ ಶಿಲ್ಪದ ಭೌಗೋಳಿಕ ಪ್ರಸಾರವನ್ನು ನೋಡಿದರೆ, ಈ ಶಿಲ್ಪ ಬನವಾಸಿ ಕದಂಬರ ಕಾಲದ್ದಿರಬಹುದೇನೊ ಎಂದು ಅನುಮಾನವಾಗು ತ್ತದೆ.

viii) ಹೊಂಬಳ (ಗದಗ ತಾ.) : ಮಹಿಷಾಸುರಮರ್ದಿನಿ (ಚಿತ್ರ 5; ಳ)

ಇಲ್ಲಿಯ ಶಂಕರಲಿಂಗ ಗುಡಿ ಸಭಾಮಂಡಪದೊಳಗೆ ಗೋಡೆಗಳಲ್ಲಿ ಸೇರಿಸಿಟ್ಟ ಎರಡು ಗಣೇಶನ, ವಿಷ್ಣು ಅನಂತ ಶಯನನ, ಎರಡು ಶಿವ-ಪಾರ್ವತಿಯ, ಮಹಿಷಾಸುರ ಮರ್ದಿನಿಯ ಮೂರ್ತಿ ಶಿಲ್ಪಗಳಿವೆ. ಇವುಗಳಲ್ಲಿ ಮಹಿಷಾಸುರಮರ್ದಿನಿ ಮೂರ್ತಿಯು (೦.೫೭ × ೦.೭೫ ಸೆ.ಮಿ.) ಬಾದಾಮಿ ಚಾಲುಕ್ಯ ಕಾಲದ ಒಂದು ಅಪರೂಪ ಶಿಲ್ಪ. ಸು. ೮ನೆಯ ಶತಮಾನದ್ದು. ಅಷ್ಟಭುಜಗಳುಳ್ಳದ್ದು. ಕ್ರಮವಾಗಿ ಬಲಗಡೆಯ ಕೆಳಹಸ್ತದಿಂದ, ತ್ರಿಶೂಲ, ಖಡ್ಗ, ಚಕ್ರ, ಬೆನ್ನಿಗೆ ಕಟ್ಟಿದ ಬತ್ತಳಿಕೆಯಿಂದ ತೆಗೆಯುತ್ತಿರುವ ಬಾಣ, ಶಂಖ, ಬಿಲ್ಲು, ಢಾಲು ಕೈಗಳಲ್ಲಿ ಇವೆ. ತ್ರಿಭಂಗಿಯಲ್ಲಿರುವ ದೇವಿಯು ತನ್ನ ಎಡಗಾಲನ್ನು ಮಹಿಷಾಸುರನ ಬೆನ್ನಿನ ಮೇಲೆ ಅದುಮಿ ಕೆಳ ಎಡಗೈಯಿಂದ ಅವನ ಕೋಡುಗಳನ್ನು ಹಿಡಿದು ತಲೆಯನ್ನು ಬಗ್ಗಿಸಿದ್ದಾಳೆ. ಕೆಳ ಬಲಗೈಯಲ್ಲಿರುವ ತ್ರಿಶೂಲ ದಿಂದ ಅಸುರನನ್ನು ಇರಿಯಲಾಗಿದೆ. ಅಸುರನ ಕೈಗಳಲ್ಲಿ ಢಾಲು ಮತ್ತು ಕತ್ತಿ ಇವೆ. ದೇವಿಯ ಬಲಬದಿಯಿಂದ ಅವಳ ವಾಹನ ಸಿಂಹವು ಕಾಣಿಸಿಕೊಂಡಿದೆ. ಕಿರೀಟಮುಕುಟ ಕಂಠಾಭರಣ, ಯಜ್ಞೋಪವೀತ ರೀತಿಯಲ್ಲಿಯ ಹಾರ, ಬಳೆಗಳು, ಮುಂದಕ್ಕೆ ಚೆನ್ನಾಗಿ ತೀಡಿ ನೆರಿಗೆಯುಳ್ಳ ಉಡಿಗೆ ಮೂರ್ತಿಯನ್ನು ಅಲಂಕರಿಸಿವೆ. ಮುಖ್ಯವಾಗಿ ಈ ಮೂರ್ತಿಯಲ್ಲಿ ಗಮನಿಸಬೇಕಾದ ಅಂಶವೆಂದರೆ ಮಹಿಷಾಸುರನ ಚಿತ್ರ. ಬಾದಾಮಿ ಚಾಲುಕ್ಯ ಕಾಲದ ಈ ದೇವಿಯ ಶಿಲ್ಪದಲ್ಲಿ ಅಸುರನನ್ನು ಎರಡು ರೀತಿಯಲ್ಲಿ ತೋರಿಸ ಲಾಗಿದೆ : ಪೂರ್ಣವಾಗಿ ಕೋಣನ ರೂಪದಲ್ಲಿ ಅಥವಾ ಕೇವಲ ಕೋಡುಗಳುಳ್ಳ ಮನು ಷ್ಯನ ರೂಪದಲ್ಲಿ. ಎರಡನೇ ವಿಧದ ಮೂರ್ತಿ ಪಟ್ಟದಕಲ್ಲಿನಲ್ಲಿರುವ ವಿರೂಪಾಕ್ಷ ದೇವಾಲಯದ ಸಭಾಮಂಡಪದ ವಾಯುವ್ಯ ಮೂಲೆಯಲ್ಲಿರುವ ಸಣ್ಣ ಗರ್ಭಗೃಹದಲ್ಲಿದೆ.

ಮತ್ತೆ ಬೇರೆಲ್ಲಿಯೂ ಈ ವಿಧದ ಮೂರ್ತಿ ದೊರಕಿರಲಿಲ್ಲ. ಉಳಿದೆಲ್ಲ ಮೂರ್ತಿಗಳು ಮೊದಲನೆ ವಿಧದ್ದು. ಆದ್ದರಿಂದ ಈ ಶಿಲ್ಪವು ಗಮನಾರ್ಹ.

ಉಳಿದ ಮೂರ್ತಿಗಳು (ಶಿವ–ಪಾರ್ವತಿಯ ಒಂದು ಮೂರ್ತಿಯನ್ನು ಬಿಟ್ಟು) ೧೧–೧೩ ನೆಯ ಶತಮಾನದ್ದು. ಇವುಗಳಲ್ಲಿ ಗಣೇಶ ಕಾರ್ತಿಕೇಯ ಸಮೇತರಾದ ಶಿವ – ಪಾರ್ವತಿಯ ಪ್ರಭಾವಳಿಯ (೦. ೬೦ × ೦. ೪೨ ಸೆ. ಮಿ.) ಮೇಲೆ ಅಷ್ಟದಿಕ್ಪಾಲಕರ ಚಿತ್ರಗಳಿವೆ. ಮತ್ತೊಂದು ಶಿವ – ಪಾರ್ವತಿಯ ಚಿತ್ರ ವಿಜಯನಗರ ಕಾಲದ್ದು.

ix) ಬಳ್ಳಿಗಾವೆ : ಅಪೂರ್ವ ಶಿಲ್ಪಗಳು

ಈಗ ಕೇದಾರೇಶ್ವರ ದೇವಾಲಯದ ಆವರಣದಲ್ಲಿಟ್ಟ ಮೂರ್ತಿಗಳಲ್ಲಿ ನಾಲ್ಕು ಗಮನಾರ್ಹವಾಗಿವೆ. ಎರಡು ವಿಷ್ಣು ಮೂರ್ತಿಗಳು, ಒಂದು ಮಹಿಷಾಸುರ ಮರ್ದಿನಿ ಮತ್ತು ಜೈನ ಯಕ್ಷಿ (?).

ಅ) ವಿಷ್ಣು ಮೂರ್ತಿಗಳಲ್ಲಿ ಒಂದು (೨. ೬೫ × ೨೭ ಸೆ. ಮಿ.) ಕೆಳಗಿನ ಮತ್ತು ಮೇಲಿನ ಬಲಗೈಗಳಲ್ಲಿ ಫಲವು ಮತ್ತು ಪ್ರಯೋಗ ಚಕ್ರವು ಮೇಲಿನ ಎಡಗೈಯಲ್ಲಿ ಶಂಖವು ಕ್ರಮವಾಗಿ ಇವೆ. ಕೆಳಗಿನ ಹಸ್ತವನ್ನು ಸೊಂಟದ ಮೇಲಿರಿಸಿದೆ. ಕೆಳಗಿನ ಬಲಗೈ ಪಕ್ಕದಲ್ಲಿಯೆ ಗದೆಯನ್ನು ನೆಟ್ಟಗೆ ನಿಲ್ಲಿಸಿದೆ. ಧೋತ್ರವನ್ನು ಧರಿಸಿದ ರೀತಿ ಗಮನಾರ್ಹ. ಕಚ್ಚೆ ಹಾಕಿ ಕಾಲುಗಂಟಿನ ವರೆಗೆ ಧೋತ್ರವನ್ನು ಮಡಿಕೆ ಮಡಿಕೆಯಾಗಿ ಇಳಿಬಿಟ್ಟಿದೆ. ಈ ರೀತಿ ಧೋತ್ರದ ಉಡಿಗೆ ೧ – ೨ನೇ ಶತಮಾನಗಳ ಕೆಲವು ಶಿಲ್ಪಗಳಲ್ಲಿ ಕಾಣುವುದು. ಉದಾ : ಮಥುರಾ ವಸ್ತುಸಂಗ್ರಹಾಲಯದಲ್ಲಿರುವ ಪಾರ್ಖಂ ಯಕ್ಷ, ಇದೇ ಸ್ಥಳದಲ್ಲಿಯ ಮುಖಲಿಂಗ. ಈ ಪದ್ಧತಿ ಸುಮಾರು ೫ನೇ ಶತಮಾನದವರೆಗೂ ಪ್ರಚಲಿತವಿತ್ತು. ಇದು ಬಾದಾಮಿ ಶಿಲ್ಪದಲ್ಲಿ ಸಾಮಾನ್ಯವಾಗಿ ಕಾಣುವುದಿಲ್ಲ. ಗದೆ ಮುಂತಾದ ಆಯುಧಗಳ, ಆಭರಣಗಳ ಲಕ್ಷಣಗಳಿಂದಲೂ, ಧೋತ್ರ ಉಟ್ಟ ರೀತಿಯಿಂದಲೂ ಈ ಜನಾರ್ಧನ ಮೂರ್ತಿ ಪ್ರಾಯಶಃ ೫ – ೬ನೇ ಶತಮಾನದ್ದೆಂದು ಹೇಳಬಹುದು.

ಬ) ಸಮಭಂಗದಲ್ಲಿರುವ ಮತ್ತೊಂದು ವಿಷ್ಣು (೨. ೬೫ × ೪೮ಸೆ.ಮಿ.) ವಿನ ಮೂರ್ತಿ ಒಡೆದಿದೆ. ಮೇಲಿನ ಬಲಗೈ, ಎಡಗೈ ಮತ್ತು ಕೆಳಗಿನ ಎಡಗೈಗಳಲ್ಲಿ ಕ್ರಮವಾಗಿ ಚಕ್ರ, ಶಂಖ ಮತ್ತು ಫಲಗಳು ಇವೆ. ಕೆಳಗಿನ ಬಲಗೈಯಲ್ಲಿದ್ದ ವಸ್ತು ಬಹುಶಃ ಗದೆಯಿದ್ದಿರಬೇಕು, ಒಡೆದು ಹೋಗಿದೆ. ಮೇಲಿನ ಎರಡು ಕೈಗಳು ಮುಂದಕ್ಕೆ ಚಾಚಿ ಮೇಲಕ್ಕೆ ಎತ್ತರಿಸಿವೆ. ಆಭರಣಗಳಲ್ಲಿ ಮುಖ್ಯವಾಗಿ ಕರಂಡ ಮುಕುಟ, ಶಂಖ, ಚಕ್ರಗಳ ಲಕ್ಷಣಗಳು ಮತ್ತು ಅವುಗಳನ್ನು ಹಿಡಿದಿರುವ ರೀತಿ ಬಾದಾಮಿ ಚಾಲುಕ್ಯ–ರಾಷ್ಟ್ರಕೂಟ ಶೈಲಿಯನ್ನು ಸೂಚಿಸುತ್ತದೆ.

ಕ) ಮಹಿಷಾಸುರಮರ್ದಿನಿ (ಚಿತ್ರ 5; ೨) ಒಂದು ಸುಂದರ ದುಂಡು ಶಿಲ್ಪ. ಎಡಗಾಲಿನಿಂದ ಕೋಣನ ಕತ್ತನ್ನು ತುಳಿದು ಅದುಮಿದೆ. ಕೆಳಗಿನ ಬಲಗೈಯಲ್ಲಿಯ ತ್ರಿಶೂಲದ ತುದಿಯಿಂದ ಇರಿದಿದೆ. ಕೋಣನ ತಲೆ ಕತ್ತರಿಸಿ ಕೆಳಗೆ ಬಿದ್ದಿದೆ. ಅದರ ಕತ್ತಿನಿಂದ ಹೊರಬರುತ್ತಿರುವ ಮಹಿಷಾಸುರನ ತಲೆಯ ಜುಟ್ಟನ್ನು ಕೆಳ ಎಡಗೈಯಲ್ಲಿ ಹಿಡಿಯಲಾಗಿದೆ. ಮೇಲಿನ ಎರಡು ಕೈಗಳಲ್ಲಿ ಕತ್ತಿ, ಡಾಲುಗಳಿವೆ. ಕತ್ತಿನಲ್ಲಿ ಮಣಿ ಸರ, ಕಡಗದಂಥ ಪದಕವುಳ್ಳ ಕಂಠಹಾರ, ಯಜ್ಞೋಪವೀತದಂಥ ಹಾರ, ತೋಳ್ಬಂದಿ, ಕೈಬಳೆ, ಕಾಲ್ಗಡಗ ಇವು ಮೂರ್ತಿಯ ಆಭರಣಗಳು. ಇದರಲ್ಲಿ ಕಡಗದಂಥ ಪದಕ ವುಳ್ಳ ಕಂಠಾಭರಣ ಗಮನಾರ್ಹ. ವಸ್ತ್ರವು ನೆರಿಗೆ ನೆರಿಗೆಯಾಗಿದೆ. ಈ ದೇವಿಯ ವಾಹನವಾದ ಸಿಂಹವು ಹಿಂದಿನಿಂದ ಬಂದು ಅವಳ ಬಲಬದಿಯಲ್ಲಿ ಕಾಣಿಸಿಕೊಳ್ಳು ತ್ತದೆ.

ಸಾಮಾನ್ಯವಾಗಿ ಬಾದಾಮಿ ಚಾಲುಕ್ಯ ಶಿಲ್ಪದಲ್ಲಿ, ಚತುರ್ಭುಜಳಾಗಿದ್ದಾಗ ಚಕ್ರ, ಶಂಖಗಳನ್ನು ಹಿಡಿದು ತ್ರಿಶೂಲದ ಬುಡದಿಂದ ಮಹಿಷನನ್ನು ಇರಿದಿರುವ ಶಿಲ್ಪವೇ ಹೆಚ್ಚು. ಗುಪ್ತರ ಕಾಲದ ಶಿಲ್ಪದಲ್ಲಿ ಚತುರ್ಭುಜಳಾದ ಈ ದೇವಿ ಕತ್ತಿ, ಡಾಲುಗಳನ್ನು ಹಿಡಿದು, ತ್ರಿಶೂಲದ ತುದಿಯಿಂದ ಇರಿದ ಹಾಗೆ ತೋರಿಸಿರುತ್ತದೆ. ಉದಾ : ಭೂಮಾರದ ಇಂಥ ಒಂದು ಶಿಲ್ಪ.[೭] ಬಳ್ಳಿಗಾವೆಯ ಶಿಲ್ಪದ ಉಡಿಗೆ, ಆಭರಣಗಳು, ಸಿಂಹದ ಲಕ್ಷಣ, ಬಾದಾಮಿ ಶಿಲ್ಪದ ಮಾದರಿಯ ಹೋಲುತ್ತದೆ. ಆದರೆ ಅಸುರನನ್ನು ಪೂರ್ಣವಾಗಿ ಕೋಣ(ಮಹಿಷ)ನ ರೂಪದಲ್ಲಿರುತ್ತದೆ ಬಾದಾಮಿ ಚಾಲುಕ್ಯ ಶಿಲ್ಪದಲ್ಲಿ. ಕತ್ತರಿಸಿದ ಕೋಣನ ಕತ್ತಿನಿಂದ ಮನುಷ್ಯನ ರೂಪದಲ್ಲಿ ಅಸುರನು ಬರುವಂಥ ಶೈಲಿ ಪ್ರಪ್ರಥಮ ರಾಷ್ಟ್ರಕೂಟ ಕಾಲದ ಶಿಲ್ಪದಲ್ಲಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಇದು ೮-೯ನೇ ಶತಮಾನದ್ದಾಗಿರಬೇಕು.

ಜೈನ ಯಕ್ಷಿ (?) ಯ ಶಿಲ್ಪ (೮೦ × ೬೦ ಸೆ. ಮಿ.) ತುಂಬ ಸೊಗ ಸಾಗಿದೆ. ಪ್ರಾಯಶಃ ಅಂಬಿಕಾ ಇರಬಹುದು. ಬಲಗೈ ಮುರಿದು ಹೋಗಿದೆ. ಇದರ ಆಭರಣಗಳಲ್ಲಿ ಸಿಂಹ ಮುಖದ ತೋಳ್ಬಂದಿ ಗಮನಾರ್ಹ. ಕಾಲ ೧೧ – ೧೨ನೇ ಶತಮಾನ.

x) ಕಳಸಾಪುರ (ಗದಗ ತಾ.) : ಬಾಹುಬಲಿ (ಚಿತ್ರ 4; ೪)

ಊರೊಳಗಿರುವ ಇದನ್ನು ''ದಿಣ್ಣೆ ದೇವರು'' ಎಂದು ಕರೆಯಲಾಗಿದೆ. ೩ ಮಿ. ಎತ್ತರ ೧ ಮಿ. ಅಗಲವಿರುವ ಒಂದು ಉತ್ತಮ ಉಬ್ಬು ಶಿಲ್ಪ ಫಲಕ. ಪ್ರಮಾಣ ಬದ್ಧವಾಗಿಯೂ ಆಕರ್ಷಕವಾಗಿಯೂ ಇರುವ ಈ ಭವ್ಯ ಮೂರ್ತಿಯ ಬದಿಗಳಲ್ಲಿ ಹುತ್ತಗಳನ್ನಾಗಲಿ, ಕಾಲು-ತೊಡೆಗಳ ಮೇಲೆ ಮಾಧವಿ ಬಳ್ಳಿಗಳನ್ನಾಗಲಿ, ತಲೆಯ ಮೇಲೆ ಮುಕ್ಕೊಡೆಯನ್ನಾಗಲಿ ತೋರಿಸಿಲ್ಲ. ಫಲಕದ ಅಂಚನ್ನು ಮೂರ್ತಿಯ ಭುಜದ

ವರೆಗೂ ತಾವರೆದಂಟಿನ ಹಾಗೆಯೂ, ಭುಜಗಳ ಮೇಲೆ ಕಮಲದ ಎಸಳುಗಳಂತೆಯೂ ಬಿಡಿಸಲಾಗಿದೆ. ಕಾಲ ಸು. ೧೦ನೆಯ ಶತಮಾನ.

ಉತ್ತರಕರ್ನಾಟಕದ ಕೊಪ್ಪಳ ಮತ್ತು ಮುಳಗುಂದಗಳಲ್ಲಿ ಒಂದೊಂದು ಬಂಡೆಯ ಮೇಲೆ ಇಂಥ ಮೂರ್ತಿಯನ್ನು ಅಪೂರ್ಣವಾಗಿ ಉಬ್ಬು ಶಿಲ್ಪದಲ್ಲಿ ಬಿಡಿಸಲಾಗಿದೆ. ಬಳ್ಳಿಗಾವೆಯಲ್ಲಿ ಕಳಸಾಪುರದಲ್ಲಿರುವಂಥ ಒಂದು ಮೂರ್ತಿಯಿದ್ದು, ಭಗ್ನವಾಗಿ ಬಿದ್ದಿದೆ. ಆದರೆ ಏನೂ ಮುಕ್ಕಾಗದೆ ಈ ವಿಧದ ಚೆಲುವಾದ ಉತ್ತಮ ಶಿಲ್ಪವೆಂದರೆ ಕಳಸಾಪುರದ್ದು.

೩. ಶಾಸನಗಳು :

i) ಕೊಪ್ಪಳ : ವರ್ಣ ಶಾಸನ

ಈ ಊರಿನ ಗುಡ್ಡದ ಮೇಲೆ 'ಪಾಲ್ಕಿಗುಂಡು' ಅಶೋಕ ಮೌರ್ಯನ ಬಂಡೆ ಶಾಸನ ಮತ್ತು 'ಮೋರಿಯರ ಅಂಗಡಿ'ಗಳ ಮಧ್ಯಪ್ರದೇಶದ ಒಂದು ಗವಿಯಲ್ಲಿ ಕೆಮ್ಮಣ್ಣಿನಂಥ ಬಣ್ಣದಲ್ಲಿ ಬರೆದ ೮ನೇ ಶತಮಾನದ ನಾಲ್ಕು ಸಾಲಿನ ಶಾಸನವಿದೆ. ಅದರ ಪಾಠ* ಹೀಗಿದೆ :

೧. ಶ್ರೀ ಅಣಗಾರನ್ ಸಾನ್ತೆರೆಯನ್
೨. ಶ್ರೀ ಅಣನ್ವೆಯನ್ ದೋಮೆರೆಯನ್
೩. ಶ(ಶ್ರೀ) ಆನಿರಬಾತ್ರನ್
೪. ಶ್ರೀ ಕಣ್ಚೆರೆಯನ್ ಕಿರುಗೆಯನ್

ಇವು ವ್ಯಕ್ತಿಗಳ ಹೆಸರುಗಳು.

ii) ಜಂಬೂರು, (ಶಿಕಾರಿಪುರ ತಾ.) : ತಾಮ್ರ ಶಾಸನಗಳು

ಈ ಊರಿನ ಶ್ರೀ ಕಲಿವೀರಪ್ಪನೆಂಬ ಸ್ಥಳಿಕರಿಗೆ ಅಲ್ಲಿ ಭಾವಿಯ ಮಣ್ಣನ್ನು ತೆಗೆಯಿಸುವಾಗ ಎರಡು ತಾಮ್ರಪಟಗಳು ದೊರೆತಿವೆ.

ಒಂದರಲ್ಲಿ ವರಾಹ ಲಾಂಛನವುಳ್ಳ ಉಂಗುರ ಸಹಿತ ಮೂರು ತಗಡುಗಳಿದ್ದು (ಸು. ೨೪.೪ × ೧೩ ಸೆ. ಮಿ.) ಮೊದಲನೆಯ ಮತ್ತು ಕೊನೆಯದರ ಒಳಬದಿಗಳಲ್ಲಿ, ಮಧ್ಯದರ ಎರಡು ಬದಿಗಳಲ್ಲಿ ೧೧ನೇ ಶತಮಾನದ ನಾಗರಿಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿ ಶಾಸನವಿದೆ. ಇದರಲ್ಲಿ ಚಾಲುಕ್ಯರ ವಂಶಾವಳಿಯನ್ನು ೬ನೇ ವಿಕ್ರಮಾದಿತ್ಯನ ವರೆಗೂ ಕೊಡಲಾಗಿದೆ.

---

* ಈ ಶಾಸನವನ್ನು ಓದುವುದರಲ್ಲಿ ಡಾ. ಶ್ರೀ. ಹಾ. ರಿತ್ತಿಯವರು ನನಗೆ ಸಹಾಯ ಮಾಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.



ಚಿತ್ರ 1: ೧, ೨ ಮತ್ತು ೪. ಬಳ್ಳಿಗಾವೆ: ಇತಿಹಾಸ ಪ್ರಾರಂಭ ಕಾಲದ ನೆಲೆ ಮತ್ತು ಅದರಲ್ಲಿಯ ಅವಶೇಷಗಳು.
೩. ಕೊಪ್ಪಳ: ಪ್ರಾಚೀನ ಶಿಲ್ಪ.



ಚಿತ್ರ 2 : ೧. ಕೊಂತವಾಲಿ : ವಿಷ್ಣು. ೨. ತೊಗರ್ಸಿ : ಬೌದ್ಧ ದೀಪಸ್ತಂಭ. ೩. ಹೈಗುಂದ : ವಿಷ್ಣು.



ಚಿತ್ರ 3 : ೧, ೩. ಹೈಗುಂದ : ಬೃಹತ್ ಮತ್ತು ಕುಬ್ಜಯಕ್ಷರ ಮೂರ್ತಿಗಳು.
೨. ಬುದ್ಧ. ೪. ರಾಜಪುರುಷ (ಸೂರ್ಯ ?).



ಚಿತ್ರ 4 : ೧. ಹೊಡ್ಕೆ-ಶಿರೂರು : ದ್ವಾರಪಾಲ (ಸ್ಕಂದ ?).
೨, ೩. ನೇರಲಗಿ : ಶಿವದೇವಾಲಯ. ೪. ಕಳಸಾಪುರ : ಬಾಹುಬಲಿ.



ಚಿತ್ರ 5 : ೧, ೨, ೪. ಹಿನ್ನೂರು, ಬಳ್ಳಿಗಾವೆ, ಹೊಂಬಳ : ಮಹಿಷಾಸುರಮರ್ದಿನಿ. ೩. ಮುಗದೂರು : ಕೋಣನತಲೆ ಮತ್ತು ಗಜಲಕ್ಷ್ಮಿ. ೫, ೬. ಧಾರೇಶ್ವರ : ಆದಿಧಾರೇಶ್ವರ ದೇವಾಲಯ.

ಮತ್ತೊಂದು ವಿಜಯನಗರ ಕಾಲದ್ದು. ಇದರ ಉಂಗುರದಲ್ಲೂ ವರಾಹ ಲಾಂಛನವಿದೆ. ನಾಗರಿಲಿಪಿ, ಸಂಸ್ಕೃತ ಭಾಷೆ, ಪೌರಾಣಿಕ ವ್ಯಕ್ತಿಗಳಾದ ಹಸ್ತಿನಾ ಪುರದ ಜನಮೇಜಯ ರಾಜನಿಂದ ದಾನಕೊಟ್ಟ ವಿಷಯಕ್ಕೆ ಸಂಬಂಧಪಟ್ಟದ್ದು. ಇದೇ ತರಹದ್ದು ಹಿಂದೆ ಗೌಜ ಮತ್ತು ಬೇಗೂರು (ಶಿಕಾರಿಪುರ ತಾ.) ಗಳಲ್ಲಿ ಒಂದೊಂದು ತಾಮ್ರ ಶಾಸನವು ದೊರಕಿದ್ದು ಪ್ರಕಟವಾಗಿದೆ. ಈ ಶಾಸನಗಳ ಅಭ್ಯಾಸ ನಡೆದಿದೆ.

ಅಡಿಟಿಪ್ಪಣಿಗಳು

೧. ಸುಂದರ, ಅ; ೧೯೭೧: "ಸಮ್ ಆಸ್ಪೆಕ್ಟ್ಸ್ ಆಫ್ ನಿಯೋಲಿಥಿಕ್ ಸೈಟ್ಸ್ ಇನ್ ಮಲ್ನಾಡ್ ಏರಿಯಾ" ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಸಂ. LIX, ಪುಟಗಳು, ೯೭–೧೧೦.

೨. ಅದೇ ಕಡೆ.

೩. ಸುಂದರ, ಅ; ೧೯೭೪: "ಸಮ್ ಆಸ್ಪೆಕ್ಟ್ಸ್ ಆಫ್ ಶೈವ ಟೆಂಪಲ್ಸ್ ಆಫ್ ದಿ ಬಾದಾಮಿ ಚಾಲುಕ್ಯ ಪೀರಿಯಡ್: ಎ ಸ್ಟಡಿ" ಮಿಥಿಕ್ ಸೊಸೈಟಿ, ಬೆಂಗಳೂರು ಇದರ ಆಶ್ರಯದಲ್ಲಿ ಬಾದಾಮಿ ಚಾಲುಕ್ಯರು ಎಂಬ ವಿಷಯದ ಮೇಲೆ ನಡೆದ ವಿಚಾರಗೋಷ್ಠಿ ಯಲ್ಲಿ ಸಾದರಪಡಿಸಿದ್ದು, ಈಗ ಅಚ್ಚಿನಲ್ಲಿದೆ.

೪. ಆನಂದಕುಮಾರಸ್ವಾಮಿ, (೧೯೨೭) ಪುನರ್ಮುದ್ರಣ ಪ್ರತಿ ೧೯೬೫; ಹಿಸ್ಟ್ರಿ ಆಫ್ ಇಂಡಿಯನ್ ಆ್ಯಂಡ್ ಇಂಡೋನೇಷಿಯನ್ ಆರ್ಟ್ಸ್, ಪುಟಗಳು ೭೦, ೨೩೯, ಚಿತ್ರ xvxiii, 141.

೫. ಸಂಯುಕ್ತ ಕರ್ನಾಟಕ ೨೪–೭–೧೯೭೪, ಪು. ೬.

೬. ರಾಯಚೂರು ಜಿಲ್ಲೆಯ ಗೆಜೆಟೀರ್‌ನಲ್ಲಿ ಚಿತ್ರಗಳನ್ನು ನೋಡಿ.

೭. ಶೇಷಾದ್ರಿ, ಎಂ; ೧೯೬೩: "ಮಹಿಷಾಸುರ ಮರ್ದಿನಿ," ದಿ ಹಾಫ್ ಈಯರ್ಲಿ ಜರ್ನಲ್ ಆಫ್ ಮೈಸೂರು ಯೂನಿವರ್ಸಿಟಿ (ಮಾರ್ಚ್ ಪ್ರತಿ) ಪ್ಲೇಟ್ 4, A.

೮. ಎಪಿಗ್ರಾಫಿಯ ಕರ್ನಾಟಕ, ಸಂಪುಟ ೭, ಶಿಕಾರಿಪುರ ತಾ. ಸಂಖ್ಯೆ 12, 45,

ಕೃತಜ್ಞತೆ

ಕೊಪ್ಪಳ ಶ್ರೀ ಗವಿಮಠದ ಶ್ರೀ ಶಾಂತವೀರ ಮಹಾಸ್ವಾಮಿಗಳವರು ಮತ್ತು ಶ್ರೀ ಎಸ್. ಎಚ್. ಪಾಟೀಲರು. ಶ್ರೀಕ್ಷೇತ್ರ ಚಿತ್ರಾಪುರ ಮಠದ ಶ್ರೀಮತ್ ಪರಿಜ್ಞಾನಾ ಶ್ರಮ ಸ್ವಾಮಿಗಳವರು, ಶಿವಮೊಗ್ಗಾ ಶ್ರೀ ಹಸೂಡಿ ದತ್ತಾತ್ರೇಯ ಶಾಸ್ತ್ರಿಗಳು, ಮತ್ತು ನನ್ನ ತಮ್ಮ ಶ್ರೀ ಶಂಕರನಾರಾಯಣ. ನನ್ನ ಸ್ನೇಹಿತರಾದ ಶ್ರೀ ಸತ್ಯನಾರಾಯಣ, ಸಿದ್ದಾಪುರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಎಚ್. ಶ್ರೀಧರರವರು, ಹಲಶಿಯ ಗ್ರಾಮಸೇವಕರಾದ ಶ್ರೀ ಬಿ. ಎಸ್. ಗೋಶೆಕರವರ ಹಾಗು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಬಿ. ಡಿ. ವಣಕುದರಿ ಯವರು ನಾನಾ ರೀತಿಯಲ್ಲಿ ನನ್ನ ಪ್ರಾದೇಶಿಕ ಅನ್ವೇಷಣೆಗಳಲ್ಲಿ ಆಸಕ್ತಿ ತೋರಿಸಿ ಸಹಾಯ

ಮಾಡಿದ್ದಾರೆ. ನನ್ನ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರ ಇವರು ನನ್ನ ಲೇಖನದ ಹಸ್ತಪ್ರತಿಯನ್ನು ಚೆನ್ನಾಗಿ ಬರೆದು ಕೊಟ್ಟಿದ್ದಾರೆ. ಬಳ್ಳಿಗಾವೆಯಲ್ಲಿ ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಖಾತೆಯುವರು ರಕ್ಷಿಸಿದ ದೇವಾಲಯಗಳನ್ನು, ಮೂರ್ತಿಗಳನ್ನು ಅಭ್ಯಸಿಸಲು, ಅವುಗಳ ಛಾಯಾ ಚಿತ್ರಗಳನ್ನು ತೆಗೆಯಲು ಅನುಮತಿ ಕೊಟ್ಟಿದ್ದಾರೆ. ಮೇಲಿನ ಬಹುಭಾಗ ಪುರಾತತ್ತ್ವ ಶೋಧನೆಗಳನ್ನು "ವಿಶ್ವವಿದ್ಯಾಲಯ ಧನ ಆಯೋಗ ಸಮಿತಿ"ಯ ಧನ ಸಹಾಯದಿಂದ ನಡೆಸಿದ್ದೇನೆ.

ಕರ್ನಾಟಕ ವಿಶ್ವವಿದ್ಯಾಲಯದವರು ಡಿಸೆಂಬರ್ ೭೪ ರಲ್ಲಿ ಏರ್ಪಡಿಸಿದ ''ಕರ್ನಾಟಕ ಜೈನ ಧರ್ಮ'' ಎಂಬ ವಿಶೇಷ ಉಪನ್ಯಾಸ ಶಿಬಿರದಲ್ಲಿ ನಾನು ಭಾಗವಹಿಸಿದ ಸಮಯದಲ್ಲಿ ಹೈಗುಂದದಲ್ಲಿ ಬುದ್ಧನ ಶಿಲ್ಪಗಳನ್ನು ಶೋಧಿಸಿದೆ.

ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

■ ■

ಸಂಶೋಧನೆ

■

ಬಸವರಾಜ ಸಬರದ

ವೇದ, ವಚನ
ಶಾಸ್ತ್ರ, ಶಾಸನಗಳ
ಕರತಲಾಮಲಕ
ಹುಡುಕಿ ತೆಗೆದು
ಸೋಸಿ ನೋಡುವಿಕೆ.
ಬಿರುಕು–ಹರಕುಗಳ
ನಾಶವಾಗುವ ರಾಶಿ
ಕಂಡಾಗ ಒಳಗೊಳಗೇ
ಹಳ್ಳ ಕಡಿದ ಹಾಗೆ.
ಪೂಜ್ಯತೆ–
ಪರಂಪರೆಯ
ಪ್ರಭಾವದಿಂದ.
ನಮ್ರತೆ–
ನೀತಿಕಟ್ಟುಗಳ
ಹಗ್ಗದಿಂದ.
ಮತ್ತಿದಕೆ ಮಿಗಿಲು
ಕಣ್ಣೆರಡು ಕಂದೀಲು.
ಬದುವಿಗಾಗಿ ಬಡಿದಾಡಿ
ಮತ್ತೆ ಹತ್ತಿಕಟ್ಟಿ
ಜೇಕು–ಜಾಲಿ
ಇಡಿಗರಿಕಿಬೇಕು
ಅಧ್ಯಕ್ಷಸ್ಥಾನಕಲ್ಲಿ
ಆಗ
ಊರೆಲ್ಲಾ ಸೆರಗ್ಯಾಡಿದ
ಊರ ಗರತಿಯ ಮುಂದೆ

ಉತ್ತರಕುಮಾರನ
ಪೌರುಷತನದ ಮರುಕಳಿಕೆ.
ಮತ್ತೆ ಮಂತ್ರ–ತಂತ್ರಗಳ
ಜಪನಿಷ್ಠೆ.
ಅರಿಯದವ್ರತವ
ಹೊತ್ತ ಕತ್ತೆಗೆ
ಹೆಂಡದಾಭಾಸ ಬೇರೆ.
ಮೈನೆರ್ತ ಮಗಳ
ಮದುವೆ ಮಾಡುವಾಗ
ಕುಲಗೋತ್ರ ಕೂಡದಿದ್ದರಾಗದು.
ಸತ್ತ ಭಾಷೆಯಿಂದ
ಉರುಹಾಕಿ ತಾತ ಊದಿ–
ಹೋದ ಮಂತ್ರಗಳನು
ಉಗುಳುವ ಮರಿಪಂಡಿತರ
ಮಾತೇ–ವೇದವಾಕ್ಯ.
ಅಣ್ಣ ಹಾಕಿಕೊಟ್ಟ
ಮಧುವಯ್ಯ–ಹರಳಯ್ಯರ
ನೆನಪು ಸ್ವಲ್ಪ–ಸ್ವಲ್ಪ.
ಆದರೇನು, ಅವು ಕೇವಲ
ಬಹಿರಂಗ ಭಾಷಣ,
ಪುಸ್ತಕ–ಸಂಪಾದಕತ್ವದಲ್ಲಿ
ನನಗದರ ಅನ್ವಯಿಸುವಿಕೆ
ಇನ್ನೂ ಸಂಶೋಧನೆ-
ಯಾಗದ ಮಾತು.

4)

ವೈದಿಕಛಂದಸ್ಸು

ವಿಷ್ಣು ಸುತ

"ಛಂದಾಂಸಿ ಜಜ್ಞಿರೇ ತಸ್ಮಾದ್ಯಜು

ಸ್ತಸ್ಮಾದ ಜಾಯತ" —ಪುರುಷಸೂಕ್ತ

"ಛಂದಃ ಪಾದೌತು ವೇದಸ್ಯ" —ಶಿಕ್ಷಾ

ವೇದಗಳ ಛಂದಸ್ಸು ಮಾತ್ರೆಗಳನ್ನವಲಂಬಿಸದೆ ಅಕ್ಷರಗಳನ್ನವಲಂಬಿಸಿದೆ. ಋಕ್ಕುಗಳ ಪಾದಗಳು ಅಕ್ಷರಗಳಿಂದ ಕೂಡಿವೆ. ಮಾತ್ರೆಗಳು ಎಷ್ಟೇ ಇರಲಿ, ಅಕ್ಷರಗಣತಿ ಮುಖ್ಯ. ೮–೧೧–೧೨ ಅಕ್ಷರವೃತ್ತಗಳು ವೇದಮಂತ್ರಗಳ ಪಾದಗಳಲ್ಲಿ ಬರುತ್ತವೆ. ಐದಕ್ಷರಗಳ ಪಾದವೃತ್ತಗಳು ಕಡಿಮೆ. ಪ್ರತಿ ಮಂತ್ರ ಪಾದ, ಲಯಬದ್ಧ. ಗುರು–ಲಘು (ದೀರ್ಘ – ಹ್ರಸ್ವ ವರ್ಣಗಳು) ಒಂದರ ಮುಂದೆ ಒಂದು ಬರುತ್ತಿರುತ್ತವೆ. ಸಾಮಾನ್ಯವಾಗಿ ಎಲ್ಲ ವೃತ್ತಗಳಲ್ಲಿ ಎರಡಕ್ಷರ ಲಯ ಹೆಚ್ಚು. ಸಮಸ್ಥಾನದಲ್ಲಿ, ಅದರಲ್ಲಿಯೂ ದೀರ್ಘವರ್ಣದಲ್ಲಿ ಈ ಲಯವಿರುತ್ತದೆ. ೨–೪–೬ ಹೀಗೆ, ಲಯ–ಪಾದದ ಆದಿಯಲ್ಲಿರದೆ, ಕೊನೆಯಲ್ಲಿ ಹೆಚ್ಚು ಕಂಡುಬರುತ್ತದೆ. ೧೧–೧೨ ಅಕ್ಷರವುಳ್ಳ ಪಾದವೃತ್ತಗಳು ಲಯಬದ್ಧವಾಗಿ ಯತಿಯನ್ನೊಳಗೊಂಡಿರುತ್ತವೆ. ನಾಲ್ಕು ಇಲ್ಲವೆ ಐದನೆಯ ಅಕ್ಷರಕ್ಕೆ ಈ ಯತಿ ನಿಯತ. ಐದು ಮತ್ತು ಎಂಟು ಅಕ್ಷರಗಳ ಪಾದವೃತ್ತಗಳಿಗೆ ಯತಿ ಇಲ್ಲ.

ಋಕ್ಕುಗಳಲ್ಲಿ ೩ ರಿಂದ ೧೫ರ ವರೆಗಿನ ಒಂದೊಂದು ಗುಂಪು ಇರುತ್ತದೆ. ಈ ಋಕ್ಕಿನಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಶ್ಲೋಕ ನಾಲ್ಕಕ್ಷರ ಏರಿಕೆಯಂತೆ ೨೦ ರಿಂದ ೪೮ ಅಕ್ಷರಗಳ ವರೆಗೂ ಒಳಗೊಂಡಿರುತ್ತದೆ. ಋಕ್ಕುಗಳು ಒಂದೇ ವೃತ್ತದವೂ ಇರಬಹುದು, ಇಲ್ಲವೆ ಭಿನ್ನವೃತ್ತದವೂ ಇರಬಹುದು. ಎರಡು–ಮೂರು ಋಕ್ಕುಗಳು ಕೂಡಿ ಸಂಗೀತಕ್ಕೆ ಅನುಗುಣವಾಗಿರುತ್ತವೆ. ಸ್ಥೂಲವಾಗಿ ಋಕ್ಕುಗಳ ಛಂದೋನಿಯಮಗಳನ್ನು ಕೆಳಗಿನಂತೆ ವಿಂಗಡಿಸಬಹುದು.

೧. ಋಕ್ಕಿನಲ್ಲಿಯ ಪ್ರತಿಪಾದ ಸ್ವತಂತ್ರವಿರುವುದರಿಂದ, ಅದು ನಿಯಮಿತವಾಗಿ ಕೊನೆಯ ಶಬ್ದದ ಲಯಕ್ಕೆ ಹೊಂದಿಕೊಳ್ಳುತ್ತದೆ.

೨. ಮೊದಲಕ್ಷರ ಮತ್ತು ಕೊನೆಯಕ್ಷರ ಮಾತ್ರೆಗಳು ಬೇರೆಬೇರೆ ಇರುತ್ತವೆ. ವೃತ್ತಕ್ಕನುಗುಣವಾಗಿ ಅವು ಗುರು ಇಲ್ಲವೆ ಲಘು ಇರಬಹುದು.

೩. ಎರಡು ವ್ಯಂಜನಗಳನ್ನು ಇಲ್ಲವೆ ಸಂಯುಕ್ತಾಕ್ಷರವನ್ನು ಅನುಸರಿಸಿದ ಹ್ರಸ್ವ ಸ್ವರ (ಲಘು) ದೀರ್ಘ(ಗುರು)ವಾಗುತ್ತದೆ. ಈ ತರದ ಒಂದು ಇಲ್ಲವೆ ಎರಡೂ ವ್ಯಂಜನಗಳು ಮುಂದಿನ ಶಬ್ದಗಳಿಗೆ ಹೊಂದಿಕೊಂಡಿರುತ್ತವೆ. ತಾಲವ್ಯ “ಛ” ಮೂರ್ಧನ್ಯ ‘ಳ್ಹ’ (ಡ) ಸಂಯುಕ್ತಾಕ್ಷರಗಳಂತೆ ತಿಳಿಯಲ್ಪಡುತ್ತದೆ.

೪. ಒಂದು ಸ್ವರ ಮತ್ತೊಂದು ಸ್ವರದ ಮುಂದೆ ಬಂದರೆ, ಅದು ಹ್ರಸ್ವವಾಗುತ್ತದೆ. ಒಮ್ಮೊಮ್ಮೆ ದೀರ್ಘವಾಗುತ್ತದೆ. ‘ಏ’ ಮತ್ತು ‘ಓ’, ‘ಅ’ದ ಮುಂದೆ ಬಂದಾಗ ಹ್ರಸ್ವ(ಲಘು)ವಾಗುತ್ತವೆ.

೫. ಅರ್ಧಸ್ವರಗಳಾದ ‘ಯ’ ಮತ್ತು ‘ವ’ ಶಬ್ದದಲ್ಲಿ ಇಲ್ಲವೆ ಸಂಧಿಯಲ್ಲಿದ್ದಾಗ ‘ಇ’ ಮತ್ತು ‘ಉ’ ದಂತೆ ಉಚ್ಚರಿಸಲ್ಪಡುತ್ತವೆ.

೬. ಸಂವೃತದೀರ್ಘಸ್ವರ–ಹ್ರಸ್ವಸ್ವರದಂತೆ ಉಚ್ಚರಿಸಲ್ಪಡುತ್ತದೆ. ಆ–ಅ–ಅ, ಈ– ಇ–ಇ ಮುಂತಾಗಿರುತ್ತವೆ. ಉದಾ:– ಚಾಗ್ನಯೇ–ಚ–ಅಗ್ನಯೇ. ವೀಂದ್ರ– ವಿ–ಇಂದ್ರ, ಏಂದ್ರ– ಆ–ಇಂದ್ರ.

೭. ‘ಏ’ ‘ಓ’ ತರುವಾಯ ಬಿಟ್ಟ ಮೊದಲ ‘ಅ’ವನ್ನು ಸಾಮಾನ್ಯವಾಗಿ ಯಾವಾಗಲೂ ಅದೇ ಸ್ಥಾನದಲ್ಲಿಡಬೇಕು.

೮. ‘ಆಮ್’ ಎಂದು ಕೊನೆಗೊಳ್ಳುವ ಬಹುವಚನದ ಶಬ್ದಗಳ ದೀರ್ಘಾಕ್ಷರ ದಾಸ, ಶೂರ ಏ– (ಜ್ಯ–ಇಷ್ಠ–ಜ್ಯೇಷ್ಠ) ಐ– (ಅ–ಇಚ್ಛನ್–ಐಚ್ಛನ್) ಇವುಗಳನ್ನು ಎರಡು ಲಘುಗಳಂತೆಯೇ ಉಚ್ಚರಿಸಬೇಕು.

ವೃತ್ತಗಳು

೧. ಶುದ್ಧವೃತ್ತಗಳು :

ವೇದ ಋಕ್ಕುಗಳು ಮುಖ್ಯವಾಗಿ ಶುದ್ಧವೃತ್ತಗಳನ್ನೊಳಗೊಂಡಿವೆ. ಕೆಲವೊಂದು ಮಂತ್ರಗಳು ಒಂದೇ ತರದ ವೃತ್ತಗಳನ್ನೊಳಗೊಂಡಿರಬಹುದು, ಇಲ್ಲವೆ ಬೇರೆಬೇರೆ ವೃತ್ತಗಳನ್ನೂ ಒಳಗೊಂಡಿರಬಹುದು. ಹೆಚ್ಚಾಗಿ ಗಾಯತ್ರಿ, ಅನುಷ್ಟುಭ್, ತ್ರಿಷ್ಟುಭ್, ಜಗತೀ– ಇವು ಮತ್ತು ಇವುಗಳ ಒಳಭೇದಗಳು ಮೇಲಿಂದ ಮೇಲೆ ಕಾಣುತ್ತಿವೆ. ಸ್ಥೂಲವಾಗಿ ಇವುಗಳಲ್ಲಿ ಮೂರು ಭೇದಗಳನ್ನು ಕಲ್ಪಿಸಬಹುದು :

೧. ಅಷ್ಟಾಕ್ಷರ ಪಾದವೃತ್ತಗಳು.

೨. ಹನ್ನೊಂದಕ್ಷರ ಪಾದವೃತ್ತಗಳು.

೩. ಹನ್ನೆರಡಕ್ಷರ ಪಾದವೃತ್ತಗಳು.

೧. ಅಷ್ಟಾಕ್ಷರವೃತ್ತಗಳು : ಇವುಗಳಲ್ಲಿ ನಾಲ್ಕಕ್ಷರದ ಎರಡು ಉಪಪಾದಗಳ ರಚನೆ ಇದ್ದು, ಪ್ರಾರಂಭ ಲಯಬದ್ಧ. ಪ್ರಾರಂಭದ ಪ್ರಥಮ ಮತ್ತು ತೃತೀಯಾಕ್ಷರ ವಿಸಂಗತ, ದ್ವಿತೀಯ ಮತ್ತು ಚತುರ್ಥಾಕ್ಷರ ಗುರುವಿರುತ್ತದೆ. ದ್ವಿತೀಯಾಕ್ಷರ ಲಘು ಇದ್ದಾಗ, ತೃತೀಯಾಕ್ಷರ ಗುರು ಇರುತ್ತದೆ. ತಾಲದಲ್ಲಿ ಎರಡಕ್ಷರ ಲಯವಿರುತ್ತದೆ. ಇಂಥಲ್ಲಿ ಪ್ರಥಮ, ತೃತೀಯಾಕ್ಷರಗಳು ಲಘು, ದ್ವಿತೀಯಾಕ್ಷರ ಗುರು ಇರುತ್ತವೆ.

೧. ಗಾಯತ್ರಿ : 'ಗಾಯತ್ರೀ ಛಂದಸಾಮಹಮ್' (ಗೀತಾ ೧೦ – ೩೫). ವೇದಗಳ ಛಂದಸ್ಸಿನಲ್ಲಿ ಇದು ಪ್ರಥಮಸ್ಥಾನ ಪಡೆದಿದೆ. ಅಷ್ಟಾಕ್ಷರ ಮೂರುಪಾದಗಳು. ಪ್ರತಿಪಾದದಲ್ಲಿ ನಾಲ್ಕಕ್ಷರದ ಒಂದು ಉಪಪಾದ.

ಯಚ್ಚಿದ್ಧಿ ತೇ ವಿಶೋಯಥಾ	– – ⏑ – ⏑ – ⏑ –
ಪ್ರದೇವ ವ ರುಣವ್ರತಮ್	⏑ – ⏑ – ⏑ – ⏑ –
ಮಿನೀಮಸಿ ದ್ಯವಿದ್ಯವಿ	⏑ – ⏑ – ⏑ – ⏑ –
	೧–೨೫–೧
ಪರಾಮೆಯಂತಿ ಧೀತಯೋ	⏑ – ⏑ – ⏑ – ⏑ –
ಗಾವೋನಗವ್ಯೂತಿರನು	– – ⏑ – – ⏑ ⏑ –
ಇಚ್ಛಂತೀರುರುಚಕ್ಷಸಮ್	– – – ⏑ ⏑ – ⏑ –
	೧–೨೫–೧೬

ಎರಡಕ್ಷರ ಲಯ ಈ ಗಾಯತ್ರೀ ಛಂದಸ್ಸಿನಲ್ಲಿ ಕಾಣುತ್ತದೆ.

ಇಂದ್ರ ಸೋಮ ಸ್ಯಪೀ ತಯೇ	– ⏑ – – ⏑ – ⏑ –
ಸ್ತೋಮೈರಿಹ ಹವಾಮಹೇ	– – ⏑ ⏑ ⏑ – ⏑ –
ಉಕ್ಥೇ ಭಿಃ ಕು ವಿದಾ ಗಮತ್	– – – ⏑ ⏑ – ⏑ –
	೩–೪೨–೪

೨. ಅನುಷ್ಟುಭ್ : ಅಷ್ಟಾಕ್ಷರ ನಾಲ್ಕು ಪಾದಗಳು ಪ್ರತಿ ಪಾದದಲ್ಲಿ ನಾಲ್ಕಕ್ಷರ ಉಪಪಾದಗಳು ಎರಡು. ಮಹಾಕಾವ್ಯಗಳಲ್ಲಿ ಇದರ ಬಳಕೆ ಹೆಚ್ಚು. ಸಾಮಾನ್ಯವಾಗಿ ಐದನೆಯ ಅಕ್ಷರ ಲಘು, ಆರನೆಯದು ಗುರು, ಏಳನೆಯದು ಸಮದಲ್ಲಿ ಗುರು, ವಿಷಮದಲ್ಲಿ ಲಘು.

ತಸ್ಮಾದ್ವಿರಾಳಜಾಯತ – – ᴗ – ᴗ – ᴗ –
ವಿರಾಜೋ ಅಧಿಪುರೂಷಃ ᴗ – – ᴗ ᴗ ᴗ – –
ಸಜಾತೋ ಅತ್ಯರಿಚ್ಯತ ᴗ – – – ᴗ – ᴗ –
ಪಶ್ಚಾದ್ಭೂಮಿ ಮಥೋಪುರಃ – – – ᴗ ᴗ – ᴗ –
೧೦–೯೦–೫

ಯತ್ಪುರೂಷೇಣ ಹವಿಷಾ – ᴗ – – ᴗ ᴗ ᴗ –
ದೇವಾಯಜ್ಞಮತನ್ವತ – – – ᴗ ᴗ – ᴗ –
ವಸಂತೋ ಅಸ್ಯಾಸೀದಾಜ್ಯಂ ᴗ – – – – – – –
ಗ್ರೀಷ್ಮ ಇಧ್ಮ ಶರದ್ಧವಿಃ – ᴗ – ᴗ ᴗ – ᴗ –
೧೦–೯೦–೬

ಹನ್ನೊಂದಕ್ಷರ ವೃತ್ತಗಳು : ಹನ್ನೊಂದಕ್ಷರ ವೃತ್ತಗಳು ಅಷ್ಟಾಕ್ಷರ ವೃತ್ತಗಳಿಂದ ಬೇರೆ ಇರುತ್ತವೆ. ಇವುಗಳಲ್ಲಿ ಮೂರು ಉಪಾಂಗಗಳು : ೧. ಪ್ರಾರಂಭ ೨. ವಿರಾಮ (ಯತಿ) ೩. ಲಯ. ಎರಡಕ್ಷರ ಲಯ ಇವುಗಳಿಗಿದ್ದರೂ ಅಷ್ಟಾಕ್ಷರವೃತ್ತ ಲಯಕ್ಕಿಂತ ಬೇರೆ ಇರುತ್ತದೆ. ನಾಲ್ಕು ಇಲ್ಲವೆ ಐದನೆಯ ಅಕ್ಷರಕ್ಕೆ ಯತಿ ಇರುತ್ತದೆ. ಎಂಟಕ್ಷರ ವೃತ್ತಗಳಿಗೆ ಯತಿ ಇಲ್ಲ. ಯತಿಯ ಹಿಂದಿನ ಲಯ ಎರಡಕ್ಷರದ್ದು. ಯತಿ ಮತ್ತು ತಾಲದ ವಿರಾಮ ಲಯ ನಿಯತವಾಗಿ ᴗᴗ – ಇಲ್ಲವೆ ᴗᴗ ಇರುತ್ತದೆ.

ತ್ರಿಷ್ಟುಭ್ : ಇದು ಋಗ್ವೇದದಲ್ಲಿ ತೀರ ಸಾಮಾನ್ಯ. ಆದರೂ ಗಾಯತ್ರಿಯ ಮಹತ್ವ ಇದಕ್ಕಿಲ್ಲ. ಹನ್ನೊಂದಕ್ಷರಗಳ ನಾಲ್ಕುಪಾದಗಳು. ಪ್ರತಿ ಪಾದದಲ್ಲಿ ಎರಡು ಉಪಪಾದಗಳು. ಯತಿ ನಾಲ್ಕನೆಯ ಇಲ್ಲವೆ ಎರಡನೆಯ ಅಕ್ಷರಕ್ಕೆ ನಿಯತ.

ಅನಾರಂಭಣೇ, ತದವೀರಯೇಥಾ
ಮನಾಸ್ಥಾನೇ, ಅಗ್ರಭಣೇಸಮುದ್ರೇ
ಯದಶ್ವಿನಾ, ಊಹಥುರ್ಭುಜ್ಯುಮಸ್ತಂ
ಶತಾರಿತ್ರಾಂ, ನಾವಮಾತಸ್ಥಿವಾಂಸಂ ೧–೧೧೬–೫

ಮಾಹಂ ಮಘೋನೋ, ವರುಣಪ್ರಿಯಸ್ಯ
ಭೂರಿದಾನ್ನ, ಆವಿದಂ ಶೂನಮಾಪೇಃ
ಮಾ ರಾಯೋ ರಾಜನ್‌ತ್ಸು ಯಮಾದವಸ್ಥಾಂ
ಬೃಹದ್ವದೇಮ ವಿದಥೇ ಸುವೀರಾಃ ೨–೨೮–೧೧

ತ್ರಿಷ್ಟುಭ್‌ದ ಮುಂದಿನ ಬೆಳವಣಿಗೆ ಮಹಾಕಾವ್ಯಗಳಲ್ಲಿಯು ಇಂದ್ರವಜ್ರಾ, ಉಪೇಂದ್ರವಜ್ರಾ ಮುಂತಾದವುಗಳಲ್ಲಿ ಕಂಡುಬರುತ್ತದೆ.

ಹನ್ನೆರಡಕ್ಷರ ವೃತ್ತಗಳು : ಇದು ಕೇವಲ ತ್ರಿಷ್ಟುಭ್‌ದ ವಿಸ್ತರಣೆ ಮಾತ್ರ. ಒಂದಕ್ಷರ ಹೆಚ್ಚು. ಈ ಎರಡರಲ್ಲಿಯ ಅಂತರ ಇಷ್ಟೆ : ತ್ರಿಷ್ಟುಭ್‌ವು ⌣– ಲಯದ ನಡಿಗೆ, ಇದು –⌣ ಲಯದ ನಡಿಗೆ. ಎರಡರಲ್ಲಿಯೂ ಎರಡಕ್ಷರ ಲಯವಿರುತ್ತದೆ.

ಜಗತೀ : ಋಗ್ವೇದದ ಛಂದಸ್ಸಿನಲ್ಲಿ ಇದರ ಕ್ರಮ ಮೂರನೆಯದು. ಇದೂ ನಾಲ್ಕುಪಾದಗಳ ವೃತ್ತ. ಪ್ರತಿಪಾದದಲ್ಲಿ ಹನ್ನೆರಡು ಅಕ್ಷರಗಳು. ಪ್ರತಿಪಾದ ಎರಡು ಉಪಪಾದಗಳನ್ನೊಳಗೊಂಡಿರುತ್ತದೆ. ಪ್ರತಿಪಾದದ ಐದನೆಯ ಅಕ್ಷರಕ್ಕೆ ಯತಿ ಇರುತ್ತದೆ.

ಸಮ್ರಾಜಾವಸ್ಯ, ಭುವನಸ್ಯ ರಾಜಥೋ
ಮಿತ್ರಾವರುಣಾ ವಿಧತೇ ಸ್ವರ್ದೃಶಾ
ವೃಷ್ಟೀವಾರಾಥೋ ಅಮೃತತ್ವಮೀಮಹೇ
ದ್ಯಾವಾಪೃಥಿವೀ ವಿಚರಂತಿ ತನ್ಯವಃ
೫–೬೩–೧

ಸಮ್ರಾಜಾಉಗ್ರಾ, ವೃಷಭಾ ದಿವಸ್ಪತೀ
ಪೃಥಿವ್ಯಾಮಿಂತ್ರಾ ವರುಣಾ ವಿಚರ್ಷಣೀ
ಚಿತ್ರೋ ಭಿರಭ್ರೈರುಪತಿಷ್ಠತೋರವಂ
ದ್ಯಾಂ ವರ್ಷಯಂಥೋ ಅಸುರಸ್ಯ ಮಾಯಯಾ
೫–೬೩–೩

ಈ ಜಗತೀ ಛಂದಸ್ಸಿನ ಮುಂದಿನ ಬೆಳವಣಿಗೆ ಮಹಾಕಾವ್ಯಗಳಲ್ಲಿಯ ವಂಶಸ್ಥ, ಇಂದ್ರವಂಶಾ ಮುಂತಾದವುಗಳಲ್ಲಿ ಕಂಡುಬರುತ್ತದೆ.

೨. ಸಂಕೀರ್ಣ ವೃತ್ತಗಳು :

ಸಾಮಾನ್ಯವಾಗಿ ಗಾಯತ್ರೀ ಮತ್ತು ಜಗತೀ ವೃತ್ತಗಳ ಮಿಶ್ರಣ ಋಗ್ವೇದದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಬೃಹತೀ : ಇದರಲ್ಲಿ ನಾಲ್ಕುಪಾದಗಳು– ಗಾಯತ್ರಿಯ ಮೂರು ಪಾದಗಳು– ಜಗತೀ ಒಂದು ಪಾದ– ೮, ೮, ೧೨, ೮ ಒಟ್ಟು ಮೂವತ್ತಾರು ಅಕ್ಷರಗಳು.

ಸಖಾಯಸ್ತ್ವಾ ವವೃಮಹೇ
ದೇವಂ ಮರ್ತಾಸ ಊತಯೇ
ಅಪಾಂ ನಪಾತಂ ಸುಭಗಂ ಸುದೀದಿತಿಂ
ಸುಪ್ರತೂರ್ತಿ ಮನೇಹಸಮ್

೩–೯–೧

ಇದರಲ್ಲಿ ಮೂರನೆಯ ಚರಣ ಯಾವಾಗಲೂ ಜಗತೀ ಇರುತ್ತದೆ.

ಸತೋ ಬೃಹತೀ : ನಾಲ್ಕುಪಾದಗಳ ವೃತ್ತ. ಎರಡು ಗಾಯತ್ರೀ, ಎರಡು ಜಗತೀಗಳ ಮಿಶ್ರಣ. ೧೨ – ೮ – ೧೨ – ೮ ಒಟ್ಟು ನಲವತ್ತು ಅಕ್ಷರಗಳು.

ಸಂನೋ ರಾಯಾ ಬೃಹತಾ ವಿಶ್ವಪೇಶಸಾ
ಮಿಮಿಕ್ಷ್ವಾ ಸಮಿಳಾಭಿರಾ
ಸಂದ್ಯುಮ್ನೇನ ವಿಶ್ವತುರೋಷೋ ಮಹಿ
ಸಂವಾಜೈರ್ವಾಜಿನೀ ವತಿ ೧–೪೮–೧೬

ಪ್ರಗಾಥಗಳು : ಎರಡು ಮೂರು ವೃತ್ತಗಳ ನುಡಿಗಳು ಕೂಡಿ ಪ್ರಗಾಥಗಳಲ್ಲಿ ಮಾರ್ಪಡುತ್ತವೆ.

ಬಾರ್ಹತ ಪ್ರಗಾಥ : ಇದು ಬೃಹತೀ ಮತ್ತು ಸತೋಬೃಹತೀ ಇವುಗಳ ಸಮ್ಮಿಶ್ರಣ : ೮–೮–೧೨–೮+೧೨–೮–೧೨–೮. ಒಟ್ಟು ೭೬ ಅಕ್ಷರಗಳು. ಇದರಲ್ಲಿ ಜೋಡಿಯಾಗಿಯೇ ಶ್ಲೋಕಗಳು ಬರುತ್ತವೆ.

ಬೃಹತೀ
ಉವಾಸೋಷಾ ಉಚ್ಛಾಚನು
ದೇವೀಜೀರಾ ರಥಾನಾಮ್
ಏ ಅಸ್ಯಾ ಆಚರಣೇಷು ದಧ್ರಿರೇ
ಸಮುದ್ರೇನ ಶ್ರವಸ್ಯವಃ ೧–೪೮–೩

ಸತೋ ಬೃಹತೀ
ಉಘೋಯೇತೇ ಪ್ರಯಾಮೇಷು ಯುಂಜತೇ
ಮನೋದಾನಾಯ ಸೂರಯಃ
ಅತ್ರಾಹ ತತ್ಕಣ್ವ ಏಷಾಂ ಕಣ್ವತಮೋ
ನಾಮಗೃಣಾತಿ ನೃಣಾಮ್ ೧–೪೮–೪

ಇವೆರಡನ್ನೂ ಜೋಡಿಸಿ ಅಂದರೆ ಬಾರ್ಹತ ಪ್ರಗಾಥವಾಗುತ್ತದೆ.

ಪ್ರತಿಷ್ಠಾ : ಮೂರುಪಾದಗಳು ಕ್ರಮವಾಗಿ ೮-೭-೭ ಅಕ್ಷರಗಳು. ಇದು ಗಾಯತ್ರಿಯ ಅಪರಾವತಾರ.

ಆಪಃಪ್ರಣೀತ ಭೇಷಜಂ
ವರೂಥಂ ತನ್ವೇಷ್ಣ ಮಮ
ಜ್ಯೋಕ್ಚ ಸೂರ್ಯಂ ದೃಶೇ

೧-೨೩-೨೧

ವರ್ಧಮಾನಾ : ಇದೂ ಗಾಯತ್ರಿಯ ಮತ್ತೊಂದು ರೂಪ. ಮೂರು ಪಾದಗಳು ೬-೭-೮, ಈ ಕ್ರಮ.

ಈಶಾನಾಂ ವಾರ್ಯಾಣಾಂ
ಕ್ಷಯಂತೀಶ್ಚರ್ಷಣೀನಾಂ
ಆಪೋಯಾಚಾಮಿ ಭೇಷಜಂ

ಉಷ್ಣಿಕ್ : ೧ - ೨ ಪಾದಗಳು- ಎಂಟು ಅಕ್ಷರ (ಗಾಯತ್ರೀ). ಮೂರನೆಯ ಪಾದ ಹನ್ನೆರಡು ಅಕ್ಷರಗಳು (ಜಗತೀ). ಒಟ್ಟು ಪಾದಗಳು ಮೂರು.

ಯ ಏಕ ಇದ್ವಿದಯಂತೇ
ವಸುಮರ್ತಾಯದಾಶುಷೇ
ಈಶಾನೋ ಅಪ್ರತಿಷ್ಕುತ ಇಂದ್ರೋ ಅಂಗ

೧-೮೪-೭

ಪಂಕ್ತಿಃ ನಾಲ್ಕುಪಾದಗಳು. ಇದರಲ್ಲಿ ಗಾಯತ್ರೀ ಮತ್ತು ಜಗತೀ ಛಂದಸ್ಸುಗಳ ಮಿಶ್ರಣವಿದೆ. ಮೊದಲನೆಯ ಪಾದ ಗಾಯತ್ರೀ, ಎರಡನೆಯದು ಜಗತೀ, ಮೂರನೆಯದು ಗಾಯತ್ರೀ, ನಾಲ್ಕನೆಯದು ಜಗತೀ ೮-೧೨-೮-೧೨, ಈ ಪ್ರಕಾರವಿದೆ.

ತ್ವಂ ವರುಣ ಉತಮಿತ್ರೋ
ಅಗ್ನೇತ್ವಾವರ್ಧಂತಿ ಮತಿರ್ಭಿರ್ವಸಿಷ್ಠಾಃ
ತೇವಸು ಸುಷಣನಾನಿ
ಸಂತುಯೂಯಂ ಪಾತ ಸ್ವಸ್ತಿಭಃ ಸದಾನಃ

೭-೧೨-೩

ಇದೇ ಪಂಕ್ತಿಯನ್ನು ಮತ್ತೊಂದು ತೆರನಾಗಿ ಕೆಳಗಿನಂತೆ ಇಡಬಹುದು. ನಾಲ್ಕುಪಾದಗಳು. ಪ್ರತಿಪಾದ ಹತ್ತು ಅಕ್ಷರಗಳು.

ತ್ವಮಗ್ನೇ ವನುಷ್ಯತೋ ನಿಪಾಹಿ
ತ್ವಮುನಃ ಸಹಸಾವನ್ನವದ್ಯಾತ್
ಸಂ ತ್ವಾ ಧ್ವಸ್ಮನ್ವದಭ್ಯೇತು ಪಾಥಃ
ಸಂ ರಯಿಃ ಸ್ಪೃಹಯಾಯ್ಯಃ ಸಹಸ್ರೀ

ಇದನ್ನೇ ಮೊದಲು ಹೇಳಿದ ಕ್ರಮದಲ್ಲಿ ೮–೧೨–೮–೧೨, ಈ ರೀತಿಯಾಗಿಯೂ ಇಡಬಹುದು.

ತ್ವಮಗ್ನೇ ವನುಷ್ಯತೋ ನಿ
ಪಾಹಿತ್ವಮುನಃ ಸಹಸಾವನ್ನವದ್ಯಾತ್.
ಸಂತ್ವಾ ಧ್ವಸ್ಮನ್ವದಭ್ಯೇತು
ಪಾಥಃ ಸಂರಯಿಃ ಸ್ಪೃಹಯಾಯ್ಯಃ ಸಹಸ್ರೀ

೭–೪–೯

ಈ ವೃತ್ತದ ಜಗತೀ ಪಾದಕ್ಕೆ ಸಾಮಾನ್ಯವಾಗಿ ಐದನೆಯ ಅಕ್ಷರಕ್ಕೆ ಯತಿ ಬರುತ್ತದೆ.

ಅಷ್ಟಿ : ನಾಲ್ಕು ಪಾದಗಳು. ಪ್ರತಿ ಪಾದದಲ್ಲಿ ೧೬ ಅಕ್ಷರಗಳು. ಪ್ರತಿ ಪಾದದ ೪ ಇಲ್ಲವೆ ೫ನೆಯ ಅಕ್ಷರಕ್ಕೆ ಯತಿ ಬರುತ್ತದೆ.

ಅತಿವಾಯೋ ಸಸತೋಯಾಹಿ ಶಶ್ವತೋಯತ್ರ ಗ್ರಾವಾ
ವದತಿತತ್ರ ಗಚ್ಛತಂ ಗೃಹಮಿಂದ್ರಶ್ಚಗಚ್ಛತಮ್.
ವಿಸೂನೃತಾ ದದೃಶೇರೀಯತೇ ಘೃತಮಾ ಪೂರ್ಣಯಾ
ನಿಯುತಾ ಯಾಥೋ ಅಧ್ವರಮಿಂದ್ರಶ್ಚಯಾತೋ ಅಧ್ವರಮ್

೧–೧೩೫–೭

ಶಕ್ವರೀ : ನಾಲ್ಕು ಪಾದಗಳು. ಮೊದಲಿನ ಎರಡು ಪಾದಗಳು ಜಗತೀ, ಕೊನೆಯ ಎರಡು ಪಾದಗಳು ಅಷ್ಟೀ– ೧೨–೧೨–೧೬–೧೬, ಹೀಗೆ ಅಕ್ಷರಗಳು ಕ್ರಮವಾಗಿ ಬರುತ್ತವೆ.

ಜನಿತಾಶ್ವಾನಾಂ ಜನಿತಾಗವಾಮಸಿ
ಪಿಬಾಸೋಮಂ ಮದಾಯಕಂ ಶತಕ್ರತೋ.
ಯಂತೇಭಾಗಮಧಾರಯನ್ವಿಶ್ವಾಃ ಸೇಹಾನಃ ಪೃತನಾ
ಉರುಜ್ರಯಃ ಸಮಪ್ಸುಜಿನ್ಮರುತ್ವಾಂ ಇಂದ್ರಸತ್ಪತೇ

೮–೩೭–೫

ಯತಿ : ಮೊದಲಿನ ಎರಡು ಚರಣಗಳಲ್ಲಿ ಐದನೆಯ ಅಕ್ಷರಕ್ಕೆ ಕೊನೆಯ ಎರಡು ಪಾದಗಳಲ್ಲಿ ನಾಲ್ಕನೆಯ ಅಕ್ಷರಕ್ಕೆ ಬರುತ್ತದೆ.

ಮುಖ್ಯಛಂದಸ್ಸಿನ ಒಳಭೇದಗಳು :

ವೇದಗಳ ಸೂಕ್ತಗಳಲ್ಲಿ ಒಂದೇ ತರದ ಛಂದಸ್ಸು ಕಂಡುಬರುವುದಿಲ್ಲ. ಒಂದೊಂದು ನುಡಿ ಒಂದೊಂದು ಛಂದಸ್ಸಿನಲ್ಲಿರುವುದು ಕಂಡುಬರುತ್ತದೆ. ಮುಖ್ಯ ಛಂದಸ್ಸಿನಲ್ಲಿಯೇ ಅನೇಕ ಒಳಪದರು ಕಾಣುತ್ತಿವೆ. ಇವುಗಳಲ್ಲಿ ವಿಶೇಷ ಬದಲಾವಣೆ ಇಲ್ಲ. ಅಕ್ಷರಗಳ ವ್ಯತ್ಯಾಸದಿಂದ ಸ್ವಲ್ಪ ಮಾರ್ಪಾಡು ಇರುತ್ತದೆ. ಉಳಿದೆಲ್ಲವೂ ಮುಖ್ಯಛಂದಸ್ಸನ್ನೇ ಅನುಸರಿಸುತ್ತವೆ. ಪ್ರತಿಯೊಂದು ಛಂದಸ್ಸಿನಲ್ಲಿ ಎದ್ದುಕಾಣುವ ಒಳ ಭೇದಗಳು : (೧) ತೃಚ– ಇದು ಗಾಯತ್ರಿಯಲ್ಲಿ ಮಾತ್ರ. (೨) ನಿಚೃದ್, (೩) ವಿರಾಟ್ (೪) ಪಾದನಿಚೃದ್ (೫) ಪಿಪೀಲಿಕಾಮಧ್ಯಾ (೬) ವರ್ಧಮಾನಾ (೭) ಆರ್ಷೀ (೮) ಸ್ವರಾಟ್ (೯) ಆರ್ಷೀ ಸ್ವರಾಟ್ (೧೦) ಪ್ರದ (೧೧) ಭುರಿಕ್ (೧೨) ಭುರಿಗಾರ್ಷೀ (೧೩) ಪಥ್ಯಾ (೧೪) ಉಪರಿಷ್ಟಾದ್ ವಿರಾಟ್ (೧೫) ವಿರಾಟ್ ಸತಃ (೧೬) ನಿಚೃದ್ ಉಪರಿಷ್ಟಾದ್ (೧೭) ಆರ್ಚೀ (೧೮) ಮಹಾ (೧೯) ಕುಕು-ಮ್ಮತೀ (೨೦) ಶಂಕುಮತೀ (೨೧) ಕಕುಪ್ (೨೨) ಬ್ರಾಹ್ಮೀ (೨೩) ಯವಮಧ್ಯಾ ಹೀಗೆ ಇನ್ನೂ ಎಷ್ಟೋ ಒಳಭೇದಗಳು ಕಂಡುಬರುತ್ತವೆ.

ತೃಚ : ಇದು ಗಾಯತ್ರಿಯಲ್ಲಿಯೇ ಕಾಣಬರುತ್ತದೆ. ಇದರಲ್ಲಿ ಒಟ್ಟು ಎರಡು ಪಾದಗಳು– ಗಾಯತ್ರಿಯ ೧–೨ ಪಾದಗಳು ಕೂಡಿ ಮೊದಲನೆಯ ಪಾದ. ಒಟ್ಟು ೧೬ ಅಕ್ಷರಗಳು. ಗಾಯತ್ರಿಯ ಮೂರನೆಯ ಪಾದ ಇದರ ಎರಡನೆಯ ಪಾದವಾಗುತ್ತದೆ. ಈ ಎರಡು ಪಾದಗಳ ಜೋಡಣೆ ಪ್ರಗಾಥಕ್ಕೆ ಅನುಕೂಲವಿದೆ.

> ಪರೋಮೇಯಂತಿ ಧೀತಯೋ ಗಾವೋನ ಗವ್ಯೂತಿರನು
> ಇಚ್ಛಂತೀ ರುರು ಚಕ್ಷಸಮ್

ಇದರಂತೆ ಉಳಿದ ಒಳಭೇದಗಳ ವಿಂಗಡಣೆ ಮಾಡಬಹುದು.

■ ■

ಪಂಪ : ಒಂದು ಅಧ್ಯಯನ (ಒಂದು ವಿವೇಚನೆ)

ಗೌರೀಶ ಕಾಯ್ಕಿಣಿ

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ಶ್ರೀ ಜಿ. ಎಸ್. ಸಿದ್ಧಲಿಂಗಯ್ಯನವರು "ಪರಂಪರೆಯ ನಿರ್ಮಾಪಕ"ನಾಗಿ ಪಂಪನನ್ನು ನಿರೂಪಿಸಿದ್ದಾರೆ. ಇದೇ ವಿಷಯವನ್ನು ಕುರಿತು ಡಾ. ಕೆ. ಜಿ. ಶಾಸ್ತ್ರಿಗಳು ಕರ್ನಾಟಕ ವಿಶ್ವವಿದ್ಯಾಲಯದ "ಆರು ಉಪನ್ಯಾಸ"ಗಳಲ್ಲಿ ಪ್ರಕಟಿಸಿದ ಪ್ರಬಂಧವನ್ನು ಇಲ್ಲಿ ತೂಗಿ ನೋಡಬಹುದು. ಪಂಪನನ್ನು ಆ ಕಾಲದ ಹಾಗೂ ಅನಂತರದ ಕವಿಗಳು ಹೇಗೆ ಕಂಡಿದ್ದಾರೆಂಬುದನ್ನು ಡಾ. ಶಾಸ್ತ್ರಿಗಳು ಪ್ರೊ. ಸಿದ್ಧಲಿಂಗಯ್ಯನವರಿಗಿಂತ ಮಾರ್ಮಿಕ ವಾಗಿ ಸಾಕಲ್ಯವಾಗಿ ವಿಮರ್ಶಿಸಿದ್ದಾರೆ.

ಪಂಪನು '' ಇಕ್ಕಿಮೆಟ್ಟಿದ ಮುನ್ನಿನ ಕಬ್ಬಗಳು '' ಯಾವವು ? ಗೊತ್ತಿಲ್ಲ. (ಅದೇ ರೀತಿ '' ಫಣಿರಾಯ ತಿಣಿಕಿದ '' ರಾಮಾಯಣದ ಕಥೆಗಳ ಭಾರವೂ ಯಾವ ದೆಂಬುದು ಕುಮಾರವ್ಯಾಸ ಹೇಳಿಲ್ಲ !) ಕವಿಯ ಈ ಮಾತು ಒಂದು ವಾಗಾಡಂಬರವೇ ಅಥವಾ ಅಕ್ಷರಶಃ ಗ್ರಹಿಸಬೇಕೇ ?

ರಾಜಕೀಯ ಶ್ಲೇಷೆ– ಪಂಪನಿಂದ ಪೊನ್ನ–ರನ್ನರು ಅನುಸರಿಸಿದರೆಂದರೆ, ಪಂಪ ನಿಗೂ ಮುಂಚೆ ಗುಣವರ್ಮನ ''ಶೂದ್ರಕ'' ಕಾವ್ಯದಲ್ಲಿ ಗಂಗರ ಎರೆಯಪ್ಪನನ್ನು "ಶೂದ್ರಕ"ನೊಂದಿಗೆ ಅಭೇದ ಕಲ್ಪನೆ ವ್ಯಾಪಿಸಿದ್ದುಂಟು ಎಂದಿದ್ದಾರೆ ಪ್ರಬಂಧ ಕಾರರು. ಆದರೆ ಈ ರಾಜಕೀಯ ಶ್ಲೇಷೆ ಮತ್ತು ಲೌಕಿಕ– ಆಗಮ ಉಭಯ ವಸ್ತು ಗಳಿಗೆರಡು ಕಾವ್ಯ– ಇವಿಷ್ಟೇ ಪಂಪ ಪರಂಪರೆಯ ಲಕ್ಷಣವಲ್ಲವೆಂದೂ ಹೇಳಿದ್ದಾರೆ. ಈ ಲಕ್ಷಣಗಳೂ ಸಾರೋದ್ಧಾರವಾಗಿ ಮುಂದುವರಿಯದಿದ್ದುದಕ್ಕೆ ಕಾರಣಗಳನ್ನು ಲೇಖ ಕರು ತಳಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ.

ಸಂಸ್ಕೃತ ಭೂಯಿಷ್ಠತೆ, ಸಮಸ್ತಪದಬಾಹುಲ್ಯ, ಚಂಪೂಶೈಲಿ ಕನ್ನಡವನ್ನು ತುಂಬಿಕೊಂಡು ಬೆಳೆಸುವ ರೀತಿ. ಇವು ಪರಂಪರಾ ನಿರ್ಮಾಪಣ (ಕನ್ನಡ–ಸಂಸ್ಕೃತ ಬಾಂಧವ್ಯದ ಪಂಪಪ್ರಣೀತ ಪರಂಪರೆ) ಇವುಗಳಿಗೆ ಮುಂದೆ ತಡೆಹಾಕಿದವರು ನಯ ಸೇನ, ವಚನಕಾರರು ಮತ್ತು ಆಂಡಯ್ಯ. ಆದರೆ ಪಂಪನಿಗೆ ಭಾಷೆಯ ಮಡಿವಂತಿಕೆಗಿಂತ

ತನ್ನ ವಿವಕ್ಷಿತವಾದ ಅರ್ಥದ ಖಚಿತ ಉಚಿತ ಅಭಿವ್ಯಕ್ತಿಯೇ ಮುಖ್ಯವೆಂಬುದನ್ನು ಪ್ರಬಂಧಕಾರರು ತೋರಿಸಿದ್ದಾರೆ. ಅವನ ಸಂಸ್ಕೃತ ಸಮನ್ವಯದಿಂದ ಕನ್ನಡದ ಸಾಮರ್ಥ್ಯ ಸಮೃದ್ಧಿ ಹೆಚ್ಚಿತೆಂಬುದನ್ನು ಅವರು ತೋರಿಸಿದ್ದಾರೆ. ಸಮಸ್ತಪದ ನಿಬಿಡತೆಯ ಬರಹದಿಂದ ಕನ್ನಡಕ್ಕೆ ಹೊಸ ಬೀಸು ಬಿಗುಹು ತುಂಬಿದವು. "ಆದಿಪುರಾಣ" ದಲ್ಲಿ ಪಂಪನ ಭಾಷೆ ಇನ್ನೂ ರೂಪಗೊಳ್ಳುತ್ತದೆ. "ವಿಕ್ರಮಾರ್ಜುನ ವಿಜಯ"ದಲ್ಲಿ ಅದು ಸಿದ್ಧವಾಗಿದೆ– ಅಂದಿದ್ದಾರೆ ಪ್ರಬಂಧಕಾರರು.

ಇಲ್ಲಿ ಅವರು ಅಭಾವಿತವಾಗಿ ಪಂಪನ ಭಾಷೆಯ ಶಕ್ತಿ–ಯುಕ್ತಿಗಳ ಮೀಮಾಂಸೆ ಯಲ್ಲಿ ತೊಡಗಿ (ಕುಮಾರವ್ಯಾಸಾದಿಗಳೊಂದಿಗೆ ಹೋಲಿಸಿ) ಅಡ್ಡದಾರಿ ಹಿಡಿದಿದ್ದಾರೆ. ಇಲ್ಲಿಯೂ ಪ್ರಬಂಧಕಾರರು "ಮಾರ್ಗ" "ದೇಸಿ"ಗಳಿಗೆ ಹೊಸ ವ್ಯಾಖ್ಯೆ ಕೊಟ್ಟು ಆ ಕುರಿತು ಸ್ವಾರಸ್ಯದ್ದಾದರೂ ಪ್ರಬಂಧದ ವಿಷಯಕ್ಕೆ ತುಸು ಅವಾಂತರವೇ ಅನಿಸುವ ವಿವೇಚನೆಯಲ್ಲಿ ಸಿಲುಕಿಕೊಂಡಂತಿದೆ.

ಪರಂಪರೆಯ ನಿರ್ಮಾಪಕನೆಂದು, ಭಾಷಾಶೈಲಿ, ಚಂಪೂಶೈಲಿ, ಮತೀಯ ಮಿತಿಗಳಿಂದ ಮುಕ್ತವಾದ ಮಾನವೀಯ ಜೀವನಶ್ರದ್ಧೆ–ದೃಷ್ಟಿ, ಮತ್ತು ಕಾವ್ಯದೃಷ್ಟಿ ಈ ನಾಲ್ಕು ಲಕ್ಷಣಗಳನ್ನೇ ಲೇಖಕರು ವ್ಯಾಖ್ಯಾನಿಸಿದ್ದಾರೆ.

ಆದರೆ, ಈ ನಾಲ್ಕನ್ನು ಮುಂದಿನ ಕವಿಗಳು ಯಾವ ಮಟ್ಟಿಗೆ ಯಾವ ಮಟ್ಟದಲ್ಲಿ ಅನುಸರಿಸಿರುವರೆಂಬುದನ್ನು ಎತ್ತಿ ತೋರಿಸುವ ಹವ್ಯಾಸಕ್ಕೆ ಪ್ರಬಂಧಕಾರರು ಬೀಳ ಲಿಲ್ಲ. ಅದು ಇಲ್ಲಿಯ ದೊಡ್ಡ ಲೋಪ. ವಿಶೇಷತಃ ಪಂಪನ ಕಾವ್ಯದೃಷ್ಟಿ ಜೀವನ ಶ್ರದ್ಧೆಗಳನ್ನು, ಪುರಾಣ ವಸ್ತು ನಿರ್ವಹಣದ ಗ್ರಥನ–ಕಥನ ತಂತ್ರಗಳನ್ನು ಅನಂತರದ (ಚಂಪೂ) ಕವಿಗಳು ಹೇಗೆ ಎಷ್ಟು ಅಳವಡಿಸಿಕೊಂಡರೆಂಬುದನ್ನು ಖಚಿತವಾಗಿ ಗುರುತಿ ಸಿದ ಹೊರತು ಅವನ ಪರಂಪರಾ ನಿರ್ಮಾಪಕತ್ವ ಸರಿಯಾಗಿ ಸ್ಥಾಪಿತವಾಗುವದಿಲ್ಲ. ಆದರೆ ಪ್ರಬಂಧಕಾರರಿಗೆ ಪ್ರಬಂಧವನ್ನು ಮುಗಿಸುವ ಅವಸರ !

ಪಂಪನನ್ನು ಅನಂತರದ ಕವಿಗಳು ಹೇಗೆ ಕಂಡಿದ್ದಾರೆ, ಅವನ ಪರಂಪರೆ ಒಪ್ಪಿ ಕೊಂಡು ಅದರ ಹೆಜ್ಜೆಪಾಡು ತಮ್ಮ ಕೃತಿಗಳಲ್ಲಿ ಹೇಗೆ ತೋರ್ಪಡಿಸಿದ್ದಾರೆ– ಇದರ ವಿವೇಚನೆ ಇಲ್ಲಿ ಅತ್ಯಗತ್ಯ. ಈ ಅಗತ್ಯವನ್ನು ಡಾ. ಶಾಸ್ತ್ರಿಗಳು ಯಶಸ್ವಿಯಾಗಿ ಪ್ರಶಂಸನೀಯವಾಗಿ ಪೂರೈಸಿದ್ದಾರೆ.

ಪರಂಪರೆಯ ನಿರ್ಮಾಪಕನಾಗಿ ಪಂಪನನ್ನು ಅಭ್ಯಸಿಸುವಾಗ ನನಗೆ **ಟಿ. ಎಸ್. ಈಲಿಯಟ್** ಮಿಲ್ಟನ್‌ನ ಕುರಿತು ಪಡುವ ಅಭಿಪ್ರಾಯಗಳ ನೆನಪಾಗುತ್ತದೆ. ಇತರ ಕವಿಗಳು ಮಾಡುವದನ್ನು ಪಂಪ ಅವರಾರಿಗಿಂತಲೂ ನಿಸ್ಸಂಶಯವಾಗಿಯೂ ಉತ್ತಮ ವಾಗಿ ನೆರವೇರಿಸಿದ್ದಾನೆ. ಆದರೆ ಒಟ್ಟಾರೆ ಅವನ ಪ್ರಭಾವ ಮುಂದಿನ ಕವಿಗಳ ಶೈಲಿಯ

ಮೇಲೆ ಸ್ವಾಸ್ಥ್ಯದ್ದಾಗಿಲ್ಲ, ಆದ್ದರಿಂದ ಸಾಧುವಾಗಿಲ್ಲ. ಪಂಪನಿಂದ ಪ್ರಯೋಗಿಸಲ್ಪಟ್ಟ ಭಾಷೆ ಒಂದು ರೀತಿ ಕೃತಕಸಿದ್ಧಿಯಾಗಿ ಮುಂದಿನವರಿಗೆ ನೀಡಲು ಮಾದರಿಯಾಯಿತು. ಅದರ ಗುಣಾಂಶಗಳು ಲೋಪಗೊಂಡು ದೋಷಗಳೇ ಗುಣಗಳಾಗಿ ಪಳಗಿದವು. "ನಾಡೋಜ"ನ ಓಜಸ್ವಿತೆಯು ಓಜೆ ಅಡಗಿ ಅದೊಂದು ಒಜ್ಜೆಯಾಗಿ ಮುಂದಿನ ಕಾವ್ಯಗಳು ಹೊತ್ತು ತಿಣಕಿದವು. ಇರಲಿ.

ಶ್ರೀ ಕೆ. ವಿ. ಸುಬ್ಬಣ್ಣರು ಪಂಪನ ಕಾವ್ಯದ ಅನುಸಂಧಾನಕ್ಕೆ ಹೊಸ ಮಾರ್ಗದರ್ಶನ ಮಾಡಿಸಿದ್ದಾರೆ. ಈ ಪ್ರಬಂಧ ನಿಜವಾಗಿಯೂ ಪುನರ್ಮೌಲ್ಯಮಾಪನದ ದಿಶೆಯಲ್ಲಿ ಒಂದು ದಿಟ್ಟ ಹೆಜ್ಜೆ. ಈ ಬರಹದ ಇನ್ನೊಂದು ರೋಚಕ ವೈಶಿಷ್ಟ್ಯ ಅದರ ಆಡುಮಾತಿನ ಲಘುವಾದ ಸರಣಿ. ದಿನಬಳಕೆಯ ಹಗುರಾದ ಹರಟೆಯ ಧಾಟಿಯಲ್ಲಿ ಶ್ರೀ ಸುಬ್ಬಣ್ಣರು ಗೌರವದ ಅರ್ಥಭಾರವನ್ನು ಧಾರಾಳವಾಗಿ ತುಂಬಿದ್ದಾರೆ.

ಪಂಪನ ಬಗೆಗೆ ಹೊಗಳಿಕೆ, ವಿಶೇಷಣಗಳ ಬಿರುದಾವಳಿಯೇ ಭಾರಿ ಹೆಚ್ಚು. ಆದರೆ ಅವುಗಳ ಸ್ಪಷ್ಟಾರ್ಥದತ್ತ ಯಾರೂ ವಿಶೇಷ ಗಮನ ಕೊಟ್ಟಿಲ್ಲವೆಂದು ಸುಬ್ಬಣ್ಣನವರ ದೂರು. ಕನ್ನಡ ನವೋದಯದಲ್ಲಿಯ ಹೊಸ ವಿಮರ್ಶೆಗಳಾದರೂ ಪಂಪನನ್ನು ತಿಳಿದುಕೊಳ್ಳಲಿಕ್ಕೆ ವಿಶೇಷ ಸಹಾಯ ಮಾಡಿಲ್ಲ. ಮೇಲಾಗಿ ಈ ವಿಮರ್ಶೆಗಳೇ ದಾರಿ ತಪ್ಪಿಸುವಂತೆ ಆಗಿ ಸುಳ್ಳು ಸಹೃದಯರನ್ನು ಗುಂಪುಗುಂಪಾಗಿ ತಯಾರಿಸಿದಂತಾಗಿದೆ— ಎಂದು ಅವರು ದಿಟ್ಟವಾಗಿಯೇ ಹೇಳಿದ್ದಾರೆ.

ಪಂಪನ ಸೂಕ್ತಿಗಳಿಂದ ಅವನು ದೊಡ್ಡವನೇ ? ಹಾಗಾದರೆ ಸರ್ವಜ್ಞ ಅವನಿಗಿಂತ ದೊಡ್ಡವನೇಕಲ್ಲ ? ಸೂಕ್ತಿಸುಧಾರ್ಣವ ಈ ಕವಿತಾ ಗುಣಾರ್ಣವನಿಗಿಂತ ಹಿರಿದೇಕಲ್ಲ ?— ಸುಬ್ಬಣ್ಣರ ಸವಾಲು !

ಸೊಗಸಾಗಿ ಸಂಗ್ರಹಿಸಿದ್ದಾನೆ, ಕನ್ನಡಿಸಿದ್ದಾನೆ— ಅನ್ನೋದು ಪಂಪನ ದೊಡ್ಡಿಸ್ತನಕ್ಕೆ ಸಾಲುವದೇ ? ಪ್ರಮಾಣ ತಪ್ಪಿದ ಸಂಗ್ರಹಕಾರ ಸಾವಿರಗಟ್ಟಲೆ ವರ್ಷ ಶ್ರೇಷ್ಠನಾಗಿ ಹೇಗೆ ಉಳಿದ ?

ಒಟ್ಟಿನಲ್ಲಿ ನವೋದಯ ವಿಮರ್ಶಕರು ಪಂಪನ ದೊಡ್ಡಸ್ತಿಕೆ ಯಾತರಿಂದ ಎಂತ ಗುರುತಿಸುವದರಲ್ಲಿ ಸೋತಿದ್ದಾರೆ— ಎಂದು ಪ್ರಬಂಧಕಾರರ ತೀರ್ಮಾನ. ಪಂಪನ ಗುಣಗಳನ್ನು ಹಾಗೂ ಅವನ ದೋಷಗಳನ್ನು ಹೇಳುವದರಲ್ಲಿಯೂ ಅವರು ಸೋತಿದ್ದಾರೆಂದು ಸಾಧಾರ ಸಿದ್ಧಮಾಡಿದ್ದಾರೆ. ಅರ್ಜುನ–ಅರಿಕೇಸರಿಗಳ ಅಭೇದ ಕಲ್ಪನೆಯಲ್ಲಿಯ ಆಭಾಸ–ಅಸಾಂಗತ್ಯಗಳನ್ನು ತೋರಿಸಿ ತೇಲಿಸಿನೋಡಿ ಪಂಪ ಮಹಾಕವಿ ಅಲ್ಲ ಕವಿ ಅನ್ನೋದಕ್ಕೆ ಕೂಡ ಕಷ್ಟವಾಗುತ್ತದೆ— ಅಂದಿದ್ದಾರೆ. A very bold statement indeed !

ಪಂಪನ ಕುರಿತು ಭ್ರಮನಿರಸನ ಮಾಡಬಲ್ಲ ಇಂಥ ಅನೇಕ ಸಂದೇಹಗಳು ಸುಬ್ಬಣ್ಣರನ್ನು ಕಾಡಿವೆ. ಹಳೆ ಹೊಸ ವಿಮರ್ಶಕರ ಪ್ರಭಾವಗಳನ್ನು ಕಳಚಿಕೊಂಡು ಮುಕ್ತಮನಸ್ಸಿನಿಂದ ಪಂಪನ ಕೃತಿಗಳನ್ನು ಓದಿದಾಗ ಅನಿಸಿದ್ದನ್ನು ಅವರು ಇಲ್ಲಿ ಸ್ಥೂಲವಾಗಿ ಅಂದರೆ ಸಾಕಷ್ಟು ಸೂಕ್ಷ್ಮವಾಗಿಯೇ ನಿರೂಪಿಸಿದ್ದಾರೆ.

"ಆದಿಪುರಾಣ" ದಲ್ಲಿ ಪಂಪನು ಜಿನಸೇನನನ್ನು ಬಹ್ವಂಶಕ್ಕೆ ಅಲ್ಲಿಯ ನುಡಿಗಟ್ಟು ಶಬ್ದ–ವಾಕ್ಯ–ಪದಪುಂಜಗಳಲ್ಲಿಯೂ ಅನಾಮತ್ತಾಗಿ ಕಣ್ಣು ಕಟ್ಟಿಕೊಂಡು ಅನುಸರಿಸಿದ್ದಾನೆ. ಆದರೂ ಇಡಿಯಾಗಿ ನೋಡಿದಾಗ ಆ ಬಂಧ ಸೌಧವೇ ಬೇರೆ, ಈ ಬಂಧ ಸೌಧವೇ ಬೇರೆ. ಸಂಕ್ಷೇಪ ವಿಸ್ತಾರಾದಿ ತಂತ್ರಗಳಿಂದ ಪಂಪನ ವಸ್ತುಗಳು ಬೇರೆ ಬೇರೆಯಾಗಿಯೇ ನಿಂತಿವೆ. ಜಿನಸೇನನ ಕಥೆ–ಕಾವ್ಯದೊಳಗಿಂದ ಸಮಕಾಲೀನ ಸಾಮೂಹಿಕ ವಿಶ್ವಾಸ (ಜೈನ ಮತ) ದೊಳಗಿಂದ ಪಂಪ ತನ್ನ ಅನುಭವದ ಸತ್ಯವನ್ನು ತಾಳೆ ನೋಡುತ್ತಿದ್ದಾನೆ– ಎಂದು ಅನಿಸುತ್ತದೆ. ಈ ಅನಿಸಿಕೆಗೆ ತಕ್ಕ ನಿದರ್ಶನಗಳನ್ನು ಪ್ರಬಂಧಕಾರರು ಕೊಟ್ಟಿದ್ದಾರೆ.

ಇದು ಅವರ ಮೌಲಿಕ approach. ಪಂಪನಿಗೆ ಮಾವು ಜೀವನೋತ್ಸಾಹದ ಸಂಕೇತ. "ಬಸದಿಯ ಬಾಗಿಲ ತೆರೆದ ಮಾಣ್ಕೆಯೊಳಿದ್ದವು ಬಂದ ಮಾವುಗಳ್" ಪಂಪನ ಈ ಮಾತು, ಜೈನ ಧರ್ಮಸಂಸ್ಕೃತಿಯ ಪೂರ್ಣ ವಿಶ್ವಾಸವಿಟ್ಟುಕೊಂಡ ವೈರಾಗ್ಯ ಹಾಗೂ ಪ್ರಾಕೃತಿಕ ಜೀವನೋತ್ಸಾಹಗಳ ಮಧ್ಯ ಇರೋ ಸಂಘರ್ಷ; (ಯಾತರಲ್ಲಿ ?) ಇವಕ್ಕೆಲ್ಲ ಸಂಕೇತವಾಗುತ್ತದೆ– ಇದು ಸುಬ್ಬಣ್ಣರ ಹೇಳಿಕೆ. ಪಂಪ ಜಿನಸೇನನ ಜತೆ ಸೂಕ್ಷ್ಮವಾಗಿ ಸಂಘರ್ಷ ಮಾಡಿಕೋತ ಹೋಗ್ತಾನೆ. ಜಿನಸೇನನ ಕಥನ ಪಂಪನಲ್ಲಿ ಕ್ರಮೇಣ ನಾಟಕವಾಗುತ್ತದೆ– ಇತಿ ಸುಬ್ಬಣ್ಣ.

"ನೆಲಸುಗೆ ನಿನ್ನ ವಕ್ಷದೊಳ್" ಇತ್ಯಾದಿ ಪಂಕ್ತಿಗಳ ವಿಶ್ಲೇಷಣೆಯಲ್ಲಿ ಕೆ.ವಿ.ಸು. ಜಿ. ಎಚ್. ನಾಯಕರಿಗಿಂತ ಹೆಚ್ಚು ಆಳಕ್ಕೆ ಇಳಿದಿದ್ದಾರೆ. ಇಲ್ಲಿ ಬಾಹುಬಲಿ ಈ ಮಾತುಗಳ ಮೂಲಕ ರಾಜ್ಯಲಕ್ಷ್ಮಿಯ ಭೋಗಲಿಪ್ಸೆಯನ್ನು ಶಾಬ್ದಿಕವಾಗಿ ಮೆಲ್ಲಂತ್ತ ಪೂರೈಸಿಕೊಳ್ಳುತ್ತಾನೆಂದು ಸುಬ್ಬಣ್ಣರಿಗೆ ಅನುಮಾನ. ಬಾಹುಬಲಿಗೆ ಉಂಟಾದದ್ದು ವೈರಾಗ್ಯವೋ ನೆಗಳ್ತೆಯಾಸೆಯೋ ? (ಕ್ರಿಸ್ತ ಸೈತಾನನು ಒಡ್ಡಿದ ಯಾವ ಮೋಹಕ್ಕೂ ಮಣಿಯದೆ ಕೊನೆಗೆ ಹುತಾತ್ಮತೆಯ ಮೋಹಕ್ಕೆ ಬಲಿಯಾದನಂತೆ !) ಇಂಥ ಭಾಷಾ ಸೂಕ್ಷ್ಮಗಳಲ್ಲಿ ಪಂಪ ಕಾಣಿಸುವ ಸಂಘರ್ಷ–ಸಂಕೀರ್ಣ ಗಮನಿಸೋ ಅಂಥದು ಎಂಬ ಅವರ ವಿಮರ್ಶೆಯೂ ಅಷ್ಟೇ ಗಮನಾರ್ಹ.

ಜಿನಸೇನನ ಕಥೆಯ ಮೂಲಕ ಪಂಪ ತನ್ನ ಅಂತರಂಗದ ಪರಿಸರದ ಅನುಭವವನ್ನು ಶೋಧಿಸೋ ಗಣನೀಯ ಪ್ರಯತ್ನ ಮಾಡಿದ್ದಾನೆ. ಜಿನಸೇನನ "ನಿಶ್ಚಿತ ಸ್ಥಿರ"

ಇಲ್ಲಿ ಪಂಪನಿಗೆ ಶೋಧನೆಯ ಸ್ತರಗಳನ್ನು ಒದಗಿಸಿದೆ. ಅವನ ಈ ಶೋಧನೆಗೆ ಆ ಕ್ಷೇತ್ರ ಅಧಿಕೃತಗೊಳಿಸಲಿಕ್ಕೆ, ಸಮಗ್ರಗೊಳಿಸಲಿಕ್ಕೆ, ಏಕತ್ರಗೊಳಿಸಲಿಕ್ಕೆ ಸಾಲದೆ ಆತ "ವಿಕ್ರಮಾರ್ಜುನ ವಿಜಯ" ಬರೆದನೊ ? ಈ ಶಂಕೆಯತ್ತ ಈ ಕುರಿತು ವಿವೇಚನೆ ಮನನೀಯವಾಗಿ ಬಂದಿದೆ. ಆದರೆ ಇಲ್ಲಿ ಮಂತವ್ಯದ ಇನ್ನೊಂದು ಅಂಶವಿದೆ. ಈ ಬಗೆಯ ಆಂತರಿಕವಾದ ಪರಿಷ್ಕೃತ ಒತ್ತಾಯ ಮಧ್ಯಯುಗೀನ ಕವಿಗಾಗಲಿ, ಚಿಂತನಶೀಲ ಪ್ರತಿಭೆಗಾಗಲಿ ಅನುಭವಕ್ಕೆ ಬರುತ್ತಿರಬಹುದೇ ? ವ್ಯಕ್ತಿಯ ವಿಚಾರಪ್ರಕ್ರಿಯೆ ಆಯಾ ದೇಶ ಕಾಲ ಪರಿಸ್ಥಿತಿಯ ಆರ್ಥಿಕ, ಸಾಮಾಜಿಕ ಪರಿಸರದ ಕ್ರಿಯೆ ಪ್ರತಿಕ್ರಿಯೆಗಳ ಕೋಶದಲ್ಲಿಯೇ ಬೆಳೆಯುತ್ತದೆ. ತನ್ನ ಅನುಭವ ಅಭಿವ್ಯಕ್ತಿಗಳ ಬಗೆಗೆ ಅಂದಿನ ಎಂಥ ಮಹಾಕವಿಗೂ ಒಂದು ಪ್ರತ್ಯಗಾತ್ಮತೆಯ ನಿರ್ಲಿಪ್ತ ಚಿಂತನೆ ತೋಚುವದೂ ಒಂದು ದೂರದ ವಿತರ್ಕ. ಆಯಾ ಯುಗದ ವಿಚಾರಸರಣಿಯ ಒಂದು ಎರಕವಿರುತ್ತದೆ. ಎಂಥ ವೈಚಾರಿಕ ಸ್ವೈರತೆಗೂ ಪರಿಸರ-ಪರಿಸ್ಥಿತಿಗಳ ಆಯಾಮಗಳ ನಿಯಮನ ವಿರುತ್ತದೆ.

ಆದ್ದರಿಂದ ಪ್ರಬಂಧಕಾರರು ಎಷ್ಟೇ ಚಿತ್ತವೇಧಕವಾಗಿ ಚಿತ್ರಿಸಿದ್ದರೂ ಭರತ-ಬಾಹುಬಲಿಗಳ ಕಥೆ, ಭವಾವಳಿಗಳ ಕಥೆ ಇವುಗಳ ಅಪರ್ಯಾಪ್ತತೆ ಇಡಿಯ ಅಸ್ತಿತ್ವ, ನಿಗೂಢ ಅಸ್ತಿತ್ವದ ಶೋಧನೆಗೆ- ಇತ್ಯಾದಿ ವಿಚಾರಗಳೇ ಪಂಪನ ಪ್ರಜ್ಞಾಪ್ರಪಂಚದ ಪರಿಮಿತಿಗೆ ಪರಕೀಯವೆನಿಸುವಂತಿದೆ.

ಭಾರತದ ಸತ್ವವನ್ನು ಕಟ್ಟಿ ಕಂಡುಕೊಳ್ಳಲು ಯತ್ನಿಸಿದ ಕಾಲಿದಾಸ, ಬಾಣಭಟ್ಟರೊಂದಿಗೆ ಪಂಪನನ್ನು ನಿಲ್ಲಿಸಿ ಅವರ ವ್ಯಕ್ತಿತ್ವದ ಸಮಾನತೆಯನ್ನು ಸಮೀಕ್ಷಿಸಿದ ಪ್ರಬಂಧಕಾರರ ನಿರೂಪಣೆ ನಿಜವಾಗಿಯೂ ಉದ್ಬೋಧಕವಾಗಿದೆ. ಪಂಪನ ಕುರಿತ ಈ ಅಧ್ಯಯನ ಈ ಗ್ರಂಥದಲ್ಲಿಯೇ ಅಪೂರ್ವ.

(ಪುರಾಣ ಪ್ರಕೃತಗಳ ಸಮೀಕರಣದಲ್ಲಿ ಅದರ ಸಂಘಟ್ಟಣೆಯಲ್ಲಿ ವರ್ತಮಾನದ ಸಂಕೀರ್ಣ ಹೊಳೆಸಿಕೊಳ್ಳುವ ಪಂಪನ ಈ ಮಹತ್ವದ ಯತ್ನ ಭಾರತೀಯ ಕಾವ್ಯ ಸಂದರ್ಭದಲ್ಲಿ ಮಾತ್ರವಲ್ಲ, ವಿಶ್ವದ ಕಾವ್ಯಸಂದರ್ಭದಲ್ಲಿ ಕೂಡ ಕನ್ನಡ ಮಾಡಿರೋ ಅತ್ಯಂತ ಮಹತ್ವದ ಪ್ರಯೋಗ- ಎಂದು ಪ್ರಬಂಧಕಾರರ ಪ್ರತೀತಿ. ಕಾಲಾನುಕ್ರಮದ ದೃಷ್ಟಿಯಿಂದಾದರೂ ಇದು ಸತ್ಯವೆನ್ನಲೇಬೇಕು. ಏಕೆಂದರೆ ಇಂಥ ಪ್ರಯೋಗ ತಮ್ಮ ತಮ್ಮ ರೀತಿಯಲ್ಲಿ ಸಾರ್ಥಕವಾಗಿ ಮಾಡಿದ ಮಿಲ್ಟನ್ ಡಾಂಟೆಗಳಿಗಿಂತ ಪಂಪ ಹಳಬ.)

ಕೆ. ವಿ. ಸು. ಅವರ ಹೊಸ ನೋಟವಾದರೂ ಏನು ? ಅದು ಕೃತಿಯ 'ಅನಾವರಣ'. ಹಿಂದಿನ ವಿಮರ್ಶೆಗಳು ಪಂಪನ ಕೃತಿಗಳಿಗೆ ಸುತ್ತು ಮತ್ತಿಷ್ಟು ಅಡಚಣೆಗಳನ್ನು ತಂದೊಡ್ಡಿವೆ- ಎನಿಸಿರುವವರಿಂದ ಅವನ್ನೆಲ್ಲ ನಿವಾರಿಸಬೇಕಾದದ್ದು ಅದರ ಅಗತ್ಯ (ಆದರೆ ಈ ಅಗತ್ಯದ ಪೂರೈಕೆಗೆ ಸುಬ್ಬಣ್ಣನವರು ಈ 'ಅನಾವಶ್ಯ' ಶೈಲಿಯಲ್ಲಿ

ಪಂಪನನ್ನು ವಿವರವಾಗಿ ಪುನರ್ವಿಮರ್ಶಿಸುತ್ತ ಒಂದು ಉದ್ಗ್ರಂಥವನ್ನು ಬರೆಯು ಬೇಕಾದೀತು.) ಪುರಾಣ–ಪ್ರಕೃತಗಳ, ಮಹಾಭಾರತ–ಇತಿಹಾಸಗಳ ಘರ್ಷಣೆಯಲ್ಲಿ ಹೊಳೆದ ಹೊಸ ಅನುಭವವೆಂದು ಪಂಪನ ಕೃತಿಯನ್ನು ಪರಿಗಣಿಸಬೇಕೆಂಬುದು ಅವರ ಹೊಸ ನೋಟ. ಈ ನೋಟ ಈ ಯತ್ನ ನವೀನವಿದ್ದಷ್ಟೇ ಪ್ರವೀಣ.

ವಿಚಾರಸಂಕಿರಣದ ಕೊನೆಯ ದಿನದ ಗೋಷ್ಠಿಯ ಅಧ್ಯಕ್ಷಸ್ಥಾನದಿಂದ **ಡಾ. ಎಲ್. ಬಸವರಾಜು** ಅವರು ಪಂಪನು ತನ್ನ ಕಾಲದ "ಕ್ರಾಂತಿಕಾರಿ" ಕವಿಯೆಂದು ಪ್ರತಿಪಾದಿಸಲು ತುಂಬ ಆವೇಶದಿಂದ ಪರಿಶ್ರಮಿಸಿದ್ದಾರೆ.

ಅರಿಕೇಸರಿಯಂಥ ನಿರಂಕುಶ ಪ್ರಭುವನ್ನು ಅವನ ನಿಕಟಸಂಪರ್ಕದ ಆತ್ಮೀಯ ಮಿತ್ರನಾಗಿ ಪಂಪ ಕೊಂಡಾಡಿದ್ದಾನೆ. ಜತೆಗೆ ನಿರಂಕುಶ ಪ್ರಭುತ್ವವನ್ನು (ಪರ್ಯಾಯ ವಾಗಿ ಪಾತ್ರಪ್ರಸಂಗೋಪಾತ್ತವಾಗಿ) ವಿರೋಧಿಸಿ ತೆಗಳಿದ್ದಾನೆ. ಆದರೆ ಈತ ತನ್ನ ಪ್ರಭುವನ್ನು ಕೊಂಡಾಡಿದ್ದು ಆತ ಆದರ್ಶ "ಗುಣಾರ್ಣವ" ನಾದುದರಿಂದಲೇ. ಆದರೆ ಡಾಕ್ಟರ ಮಹಾಶಯರು ಕಾವ್ಯದಲ್ಲಿ ಒಂದೆಡೆಗೆ ಬರುವ ರಾಜನಿಂದೆ ಕೇವಲ ನಿರಂಕುಶ ಪ್ರಭುತ್ವದ ವಿರುದ್ಧ ಪ್ರತಿಭಟನೆಯೆಂದು ಒಮ್ಮೆಲೇ ಭಾವಿಸಿದ್ದೇಕೋ ? ಅತ್ಯಂತ ರಾಜನಿಷ್ಠೆಯ ಸಾಮಂತಶಾಹಿಯ ಮಧ್ಯಯುಗದಲ್ಲಿಯೂ ಕೆಟ್ಟ ರಾಜರನ್ನು ಕಟುವಾಗಿ ಟೀಕಿಸಿದವರಿದ್ದಾರೆ. ಆದರೆ ಹಾಗೆ ಟೀಕಿಸಿದವರೆಲ್ಲ ಒಳ್ಳೆಯ ರಾಜನನ್ನು ಅಪೇಕ್ಷಿಸಿ ದರೇ ಹೊರತು ಪ್ರಜಾಪ್ರಭುತ್ವಕ್ಕಾಗಿ ರಾಜ್ಯಕ್ರಾಂತಿಯು ಅವರ ಕನಸಿನಲ್ಲಿಯೂ ಇದ್ದಿಲ್ಲ.

ಪಂಪನಿಗಿಂತ ಹಿಂದಿನ ಕವಿಗಳು ತಮ್ಮ ಪೋಷಕನೆಂಬ ಒಂದೇ ಕಾರಣಕ್ಕಾಗಿ ತಮ್ಮ ದೊರೆಯನ್ನು ತಮ್ಮ ಕಾವ್ಯದ ಕಥಾನಾಯಕನನ್ನಾಗಿ ಕಲ್ಪಿಸಿ ಕೊಂಡಾಡಿರ ಬಹುದು. "ಪೂರ್ವ ಭೂಪರ ಪದಂಗಳಂ ಪುಗಿಸಿ ಪೋಲಿಪು" ದನ್ನು ಪಂಪ ತೆಗಳಿರ ಬಹುದು. ಜಿನಸ್ತುತಿಯಿಂದ ಪೂಜೆ ನೆಗಳ್ತೆ ಇತ್ಯಾದಿ ಬರುವದು ಎಂದು ಪಂಪ ರಾಜ ಸ್ತುತಿಯನ್ನು ಕಡೆಗಣಿಸಿರಬಹುದು. ಆದರೆ ಇಂಥ ಮಾತುಗಳಿಂದ ಕವಿ ಕ್ರಾಂತಿಕಾರಿ ಎನ್ನುವದು ಭ್ರಾಂತಿಕಾರಿ. ಜಿನನ ಅನುಗ್ರಹದ ಇದಿರು ಹೆರವರು ಏನು ಕೊಡಬಲ್ಲರು, ಹೆರವರಿಂದ ಏನಾಗಬೇಕು– ಎಂದು ಅನಿಸುವದು ಸ್ವಾಭಾವಿಕ. ಅದೊಂದು ನಿವೃತ್ತಿಯ ದಲ್ಲದಿದ್ದರೂ ನಿರ್ವೇದದ ಚಿತ್ತವೃತ್ತಿ. ಹಾಗೆಯೇ ದುರ್ಯೋಧನನ "ನಿರಂಕುಶ ಪ್ರಭುತ್ವ" ವನ್ನು ಶಲ್ಯ ತೆಗಳಿದ್ದು ವ್ಯಾಸಭಾರತದಲ್ಲಿ ಬಂದಿಲ್ಲ. ಆದರೆ ಶಲ್ಯನ ಬಾಯಿ ಯಲ್ಲಿ ಪಂಪನು ತನ್ನ 'ಸ್ವಗತ' ವನ್ನು ಪ್ರಕಟಿಸಿದ್ದಾನೆನ್ನುವಂತಿಲ್ಲ. ಒಂದು, ಆ ಬಾಯಿ ಯೋಗ್ಯವಲ್ಲ ಕೇವಲ ಸ್ತುತಿಪ್ರಿಯ ಆತಿಥ್ಯಪ್ರಿಯ ಮೂರ್ಖ ರಾಜ ಶಲ್ಯ. ಅವನನ್ನು ವಶಪಡಿಸಿಕೊಳ್ಳುವ ತಂತ್ರ ದುರ್ಯೋಧನನಿಗೆ ಗೊತ್ತು. ಕರ್ಣನ ಸಾರಥಿಯಾಗಲು ಮೊದಲು ಒಪ್ಪದೆ ಸಿಟ್ಟಿಗೆದ್ದ ಈ ದುರಹಂಕಾರಿ ಕಡೆಗೆ "ನೀನು ಕೃಷ್ಣನಿಗೆ ಸಮ"

ಎಂದೊಡನೆ ಅದೇ ದುರ್ಯೋಧನನ ಮೇಲೆ ಪ್ರಸನ್ನನಾಗುತ್ತಾನೆ. ಅಂದರೆ ಇಂಥವನ ಬಾಯಿಯ ನಿಂದಾಸ್ತುತಿಗಳು ಕವಿಯ ಅಭಿಪ್ರಾಯ ಪ್ರಕಟನೆಗೂ ಪ್ರಭಾವಿ ಸಾಧನಗಳಲ್ಲ. ಇನ್ನೊಂದು, ನಿರಂಕುಶ ಪ್ರಭುತ್ವವನ್ನೂ ಪ್ರಾಮಾಣಿಕವಾಗಿಯೇ ಪಂಪ ವಿರೋಧಿಸುತ್ತಿದ್ದರೆ ಅರಿಕೇಸರಿಯನ್ನು ಅಷ್ಟೊಂದು ನೆಚ್ಚಿಕೊಳ್ಳುತ್ತಿದ್ದಿಲ್ಲ. ನೆಚ್ಚಿಕೊಂಡಿರುವಾಗ ಅಂಥ ಅಭಿಪ್ರಾಯಗಳನ್ನು ಅವನಿಗಾಗಿ ಬರೆದ ಕಾವ್ಯದಲ್ಲಿಯೇ ಸೇರಿಸುತ್ತಿದ್ದಿಲ್ಲ. ಉದ್ದೇಶಪೂರ್ವಕದಾಗಿ ರಾಜನಿಂದೆ ಸೇರಿಸಿದ್ದಾನೆಂದು ಒಪ್ಪಿದರೂ ಈ ಉದ್ದೇಶ ರಾಜತ್ವದ ವಿರುದ್ಧವೇ ಒಂದು ಘೋಷಣೆ ಎಂದು ಭಾವಿಸಬೇಕಾಗಿಲ್ಲ.

"ಆದಿಕವಿ ಅಗ್ರ ಕವಿ ಎನ್ನುವದಕ್ಕಿಂತ ಪಂಪನೊಬ್ಬ ಕ್ರಾಂತಿಕವಿ ಎಂದು ಗುರುತಿಸಿಕೊಳ್ಳುವತ್ತ ನಮ್ಮ ಮೀಮಾಂಸೆಗೆ ತಿರುವು ಕೊಡಬೇಕಾದ ಕಾಲ ಬಂದಿದೆ"– ಎಂದಿದ್ದಾರೆ ಪ್ರಬಂಧಕಾರರು. ಹೀಗೆ ಕಾಲ ಮಾಹಾತ್ಮ್ಯಕ್ಕೆ ಬಲಿಯಾಗಿ, ಕಾಲದ ಒತ್ತಡಕ್ಕೆ ಒತ್ತಾಯಗೊಳ್ಳುವ ಮೀಮಾಂಸೆ ಯಾವ ಊರಿನ ದಾರಿ? ಕಾಲಕ್ಕೆ ತಕ್ಕಂತೆ ಕಾಲು ಹಾಕುವದು ಸಮ್ಯಕ್ ವಿಮರ್ಶಾ ಪದ್ಧತಿಯೇ? ಈ ರೀತಿ "ಕಾಲಪಾಶಕುಂಠಿತ"ರಾಗಿ ಪ್ರಬಂಧಕಾರರು "ನಿಜಾಧಿಸಾಧನಾವಹದೋಳ್" "ಜೋಳವಾಳಿ" ಯನ್ನು ತನ್ನ ೨೩ ವರ್ಷ ಪ್ರಾಯದಲ್ಲಿಯೇ ನಿರ್ವಹಿಸಿದ ರಾಜವಲ್ಲಭ ಪಂಪನನ್ನು "ಪ್ರಜಾಪ್ರಭುತ್ವದ ಸಂಬಂಧವಾಗಿ ಅನುಕೂಲ ಅನಿಸಿಕೆ ಇದ್ದವ"ನೆಂದು ಸಾಧಿಸಲು ಹೊರಟಿದ್ದಾರೆ?

ಇದಕ್ಕೆ ಆಧಾರವೇನು? ಅರಿಕೇಸರಿಯೂ ನಿರಂಕುಶ ಪ್ರಭುತ್ವಕ್ಕೆ ವಿರೋಧಿ. ಏಕೆಂದರೆ ಆತ ಸಾಮಂತನಾಗಿಯೂ ತನ್ನ ಪ್ರಭುವನ್ನು ಪ್ರತಿಘಟಿಸಿ ಸೋಲಿಸಿದ್ದಾನೆ! ಆದಿಪುರಾಣದಲ್ಲಿ ಭೋಗಭೂಮಿಯನ್ನು ಬಣ್ಣಿಸುವಾಗ ಬಡವ–ಬಲ್ಲಿದನೆಂದು ಆಳು–ಅರಸನೆಂದು ಭೇದವಿಟ್ಟುಕೊಂಡಿಲ್ಲ! ಇದರಿಂದ ಪ್ರಜಾಪ್ರಭುತ್ವ ಅಂದರೆ ಪ್ರಜಾ ಪ್ರಾತಿನಿಧ್ಯದ ಶಾಸನ ಪದ್ಧತಿಯು ಪಂಪನಿಗೆ ಅಭಿಪ್ರೇತವಿತ್ತೆಂದು ಸಿದ್ಧವಾಗುವದಿಲ್ಲ. ಹೆಚ್ಚೆಂದರೆ ದೊರೆಯ ಶರಣಾಗತವಾತ್ಸಲ್ಯ, ದಯಾಭಾವಗಳನ್ನು ಆತ ಮೆಚ್ಚಿದ್ದನೆನ್ನಬಹುದು.

ಇದೇ ರೀತಿ ಕರ್ಣನ ಪರವಾಗಿ ದುರ್ಯೋಧನ (ನಿರಂಕುಶ ಪ್ರಭು!) ಜಾತಿ–ಕುಲಗಳ ಬಗೆಗೆ ಆಡುವ ಮಾತುಗಳಿಂದ (ಉತ್ತಮ ಜಾತಿ ವಿಪ್ರಕುಲದಲ್ಲಿ ಜನಿಸಿದ) ಪಂಪ ತನ್ನ ಕಾಲದ ಜಾತ್ಯಂಧ ಕುಲಾಭಿಮಾನಿಗಳನ್ನು ಖಂಡಿಸಿದ ಸಾಮಾಜಿಕ ಕ್ರಾಂತಿಕಾರನೆಂದು ಭಾವಿಸುವದೂ a sweeping generalisation– ಆಧುನಿಕತೆಗಾಗಿಯೇ ಹೊರಡಿಸಿದ್ದು. ಭಟ್ಟನಾರಾಯಣನ ಅಶ್ವತ್ಥಾಮನೂ 'ವೇಣೀಸಂಹಾರ'ದಲ್ಲಿ ಜಾತಿ ಬಿಟ್ಟೆನೆಂದು ಜನಿವಾರ ಹರಿದೊಗೆಯುತ್ತಾನೆ. ಇಂಥ ಮಾತು–ಕೃತಿಗಳು ಕಥೆಯ ಸಂದರ್ಭಕ್ಕೆ ಉಚಿತವೇ ಹೊರತು ಕವಿಯ ಸಾಮಾಜಿಕ ಸಂದರ್ಭಕ್ಕೆ

ಅಲ್ಲ. ಶಿವಶರಣರ, ವೈಷ್ಣವ ದಾಸರ ಮಾತುಗಳಂತೆ ಪಂಪನ ಉಕ್ತಿಗಳಲ್ಲ. ಅಲ್ಲದೆ ಜೈನನಾದ ಪಂಪ ವೈದಿಕರ ಜಾತಿ–ಕುಲವಿಚಾರ ಖಂಡನೆಗೆ ಯಾವಾಗಲೂ ಸ್ವತಂತ್ರನೇ.

ಇನ್ನು ಪಂಪನು 'ಲೌಕಿಕ'ವೆಂಬುದನ್ನು ಇಂದಿನ 'Secular' ಎಂಬ ಅರ್ಥದಲ್ಲಿ ಪ್ರಯೋಗಿಸಿದನೇ ? ಹಾಗೆ ತಿಳಿಯಲು ಆಧಾರವೇನು ? ತನ್ನ ಉಭಯ ಕಾವ್ಯಗಳಲ್ಲಿಯೂ ಧರ್ಮವನ್ನೇ ಎತ್ತಿಹಿಡಿದ ಪಂಪ ಧರ್ಮಬಾಹಿರವಾದ ಆಧುನಿಕ, ರಾಜಕೀಯ Concept ಊಹಿಸುವದು ಶಕ್ಯವಿಲ್ಲ.

ಅರ್ಜುನ–ಅರಿಕೇಸರಿಗಳ ಸಮೀಕರಣ ಅಷ್ಟೊಂದು ಸುಸೂತ್ರವಾಗಿಲ್ಲವೆಂಬುದನ್ನು ಎತ್ತಿ ಹೇಳಿದ ಪ್ರಬಂಧಕಾರರು 'ವಿಕ್ರಮಾರ್ಜುನ ವಿಜಯ' ದಲ್ಲಿಯ ಇತರ ಪ್ರಮುಖ ಪಾತ್ರಗಳಲ್ಲಿ ಯಾವ ಯಾವ ಸಮಕಾಲೀನ ವೀರಪುರುಷರನ್ನು ಸಮೀಕರಿಸಿದ್ದಾನೆಂಬುದನ್ನು ಮುಂದಿನ ಸಂಶೋಧಕರಿಗೆ ಬಿಟ್ಟುಕೊಟ್ಟಿದ್ದು ಒಂದು ಸಣ್ಣ ಸೋಜಿಗ. ಏಕೆಂದರೆ ಕಥಾನಾಯಕನಲ್ಲಿಯೇ ಸಮೀಕರಣ ಸರಿಯಾಗಿ ಸಾಧಿಸದಿದ್ದ ಕವಿ ಇತರ ಪಾತ್ರಗಳಲ್ಲಿ ಸಾಧಿಸುವಷ್ಟು ತಾತ್ಪರ್ಯ ತೋರಿಸಬಹುದೇ ? ಅದೂ ಸಮಕಾಲೀನ ಇತಿಹಾಸದ ಕೆಲವು ಅಷ್ಟು ಮುಖ್ಯವಲ್ಲದ ಪ್ರಸಂಗಗಳು ಮಾತ್ರ ಆನುಷಂಗಿಕವಾಗಿ 'ವಚನ'ವಾಗಿ ಸೇರಿಸಿದ್ದಾಗ ?

ಕರ್ಣನಲ್ಲಿ ಪಂಪ ತನ್ನನ್ನು Project ಮಾಡಿರುವನೆಂದು ಪ್ರಬಂಧಕಾರರು ಚೆನ್ನಾಗಿಯೇ ಪ್ರತಿಪಾದಿಸಿದ್ದಾರೆ. ಆದರೆ 'ವಿಕ್ರಮಾರ್ಜುನ ವಿಜಯ' ದ ಒಂದು ಒಗಟೇ ಇದು– ತನ್ನ ಪ್ರಭುವನ್ನು ಅರ್ಜುನನಲ್ಲಿ ಸಮೀಕರಿಸಿದಾಗ ತನ್ನನ್ನು ಅವನ ಪರಮ ಶತ್ರು ಕರ್ಣನಲ್ಲಿ ಪ್ರತಿಬಿಂಬಿಸಿದ್ದು. ಆದರೆ ಇದೂ ಒಂದು ಅನಿವಾರ್ಯವೇ. ಪಂಪ–ಅರಿಕೇಸರಿಗಳ ಸಖ್ಯ ಕೃಷ್ಣಾರ್ಜುನರ ಸಖ್ಯದಲ್ಲಿ ಹೊಂದಿಸುವಂತೆ ಇದ್ದಿಲ್ಲ. ಪಂಪ ಕೃಷ್ಣನಾಗಲು ಒಪ್ಪುವದು ಹೇಗೆ ? ಆದ್ದರಿಂದ ಈ ಮೈತ್ರಿಯು ಮಟ್ಟಿಗೆ ಕರ್ಣ ದುರ್ಯೋಧನರ ಮೈತ್ರಿಯೇ ಹೊಂದಿಕೆ ಆಯಿತು. ಕರ್ಣನೂ ಪಂಪನಂತೆಯೇ ಅತ್ಯಂತ ಸ್ವಾಮಿನಿಷ್ಠ ಜೋಳವಾಳಿಯ ಕಟ್ಟಾಳು. ಅಲ್ಲದೆ, ದುರ್ಯೋಧನನು ಮಾಡುವ ಕರ್ಣನ ಪ್ರಶಂಸೆಯು ಪಂಪನ ಗುಣವರ್ಣನೆಯೂ ಆಗುವಂತೆ ಬಂದಿದೆ.

ಆದರೆ ಅರಿಕೇಸರಿಗೆ ಮೀಸಲಾದ ' ವಿಕ್ರಮಾರ್ಜುನ ವಿಜಯ ' ದಲ್ಲಿ 'ನೆನೆವೊಡೆ ಕರ್ಣನಂ ನೆನೆ' ಎಂದೂ ಬೇರೆಯವರನ್ನು ನೆನೆಯದಿರೆಂದೂ 'ಭಾರತಮೇ ಕರ್ಣರಸಾಯನ'ವೆಂದೂ ಕೊಂಡಾಡುವದು ಕವಿಯ ಉದ್ದಿಷ್ಟಕ್ಕೆ ಅಪಚಾರವಲ್ಲವೇ ? ಆದರೆ ಇದಕ್ಕೆ ಪ್ರಬಂಧಕಾರರ ವಿವರಣೆ ಹೀಗೆ– ಇಂಥಲ್ಲಿ ಕರ್ಣನೆಂದರೆ ಪಂಪ ತನ್ನನ್ನೂ ತನ್ನ ಕಾವ್ಯವನ್ನೂ ಪ್ರಶಂಸಿಸಿಕೊಳ್ಳುತ್ತಾನೆ. ಆದರೆ ಇದು ಅಷ್ಟೊಂದು ತೃಪ್ತಿಕರ ಖುಲಾಸೆಯಲ್ಲ. ಭಾರತವು ಕರ್ಣ ರಸಾಯನವೆಂದುಕೊಳ್ಳಲಿ. ಕರ್ಣನನ್ನೆ

ನೆನೆದುಕೊಂಡು ಘೋಷಿಸುವದು ಅರ್ಜುನನಾದ ಅರಿಕೇಸರಿಗೆ ನ್ಯಾಯ ಮಾಡಿದಂತೆ ಅಲ್ಲ– ಈ ಕರ್ಣ ಪಂಪನೇ ಆಗಿದ್ದರೂ ಸೈ.

ಆದಿಪುರಾಣದಲ್ಲಿಯೂ ಕವಿ ತನ್ನನ್ನು ಭರತನೊಂದಿಗೆ ಮಾತ್ರವಲ್ಲ ಇತರ ಕೆಲವು ಮುಖ್ಯ ಪಾತ್ರಗಳೊಂದಿಗೂ ಸಮೀಕರಿಸಿಕೊಂಡಿದ್ದಾನೆಂದು ವಾದಿಸುತ್ತಾರೆ. ತಾನು ಕಟ್ಟಿಸಿದ ಬಸದಿ ಕೆತ್ತಿಸಿದ ಜಿನಬಿಂಬಗಳ ವೃತ್ತಾಂತವನ್ನು ಭರತನ ಚರಿತ್ರೆಯೊಂದಿಗೆ ಹೊಂದಿಸಿ ಬಣ್ಣಿಸಿಕೊಂಡಿದ್ದಾನೆಂದು ಪ್ರಬಂಧಕಾರರಿಗೆ ಭಾಸವಾಗುತ್ತದೆ. ಇದು ಭಾಸವೋ ಆಭಾಸವೋ ಪರಿಶೀಲಿಸಬೇಕೆಂದು ಅವರು ಅಂದಿದ್ದಾರೆ.

ಇದೆಲ್ಲ Hypothesis. ಇದನ್ನು ಇತಿಹಾಸವಾಗಿಸಲು ಗುಡ್ಡದಲ್ಲಿ ಉತ್ಖನನೆ, ಸಂಶೋಧನೆ ನಡೆಯಬೇಕು– ಎಂದು ಡಾ. ಬಸವರಾಜು ತಮ್ಮ ಭಾಷಣ (ಪ್ರಬಂಧ)ದ ಕೊನೆಗೆ ಸೂಚಿಸಿದ್ದಾರೆ. ಇದನ್ನೆಲ್ಲ ಒಪ್ಪಿಕೊಂಡರೂ ಪಂಪ ಕ್ರಾಂತಿಕಾರಿ ಕವಿಯೆಂದು ಸಿದ್ಧವಾಗುವಂತಿಲ್ಲ.

ಆದರೂ ಒಂದು ಅಂಶ ನಿಜ. ಪಂಪನಿಗೂ ಜಾತಿಬ್ರಾಹ್ಮಣರಿಗೂ ಏನೋ ವೈಷಮ್ಯವಿದ್ದಿರಬೇಕು. ಪಂಪನ ತಂದೆ ಜೈನನಾದಂದಿನಿಂದ ಅಗ್ರಹಾರದಲ್ಲಿ ಈ ಕುಲದ ಪ್ರತಿಷ್ಠೆಗೆ ಏನೋ ಆತಂಕ ಒದಗಿ ಪಂಪ ತನ್ನ ಬಾಲ್ಯವನ್ನು ತಾಯಿಯ ತವರು ಮನೆಯಲ್ಲಿಯೇ ಕಳೆಯಬೇಕಾಯಿತು– ಎಂಬ ಒಂದು ಊಹೆಯೂ ಇದೆ. ಇದು ನಿಜವಿದ್ದರೆ ಆ ಮೂಲಕವೇ ದುರ್ಯೋಧನ–ಕರ್ಣರ ಬಾಯಿಯಿಂದ ಕುಲಗೇಡಿತನದ ವಿರುದ್ಧ ತೀವ್ರ ಮಾತುಗಳನ್ನು ಆತ ಆಡಿಸಿರಬಹುದು. ಆದರೆ ಇದರಿಂದಲೂ ಆತ ಕ್ರಾಂತಿಕಾರಿಯೆಂದು ಸಿದ್ಧವಾಗುವದಿಲ್ಲ. ವೈಯಕ್ತಿಕವಾಗಿ ಆತ ಮತಾಂಧನಾಗಿದ್ದಿಲ್ಲ. ಭೋಗಿಯೂ 'ಸುಭಗ'ನೂ ರಸಿಕನೂ a man of catholic taste ಆಗಿದ್ದನು.

ಕ್ರಾಂತಿಯಾಗಬೇಕು, ಸಮಾಜವನ್ನು ಬದಲಿಸಬೇಕು– ಎಂದು ಕನಸು ಕಾಣು ವವನು, ಕಾಣಿಸುವವನು ತಾನೇ ಮೊದಲು ಬದಲಾವಣೆ ಹೊಂದಿರುತ್ತಾನೆ– ತನ್ನ ಧರ್ಮ, ಜಾತಿ, ವರ್ಗದಿಂದ ಪೂರ್ತಿ ಹೊರಗೆ ಬಂದಿರುತ್ತಾನೆ. ಪರಕೀಯನಾಗಿ ಸ್ವಕೀಯರನ್ನು ನೋಡಲು ಆರಂಭಿಸುತ್ತಾನೆ.

ಪಂಪನಲ್ಲಿ ಆ ವೃತ್ತಿ ಆ ದೃಷ್ಟಿ ಎಲ್ಲಿಯೂ ವ್ಯಕ್ತವಾಗಿಲ್ಲ. ಆತ ಕಾಲಿದಾಸನಂತೆ ಆತ್ಮತೃಪ್ತ ಆತ್ಮಸಂಮೋಹಿತ. ಆಸ್ಥಾನ, ವಿದ್ವತ್ ಸಭೆ, ವೇಶ್ಯಾವಾಟಿಕೆ, ಮಾವು, ಮಲ್ಲಿಗೆ ಇತ್ಯಾದಿಗಳಲ್ಲಿ ಬಾಳಿ ನಲಿದವನು. ಇಂಥವನು ಕ್ರಾಂತಿಕಾರಿಯಾಗುವ ಸಂಭವ ಕಡಿಮೆ.

ಅವನು ಕ್ರಾಂತಿಕಾರಿಯಾಗಿದ್ದರೆ ಅದು ಕಾವ್ಯರೂಪ ಭಾಷಾಶೈಲಿ, ಮಾರ್ಗ–

ದೇಸಿ, ತ್ಯಾಗ-ಭೋಗ, ಲೌಕಿಕ-ಆಗಮ, ಧರ್ಮ-ಕಾವ್ಯ ಮುಂತಾದವುಗಳ ಸಮನ್ವಯದ ಹೊಸ ಪರಂಪರೆ ಹಾಕಿಕೊಡುವದರಲ್ಲಿ.

ಗ್ರಂಥದ ಪರಿಚಯಾತ್ಮಕ ವಿಮರ್ಶೆ ತುಸು ದೀರ್ಘವೇ ಆಯಿತೇನೋ. ಆದರೂ ಅನೇಕ ವಿವರಗಳನ್ನು ಚರ್ಚಿಸದೇ ಬಿಡಲಾಗಿದೆ. ಪಂಪನ ಕುರಿತು ಅವನಂಥ ಪೂರ್ವ ಸೂರಿಗಳ ಕುರಿತು ಇಂಥ ಅಧ್ಯಯನ ಇನ್ನೂ ಅನೇಕ ಕಡೆಗೆ ಅನೇಕ ಸಲ, ಅನೇಕ ನಿಟ್ಟು-ನೋಟ-ನಿಲುಮೆಗಳಿಂದ ಇನ್ನೂ ಆಳವಾಗಿ ನಡೆಯಬೇಕು.

[ಮುಂಗಿದುದು]

■ ■

ಅಕ್ಕಮಹಾದೇವಿಯ ಗಂಡ ಕೌಶಿಕನನ್ನು ಇತಿಹಾಸದಲ್ಲಿ ಗುರುತಿಸುವ ಒಂದು ಪ್ರಯತ್ನ

ಡಾ. ಎಂ. ಚಿದಾನಂದಮೂರ್ತಿ

ಅಕ್ಕಮಹಾದೇವಿ ಅಥವಾ ಮಹಾದೇವಿಯಕ್ಕ ಎಂದು ಪ್ರಸಿದ್ಧಳಾದ ಮಹಾ ಅನುಭಾವಿಯ ಜೀವಿತದ ಬಗ್ಗೆ ಇನ್ನೂ ಅನೇಕ ತೊಡಕುಗಳು ಉಳಿದುಕೊಂಡಿವೆ. ಅವಳಿಗೆ ವಾಸ್ತವವಾಗಿ ಮದುವೆಯಾಗಿತ್ತೇ ಇಲ್ಲವೇ ? ಮದುವೆಯಾಗಿ ಗೃಹಸ್ಥ ಜೀವನವನ್ನು ಅಥವಾ ಆ ಜೀವನದ ಹಿಂಸೆಯನ್ನು ಕೆಲಕಾಲವಾದರೂ ಅನುಭವಿಸಿದಳೇ ಇಲ್ಲವೇ ? ಇಂತಹ ಸಮಸ್ಯೆಗಳು ಕೆಲಕಾಲ ಜೀವಂತವಾಗಿದ್ದುವು ಮತ್ತು ಈಗಲೂ ಇವೆ. ಅವಳು ತನ್ನ ಇಷ್ಟಕ್ಕೆ ವಿರುದ್ಧವಾಗಿ ಕೌಶಿಕನೆಂಬ ದೊರೆಯನ್ನು ಮದುವೆಯಾಗಿದ್ದಳೆಂದೂ ಅವನ ಅರಮನೆಯಲ್ಲಿ ಬಲವಂತದಿಂದ ಕೆಲಕಾಲ ಇದ್ದಳೆಂದೂ ಈಗ ಬಹುಮಟ್ಟಿಗೆ ಒಪ್ಪಿತವಾಗಿರುವ ಸಂಗತಿ.

ಆದರೆ ''ಕೌಶಿಕ'' ಯಾರು ? ಅವನು ವಾಸ್ತವವಾಗಿ ದೊರೆಯೇ ? ಅವನನ್ನು ಇತಿಹಾಸದಲ್ಲಿ ಗುರುತಿಸಲು ಸಾಧ್ಯವೇ ? ಈ ಸಮಸ್ಯೆಗಳು ಇನ್ನೂ ಬಿಡಿಸದೆ ಉಳಿದುಕೊಂಡಿವೆ. ಇವನ್ನು ಬಿಡಿಸಲು ಅಂತಹ ಗಂಭೀರ ಪ್ರಯತ್ನಗಳೂ ವಿಶೇಷವಾಗಿ ನಡೆದಂತಿಲ್ಲ. ಕೌಶಿಕನ ಬಗ್ಗೆ ಐತಿಹಾಸಿಕವಾಗಿ ಏನೂ ತಿಳಿಯವೆಂದೇ ಬಹುತೇಕ ಜನರ ನಂಬಿಕೆಯಾಗಿದೆ.

ಈ ಸಮಸ್ಯೆಯನ್ನು ಎದುರಿಸಬೇಕಾದರೆ ಮೊದಲು ಅಕ್ಕಮಹಾದೇವಿಯ ಜನ್ಮಸ್ಥಳ ಯಾವುದು ಎಂಬುದು ನಿರ್ಣಯವಾಗಬೇಕು. ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ಬರುವ "ಉಡುತಡಿ"ಯು ಗುಲ್ಬರ್ಗ ಜಿಲ್ಲೆಯ ಮಹಾಗಾವ್ ಆಗಿರಬಹುದೆಂಬ ಒಂದು ಊಹೆ ಇದ್ದು,[೧] ಅದು ಮಾನ್ಯತೆ ಪಡೆದಿಲ್ಲ. ಉಡುತಡಿಯು ವಾಸ್ತವವಾಗಿ ಶಿಕಾರಿಪುರ ತಾಲೂಕಿನ ಉಡುಗಣಿ–ತಡುಗಣಿ ಎಂಬ ಅಕ್ಕಪಕ್ಕದ ಗ್ರಾಮಗಳು ಎಂಬ ಸಾರ್ವತ್ರಿಕ ನಂಬಿಕೆಯನ್ನೇ ನಾನೂ ಒಪ್ಪಿಕೊಂಡು ಮುಂದಿನ ಚರ್ಚೆಯಲ್ಲಿ ತೊಡಗುತ್ತೇನೆ (ಆ ನನ್ನ ನಂಬಿಕೆ ತಪ್ಪಾದರೆ ನನ್ನ ಇಡೀ ವಾದ ತಪ್ಪಾಗುತ್ತದೆ. ಆದರೆ ಈಗಿನ ಉಡುಗಣಿ–ತಡುಗಣಿಗಳೇ ಹಿಂದಿನ ಉಡುತಡಿ ಎಂದು ಹೇಳಲು ಪ್ರಬಲ ಆಧಾರಗಳಿವೆ. ಈ ಬಗ್ಗೆ ಮುಂದೆ ನೋಡಿ).

೧ ಪ್ರಭುಲಿಂಗಲೀಲೆ (ಸಂ. ಶಿ. ಶಿ. ಬಸವನಾಳ, ಧಾರವಾಡ, ೧೯೫೭), ಪ್ರಸ್ತಾವನೆ, ಪು. ೯.

ಅಕ್ಕಮಹಾದೇವಿಯ ಜೀವನಕ್ಕೆ ಸಂಬಂಧಿಸಿದಂತೆ ನಮಗೆ ದೊರಕುವ ಅತ್ಯಂತ ಪ್ರಾಚೀನ ಆಕರವೆಂದರೆ ಹರಿಹರನ (ಸು. ೧೨೦೦–೧೨೨೦) ಕೃತಿಯೇ. ಉಡುತಡಿ ಎಂಬ ಪಟ್ಟಣದ ದೇಶವನ್ನು ಆಳುತ್ತಿದ್ದವನು 'ಕೌಶಿಕ' ಎಂಬ ಹೆಸರಿನ 'ಮನ್ನೆಯ' ಎಂದು ಅಲ್ಲಿ ಹೇಳಿದೆ.[೨] ಅಲ್ಲಿ ಬರುವ 'ಮನ್ನೆಯ' (=ಮಾನ್ಯ, a local chieftain or a governor) ಎಂಬುದು ಆ ಕೌಶಿಕ ಸ್ವತಂತ್ರ ದೊರೆಯಾಗಿರಲಿಲ್ಲವೆಂದೂ ಚಕ್ರವರ್ತಿಯ ಕೈಕೆಳಗೆ ಸಾಮಂತರಾಜನೋ ಮಂಡಲೇಶ್ವರನೋ ಆಗಿದ್ದ ವ್ಯಕ್ತಿಯಾಗಿದ್ದನೆಂಬುದನ್ನು ಸ್ಪಷ್ಟಪಡಿಸುತ್ತದೆ. ಅವನ ಕೈಕೆಳಗೆ ಮಂತ್ರಿಗಳಿದ್ದರೆಂದೂ ಅವನಿಗೆ ವಾಸಕ್ಕೆ 'ಅರಮನೆ' ಇದ್ದಿತೆಂದೂ ವರ್ಣನೆಗಳು ಅಲ್ಲಿ ಬರುತ್ತವೆ.

ಉಡುತಡಿ ಆ ರಾಜನ ರಾಜಧಾನಿಯೋ ಅಥವಾ ರಾಜಧಾನಿಯ ಭಾಗವೋ ಅಥವಾ ರಾಜಧಾನಿಗೆ ಸಮೀಪದ ಊರೋ ಆಗಿದ್ದರೆ, ಆಗಿನ ಉಡುತಡಿಯೇ ಈಗಿನ ಉಡುಗಣಿ–ತಡುಗಣಿ ಗ್ರಾಮಗಳಾಗಿದ್ದರೆ, ಮಹಾದೇವಿಯಕ್ಕನ ಕಾಲ ಸು. ಕ್ರಿ. ಶ. ೧೧೬೦–೬೫ ಎಂದು ನಂಬುವುದಾದರೆ (ಈ ಬಗ್ಗೆ ಮಾತ್ರ ಅನುಮಾನಕ್ಕೆ ಆಸ್ಪದವಿಲ್ಲ), ಆಗ 'ಕೌಶಿಕ' ಎಂಬ ದೊರೆ ಈಗಿನ ಉಡುಗಣಿ–ತಡುಗಣಿ ಗ್ರಾಮಗಳ ಪ್ರದೇಶದಲ್ಲಿ ಆಳುತ್ತಿದ್ದ ಯಾವನೋ ಸಾಮಂತ ದೊರೆಯೋ ಒಬ್ಬ ರಾಜನ ಮಟ್ಟದ ಪ್ರಧಾನ ಅಧಿಕಾರಿಯೋ ಆಗಿರಬೇಕು. ನಮಗೆ ಆ ಪ್ರದೇಶದಲ್ಲಿ ಆಳುತ್ತಿದ್ದ ಮನ್ನೆಯರು ಯಾರು ಎಂಬುದು ಗೊತ್ತಿದೆ, ಶಾಸನಗಳ ಮೂಲಕ.

ಉಡುಗಣಿ–ತಡುಗಣಿ ಗ್ರಾಮಗಳು ಈ ದಿನ ಚಿಕ್ಕ ಊರುಗಳು. ಅಲ್ಲಿಗೆ ಸುಮಾರು ಮೂರು ಮೈಲಿ ದೂರದಲ್ಲಿರುವ ಬಳ್ಳಿಗಾವೆಯು ಬನವಸೆ ಪನ್ನಿರ್ಚ್ಛಾಸಿರ ಅಥವಾ ಬನವಾಸಿ–೧೨೦೦೦ ಎಂಬ ಪ್ರಾಂತದ ರಾಜಧಾನಿಯಾಗಿದ್ದು ಹನ್ನೆರಡನೆಯ ಶತಮಾನದ ಮಧ್ಯಕರ್ನಾಟಕದ ಅತಿ ಮುಖ್ಯ ಸಾಂಸ್ಕೃತಿಕ–ರಾಜಕೀಯ ಕೇಂದ್ರವಾಗಿದ್ದಿತು. ಬಳ್ಳಿಗಾವೆ ಈ ದಿನ ಒಂದು ಹಳ್ಳಿಯಾಗಿದ್ದರೂ ಹಿಂದೆ ಸಂಪದ್ಭರಿತ ಪಟ್ಟಣವಾಗಿದ್ದು ಚಾಲುಕ್ಯಸಾಮ್ರಾಜ್ಯದ ಮುಖ್ಯಕೇಂದ್ರಗಳಲ್ಲೊಂದೆನಿಸಿತ್ತು. ಅದನ್ನು ರಾಜಧಾನಿಯಾಗಿ ಮಾಡಿಕೊಂಡು ಚಾಲುಕ್ಯರ ಸಾಮಂತ ದೊರೆಗಳು ಅಥವಾ ಮಾಂಡಲಿಕರು ಆಳುತ್ತಿದ್ದರು. ಉಡುಗಣಿ–ತಡುಗಣಿಗಳೂ ಬಳ್ಳಿಗಾವೆಯೂ ಎಷ್ಟು ಹತ್ತಿರದ ಊರುಗಳೆಂದರೆ ಆ ಎರಡು ಪ್ರದೇಶಗಳಲ್ಲಿ ಬೇರೆಬೇರೆ 'ಮನ್ನೆಯ'ರು ಆಳಲು ಬಹುಶಃ ಸಾಧ್ಯವಿಲ್ಲ. ಜೊತೆಗೆ ಹರಿಹರನಲ್ಲೇ ಉಡುತಡಿಯು ಕೌಶಿಕನೆಂಬ ಮನ್ನೆಯ ನೃಪನಿದ್ದ 'ಪಟ್ಟಣದ ದೇಶದಲ್ಲಿದ್ದ' ಒಂದು ಪಟ್ಟಣವೆಂಬ ಮಾತು ಬಂದಿರು

---

೨ "ಕೌಶಿಕನೆನಿಪ್ಪ ಮನ್ನೆಯನಿಪ್ಪ ಪಟ್ಟಣದ ।
ದೇಶದೊಳಗೊಪ್ಪುವುಡುತಡಿಯೆಂಬ ಪಟ್ಟಣದ ॥"
(ಮಹಾದೇವಿಯಕ್ಕನ ರಗಳೆ, ಸಂ. : ಶ್ರೀ ಚನ್ನಮಲ್ಲಿಕಾರ್ಜುನ, ೧೯೩೩, ಪು. ೮)

ವುದನ್ನು ನೋಡಿದರೆ ಉಡುತಡಿ ಬೇರೆ, ಕೌಶಿಕನ ರಾಜಧಾನಿ ಬೇರೆ ಎಂಬ ಸೂಚನೆ ಹೊರಡುತ್ತದೆ. ಅದೇನೇ ಇರಲಿ, ಸು. ಕ್ರಿ. ಶ. ೧೧೬೦ ರಲ್ಲಿ ಆ ಪ್ರದೇಶವು ಕಲ್ಯಾಣ ವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಚಾಲುಕ್ಯ ದೊರೆಗಳ ನಂತರ ಬಂದ ಕಲಚುರಿಗಳ ಆಡಳಿತಕ್ಕೆ ಸೇರಿತ್ತು. ಅದರ ಸಾಮಂತರು ಬನವಸೆ–೧೨೦೦೦ ನಾಡನ್ನು ಬಳ್ಳಿಗಾವೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದರು. ಹಾಗೆ ಆಳುತ್ತಿದ್ದ ಇಬ್ಬರು ಸಾಮಂತರೆಂದರೆ ಕೇಶಿಮಯ್ಯ ದಂಡನಾಯಕ ಮತ್ತು ಕಸಪಯ್ಯ ದಂಡನಾಯಕರು. ಹಿಂದಿನ ಉಡುತಡಿಯು ಈಗಿನ ಉಡುಗಣಿ–ತಡುಗಣಿಯೇ ಆಗಿದ್ದರೆ ಕೌಶಿಕನು ಈ ಇಬ್ಬರು ದಂಡನಾಯಕರಲ್ಲಿ ಒಬ್ಬ ಆಗಿರಬೇಕು; ಬಹುಶಃ ಬೇರೆ ಸಾಧ್ಯವೇ ಇಲ್ಲ.

ಕೇಶಿಮಯ್ಯ ಮತ್ತು ಕಸಪಯ್ಯರ ಅನೇಕ ಶಾಸನಗಳು ದೊರಕಿವೆ (ಮುಂದೆ ನೋಡಿ). ಅವರಿಬ್ಬರೂ ಬಿಜ್ಜಳನ ಮಂತ್ರಿಗಳಾಗಿದ್ದರೆಂದೂ ಇತರ ಮಂತ್ರಿಗಳ ಜೊತೆ ಸೇರಿ ಬಸವಣ್ಣನ ವಿರುದ್ಧ ದೂರು ಹೇಳಿದರೆಂದೂ **ಬಸವಪುರಾಣ** (೧೧.೪) ಹೇಳುತ್ತದೆ :

> ಕಾಳಿಮರಸಂ ಕರಿಯ ಕೇಶವ
> ಚೋಳಿಯಣ್ಣಂ ಕುಂದತಮಿ ಚೂ
> ಪಾಳ ಹೆಮ್ಮಾಡಿ*ಯುಗ್ರ ಚಂಡಿಯು ಕಸವ ಮಂತ್ರಿಗಳು ।
> ಮೇಳಿಗರಸನ ಸಹಿತ ತಮ್ಮೊಳು
> ಮೇಳವಿಸಿ ಬಿಜ್ಜಳ ಮಹೀಶಗೆ
> ಹೇಳಿದರು ದೂಱಿದರು ಬಸವಣ ದಂಡನಾಯಕನ ॥

ಇಲ್ಲಿ ಬರುವ ಮಂತ್ರಿಗಳು ರಾಜಧಾನಿ ಕಲ್ಯಾಣದಲ್ಲೇ ಸದಾ ಇದ್ದವರಲ್ಲ. ಇವರು ಮಂತ್ರಿಗಳಾಗಿದ್ದು ರಾಜನಿಗೆ ಆಡಳಿತ ವಿಚಾರದಲ್ಲಿ ಸಲಹೆಗಳನ್ನು ಕೊಡುತ್ತಿದ್ದರು; ಇವರಲ್ಲಿ ಕೆಲವರು ಚಕ್ರವರ್ತಿಯ ಪ್ರತಿನಿಧಿಗಳಾಗಿ ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇವರು ತಮ್ಮತಮ್ಮ ಪ್ರದೇಶಗಳನ್ನು 'ಸುಖಸಂಕಥಾವಿನೋದದಿಂದ' ಆಳುತ್ತಿದ್ದರು ಎಂದೇ ಶಾಸನಗಳಲ್ಲಿ ಉಕ್ತವಾಗಿದೆ. 'ಮನ್ನೆಯ'ರಾಗಿದ್ದ ಇವರ ಶಕ್ತಿಯೇ ಚಕ್ರವರ್ತಿಯ ಶಕ್ತಿಯಾಗಿತ್ತು.

ಬಿಜ್ಜಳನ ಪ್ರತಿನಿಧಿಗಳಾಗಿ ಬಳ್ಳಿಗಾವೆಯ ಪ್ರದೇಶವನ್ನು ಆಳುತ್ತಿದ್ದ ಕೇಶಿಮಯ್ಯ ಮತ್ತು ಕಸಪಯ್ಯನಾಯಕರಲ್ಲಿ ಒಬ್ಬನನ್ನು ಕೌಶಿಕನೊಡನೆ ಸಮೀಕರಿಸಬಹುದೆಂದು

---

* ಬಿಜ್ಜಳನ ಸಾಮಂತರಾಗಿದ್ದ ಪಾಂಡ್ಯರ ಪ್ರಧಾನಮಂತ್ರಿ ಹೆಮ್ಮಾಡಿ ದಂಡಾಧಿಪನ ಹೆಸರು ಹರಿಹರದ ಶಾಸನದಲ್ಲಿದೆ (EC. XI. Dg. 39, 1168 A. D.). ಇವನೇ ಬಸವಪುರಾಣದ ಹೆಮ್ಮಾಡಿಯಿರಬಹುದು.

ಹಿಂದೆ ಊಹಿಸಲಾಯ್ತು. ಇಬ್ಬರೂ ಗಮನಾರ್ಹ ವ್ಯಕ್ತಿಗಳಾದ್ದರಿಂದ ಇಬ್ಬರ ಬಗ್ಗೆಯೂ ದೊರಕುವ ಸಂಗತಿಗಳನ್ನು ನೋಡಿ, ಯಾರ ಜೊತೆ ಕೌಶಿಕನನ್ನು ಸಮೀಕರಿಸ ಬಹುದೆಂಬುದನ್ನು ನಂತರ ಪರಿಶೀಲಿಸೋಣ.

ಕೇಶಿಮಯ್ಯ ದಂಡನಾಯಕ :

ಇವನ ಅನೇಕ ಶಾಸನಗಳು ಬಳ್ಳಿಗಾವೆ ಮತ್ತು ಸುತ್ತಮುತ್ತ ದೊರಕಿವೆ. ಅವು ಗಳಲ್ಲಿ ಕೆಲವು ಹೀಗಿವೆ :

೧. ಬಳ್ಳಿಗಾವೆಯಲ್ಲೇ ಇರುವ ಬಿಜ್ಜಳನ ಕಾಲದ ಶಾಸನವೊಂದು[೩] ಇವನ ಬಗ್ಗೆ ಅನೇಕ ವಿವರಗಳನ್ನು ಕೊಡುತ್ತದೆ. ಇವನು ಬ್ರಾಹ್ಮಣ. 'ಚಮೂನಾಥ ಚೂಡಾಮಣಿ' ಯಾಗಿದ್ದ ಇವನು ಸ್ಫುರದ್ರೂಪಿಯೂ ಶೂರನೂ ಆಗಿದ್ದ. ಲಕ್ಷ್ಮೀದೇವಿ ಮತ್ತು ಸಿರಿದೇವಿ ಇವನ ಪತ್ನಿಯರು. ಇವನ ಕೈಕೆಳಗೆ ಐದು ಜನ 'ಮಹತ್ತರ'ರೂ ಅನೇಕ 'ರಾಜಾಧ್ಯಕ್ಷದ ಕರಣ'ಗಳೂ ಕೆಲಸ ಮಾಡುತ್ತಿದ್ದರು. ಇಲ್ಲಿ ಬರುವ ಮಾತು ಗಳು ಹೀಗಿವೆ : "ಅಂತು ಸಮಸ್ತ ಧರ್ಮಾಧ್ಯಕ್ಷಂಗಳುಂ ರಾಜಾಧ್ಯಕ್ಷಂಗಳ್ವೆನಿಸಿದ ಕರಣಂಗಳ್ವೆರಸು ಶರಣಾಗತರಕ್ಷಾಮಣಿಯುಂ ನಿಜವಂಶಚೂಡಾಮಣಿಯುಂವೆನಿಸಿದ ದಂಡನಾಯಕ ಕೇಶವದೇವಂ ಬನವಸೆಪನ್ನಿರ್ಚ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟಪ್ರತಿ ಪಾಳನದಿಂ ಪಾಳಿಸುತ್ತಂ ರಾಜಧಾನಿ ಬಲಿಪುರ(=ಬಳ್ಳಿಗಾವೆ)ದೊಳಿರ್ದೊಂದು ದಿವಸವಾಸ್ಥಾನ ಮಂಡಳ ಮಧ್ಯಸ್ಥಿತನುಂ ಸಕಳ ಪ್ರಧಾನ ಪರಿಜನ ಪುರಜನ ಪರಿವೃತ ನಾಗಿರ್ಪುದುಮಲ್ಲಿ........." ಇಲ್ಲಿ ಬರುವ ಮಾತುಗಳನ್ನು ನೋಡಿದರೆ ಅವನು ಸಾಮಂತದೊರೆಗೆ ಸಮಾನ ಅಧಿಕಾರವನ್ನುಳ್ಳ ವ್ಯಕ್ತಿಯೆಂಬುದು ಸ್ಪಷ್ಟವಾಗುತ್ತದೆ. ಅವನು ಬಳ್ಳಿಗಾವೆಯಲ್ಲಿ ದತ್ತಿಗಳನ್ನು ಕೊಡುವಾಗ ಕಸಪಯ್ಯನ 'ಅನುಕೂಲತೆ'ಯನ್ನು ನೋಡಿ ಬಿಟ್ಟುಕೊಟ್ಟಂತೆ ವರ್ಣಿತವಾಗಿದೆ ("ಧರ್ಮೋದ್ಧಾರಕಂ ಮಹಾಪ್ರಧಾನಂ ಕಸಪಯ್ಯನಾಯಂಕನನುಕೂಲತೆಯೊಳ್"). ಕಸಪಯ್ಯನನ್ನು 'ಮಹಾಪ್ರಧಾನ' ಎಂದು ಕರೆದಿರುವುದು, ಕೇಶಿಮಯ್ಯ ತನ್ನ ಆಸ್ಥಾನದಲ್ಲಿ ಸಕಲಪ್ರಧಾನರಿಂದ ಪರಿವೃತನಾಗಿದ್ದ ನೆಂಬ ಸಂಗತಿ ಇಲ್ಲಿ ಗಮನಾರ್ಹ. ಕೇಶವದಂಡನಾಯಕನಿಗೆ ಬಳ್ಳಿಗಾವೆಯ ಕೋಡಿಯ ಮಠದ ಕಾಳಾಮುಖ ಗುರು ವಾಮಶಕ್ತಿದೇವ ಎಂಬುವರು ಆರಾಧ್ಯರಾಗಿದ್ದರೆಂದು ಶಾಸನದಲ್ಲಿ ಉಕ್ತವಾಗಿದೆ.

೨. ಮೇಲಿನ ಶಾಸನಕ್ಕಿಂತ ಒಂದು ವರ್ಷದ ಹಿಂದಿನ ತಾಳಗುಂದ ಶಾಸನ ದಲ್ಲಿ[೪] ಇವನನ್ನು ಬಿಜ್ಜಳನ ಆಶ್ರಿತನೆಂದು ಕರೆದಿದೆ. ಇವನಿಗೆ 'ಮಹಾಪ್ರಧಾನ'

[೩] EC. VII, Sk. 123, 1159 A. D.

[೪] EC. VII, Sk. 185, 1158 A. D.

ಎಂಬ ವಿಶೇಷಣವೂ ಅಲ್ಲಿ ಬಂದಿದೆ. —"ಮಹಾಪ್ರಧಾನಂ ಕೇಶವದಂಡನಾಯಕಂ ಬನವಸೆಪನ್ನಿರ್ಚ್ಛಾಸಿರಮುಮಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನದಿಂ ಪಾಳಿಸಿ ರಾಜಧಾನಿ ಬಲಿಪುರದೊಳಿರ್ದು...."- ಎಂದು ಅಲ್ಲಿ ಹೇಳಿದೆ. ಇಲ್ಲಿಯೂ ಬ್ರಾಹ್ಮಣರಿಗೆ ದತ್ತಿ ಕೊಡುವಾಗ ಕಸಪಯ್ಯ ಮತ್ತು ವಾವಣಂ (ಇವನು ತಾಳಗುಂದದ ಅಧಿಕಾರಿಯಿರಬೇಕು) ಅವರ 'ಅನುಕೂಲತೆ'ಯನ್ನು ಪಡೆದ ಎಂಬ ಮಾತು ಬರುತ್ತದೆ.

೩. ಬಿಜ್ಜಳನ ಕಾಲದ ಈ ಶಾಸನದಲ್ಲಿ[೫] ಕೇಶಿಮಯ್ಯನನ್ನು 'ಬನವಸೆನಾಡ ಹೆಗ್ಗಡೆ' ಎಂದು ಕರೆದಿದೆ.

೪. ಕ್ರಿ. ಶ. ೧೧೬೮ ರ ಬಳ್ಳಿಗಾವೆಯ ಶಾಸನ ಗಮನಾರ್ಹ.[೬] ಇದು ಬಿಜ್ಜಳನ ಆಳಿಕೆಯ ಕೊನೆಯ ವರ್ಷ ಮತ್ತು ಆ ವರ್ಷವೇ ಬಿಜ್ಜಳ ಬಹುಶಃ ಹತನಾಗಿ ಅವನ ಮಗ ರಾಯಮುರಾರಿ ಸೋವಿದೇವ ಪಟ್ಟಕ್ಕೆ ಬಂದದ್ದು. ಈ ಸೋವಿದೇವನ ಕಾಲಕ್ಕೆ ಸೇರಿದ ಈ ಶಾಸನದಲ್ಲಿ ಬರುವ 'ಬ್ಯಾಳಿಕೆಯ' ಕೇಶಿಮಯ್ಯನೂ ಹಿಂದೆ ಹೇಳಿದ ಕೇಶಿಮಯ್ಯನೂ ಅಭಿನ್ನರೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ ಅವನನ್ನು 'ಸಮಧಿಗತ ಪಂಚಮಹಾಶಬ್ದ ಮಹಾಸಾಮಂತ' ಇತ್ಯಾದಿ ವಿಶೇಷಿಸಲಾಗಿದೆ. ಇಲ್ಲಿ ತನ್ನ ಒಡೆಯನಿಗಾಗಿ ಅನೇಕ ದೇಶಗಳನ್ನು ಗೆದ್ದುಕೊಟ್ಟ ವಿಷಯವಿದೆ. ಆ ಕಾರಣದಿಂದಲೇ ಇರಬಹುದು- ಬಹುಶಃ ಅವನಿಗೆ 'ಸರ್ವಾಧಿಕಾರಿ' ಎಂಬ ಬಿರುದೂ ಇದೆ. ಈ ಶಾಸನದಿಂದ, ಅವನ ಪ್ರಭುತ್ವವು ಕೆಲವುಕಾಲ ಬನವಸೆ-೧೨೦೦೦ ನಾಡಿನ ಮೇಲೆ ಮಾತ್ರವಲ್ಲದೆ ಹಾನುಗಲ್ಲುಂ-೫೦೦ ಮತ್ತು ತದ್ದವಾಡಿ-೧೦೦೦ ಮುಂತಾದ ಪ್ರದೇಶಗಳ ಮೇಲೂ ಇತ್ತೆಂಬ ವಿಷಯ ಗೊತ್ತಾಗುತ್ತದೆ.

೫. ಮುಂದಿನ ಅವನ ಅನೇಕ ಶಾಸನಗಳು ಕ್ರಿ. ಶ. ೧೧೭೯,[೭] ಕ್ರಿ. ಶ. ೧೧೮೧[೮] ರವರೆಗೂ ದೊರಕುತ್ತವೆ. ಶಿಕಾರಿಪುರ ೧೧೯ ರ ಶಾಸನದಲ್ಲಂತೂ ಅವನಿಗೆ ಬಿಜ್ಜಳನ ನಂತರ ಆಳಿಕೆಗೆ ಬಂದ ಅವನ ಮಕ್ಕಳಲ್ಲೊಬ್ಬನಾದ ಆಹವಮಲ್ಲನು (ಸು. ೧೧೮೦-೮೩) ವಿಶೇಷವಾಗಿ 'ಬನವಸೆನಾಡ'ನ್ನು ಅದರ ತಂದೆಯಂತಿದ್ದು ಪಾಲಿಸೆಂದು ಕೊಡುತ್ತಾನೆ. ಗೌರವಾಸ್ಪದನಾಗಿದ್ದ ಅವನಿಗೆ ಈ ಹೊತ್ತಿಗೆ ವಯಸ್ಸು ಆಗಿತ್ತೆಂದು ಕಾಣುತ್ತದೆ. ಇವನಿಗೆ ಕೃಷ್ಣಕೇಶವ, ಕೃಷ್ಣವಿಭುಕೇಶವದೇವ ಎಂಬ ಹೆಸರುಗಳೂ ಇದ್ದುವೆಂದು ಈ ಶಾಸನ ಹೇಳುತ್ತದೆ. ಬಿಜ್ಜಳನ ಕಾಲದ ಶಾಸನವೊಂದರಲ್ಲಿ ಇವನನ್ನು

[೫] EC. VII, Sk. 146, C. 1160 A. D.

[೬] EC. VII, Sk. 92, 1168 A. D.

[೭] EC. VII, Sk. 123, 1179 A. D.

[೮] EC. VII, Sk. 119, 1181 A. D., Sk. 144, 1181 A. D.

'ಕರಿಯ ಕೇಶಿಮಯ್ಯ' ಎಂದು ಕರೆದಿದೆ.[೯] ಸು. ೧೧೭೦ ರ ಶಾಸನದ ಪ್ರಕಾರ ಇವನಿಗೆ ಚೋಳಿಕ್ಕ ಕೇಸಿಮಯ್ಯ ಎಂಬ ಹೆಸರೂ ಇತ್ತೆಂದು ತಿಳಿದುಬರುತ್ತದೆ.* (ಹಿಂದಿನ ಶಾಸನವೊಂದರಲ್ಲಿ ಬರುವ 'ಬ್ಯಾಳಿಕೆಯ' ಎಂಬುದು 'ಚೋಳಿಕ್ಕ' ಎಂಬುದರ ತಪ್ಪು ರೂಪವೆಂದು ತೋರುತ್ತದೆ. ಬಸವಪುರಾಣದಲ್ಲಿ ಬರುವ 'ಕರಿಯ ಕೇಶವ ಚೋಳಿಯಣ್ಣಂ' ಎನ್ನುವುದು ಒಂದೇ ಹೆಸರೆಂದು ಭಾವಿಸಿದರೆ ಅದು ಚೋಳಿಕೆಯ ಕರಿಯ ಕೇಶವದಂಡನಾಯಕನನ್ನು ಸೂಚಿಸುತ್ತದೆಯೆಂದು ಭಾವಿಸಬೇಕಾಗುತ್ತದೆ).

ಈ ಕರಿಯ ಕೇಶವನು ಬನವಸೆ-೧೨೦೦೦ ಪ್ರಾಂತವನ್ನು ಒಬ್ಬ ಹಿರಿಯ ಅಧಿಕಾರಿಯಂತೆ, ಸಾಮಂತ ದೊರೆಯಂತೆ ಸುಮಾರು ಕ್ರಿ. ಶ. ೧೧೫೮ ರಿಂದ ಕ್ರಿ. ಶ. ೧೧೮೧ ರ ವರೆಗೆ, ಎಂದರೆ ಇಪ್ಪತ್ತಮೂರುವರ್ಷಗಳಿಗೆ ಮೇಲ್ಪಟ್ಟು ಆಳಿದಂತೆ ಶಾಸನಗಳು ತಿಳಿಸುತ್ತವೆ. ಇವನ ಬಗ್ಗೆ ಯಾವುದೇ ಶಾಸನವೂ ವಿರೋಧದ ಮಾತನ್ನು ಆಡಿಲ್ಲ, ಇವನ ಪ್ರಮಾಣಿಕತೆಯನ್ನು ಶಂಕಿಸಿಲ್ಲ. ಒಂದೇ ಒಂದು ಶಾಸನದಲ್ಲಿ[೧೦] ಅವನು ಒಂದು ಊರನ್ನು ನುಗ್ಗಿ ಅಲ್ಲಿಯ ತುರುಗಳನ್ನು ಅಪಹರಿಸಿ ಆ ಊರಿನ ಸ್ತ್ರೀಯರ ಉಡೆಯನ್ನು ಅಪಹರಿಸಿದ ಎಂಬ ಮಾತು ಬರುತ್ತದೆ. ಊರನ್ನು ನುಗ್ಗಿ ಸ್ತ್ರೀಯರ ಉಡೆ ಅಪಹರಿಸುವುದು ಒಂದು ಬಗೆಯ ಸವಾಲು ಇದ್ದಂತೆ, ಅದು ಶೌರ್ಯದ ಪ್ರತೀಕ. ಕೇಶಿಮಯ್ಯನ ಪರವಾಗಿ ಊರನ್ನು ವಶಪಡಿಸಿಕೊಂಡ ಸೈನಿಕರು ಅಕಾಸ್ಮಾತ್ ಒಂದು ವೇಳೆ ಅಚಾತುರ್ಯವನ್ನೇ ಮಾಡಿದ್ದರೂ ಅದು ಕೇಶಿಮಯ್ಯನ ವೈಯಕ್ತಿಕ ಚಾರಿತ್ರಕ್ಕೆ ಕಳಂಕವನ್ನು ತರುವಂತಹುದಲ್ಲ. ಅವನು ಏನಿಲ್ಲವೆಂದರೂ ಇಪ್ಪತ್ತಮೂರು ಇಪ್ಪತ್ತೈದು ವರ್ಷಗಳಿಗೆ ಮೇಲ್ಪಟ್ಟು ದೀರ್ಘಕಾಲ ಕಳಚುರ್ಯರ ಬಳಿ ಅಧಿಕಾರಿಯಾಗಿದ್ದು, ಬಿಜ್ಜಳನ ಸಾವಿನ ನಂತರ ಉಂಟಾಗಿರಬಹುದಾದ ಕ್ಷೋಭೆಯಲ್ಲಿ ಸ್ವತಂತ್ರವಾಗಲು ಹವಣಿಸಿದ ನಾಡುಗಳನ್ನು ಸೋಲಿಸಿ ಸೋವಿದೇವನಿಗೆ ವಶಮಾಡಿ ತನ್ನ ಶೌರ್ಯ ಪ್ರಾಮಾಣಿಕತೆಗಳನ್ನು ಮೆರೆದು ಎಲ್ಲರಿಂದಲೂ ಗೌರವಾರ್ಹನಾದ ಸಮರ್ಥ ವ್ಯಕ್ತಿ, ಒಳ್ಳೆಯ ಅಧಿಕಾರಿ ಎನ್ನಿಸಿಕೊಂಡ. ಬದುಕಿರುವಾಗಲೇ ಕೀರ್ತಿವಂತನಾಗಿದ್ದ.

ಕಸಪಯ್ಯ ನಾಯಕ :

ನಮಗೆ ತಿಳಿದಂತೆ ಕಸಪಯ್ಯನ ಹೆಸರು ಹೇಳುವ ಶಾಸನಗಳಲ್ಲಿ ಮುಖ್ಯವಾದುವು ಹೀಗಿವೆ :

---

೯ EC. VII, Sk. 161, C. 1160 A. D.

* EC. VII, Sk. 181, C. 1170 A. D.

೧೦ EC. VII, Sk. 181, C. 1170 A. D. — "...ಬನವಸೆನಾಡ ಹೆಗ್ಗಡೆ ದಂಡನಾಯಕ ಚೋಳಿಕ್ಕ ಕೇಸಿಮಯ್ಯನು ಸಂತಳಿಗೆನಾಡ ಬಳಿಯ ಬಾಡದ ಅಳಹೂರನಿಱಿದು ಪೆಂಡಿರ ಉಡೆ ಉಚ್ಚಿ ಕೊಂಡು ಹೋಹಲ್ಲಿ...".

೧. ಕ್ರಿ. ಶ. ೧೧೫೯ ರ ಶಾಸನದ ಕಾಲದಲ್ಲಿ[೧೧] ಚಾಳುಕ್ಯರ ನೂರ್ಮಡಿ ತೈಲ ಆಳುತ್ತಿದ್ದ ಸಾಮಂತ ಬಿಜ್ಜಳನ ಕೀರ್ತಿ ಎಲ್ಲ ಕಡೆಗೂ ಹಬ್ಬಿದ್ದ ಕಾಲ. ಆಗ ಬಿಜ್ಜಳನ 'ಪಾದಪದ್ಮೋಪಜೀವಿ'ಯಾಗಿದ್ದ ಕಸಪಯ್ಯನು ಬನವಾಸಿ–೧೨೦೦೦ ವನ್ನು ಆಳುತ್ತಿದ್ದಂತೆ ಈ ಶಾಸನವು ವರ್ಣಿಸುತ್ತದೆ.

೨. ಸು. ೧೧೬೦ ರ ಹರಿಹರದ ಶಾಸನದಲ್ಲಿ[೧೨] ಅವನು ಬನವಾಸಿನಾಡನ್ನು ಆಳುತ್ತಿದ್ದಂತೆ ಹೇಳಿದೆ. ಮತ್ತು ಅವನನ್ನು 'ಆ ಧರಣೀಶ್ವರ(= ಬಿಜ್ಜಳ)ಪದ ಸೇವಾಧೀನಂ' ಎಂದು ವರ್ಣಿಸಿದೆ.

೩. ಅದೇ ಹರಿಹರದ ಇನ್ನೊಂದು ಶಾಸನದಲ್ಲಿ[೧೩] ಬಿಜ್ಜಳನ ಪಾದಪದ್ಮೋಪಜೀವಿಯಾಗಿದ್ದ ಕಸಪಯ್ಯನನ್ನು ಬಹುವಾಗಿ ಹೊಗಳಿದೆ.

> ಚತುರುಪಧಾವಿಶುದ್ಧಮತಿ ಚಿತ್ತಭವಪ್ರತಿರೂಪ ಸುಂದರಾ ।
> ಕೃತಿ ಸುರಶೈಲಸನ್ನಿಭಮಹೋನ್ನತಿ ವಿಪ್ರಜನೇಷ್ಟದಾನ ಸಂ ।
> ಗತಿ ರಿಪುವೃಂದ ದುರ್ಮದ ನಿವಾರಣಕಾರಣ ಚಾರು ಸಾಹಸ ।
> ಸ್ಥಿತಿ ಕಸಪಯ್ಯನಾಯಕನೊಳೆಯ್ದೆ ಜಗನ್ನುತಿವೆತ್ತು ತೋಱುಗುಂ ॥

ಇಲ್ಲಿ ಅವನನ್ನು ರಾಜ ಬಗೆಬಗೆಯಾಗಿ ಪರೀಕ್ಷಿಸಿ ಅಧಿಕಾರಕ್ಕೆ ತೆಗೆದುಕೊಂಡದ್ದು ('ಚತುರುಪಧಾವಿಶುದ್ಧ') ಅವನು ನೋಡಲು ಸುಂದರನಾಗಿದ್ದುದು, ಉದಾರಿಯೂ ಶೂರನೂ ಆಗಿದ್ದುದು ಸೂಚಿತವಾಗಿದೆ.

೪. ಕ್ರಿ. ಶ. ೧೨೧೬ರ ಬಳ್ಳಿಗಾವೆಯ ಶಾಸನವು ಬಹು ಮುಖ್ಯವಾದುದು.[೧೪] ಆ ವರ್ಷದ ಸರಿಸುಮಾರಿನಲ್ಲೇ ಕಲಚುರಿ ವಂಶದ ಸಾಮಂತ ಬಿಜ್ಜಳನು ತನ್ನ ಅಧಿರಾಜನಾಗಿದ್ದ ಚಾಲುಕ್ಯ ಚಕ್ರವರ್ತಿ ತೈಲ III ನನ್ನು ಕೊಂದು ತಾನೇ ಚಕ್ರವರ್ತಿಯೆಂದು ಅಧಿಕೃತವಾಗಿ ಘೋಷಿಸಿಕೊಂಡದ್ದು. ಆ ವರ್ಷ ಬಿಜ್ಜಳನು 'ದಕ್ಷಿಣ ದಿಗ್ಭಾಗ'ವನ್ನು ಸಾಧಿಸುವುದಕ್ಕಾಗಿ ಬಳ್ಳಿಗಾವೆಯ ಪ್ರದೇಶಕ್ಕೆ ಬಂದಾಗ, ಬಳ್ಳಿಗಾವೆಯಲ್ಲಿ ಸೇರಿದ್ದ ತುಂಬಿದ ಸಭೆಯಲ್ಲಿ ಕಸಪಯ್ಯ ಎದ್ದು ನಿಂತು, ಆ ಪಟ್ಟಣದ ಕೇದಾರೇಶ್ವರಮಠದ ಮಹಿಮೆಯನ್ನು ಹೊಗಳಿ ಬಿಜ್ಜಳನಿಂದ ದತ್ತಿಗಳನ್ನು ಕೊಡಿಸುತ್ತಾನೆ. ಕ್ರಿ. ಶ. ೧೧೬೨ ರ ಈ ಶಾಸನದ ಪ್ರಕಾರ, ಕಸಪಯ್ಯನ ಅನುಮತಿಯ ಮೇರೆಗೆ ಬನವಸೆನಾಡನ್ನು ಬಮ್ಮರಸ ಎಂಬುವನು ಆಳುತ್ತಿದ್ದ. ಈ ಶಾಸನವು ಕಸಪಯ್ಯನನ್ನು ಬಿಜ್ಜಳನ

೧೧ EC. VIII, Sb. 328, 1159 A. D. (ಹುಡುಕಿದರೆ ಕಸಪಯ್ಯನ ಇನ್ನೂ ಹಿಂದಿನ ಶಾಸನಗಳು ದೊರಕಬಹುದು)

೧೨ EC. XI, Dg. 35, C. 1160 A. D.

೧೩ EC. XI, Dg. 42, C. 1162 A. D.

೧೪ EC. VII, Sk. 102, 1162 A. D.

ಪಾದಪದ್ಮೋಪಜೀವಿಯೆಂದು, ಶಿವನ ಭಕ್ತನೆಂದು, ಮಹಾನುಭಾವನೆಂದು ಹೊಗಳಿದೆ. ಇತರರು ಅಧಿಕಾರ ನಡೆಯಿಸಿ ಹಾಳುಮಾಡಿದ ದೇಶವನ್ನು ತಾನು ಕೈಗೊಂಡು ಅದನ್ನು ಊರ್ಜಿತಪಡಿಸಬಲ್ಲವನು ಎಂದು ಶಾಸನವು ಹೊಗಳುವ ನೆಪದಲ್ಲಿ, ಯಾವುದೋ ಮುಖ್ಯ ಐತಿಹಾಸಿಕ ಸಂಗತಿಯೊಂದನ್ನು ಸೂಚಿಸುವಂತೆ ತೋರುತ್ತದೆ.

೫. ಕ್ರಿ. ಶ. ೧೧೬೫ ರ ಬಿಜ್ಜಳನ ಕಾಲದ ಶಾಸನದಲ್ಲಿ ಹೀಗಿದೆ[೧೫] – "ತತ್ಪಾದೋಪಜೀವಿ ಕಸಪಯ್ಯನಾಯಕಂ ಬನವಸೆ ಪನ್ನಿಚ್ಛಾಸಿರಮುಮಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನದಿಂ ಬಳ್ಳಿಗ್ರಾಮೆಯೊಳು ರಾಜ್ಯಂಗೆಯ್ಯುತ್ತಮಿರೆ....". ಕಸಪಯ್ಯನು ಬಳ್ಳಿಗಾವೆಯಲ್ಲಿಯೇ ಇದ್ದ ಅಧಿಕಾರಿಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೬. ಕಸಪಯ್ಯನ ಹೆಸರು ಕೇಶಿಮಯ್ಯ ದಂಡನಾಯಕನ ಎರಡು ಶಾಸನಗಳಲ್ಲಿ ಬರುವುದನ್ನೂ ಕೇಶಿಮಯ್ಯ ದಾನಗಳನ್ನು ಕೊಡುವಾಗ ಕಸಪಯ್ಯನ ಒಪ್ಪಿಗೆ ಪಡೆಯುವುದನ್ನೂ ಆಗಲೇ ನೋಡಿದ್ದೇವೆ.

ಕಸಪಯ್ಯ ಮತ್ತು ಕೇಶಿಮಯ್ಯರಿಬ್ಬರೂ ಏಕಕಾಲಕ್ಕೆ ಬನವಸೆ–೧೨೦೦೦ ನಾಡನ್ನು ಆಳುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುವುದು ತೀರ ಸಹಜವಾಗಿದೆ. ಅವರ ಕಾಲದಲ್ಲಿಯೇ ಮತ್ತೆ ಇಬ್ಬರು ಬನವಸೆನಾಡನ್ನು ಆಳುತ್ತಿದ್ದ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ, ಕ್ರಿ. ಶ. ೧೧೬೫ ರಲ್ಲಿ ಬಿಜ್ಜಳನ ಇಷ್ಟದ ಪ್ರಕಾರ ಬನವಸೆ ನಾಡನ್ನು ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲನೆಯ ಮೂಲಕ ಶ್ರೀಮನ್ಮಹಾಪ್ರಧಾನ ಮಹಾದೇವ ದಂಡನಾಯಕ ಆಳುತ್ತಿದ್ದನು.[೧೬] ಕ್ರಿ. ಶ. ೧೧೫೬ ರಲ್ಲಿ ಬನವಸೆನಾಡಿನ ವಡ್ಡರಾವುಳ ಹೆಜ್ಜುಂಕಗಳ ಹೆಗ್ಗಡೆಯಾಗಿ ದಂಡನಾಯಕ ಮಾಯಿದೇವರಸ ರಾಜಧಾನಿ ಬಳ್ಳಿಗಾವೆಯಲ್ಲಿದ್ದ.[೧೭] ಸು. ೧೧೬೦ ರಲ್ಲಿ ಬಿಜ್ಜಳ ಕಲ್ಯಾಣದಲ್ಲಿ ಆಳುತ್ತಿರುವಾಗ ಅವನ ಪಾದಪದ್ಮೋಪಜೀವಿ ಸೋವಿದೇವರಸ ಬನವಸೆ ಪನ್ನಿಚ್ಛಾಸಿರವನ್ನು ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲನ ಪೂರ್ವಕವಾಗಿ ಆಳುತ್ತಿದ್ದ.[೧೮] ಇವನು ಅಣಂದೂರನ್ನು ಅಗ್ರಹಾರವಾಗಿ ಪರಿವರ್ತಿಸಲು ರಾಜನ ಅಪ್ಪಣೆ ಪಡೆದು 'ಶ್ರೀಮದ್ದೇಶಾಧಿಕಾರಿಕ'ನಾದ (local governor ?) ಕಸಪಯ್ಯನಾಯಕ ಸಹಿತವಾಗಿ ಅದನ್ನು ದಾನ ಮಾಡುತ್ತಾನೆ.

---

೧೫ EC. VII, Sk. 277, 1165 A. D.

೧೬ EC. VII, Sk. 108, 1164 A. D., EC. VIII, Sb. 277, C. 1165 A. D.

೧೭ EC. VII, Sk. 104, 1156 A. D.

೧೮ EC. VIII, Sb. 346, 1160 A. D.

ಎಂದರೆ, ಏಕಕಾಲಕ್ಕೆ ಬನವಾಸಿ–೧೨೦೦೦ ದಂತಹ ವಿಸ್ತಾರವಾದ ನಾಡಿಗೆ ಅನೇಕ ದೊಡ್ಡ ಅಧಿಕಾರಿಗಳು, ಶ್ರೀಮನ್ಮಹಾಪ್ರಧಾನರು ಇದ್ದಿರುವುದು ಆಶ್ಚರ್ಯವೇನೂ ಅಲ್ಲ. ಆ ನಾಡಿನ ಮುಖ್ಯ ರಾಜಧಾನಿ ಬಳ್ಳಿಗಾವೆಯಾಗಿದ್ದಿತೆಂಬುದರಲ್ಲಿ ಅನುಮಾನವಿಲ್ಲ. ಆ ಬೇರೆಬೇರೆ ಅಧಿಕಾರಿಗಳು ಆ ನಾಡಿನ ಬೇರೆಬೇರೆ ಭಾಗಗಳಲ್ಲಿ ಆಳುತ್ತಿದ್ದಿರಬಹುದು; ಅಥವಾ ಬೇರೆಬೇರೆ ಖಾತೆಗಳನ್ನು ನೋಡಿಕೊಳ್ಳುತ್ತಿರಬಹುದು. ಕೇಶಿಮಯ್ಯ ದಂಡನಾಯಕ ರಾಜಧಾನಿ ಬಳ್ಳಿಗಾವೆಯಲ್ಲಿದ್ದ ಎಂಬ ಮಾತು ಬಂದಿದೆಯೇ ಹೊರತು ಅದನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ ಎಂಬ ಸಂಗತಿ ಸ್ಪಷ್ಟವಾಗಿ ಉಕ್ತವಾಗಿಲ್ಲ. ಆದರೆ ಕಸಪಯ್ಯ ಬಳ್ಳಿಗಾವೆಯಿಂದ ರಾಜ್ಯಭಾರಮಾಡುತ್ತಿದ್ದ ಎಂಬ ಮಾತು ಸ್ಪಷ್ಟವಾಗಿ ಬಂದಿದೆ. ಕೇಶಿಮಯ್ಯನಾಗಲಿ ಸೋಯಿದೇವನಾಗಲಿ ದತ್ತಿಗಳನ್ನು ಬಿಡುವಾಗ ಕಸಪಯ್ಯನ ಒಪ್ಪಿಗೆ ಪಡೆಯುತ್ತಾರೆಂಬುದು ಗಮನಿಸಬೇಕಾದ ಸಂಗತಿ. ಇವರೆಲ್ಲರೂ ಮಹಾಪ್ರಧಾನರು, ಬನವಸೆನಾಡನ್ನು ಆಳುತ್ತಿದ್ದವರು ಮತ್ತು ಬಹುಶಃ ಸಮಾನರು. ನಮಗೆ ಇವರಲ್ಲಿ ಯಾರು ಮೇಲು, ಯಾರು ಅಧೀನರು ಎಂಬುದು ಸಧ್ಯಕ್ಕೆ ಅಪ್ರಮುಖ. (ಬಳ್ಳಿಗಾವೆಗೆ ಬಿಜ್ಜಳ ಬಂದಾಗ, ಎಲ್ಲರ ಪರವಾಗಿ ಕಸಪಯ್ಯ ಮಾತನಾಡಿದ ಎಂಬ ಸಂಗತಿ ಅವನಿಗಿದ್ದ ಪ್ರಾಮುಖ್ಯವನ್ನು ಸೂಚಿಸಬಹುದು). ಬಳ್ಳಿಗಾವೆ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳು ಕಸಪಯ್ಯನ ನೇರ ಆಳಿಕೆಗೊಳಪಟ್ಟಿದ್ದುವೆಂಬುದು ನಮಗೆ ಪ್ರಸ್ತುತ ಸಂಗತಿ ಮತ್ತು ಬಹು ಮುಖ್ಯ ಸಂಗತಿ.

ಕೇಶಿಮಯ್ಯ ಮತ್ತು ಕಸಪಯ್ಯರು ಆ ಪ್ರದೇಶದ ಪ್ರಬಲವ್ಯಕ್ತಿಗಳಾಗಿರುವುದರಿಂದ ಅವರ ವಿಷಯವನ್ನೇ ಇನ್ನೂ ಹೆಚ್ಚು ಆಳವಾಗಿ ಪರಿಶೀಲಿಸುವುದು ಅಗತ್ಯ. ಕೇಶಿಮಯ್ಯನಿಗೆ ವಿವಾಹವಾಗಿತ್ತು, ಅವನಿಗೆ ಇಬ್ಬರು ಹೆಂಡಿರು ಇತ್ಯಾದಿ ವೈಯಕ್ತಿಕ ಸಂಗತಿಗಳು ತಿಳಿದಿವೆ. ಅವನ ವಂಶವು ಸಾಕಷ್ಟು ಪ್ರಸಿದ್ಧವಾಗಿದ್ದಿತು (ಅವನ ಹಿಂದಿನ ನಾಲ್ಕು ತಲೆಮಾರುಗಳ ವಂಶವೃಕ್ಷವನ್ನು ಶಾಸನವೊಂದು ಕೊಟ್ಟಿದೆ). ಕಸಪಯ್ಯನಿಗೆ ಸಂಬಂಧಿಸಿದಂತೆ ಇಷ್ಟು ವಿವರಗಳು ದೊರಕುವುದಿಲ್ಲ. ಕೊನೆಗೆ ಅವನು ವಿವಾಹಿತನೇ ಎಂಬ ಸಂಗತಿಯೂ ತಿಳಿಯದು. ಇದರಿಂದ ಅವನು ಅವಿವಾಹಿತನಾಗಿದ್ದ ಎಂಬ ತೀರ್ಮಾನಕ್ಕೆ ಬರುವುದು ಬಹಳ ಅವಸರದ ತೀರ್ಮಾನವೆನ್ನಿಸಿಕೊಳ್ಳಬಹುದು. ಕೇಶಿಮಯ್ಯನ ಆಳಿಕೆ ಬಿಜ್ಜಳನ ಕಾಲವಾದ ಮೇಲೂ ಎಷ್ಟೋ ವರ್ಷ ಮುಂದುವರಿಯಿತು. ಇದು ಅವನ ಬಗ್ಗೆ ರಾಜರಿಗಿದ್ದ ವಿಶ್ವಾಸ, ಗೌರವಗಳ ಪ್ರತೀಕವಿರಬಹುದು. ಕಸಪಯ್ಯನ ಅಧಿಕಾರದ ಅವಧಿ ಸು. ೧೧೪೫ ರಿಂದ ಕ್ರಿ. ಶ. ೧೧೬೫ ರ ವರೆಗೆ. ಬಿಜ್ಜಳನ ಕೈಕೆಳಗೆ ಕೆಲಸ ಆರಂಭಿಸಿ ಅವನ ಕಾಲದಲ್ಲೇ ಅವನು ಅಧಿಕಾರದಿಂದ ಬಿಡುಗಡೆ ಹೊಂದಿದಂತೆ ತೋರುತ್ತದೆ. (ಏಕೆಂದರೆ, ಬಿಜ್ಜಳನ ಕೊನೆಯ ತೇದಿ ಕ್ರಿ. ಶ. ೧೧೬೮ ಆದರೆ, ಕಸಪಯ್ಯನ ಕೊನೆಯ ತೇದಿ, ನನಗೆ ತಿಳಿದಂತೆ ಕ್ರಿ. ಶ. ೧೧೬೫). ಇದಕ್ಕೆ ಕಾರಣವೇನಿರಬಹುದು ಎಂಬುದನ್ನು ಊಹಿಸಲು ಬಿಜ್ಜಳನ ಮಗ ರಾಯಮುರಾರಿ

ಸೋವಿದೇವನ ಕಾಲದ ಕ್ರಿ. ಶ. ೧೧೭೨ ರ ಹರಸೂರ್ ಶಾಸನವು ಸಹಾಯಮಾಡು ವಂತಿದೆ. ಅವನು ಎಂದರೆ ಕಸಪಯ್ಯನು ಕಳಚುರಿ ರಾಜ್ಯದಲ್ಲಿ ಬಲಿಷ್ಠನಾಗಿದ್ದ ದುರ್ಮಂತ್ರಿಯಾಗಿದ್ದನೆಂದೂ ಅವನಿಂದ ಆ ರಾಜ್ಯಕ್ಕೆ ಕೇಡು ಒದಗಿತ್ತೆಂದೂ ಆ ಶಾಸನವು ಸ್ಪಷ್ಟವಾಗಿ ಹೇಳುತ್ತದೆ.[೧೯]

ಕಳಚುರಿ ನೃಪಕುಳ ರಾಜ್ಯಂ
ಬಳವದ್ದುರ್ಮಂತ್ರಿ ಕಸಪಯಾದಿಗಳಿಂ ।
ಗಳಕುಳವಾಗಿರೆ ನಿಜದೋ
ರ್ಬಳದಿಂದಳವಡಿಸಿ ಮಾಧವಂ ಪೆಸರ್ವಡೆದಂ ॥

ಅದೆಂತೆನೆ ॥

ಆಕ್ರಮಿಸಿ ರಾಜ್ಯಲಕ್ಷ್ಮಿಯ
ನಕ್ರಮದಿಂದಾಳ್ದ ಕರ್ಣನಂ ಕೊಂದು ಧರಾ
ಚಕ್ರಮನಳವಡಿಸಿತ್ತನ
ನುಕ್ರಮದಿಂ ಸೋಮನೃಪನ ಭುಜಮಂಡಳದೊಳ್ ॥

ಕಸಪಯ್ಯ, ಬಿಜ್ಜಳ ಬದುಕಿರುವಾಗಲೇ ತನ್ನ ಅಧಿಕಾರವನ್ನು ಕಳೆದುಕೊಂಡಿರಬೇಕೆಂದು ಹಿಂದೆಯೇ ಸೂಚಿಸಲಾಗಿದೆ. ತಾನು ಅಧಿಕಾರಚ್ಯುತನಾದದ್ದಕ್ಕೆ ಪ್ರತೀಕಾರವನ್ನು ಸಾಧಿಸಲು ಮತ್ತು ತನ್ನ ಅಧಿಕಾರವನ್ನು ಮತ್ತೆ ಪಡೆದುಕೊಳ್ಳಲು ಅವನು ಹೊಂಚು ಹಾಕುತ್ತಿದ್ದು, ಬಿಜ್ಜಳನ ಸಾವು (ಸು. ೧೧೬೮) ಅದಕ್ಕೆ ಪ್ರಚೋದನೆ ನೀಡಿರಬೇಕು. ಬಿಜ್ಜಳ ಮಡಿದ ಮೇಲೆ ಅವನ ಮೊದಲ ಮಗನಾದ ವಜ್ರದೇವನ ಮಗ ಕರ್ಣನನ್ನು ಎತ್ತಿಕಟ್ಟಿ ಅವನಿಂದ ರಾಜ್ಯಾಪಹಾರ ಮಾಡಿಸುವ ಪ್ರಯತ್ನವನ್ನು ಕಸಪಯ್ಯ ಮಾಡಿದಂತೆ ಮೇಲಿನ ಹರಸೂರ್ ಶಾಸನವು ಸೂಚಿಸುತ್ತದೆ.[೨೦] ಆ ಪ್ರಯತ್ನವನ್ನು ಮಾಧವನು ವಿಫಲಗೊಳಿಸಿ ರಾಜ್ಯವನ್ನು ಬಿಜ್ಜಳನ ಎರಡನೆಯ ಮಗ ರಾಯಮುರಾರಿ ಸೋವಿದೇವ ನಿಗೆ ಕೊಡಿಸಿಕೊಟ್ಟಂತೆ ಅದೇ ಶಾಸನವು ಹೇಳುತ್ತದೆ. ಬಿಜ್ಜಳನ ಕಾಲದಲ್ಲಿಯೇ ಕಸಪಯ್ಯ ಮಾಡಿರಬಹುದಾದ ಅನಪೇಕ್ಷಣೀಯವಾದ ಕಾರ್ಯವೆಂದರೆ ಅಕ್ಕಮಹಾದೇವಿ ಯನ್ನು ಬಲವಂತದಿಂದ ವಿವಾಹವಾದದ್ದು ಎಂದು ಸದ್ಯಕ್ಕೆ ನನ್ನ ಊಹೆಯಾಗಿದೆ. ಹರಸೂರ್ ಶಾಸನದ ಬಳಿಕ ಮತ್ತೆ ಕಸಪಯ್ಯನ ಹೆಸರು ಎಲ್ಲೂ ಕೇಳಿಬರುವುದಿಲ್ಲ. ಮಾಧವ ದಂಡನಾಯಕನಿಂದ ಅವನು ಹತನಾಗಿರಲೂ ಸಾಧ್ಯ.

---

೧೯ P. B. Desai : Sri Basaveshvara and his Times, pp. 88-9.

೨೦ ಈ ಪ್ರಯತ್ನದಲ್ಲಿ ಅವನು ಸ್ವಲ್ಪ ಸಫಲನೂ ಆಗಿರಬಹುದು. ಏಕೆಂದರೆ ಬಿಜ್ಜಳನು ಅಳಿದ ಮೇಲೆ ಕರ್ಣನು ಪಟ್ಟಕ್ಕೆ ಬಂದಂತೆ ರಾಘವಾಂಕನ ಸಿದ್ಧರಾಮಚಾರಿತ್ರದಲ್ಲಿ ಹೇಳಿಕೆಯಿದೆ. (9. 1-2). ಈ ಕೃತಿಯ ಪ್ರಕಾರ ಕರ್ಣನು ಬಿಜ್ಜಳನ ತಮ್ಮ. ತನಗೆ 'ಸ್ಥಿರಪಟ್ಟ'ವನ್ನು ಕಟ್ಟಲಿಕ್ಕಾಗಿ ಮಂತ್ರಿಗಳ ಮೂಲಕ ಸಿದ್ಧರಾಮನಿಗೆ ಹೇಳಿಕಳುಹಿಸುತ್ತಾನೆ. ಕರ್ಣ ಆಳಿದ್ದು ಬಹು ಸ್ವಲ್ಪಕಾಲ ಮಾತ್ರ ಎಂದು ಹರಸೂರ್ ಶಾಸನವೇ ಹೇಳುತ್ತದೆ.

ಎಂದರೆ ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ಬರುವ ಕೌಶಿಕನು ಶಾಸನಗಳಲ್ಲಿ ಬರುವ ಕಸಪಯ್ಯನೇ ಇರಬಹುದೆಂಬುದು ನನ್ನ ಸಧ್ಯದ ನಂಬಿಕೆ ಎಂಬುದನ್ನು ಇನ್ನೊಮ್ಮೆ ಹೇಳಲು ಬಯಸುತ್ತೇನೆ.

ಬಳ್ಳಿಗಾವೆಯ ಪ್ರದೇಶ, ಅನೇಕ ಶಿವಶರಣರ ನಾಡು. ಉದಾಹರಣೆಗೆ ಅಲ್ಲಮ, ಬಳ್ಳಿಗಾವೆಯವನು (ಬಹುಶಃ ಅಕ್ಕಮಹಾದೇವಿ, ಕೌಶಿಕ ಅರ್ಥಾತ್ ಕಸಪಯ್ಯನ ವಿಷಮ ದಾಂಪತ್ಯಕ್ಕೆ ಮುನ್ನವೇ ಅವನು ಬಳ್ಳಿಗಾವೆ ಬಿಟ್ಟು ಹೋಗಿದ್ದಿರಬಹುದು). ಈಗಿನ ಉಡುಗಣಿ–ತಡುಗಣಿಗಳೇ ಹಿಂದಿನ ಉಡುತಡಿಯೆಂದು ಜನರಲ್ಲಿ ಪ್ರಬಲ ನಂಬಿಕೆಗಳಿವೆ. ಉಡುಗಣಿಯ ಊರ ಹೊರಗಿನ ಕೋಟೆ, ಪರದೇಶಿ ಮಲ್ಲಪ್ಪನ ಗುಡಿ ಇತ್ಯಾದಿಗಳಿಗೂ ಕೌಶಿಕ, ಅಕ್ಕಮಹಾದೇವಿಯರಿಗೂ ಸಂಬಂಧ ಕಲ್ಪಿಸುತ್ತಾರೆ. ಅಕ್ಕಮಹಾದೇವಿಯ ಕಾಲ ಸು. ೧೧೬೦–೬೫; ಆ ಕಾಲದಲ್ಲಿ ಅಲ್ಲಿ 'ಆಳು'ತ್ತಿದ್ದವನು ಕಸಪಯ್ಯನೇ ಆದುದರಿಂದ, ಅವನೇ ಕೌಶಿಕ ಎಂಬುದಕ್ಕೆ ಅದೇ ನನಗೆ ಪ್ರಬಲ ಆಧಾರ. ಬಿಜ್ಜಳನ ಬಲಗೈಯಂತೆ ಇದ್ದು, ಅವನ ರಾಜ್ಯಾಪಹರಣ ಕಾರ್ಯದಲ್ಲಿ ಪ್ರಮುಖಪಾತ್ರವನ್ನು ವಹಿಸಿ, ರಾಜನ ವಿಶ್ವಾಸಪಾತ್ರನಾಗಿ, ದರ್ಪದಿಂದ ಆಳುತ್ತ, ಬಹುಶಃ ಅವಿವಾಹಿತನಾಗಿದ್ದ ಅವನು ಅಕ್ಕಮಹಾದೇವಿಯನ್ನು ಬಯಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಸರ್ವಾಧಿಕಾರಿಯಾಗಿದ್ದ ಅವನು ಅವಳ ತಾಯ್ತಂದೆಯರ ಮೇಲೆ ಒತ್ತಾಯವನ್ನು ಹಾಕಿದ್ದೂ ಅಸಹಜವಾಗಿ ತೋರುವುದಿಲ್ಲ. ಅವಳ ತಾಯ್ತಂದೆಯರು ಶಿವಭಕ್ತರಾಗಿದ್ದರು; ಅವಳು ಹುಟ್ಟಿದಾಗ ಅವಳ ತಂದೆ 'ಶೈವಾಚಾರ್ಯ'ರಿಂದ ಗುರುಕಾರುಣ್ಯವನ್ನು ಮಾಡಿಸಿದಂತೆ ಹರಿಹರ ಸೂಚಿಸುತ್ತಾನೆ. ಅವರ ತಾಯ್ತಂದೆಯರ ಮನೆಗೂ ಮದುವೆಯಾದಮೇಲೆ ಅವಳ ಅರಮನೆಗೂ 'ಮಹಾಮಾಹೇಶ್ವರ'ರು ಬರುತ್ತಿದ್ದರಂತೆ. ಒಂದುದಿನ ಅವಳ ಮನೆಗೆ ಬಂದ ಅವಳ ಗುರುಗಳ ವರ್ಣನೆ ಹೀಗಿದೆ[೨೧] "ನೀಳ್ದ ಕೆಂಜಡೆಗಳ ತಾಳ್ದ ಕರ್ಣಕುಂಡಲದ ಕಕ್ಷದೊಳ್ ಮೆರೆವ ಶಿವಲಿಂಗದ ಸರ್ವಾಂಗ ಭಸಿತೋದ್ಧೂಳನದ ಉಟ್ಟ ಧವಳಾಂಬರದ ತೊಟ್ಟ ರುದ್ರಾಕ್ಷಿಯ ಮೆಟ್ಟಿದ ಹಾವುಗೆಯ ಮುಂದಣ ಮಾಹೇಶ್ವರರ ಹಿಂದಣ ಶಿಷ್ಯವರ್ಗದ ವಿಳಾಸಂ ಪುಣ್ಯಲಾವಣ್ಯಮಂ ಪಸರಿಸೆ ಮಹಾದೇವಿಯಾರಾಧ್ಯರ್ ಭೋಂಕನೆ ಬರೆ....". ಬಳ್ಳಿಗಾವೆಯಲ್ಲಿ ಅನೇಕ ಶೈವ ಮಠಗಳಿದ್ದುವೆಂಬುದನ್ನೂ ಅವುಗಳಲ್ಲಿ ಒಂದಾದ ಕೋಡಿಯಮಠದ ಖ್ಯಾತಿ ಎಲ್ಲೆಡೆಗೂ ಹಬ್ಬಿತ್ತೆಂಬುದನ್ನು ಗಮನಿಸಿದಾಗ, ಅವಳ ತವರುಮನೆಯಾದ ಉಡುಗಣಿಯೂ ಗಂಡನ ಊರಾದ ಪಕ್ಕದ ಬಳ್ಳಿಗಾವೆಯಾಗಲಿ ಶೈವ ವಾತಾವರಣದಲ್ಲಿದ್ದಂಥವು ಎಂಬುದು ಸ್ಪಷ್ಟವಾಗುತ್ತದೆ. ಇದೂ ಕೂಡ ಉಡುಗಣಿಯು ಈಗಿನ ಉಡುಗಣಿ–ತಡುಗಣಿಯೇ ಎಂಬುದನ್ನು ಸಮರ್ಥಿಸುತ್ತದೆ.

---

೨೧ ಮಹಾದೇವಿಯಕ್ಕನ ರಗಳೆ (ಸಂ. ಚನ್ನಮಲ್ಲಿಕಾರ್ಜುನ), ಪು. ೫೪–೫.

ಕೌಶಿಕ (ಕಸಪಯ್ಯ)ನನ್ನು ತ್ಯಜಿಸಿದ ಅಕ್ಕಮಹಾದೇವಿ ಕಲ್ಯಾಣಕ್ಕೆ ಹೋದದ್ದರಲ್ಲಿ ಏನೋ ಅರ್ಥವೂ ಇರುವಂತೆ ಕಾಣುತ್ತದೆ. ಕಲ್ಯಾಣವು ಬಸವ, ಅಲ್ಲಮ, ಚನ್ನಬಸವರಿದ್ದ ಪಟ್ಟಣ– ಆ ಶಿವಶರಣರ ಮುಂದೆ ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುವ ಉದ್ದೇಶ ಅವಳಿಗಿರಬಹುದು (ಅವರ ದರ್ಶನ ಮಾಡುವ ಉದ್ದೇಶವಂತೂ ಸರಿಯೇ). ತನಗೆ ಅನ್ಯಾಯಮಾಡಿದ ಕಸಪಯ್ಯನ, (ಅಥವಾ ತನ್ನಿಂದ ಅನ್ಯಾಯವನ್ನು ಅನುಭವಿಸಿದವನೆಂದು ಲೋಕ ಭಾವಿಸಿರಬಹುದಾದ ಕಸಪಯ್ಯನ) ಅಧಿರಾಜನಾದ ಬಿಜ್ಜಳನ ರಾಜಧಾನಿಯೂ ಹೌದು. ಬಿಜ್ಜಳನ ಬಳಿ ದೂರು ಹೇಳುವುದಕ್ಕಾಗಿ ಹೋದಳು ಎಂಬ ಸೂಚನೆಯು ದೂರದ ಊಹೆಯಾಗುತ್ತದೆ. ಆದರೆ ವಾಸ್ತವ ಸಂಗತಿ ಏನು ಎಂಬುದು ರಾಜಧಾನಿಯವರಿಗೆ ತಿಳಿಯಲಿ ಎಂಬ ಸಹಜ ಉದ್ದೇಶ ಅವಳಿಗಿರಲಿಲ್ಲ ಎಂದು ಹೇಳುವುದು ಹೇಗೆ ? ಅವಳಿಗಾದ ಅನ್ಯಾಯವು ಅವಳಿಂದಲ್ಲದಿದ್ದರೂ ಇತರ ಜನಗಳ ಮೂಲಕವಾಗಿಯಾದರೂ ಬಿಜ್ಜಳನಿಗೆ ಗೊತ್ತಾಗಿ ಕಸಪಯ್ಯನನ್ನು ಅಧಿಕಾರದಿಂದ ತೆಗೆದುಹಾಕಲು ಪ್ರಚೋದನೆ ನೀಡಿರಬಹುದು. ಮುಂದೆ ಕಸಪಯ್ಯ ಮತ್ತೆ ಅಧಿಕಾರವನ್ನು ಪಡೆಯಲು ಪ್ರಯತ್ನಿಸಿ ವಿಫಲನಾದ ಎಂಬುದನ್ನು ಆಗಲೇ ನೋಡಿದ್ದೇವೆ.

ಕಸಪಯ್ಯ ಎಂಬುದು ಹರಿಹರನ ಕಾಲಕ್ಕೆ 'ಕೌಸಿಕ' ಹೇಗಾಯಿತು ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾದರೂ ಅಸಾಧ್ಯವೇನೂ ಅಲ್ಲ. ಕಸಪಮಂತ್ರಿ > ಕಸವಮಂತ್ರಿ ಎಂದಾಗಿರುವುದನ್ನು ಬಸವಪುರಾಣದಲ್ಲಿ ಬಂದಿರುವ ಉಲ್ಲೇಖ ಹೇಳುತ್ತದೆ.

ಕಸಪಯ್ಯನಾಯಂಕ > ಕಸವಯ್ಯನಾಯಂಕ > (ವರ್ಣಪಲ್ಲಟದಿಂದ) *ಕವಸಯ್ಯನಾಯಂಕ[೨೨] > *ಕೌಸಿ(ನಾಯಂ)ಕ > ಕೌಶಿಕ.

ಅಕ್ಕಮಹಾದೇವಿ ಕಾಲಕ್ಕೂ ಹರಿಹರನ ಕಾಲಕ್ಕೂ ಸುಮಾರು ೫೦–೬೦ ವರ್ಷಗಳ ಅಂತರವಿದೆ. ಜೊತೆಗೆ ಕಸಪಯ್ಯನಾಯಕನ ಹೆಸರು ಜನತೆಯ ಬಾಯಲ್ಲಿ ಮಾರ್ಪಟ್ಟು, ಸಂಸ್ಕೃತೀಕರಣಗೊಂಡು 'ಕೌಶಿಕ' ಎಂದಾಗಿರಬಹುದು ('ಕೌಶಿಕ' ಎಂದರೆ ಗೂಬೆ ಎಂಬ ಅರ್ಥವೂ ಸಂಸ್ಕೃತದಲ್ಲಿರುವುದು ತನ್ಮೂಲಕ ವ್ಯಂಗ್ಯ ತಿರಸ್ಕಾರಗಳನ್ನು ಧ್ವನಿಸುವುದು ಸಾಧ್ಯವಾಗುತ್ತದೆ). 'ಕೇಶಿಮಯ್ಯನಾಯಕ' ಎಂಬ ಹೆಸರು 'ಕೌಶಿಕ' ಎಂದಾಗಿರಬಹುದೆಂಬುದನ್ನು ಮೇಲಿನಷ್ಟು ಇದ್ದುದರಲ್ಲಿ ಸಮರ್ಪಕವಾಗಿ ಸಾಧಿಸಿ ತೋರಿಸಲಾಗುವುದಿಲ್ಲವಾದ್ದರಿಂದ ಕೇಶಿಮಯ್ಯ ಮತ್ತು ಕೌಶಿಕರ ಸಮೀಕರಣೆಯನ್ನು ಆ ಕಾರಣದಿಂದಲೂ ಬಿಟ್ಟುಬಿಡಬಹುದು. ಕಸಪಯ್ಯನಾಯಕನೇ ಕೌಶಿಕ ಎಂಬುದನ್ನು ನಾವು ಸಮರ್ಥಿಸಲು ಸಾಧ್ಯವಿಲ್ಲದಿದ್ದರೆ, ಕೌಶಿಕ ಎಂಬುವನನ್ನು ಇತಿಹಾಸದಲ್ಲಿ ಗುರುತಿಸುವ ಪ್ರಯತ್ನವನ್ನು ಸಧ್ಯಕ್ಕೆ ಕೈಬಿಡಬೇಕಾಗುತ್ತದೆ.

* ನಕ್ಷತ್ರ ಚಿಹ್ನೆಯು ಕಲ್ಪಿತರೂಪವೆಂಬುದನ್ನು ಸೂಚಿಸುತ್ತದೆ.

ಕೆಲವು ವರ್ಷಗಳ ಹಿಂದೆ ಕಸಪಯ್ಯನಾಯಕನೇ ಬಸವಣ್ಣ ಎಂಬ ಊಹೆಯು ಹೊರಟಿತ್ತು. ಈಗ ಅದು ನಿಂತುಹೋಗಿದೆ. ಮತ್ತೆ ಇಲ್ಲಿ ಕಸಪಯ್ಯನಾಯಕನ ಹೆಸರನ್ನು ಎತ್ತಿ ಹಿಡಿದಿರುವುದು ಕೆಲವರಿಗೆ ಅನಗತ್ಯವಾಗಿ ವಿಲಕ್ಷಣವಾಗಿ ತೋರಬಹುದು. ಕಸಪಯ್ಯನು ಬಸವಣ್ಣ ಆಗಿರದಿದ್ದರೆ, ಅವನು ಕೌಶಿಕ ಅಲ್ಲ ಎಂಬುದಕ್ಕೆ ಅದು ಸಮರ್ಥನೆ ಆಗುವುದಿಲ್ಲ. ಎಂದರೆ ಕಸಪಯ್ಯನೇ ಕೌಶಿಕ ಆಗಿರಬಹುದು ಎಂಬ ನನ್ನ ವಾದದ ಸತ್ಯಾಸತ್ಯತೆಯು ಅದರ ಗುಣ–ದೌರ್ಬಲ್ಯಗಳಿಂದಲೇ ತೀರ್ಮಾನವಾಗಬೇಕು ಎಂಬುದನ್ನು ಇಲ್ಲಿ ಸೂಚಿಸುವುದು ಅಗತ್ಯವಾಗಿದೆ.

ಅನುಬಂಧ ೧

ಶಾಸನವೊಂದರಲ್ಲಿ ಹುಲುಮಠದ ಉಲ್ಲೇಖ :

ಅಕ್ಕಮಹಾದೇವಿ ತನ್ನ ಗಂಡ ಕೌಶಿಕನನ್ನು ತ್ಯಜಿಸಿ ಶ್ರೀಶೈಲಕ್ಕೆ ಹೊರಟುಬಂದಾಗ, ಅವಳನ್ನು ಅನುಸರಿಸಿಕೊಂಡು ಬಂದ ಅವನು ಶ್ರೀಶೈಲದ ಕಲುಮಠ ಮತ್ತು ಹುಲುಮಠಗಳ ಗುರುಗಳಿಗೆ ಲಂಚವನ್ನಿತ್ತು ಅಕ್ಕಮಹಾದೇವಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದಂತೆ ಹರಿಹರ ವರ್ಣಿಸಿದ್ದಾನೆ. (ಚೆನ್ನಬಸವಾಂಕ ತನ್ನ ಮಹಾದೇವಿಯಕ್ಕನ ಪುರಾಣದಲ್ಲಿ – ನೋಡಿ ೩.೨.೧ – ಪಂಚಮಠ ಪಂಚಗೃಹದಾರಾಧ್ಯರನ್ನು ಕಂಡಂತೆ ಹೇಳಿದ್ದಾನೆ). ಪುಲುಮಠ ಅಥವಾ ಹುಲುಮಠದ ಹೆಸರು ಶಾಸನವೊಂದರಲ್ಲಿ ಬರುತ್ತದೆ. ಹಿರೇಕೆರೂರು ತಾಲೂಕು ಪರ್ವತ ಸಿದ್ಧಗೇರಿಯ (ಊರಿನ ಹೆಸರು ಗಮನಾರ್ಹ) ಕ್ರಿ. ಶ. ೧೨೬೫ ರ ಶಾಸನದಲ್ಲಿ ಹೀಗಿದೆ—

"...ಸ್ವಸ್ತಿಭುವನಭವನಮಂಡ...ಮಣಿದೀಪಿಕಾಯಮಾನಾನೇಕ ಮಾಣಿಕ್ಯಶಿಲಾತಳಪ್ರಭಾವ-ಪಟಲಜಟಿಲ ಶ್ರೀಶೈಲಶಿಖರಸಿಂಹಾಸನಾಸೀನ ಚತುರ್ದಶಭುವನಾಧೀಶ್ವರ ಶ್ರೀ ಶ್ರೀ ಪರ್ವತ ಶ್ರೀ ಸ್ವಯಂಭುಲಿಂಗಚಕ್ರವರ್ತಿ ಶ್ರೀಮನ್ಮಲ್ಲಿಕಾರ್ಜುನದೇವರ್ಗೆ ದಂಣಾಯಕರು ಸೋಮಯಾಜಿಗಳು ...ದಲಿ ದೇವದರ್ಶನವಾಗಿ ಶ್ರೀಮಲ್ಲಿಕಾರ್ಜುನದೇವರಸನ್ನಿಧಿಯಲ್ಲಿ ಶಕ ವರ್ಷ ೧೧೮೭ನೆಯ ಕ್ರೋಧನಸಂವತ್ಸರದ ವೈಶಾಖದ ಪೌರ್ಣಮಿ ಭೃಗುವಾರ ವಿಶಾಖಾ ನಕ್ಷತ್ರ ಶಿವಯೋಗಯುಕ್ತವಪ್ಪ ಪುಣ್ಯತಿಥಿಯಲ್ಲಿ ಶ್ರೀಪರ್ವತದ... ದ ಪುಲುಮಠದ ಆಚಾರ್ಯರಪ್ಪ ಪರಿಪೂರ್ಣ ಶಿವಾಚಾರ್ಯರ ಸಮಕ್ಷದಲು ಮಲ್ಲಿಕಾರ್ಜುನದೇವರ್ಗೆ..."

(ಮುಂದೆ ಸಿದ್ಧಗೇರಿಯನ್ನು ಆ ದೇವರಿಗೆ ದಾನವಾಗಿ ಕೊಟ್ಟ ವಿಷಯ ಬರುತ್ತದೆ). [Karnatak Inscriptions Ed. B. R. Gopal, Vol. VI No. 48] ಸಿದ್ಧಗೇರಿ ಎಂಬುದು ಊರಿನ ಮೊದಲ ಹೆಸರಾಗಿದ್ದುದು ಮುಂದೆ ಪರ್ವತಸಿದ್ಧಗೇರಿ ಏಕಾಯಿತು ಎಂಬುದಕ್ಕೆ ಕಾರಣವೂ ಸ್ಪಷ್ಟವಾಗಿದೆ– 'ಪರ್ವತ'ದ ಮಲ್ಲಿಕಾರ್ಜುನನಿಗೆ ಕೊಟ್ಟ ಊರು ಆದ್ದರಿಂದ ಅದು ಪರ್ವತದ ಸಿದ್ಧಗೇರಿ ಆಯಿತು.

ಅಕ್ಕಮಹಾದೇವಿ ಶ್ರೀಶೈಲದಲ್ಲಿ ಹುಲುಮಠದ ಗುರುಗಳನ್ನು ಕಂಡ ಸಂಗತಿಯ ಐತಿಹಾಸಿಕತೆಯನ್ನು, ಕೊನೆಯಪಕ್ಷ ಹರಿಹರನ ಕಾಲಕ್ಕೆ ಶ್ರೀಶೈಲದಲ್ಲಿ ಹುಲ್ಲುಮಠವಿದ್ದ ಸಂಗತಿಯ ಐತಿಹಾಸಿಕತೆಯನ್ನು ಈ ಶಾಸನವು ಸಮರ್ಥಿಸುತ್ತದೆ. ಹರಿಹರನ ನಿರೂಪಣೆಯಲ್ಲಿ ವಾಸ್ತವಾಂಶದ ಹಲವು ಎಳೆಗಳಿವೆಯೆಂಬುದನ್ನು ಈ ಶಾಸನ ದೃಢ ಪಡಿಸುತ್ತದೆ. ಆ ಕಾಲದಲ್ಲಿ ಬಹು ಪ್ರಭಾವಶಾಲಿಯಾಗಿದ್ದ ಕೌಶಿಕ ದೊರೆ (ಅರ್ಥಾತ್ ಕಸಪಯ್ಯನಾಯಕ) ಅಕ್ಕಮಹಾದೇವಿಯನ್ನು ಶ್ರೀಶೈಲದವರೆಗೆ ಅನುಸರಿಸಿಕೊಂಡು ಹೋಗಿ ಅಲ್ಲಿನ ಧರ್ಮ ಗುರುಗಳ ಪ್ರಭಾವವನ್ನು ಪಯೋಗಿಸಿಕೊಂಡು ಮತ್ತೆ ಅವಳನ್ನು ತನ್ನತ್ತ ತಿರುಗಿಸಿಕೊಳ್ಳುವ ಪ್ರಯತ್ನವನ್ನು ಮಾಡಿರಬಹುದು. ಆ ಪ್ರಯತ್ನ ವಿಫಲ ವಾದದ್ದರಿಂದ ಅಲ್ಲಿಗೆ ಅವನು ಅಕ್ಕಮಹಾದೇವಿಯನ್ನು ಪಡೆಯುವ ಆಶೆಯನ್ನು ಕೈಬಿಡುತ್ತಾನೆ.

ಅನುಬಂಧ ೨

'ಕಲ್ಲ ಹೊಕ್ಕರೆ ಕಲ್ಲ....' – ವಚನದ ಸರಿಯಾದ ಪಾಠ :

ಅಕ್ಕಮಹಾದೇವಿಯ ವಚನವೊಂದರ ಪಾಠ ಹೀಗಿದೆ :

ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ
ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ
ಭಾಪು ಸಂಸಾರವೇ, ಬೆನ್ನಿಂದ ಬೆನ್ನ ಹತ್ತಿಬಂದೆ
ಚೆನ್ನಮಲ್ಲಿಕಾರ್ಜುನಯ್ಯ, ಇನ್ನೇವೆನಿನ್ನೇವೆ ?

ಇಲ್ಲಿಯ 'ಬರಿಸಿದೆ' ಎಂಬುದನ್ನು ಡಾ. ಎಲ್. ಬಸವರಾಜು ಅವರು 'ಬಿರಿಸಿದೆ' ಎಂದು ಊಹೆಯ ತಿದ್ದುಪಡಿ ಮಾಡಿಕೊಟ್ಟಿದ್ದಾರೆ (ಅಕ್ಕನ ವಚನಗಳು, ಸಂಖ್ಯೆ ೧೪). ಶ್ರೀ ಎಸ್. ಎಂ. ವೃಷಭೇಂದ್ರಸ್ವಾಮಿಯವರು ಅದು [ಬೆಱಸಿದೆ] ಎಂದಿರಬೇಕೆಂದು ಊಹಿಸಿದ್ದಾರೆ – ಅವರಿಗೆ ಆಧಾರ 'ಬರಿಸಿದೆ' ಎಂಬುದಕ್ಕಿರುವ ಬಱಸಿದೆ ಎಂಬ ಪಾಠಾಂತರ (ಪ್ರಬುದ್ಧ ಕರ್ನಾಟಕ, ೫೦.೩ ಪು. ೯೩, ೧೦೩). ಮತ್ತು ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿರುವ

ಗಿರಿಯನೇರಿದೊಡಿರದೆ ಗಿರಿಯನೇರಿತು ಮಾಯೆ
ಪರಿದಡವಿಯಂ ಪೊಕ್ಕೊಡನೆ ಪೊಕ್ಕುದು ಮಾಯೆ
ಬೆನ್ನಂ ಕೈಯಂ ಬಿಡದು ಭಾಪು ಸಂಸಾರವೇ
ಎನ್ನ ನಂಬಿಸಿತು ಮಝು ಪೂತು ಸಂಸಾರವೇ

ಎಂಬ ಸಾಲುಗಳೂ ಕೂಡ ತಮ್ಮ ಊಹೆಗೆ ಸಮರ್ಥನೆ ಕೊಡುತ್ತವೆ ಎಂದು ಭಾವಿಸಿ ದ್ದಾರೆ. 'ಬೆಱ(ರ)ಸು' ಎಂದರೆ ಬೆನ್ನುಹತ್ತು, ಹಿಂಬಾಲಿಸು, ರಮಿಸು, ಮೋಹಿಸು ಎಂದು ಅರ್ಥ ಎಂದಿದ್ದಾರೆ (ಪು. ೯೩). ಅವರು ಶಕಟರೇಫದ ಪಾಠವನ್ನು

ಒಪ್ಪುತ್ತಾರೋ ಸಾಮಾನ್ಯರೇಫದ ಪಾಠವನ್ನು ಒಪ್ಪುತ್ತಾರೋ ಅವರ ಲೇಖನದಿಂದ ಸ್ಪಷ್ಟವಾಗುವುದಿಲ್ಲ. 'ಬೆಱೆ'ಗಾಗಲಿ, 'ಬೆರೆ'ಗಾಗಲಿ ಅವರು ಹೇಳಿದ ಯಾವ ಅರ್ಥವೂ ಇಲ್ಲ. 'ಬೆರೆ' ಎಂದರೆ ಸೇರು, ಒಂದಾಗು; ಬೆಱೆ ಎಂದರೆ ಗಟ್ಟಿಯಾಗು, ಒರಟಾಗು, ಅಹಂಕಾರವನ್ನು ತೋರು ಎಂದರ್ಥ.

'ಬರಿಸು' ಎಂದರೆ ವರಿಸು, ಸ್ವೀಕರಿಸು, ತನ್ನಂತೆ ಮಾಡಿಕೊ, ಆಶ್ರಯಿಸು ಎಂಬರ್ಥಗಳನ್ನಿಟ್ಟುಕೊಂಡರೆ ಆಗ 'ಬರಿಸಿದೆ' ಎಂಬ ಫ. ಗು. ಹಳಕಟ್ಟಿಯವರ ಪಾಠ ವನ್ನೇ ಒಪ್ಪಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಇಲ್ಲ. "ಕಲ್ಲನ್ನು ಹೊಕ್ಕರೆ, ಎಲೆ ಸಂಸಾರವೇ, ನೀನು ಕಲ್ಲನ್ನೇ (ಇರಲು) ಆರಿಸಿದೆ; ಗಿರಿಯನ್ನು ಹೊಕ್ಕರೆ ನೀನು ಗಿರಿಯನ್ನೇ (ಇರಲು) ಆರಿಸಿದೆ..." ಎಂಬ ಅರ್ಥ ತೀರ ಸಹಜವಾಗಿ ಹೊರಡುತ್ತದೆ. ಮತ್ತು ಹರಿಹರನ ರಗಳೆಯ ಭಾಗಕ್ಕೂ ಅದೇ ಅರ್ಥವಿರುವುದನ್ನು ಗಮನಿಸಬಹುದು. (ಹರಿಹರ ಆ ಭಾಗವನ್ನು ಬರೆಯುವಾಗ ಮೇಲಿನ ಅಕ್ಕಮಹಾದೇವಿಯ ವಚನವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೆಂಬುದು ನಿರ್ವಿವಾದ). "ಗಿರಿಯನ್ನು ಹತ್ತಿದರೆ ಮಾಯೆ ಗಿರಿಯನ್ನೇ ಹತ್ತಿತು, ಅಡವಿಯನ್ನು ಹೊಕ್ಕರೆ ಮಾಯೆ ಅಡವಿಯನ್ನೂ ಹೊಕ್ಕಿತು..." ಇದಕ್ಕೂ ಮೇಲಿನ ಅರ್ಥಕ್ಕೂ ಇರುವ ಸಾಮ್ಯ ಎದ್ದುಕಾಣುತ್ತದೆ. ಆದ್ದರಿಂದ ಮೇಲಿನ ವಚನದ ಪಾಠವನ್ನು ಯಾವುದೇ ಊಹೆಯ ಸಹಾಯದಿಂದಲೂ ತಿದ್ದುವ ಅಗತ್ಯವೇ ಇಲ್ಲವೆಂದು ತೋರುತ್ತದೆ.

ಈ ಹಿಂದೆ ನನ್ನ ಲೇಖನವೊಂದರಲ್ಲಿ ('ಭಗವ ಮತ್ತು ಮಾಸಕಬ್ಬೆ' ಸಂಶೋಧನ ತರಂಗ II, ಪು. ೨೯೫) 'ಕಲ್ಲ ಬರಿಸಿದೆ' ಎಂಬುದೇ ಸರಿಯಾದ ಪಾಠ ವೆಂದು ಪ್ರತಿಪಾದನೆಮಾಡಿ, ಇಲ್ಲಿಯ 'ಕಲ್ಲ' ಎಂಬುದು ಚತುರ್ಥಿಗೆ ಬದಲು ಬಂದಿ ರುವ ದ್ವಿತೀಯೆಯೆಂದು ವಾದಿಸಿದ್ದೆ. ಅದಕ್ಕಿಂತ ಮೇಲಿನ ವಾದ ಹೆಚ್ಚು ತರ್ಕಸಮ್ಮತ ವಾಗಿದೆಯೆಂದು ಭಾವಿಸುತ್ತೇನೆ.

■ ■

ಬಿಜ್ಜಾವರ ಮತ್ತು ಸಿದ್ಧಾಪುರ

ಬಿ. ಶಿವಮೂರ್ತಿಶಾಸ್ತ್ರಿ

ಕರ್ನಾಟಕವು ಇತಿಹಾಸದ ಭಂಡಾರದಂತಿದೆ. ಸುಮಾರು ಎರಡುಸಾವಿರ ವರ್ಷಗಳ ಚರಿತ್ರೆಯು ಈ ನಾಡಿಗೆ ನಿಚ್ಚಳವಾಗಿದೆ. ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯಿಸಳ, ಸೇವುಣ, ಮತ್ತು ವಿಜಯನಗರ ಸಾಮ್ರಾಜ್ಯಗಳೂ, ಕೆಳದಿ, ಬೀಳಗಿ, ಸ್ವಾದಿ, ಮೈಸೂರು, ಕಿತ್ತೂರು, ಸುರಪುರ, ಬೆಳವಡಿ, ಉಮ್ಮತ್ತೂರು, ಚಿತ್ರದುರ್ಗ, ಹಾಗಲ್ವಾಡಿ, ಕಾರ್ಕಳ ಮೊದಲಾದ ಕಡೆಗಳ ಸಣ್ಣಪುಟ್ಟ ರಾಜ್ಯಗಳೂ, ಉಜ್ವಲವಾದ ಚರಿತ್ರೆಯಿಂದ ಕೂಡಿವೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಕನ್ನಡ ಶಿಲಾ ಮತ್ತು ತಾಮ್ರ ಶಾಸನಗಳು ಉಂಟೆಂದು ತಜ್ಞರು ಹೇಳಿದ್ದಾರೆ. ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಮತ್ತು ಸೇವುಣರು ಅಧಿಕಾರ ನಡೆಸಿದ ಪ್ರದೇಶಗಳು ಇಂದಿನ ಮಹಾರಾಷ್ಟ್ರದಲ್ಲಿ ಸೇರಿಹೋಗಿವೆ. ಔರಂಗಾಬಾದ್, ನಾಂದೇಡ, ಉಸ್ಮಾನಾಬಾದ್, ಪರಭಣಿ, ಸೊಲ್ಲಾಪುರ, ಕೊಲ್ಲಾಪುರ, ಸಾಂಗಲಿ ಮೊದಲಾದ ಜಿಲ್ಲೆಗಳ ಪ್ರದೇಶಗಳಲ್ಲಿ ಸಂಶೋಧನೆ ನಡೆಸಿದರೆ ಸಾವಿರಾರು ಕನ್ನಡ ಶಿಲಾ ಹಾಗೂ ತಾಮ್ರ ಶಾಸನಗಳು ಹೊಸದಾಗಿ ಸಿಕ್ಕುವ ಸಂಭವವಿದೆ. ಎಲ್ಲೋರ ಕೈಲಾಸ ದೇವಾಲಯದಲ್ಲಿ, ಕೊಲ್ಲಾಪುರದ ಮಹಾಲಕ್ಷ್ಮೀ ದೇವಾಲಯದಲ್ಲಿ, ಪಂಡರಾಪುರದ ಪಕ್ಕದ ಪುಳಜಿ ಗ್ರಾಮದಲ್ಲಿ ಕನ್ನಡ ಶಿಲಾಶಾಸನಗಳು ಲಭಿಸಿವೆ. ದಕ್ಷಿಣದ ಕಾಸರಗೋಡು, ಹೊಸೂರು, ನೀಲಗಿರಿ, ತಾಳವಾಡಿ, ಗೋಪಿಚೆಟ್ಟಿಪಾಳ್ಯ, ಕೃಷ್ಣಗಿರಿ ಮೊದಲಾದ ಕಡೆಗಳಲ್ಲೂ ಪೂರ್ವಭಾಗದ ಆಲೂರು, ಆದವಾನಿ, ಮಡಕಶಿರ, ರಾಯದುರ್ಗ ಮೊದಲಾದ ಪ್ರದೇಶಗಳಲ್ಲೂ ಉತ್ತರದ ಅಕ್ಕಲಕೋಟೆ, ಜತ್ತ, ಮಂಗಳವಾಡ, ಮೊದಲಾದ ಪ್ರದೇಶಗಳಲ್ಲಿಯೂ ಹಲವಾರು ಕನ್ನಡ ಶಿಲಾಶಾಸನಗಳನ್ನು ನಾನು ನನ್ನ ಸಂಚಾರಕಾಲದಲ್ಲಿ ನೋಡಿದ್ದೇನೆ. ಹೀಗೆ ಕರ್ನಾಟಕದ ಸುತ್ತಲೂ ಆವರಿಸಿರುವ— ಈಗ ನೆರೆಹೊರೆಯ ರಾಜ್ಯಗಳಲ್ಲಿ ಸೇರಿಹೋಗಿರುವ— ಪ್ರದೇಶಗಳಲ್ಲಿ ಇರುವ ಶಾಸನಗಳನ್ನು ಸಂಗ್ರಹಿಸುವುದು, ಪ್ರಕಟಿಸುವುದು ಇಂದು ಅಗತ್ಯವಾಗಿದೆ.

ಸುಮಾರು ಐವತ್ತು ವರ್ಷಗಳಿಂದ ನಾನು ಕರ್ನಾಟಕದ ಹಾಗೂ ನೆರೆಹೊರೆಯ ರಾಜ್ಯಗಳಲ್ಲಿ ಹಲವಾರು ಕಾರಣಗಳಿಂದ ಸಂಚರಿಸಿದ್ದೇನೆ. ತಲಕಾಡು, ಬನವಾಸಿ, ಹಳೆಯಬೀಡು, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಳಖೇಡ, ಕಲ್ಯಾಣ, ದೇವಗಿರಿ

(ದೌಲತಾಬಾದ್) ಮಂಗಳವಾಡ, ಕೆಳದಿ, ಸ್ವಾದಿ ಮೊದಲಾದ ಪ್ರಾಚೀನ ರಾಜಧಾನಿಗಳಲ್ಲಿ ನಾವು ಇನ್ನೂ ಹೆಚ್ಚು ಸಂಶೋಧನೆಗಳನ್ನು ನಡೆಸಬೇಕಾಗಿದೆ. ಇಂಥ ಒಂದು ಸಂದರ್ಭದಲ್ಲಿ ಕೆಲವುದಿನಗಳ ಹಿಂದೆ ನನ್ನ ಅನುಭವಕ್ಕೆ ಬಂದಿತು. ಅದನ್ನು ಹೇಳುವುದೇ ಈ ಬರೆಹದ ಮುಖ್ಯ ಉದ್ದೇಶ.

ತುಮಕೂರು ಜಿಲ್ಲೆಯ ಮಧುಗಿರಿಯ ಅಕ್ಕಪಕ್ಕದಲ್ಲಿ ಬಿಜ್ಜಾವರ ಮತ್ತು ಸಿದ್ದಾಪುರ ಎಂಬ ಎರಡು ಊರುಗಳಿವೆ. ಇವು ಕರ್ನಾಟಕದ ಪ್ರಾಚೀನ ರಾಜಧಾನಿಗಳೆಂದು ಪರಿಗಣಿಸಲ್ಪಟ್ಟಿವೆ. ಕ್ರಿ. ಶ. ೧೫ ಮತ್ತು ೧೬ ನೆಯ ಶತಮಾನಗಳಲ್ಲಿ ಬಿಜ್ಜಾವರದಲ್ಲಿ ಒಂದು ಲಿಂಗವಂತ ರಾಜಮನೆತನವು ಆಗಿಹೋಗಿದೆ. ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಈ ಪಾಳೆಯಪಟ್ಟು ಆಳಿ ಬಾಳಿದೆ. ತೋಂಟದ ಸಿದ್ಧಲಿಂಗ ಭೂಪಾಲನು ಈ ರಾಜ್ಯದ ಸಂಸ್ಥಾಪಕನು. ದೈವಭಕ್ತನೂ ಪರಾಕ್ರಮಶಾಲಿಯೂ ಆದ ಈ ರಾಜನನ್ನು ಕುರಿತು **ತೋಂಟದರಾಯನ ಸಾಂಗತ್ಯ** ಎಂಬ ಒಂದು ಗ್ರಂಥವು ರಚನೆಯಾಗಿದೆ. ಈ ಗ್ರಂಥವನ್ನು ಮಲ್ಲಿಕಾರ್ಜುನ ಕವಿ ಎಂಬಾತನು ಬರೆದಿದ್ದಾನೆ. ಅದು ಇನ್ನೂ ಪ್ರಕಟಿತವಾಗಿಲ್ಲ. ಈ ರಾಜಮನೆತನದಲ್ಲಿ ಚಿಕ್ಕಭೂಪಾಲ, ಇಮ್ಮಡಿ ಚಿಕ್ಕಭೂಪಾಲ, ಮುಮ್ಮಡಿ ಚಿಕ್ಕಭೂಪಾಲ ಮೊದಲಾದ ಕೆಲವುಮಂದಿ ರಾಜರು ಆಗಿಹೋಗಿದ್ದಾರೆ. ಈ ರಾಜರ ಆಶ್ರಯದಲ್ಲಿ ಸಂಸ್ಕೃತ ಬಸವಪುರಾಣ, ಸಂಸ್ಕೃತ ಪಂಡಿತಾರಾಧ್ಯಪುರಾಣಗಳಿಗೆ ಕನ್ನಡ ಟೀಕೆಗಳನ್ನು ಬರೆದ ಪಂಡಿತ ಮಲ್ಲಿಕಾರ್ಜುನ ಕವಿಯು ಆಗಿಹೋಗಿದ್ದಾನೆ. ಈ ರಾಜ್ಯದ ಒಬ್ಬ ದೊರೆ ಮುಮ್ಮಡಿ ಚಿಕ್ಕಭೂಪಾಲನು ಸಂಸ್ಕೃತದಲ್ಲಿ "**ಅಭಿನವ ಭರತಸಾರ ಸಂಗ್ರಹ**" (ಅದನ್ನು ಮೈಸೂರು ವರಲಕ್ಷ್ಮೀ ಅಕಾಡೆಮಿಯವರು ಪ್ರಕಟಿಸಿದ್ದಾರೆ) ಎಂಬ ಒಂದು ಗ್ರಂಥವನ್ನು ಬರೆದಿದ್ದಾನೆ. ತೋಂಟದರಾಯನ ಮಗನಾದ ಇಮ್ಮಡಿ ತೋಂಟದರಾಯನು **ವಜ್ರಬಾಹು ಚರಿತೆ** ಅಥವಾ **ತೋಂಟದಯ್ಯನ ಕಾವ್ಯ** ಎಂಬ ಗ್ರಂಥವನ್ನು ಬರೆದಿದ್ದಾನೆ (೧೫೩೦, ಕ. ಕ. ಚ ಭಾಗ II ಪು. ೨೨೬). ಈ ಅರಸರಿಗೆ "ಬಿಜ್ಜಾವರ ಪುರವರಾಧೀಶ್ವರ" ಎಂಬ ಬಿರುದಿದೆ. ಕನ್ನಡ ಸಾಹಿತ್ಯದಲ್ಲಿ ವಿಖ್ಯಾತ ಕವಿಯಾಗಿರುವ, ಸಿದ್ಧೇಶ್ವರಪುರಾಣ, ಪಾಲ್ಕುರಿಕೆ ಸೋಮನಾಥಪುರಾಣ, ಕರ್ನಾಟಕ ಶಬ್ದಮಂಜರಿ, ನಿರಂಜನಶತಕ, ಮನೋವಿಜಯ ಟೀಕೆ, ಶತಕತ್ರಯ ಟೀಕೆ ಮೊದಲಾದವುಗಳನ್ನು ಬರೆದಿರುವ **ವಿರಕ್ತತೋಂಟದಾರ್ಯನು** (೧೫೬೦) ಈ ರಾಜ್ಯದ ಅರಸರ ಗುರುವೆಂದು ತಿಳಿದುಬಂದಿದೆ. (ಕ. ಕ. ಚ II ಪು. ೨೮೨).

ಈಗ ಬಿಜ್ಜಾವರ ಮತ್ತು ಪುರವರ ಗ್ರಾಮಗಳು ಮಧುಗಿರಿಗೆ ೨–೩ ಮೈಲಿಗಳ ದೂರದಲ್ಲಿವೆ. ಬಿಜ್ಜಾವರ ಇಂದು ಸಾಮಾನ್ಯ ಗ್ರಾಮವಾಗಿದೆ. ಆದರೆ ಅಲ್ಲಿ ವೀರಭದ್ರ, ಭೈರವ, ಬಸವೇಶ್ವರ, ಆಂಜನೇಯ ಮೊದಲಾದ ದೇವಾಲಯಗಳೂ ಪುರವರದಲ್ಲಿ



ಶಿವಶರಣೆ ಅಮ್ಮವ್ವೆ ಸ್ಥಾಪಿಸಿದ ನಾಗಲಿಂಗಸ್ವಾಮಿ



ಬೋಳಬಸವೇಶ್ವರ ಗದ್ದುಗೆ, ಸಿದ್ದಾಪುರ



ಶಿವಶರಣೆ ಅಮ್ಮವ್ವೆಯ ಗದ್ದುಗೆ

ಹಲವು ಪ್ರಾಚೀನ ಸ್ಮಾರಕಗಳೂ ಇವೆ. ಹಿಂದಿನ ಕಾಲದಲ್ಲಿ ಬಿಜ್ಜಾವರ, ಪುರವರ ಗ್ರಾಮಗಳು ರಾಜಧಾನಿಯಲ್ಲಿ ಪರಿಗಣಿಸಲ್ಪಟ್ಟಿದ್ದುವು ಎಂದು ತೋರುತ್ತದೆ.

ಅಮ್ಮವ್ವೆಯ ಗುಡಿ : ಬಿಜ್ಜಾವರಕ್ಕೆ ಸುಮಾರು ೩ ಮೈಲಿ ದೂರದಲ್ಲಿ **ಬಿಜ್ಜಮಹಾದೇವಿ** ಅಥವಾ **ಅಮ್ಮವ್ವೆಯ** ದೇವಾಲಯವಿದೆ. ಅಮ್ಮವ್ವೆಯ ಚರಿತ್ರೆಯು ಕನ್ನಡ, ತೆಲುಗು, ತಮಿಳು, ಸಂಸ್ಕೃತ, ಹಿಂದಿ ಮೊದಲಾದ ಭಾಷೆಗಳಲ್ಲಿರುವ ಎಲ್ಲಾ ಬಸವ ಪುರಾಣಗಳಲ್ಲಿಯೂ, ಮುಗ್ಧ ಭಕ್ತರ ಸಾಲಿನಲ್ಲಿ ನಿರೂಪಿತವಾಗಿದೆ. ಹಂಪೆಯ ಹರೀಶ್ವರನು "ಬಿಜ್ಜಮಹಾದೇವಿ ರಗಳೆ" ಎಂಬ ಒಂದು ಕಾವ್ಯವನ್ನು ಬರೆದಿದ್ದಾನೆ. ಪ್ರಾಯೇಣ ಈ ಬಿಜ್ಜಮಹಾದೇವಿಯು ಬಸವ ಯುಗಕ್ಕಿಂತ ಪೂರ್ವದವ ಳೆಂದು ತೋರುತ್ತದೆ. 'ಬಿಜ್ಜಮಹಾದೇವಿಯು ಮುಗ್ಧಭಕ್ತಳು, ಪರಮೇಶ್ವರನನ್ನು ಮಗುವನ್ನಾಗಿ ಆಡಿಸಿದವಳು' ಎಂದು ಪುರಾಣದಲ್ಲಿ ಹೇಳಿದೆ. ಶಂಕರನು ಬಿಜ್ಜ ಮಹಾದೇವಿಗೆ ಅವಳ ಪ್ರಾರ್ಥನೆಯಂತೆ ಬಿಜ್ಜಾವರದ ಪಕ್ಕದ ಕಾಡಿನಲ್ಲಿ ಮಗುವಾಗಿ ದೊರೆತನು ಎಂದು ಪುರಾಣದಲ್ಲಿ ಹೇಳಿದೆ. ಅಮ್ಮವ್ವೆಗೆ ಶಿವನು ಪ್ರತ್ಯಕ್ಷನಾದ ಸ್ಥಳದಲ್ಲಿ ಒಂದು ಶಿವದೇವಾಲಯ ನಿರ್ಮಾಣವಾಗಿದೆ. ಆ ದೇವಾಲಯದ ಮುಂಭಾಗದಲ್ಲಿ ಒಂದು ಪುಟ್ಟ ಮಂಟಪವಿದೆ. ಆ ಮಂಟಪದಲ್ಲಿ ಒಬ್ಬ ಹೆಂಗುಸು ಒಂದು ಮಗುವನ್ನು ಎತ್ತಿಕೊಂಡು ಮುದ್ದಾಡುವ ಶಿಲ್ಪವಿದೆ. ಅದನ್ನೇ ಅಮ್ಮವ್ವೆಯ ವಿಗ್ರಹವೆಂದು ಜನರು ಕರೆಯುತ್ತಾರೆ. ಪ್ರಾಯೇಣ ಈ ದೇವಾಲಯ ಮತ್ತು ಮಂಟಪ ೧೨ನೆಯ ಶತಮಾನ ಕ್ಕಿಂತ ಹಿಂದಿನವು ಎಂಬುದನ್ನು ಯಾರಾದರೂ ಹೇಳಬಹುದು. ಅಮ್ಮವ್ವೆಯು ಬಿಜ್ಜಾವರದವಳಾದುದರಿಂದ ಬಿಜ್ಜಮಹಾದೇವಿ ಎಂದು ಕರೆದಂತೆ ತೋರುತ್ತದೆ. ಶಿವಶರಣೆ ಪುನೀತವತಿಯನ್ನು ಪೆರಿಯ ಪುರಾಣಕಾರರು 'ಕಾರಿಕಾಲಮ್ಮೈ' ಎಂದು ಕರೆದಿದ್ದಾರೆ. ಅವಳ ಹೆಸರು 'ಅಮ್ಮೈ' ಎಂಬುದು. ಆದರೆ ಅವಳು ಕಾರಿಕಾಲ್ ಎಂಬ ಊರಿನವಳಾದುದರಿಂದ 'ಕಾರಿಕಾಲಮ್ಮೈ' ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ ಎಂಬುದನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು.

ಬೋಳಬಸವೇಶ್ವರನ ಗದ್ದುಗೆ : ಸಿದ್ದಾಪುರವು ಮಧುಗಿರಿಯ ಮತ್ತೊಂದು ದಿಕ್ಕಿನಲ್ಲಿ ೨ ಮೈಲಿ ದೂರದಲ್ಲಿದೆ. ಅಲ್ಲಿ ಒಂದು ಚಿಕ್ಕ ಕೋಟೆಯಿದೆ. ಅದನ್ನು ಬಿಜ್ಜಾವರದ ಅರಸನೊಬ್ಬನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಗ್ರಾಮದಲ್ಲಿ ವೀರಭದ್ರ, ಬಸವೇಶ್ವರ ಮತ್ತು ಮಾರುತಿ ದೇವಾಲಯಗಳಿವೆ. ಇಲ್ಲಿ ನಂಜಮ್ಮನ ಮಠ, ಪುಟ್ಟಯ್ಯಸ್ವಾಮಿ ಮಠ, **ಬೋಳಾರಾಧ್ಯರ ಮಠ** ಮೊದಲಾದವುಗಳು ಇವೆ. ನಿರಂಜನವಂಶರತ್ನಾಕರದಲ್ಲಿ ಎಡೆಯೂರು ಸಿದ್ಧಲಿಂಗೇಶ್ವರನ ಶಿಷ್ಯನಾದ ಬೋಳಬಸವೇ ಶ್ವರನ ಸಮಾಧಿಯು ಮಧುಗಿರಿಯಲ್ಲಿದೆ ಎಂದು ಹೇಳಲಾಗಿದೆ (ನಿ. ರ. ರ. ಪು. ೫೫). ಮತ್ತು ಮಹಲಿಂಗೇಶ್ವರ ವಿಜಯದಲ್ಲಿ ಬೋಳಬಸವೇಶ್ವರರ ಸಮಾಧಿಯು ಮಧುಗಿರಿ

ಯಲ್ಲಿದೆಯೆಂದು ಹೇಳಲಾಗಿದೆ (ಮಹಲಿಂಗೇಶ್ವರ ವಿಜಯ ಪೀಠಿಕೆ ಪು. ೫೯). ಆದರೆ ಈಗಿನ ಮಧುಗಿರಿಯಲ್ಲಿ ಬೋಳಬಸವೇಶ್ವರನ ಸಮಾಧಿ ಎಲ್ಲಿಯೂ ಇಲ್ಲ. ಸಿದ್ದಾಪುರವು ಹಿಂದಿನ ಕಾಲದಲ್ಲಿ ಮಧುಗಿರಿಯ ವಿಸ್ತರಣ ಗ್ರಾಮವಾಗಿತ್ತು ಎಂದು ಅಂದುಕೊಂಡರೆ ನಿರಂಜನವಂಶರತ್ನಾಕರದ ಪ್ರಮಾಣ ಶುದ್ಧವಾಗುತ್ತದೆ. ಸಿದ್ದಾಪುರದಲ್ಲಿರುವ ಬೋಳಾರಾಧ್ಯರ ಸಮಾಧಿಯೇ ಬೋಳಬಸವೇಶ್ವರನ ಸಮಾಧಿಯಾಗಿರಬೇಕೆಂದು ತೋರುತ್ತದೆ. ಈ ಸಮಾಧಿಕಟ್ಟಡವು ಎಡೆಯೂರು ಸಿದ್ಧಲಿಂಗೇಶ್ವರ, ಗುಬ್ಬಿ ಚೆನ್ನಬಸವೇಶ್ವರ, ನಡುವಂತಿ ಮಾದೇಶ್ವರ, ಸೊನ್ನಲಿಗೆ ಸಿದ್ಧರಾಮೇಶ್ವರ ಮೊದಲಾದ ಶೂನ್ಯಪೀಠಾಧಿಪತಿಗಳ ಸಮಾಧಿಯಂತೆ ದಿವ್ಯಭವ್ಯವಾಗಿದೆ. ಲಿಂಗವಂತ ಅರ್ಚಕರು ದಿನವಹಿ ಭಕ್ತಿಯಿಂದ ಪೂಜೆಮಾಡುತ್ತಾರೆ ಎಂಬುದು ಸಮಾಧಾನದ ಸಂಗತಿಯಾಗಿದೆ. ಆದರೆ ಸಿದ್ದಾಪುರಕ್ಕೆ ಅನತಿದೂರದಲ್ಲಿರುವ ಪುರಾಣಪ್ರಸಿದ್ಧವಾದ ಬಿಜ್ಜವಮಹಾದೇವಿ ದೇವಾಲಯದಲ್ಲಿ ಯಾವ ಪೂಜೆ ಪುರಸ್ಕಾರಗಳೂ ನಡೆಯುವಂತೆ ತೋರಲಿಲ್ಲ. ಕೇವಲ ಪಾವಿತ್ರ್ಯದ ದೃಷ್ಟಿಯಿಂದಲೇ ಅಲ್ಲದೆ ಐತಿಹಾಸಿಕ ಮಹತ್ವದಿಂದ ಕೂಡ ಬಿಜ್ಜಾವರದ ಅಮ್ಮವ್ವೆ ದೇವಾಲಯ, ಸಿದ್ದಾಪುರದ ಬೋಳಬಸವೇಶ್ವರರ ಗದ್ದಿಗೆ ಇವು ಸಂರಕ್ಷಣಾರ್ಹವಾಗಿವೆ ಎಂಬುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಬಸವೇಶ್ವರನ ಹಾಗೂ ಶಿವಶರಣರ ಹೆಸರನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಮತ್ತು ಬೋಳಬಸವೇಶ್ವರರ ಗುರು ಪರಂಪರೆಯವರೆಂದು ಹೇಳಿಕೊಳ್ಳುವ ಯಾವ ಮಹನೀಯರೂ ಇಲ್ಲಿಗೆ ಬಂದುಹೋಗುತ್ತಿಲ್ಲವೆಂದು ಆ ಗ್ರಾಮಸ್ಥರ ಮುಖಾಂತರ ಕೇಳಿ ನನಗೆ ತುಂಬ ದುಃಖವಾಯಿತು. ಕಾಲಾಯತಸ್ಮೈನಮಃ ಹರಹರಾ ಶ್ರೀ ಚನ್ನಸೋಮೇಶ್ವರಾ.

ಮಧುಗಿರಿಯನ್ನೂ ಕೋಟೆಕೊತ್ತಳಗಳನ್ನೂ ಬಿಜ್ಜಾವರದ ರಾಜರೇ ಕಟ್ಟಿಸಿದ ರೆಂದೂ ಕೆಲವುಕಾಲ ಮಧುಗಿರಿಯು ಬಿಜ್ಜಾವರದ ನಾಡಿಗೆ ರಾಜಧಾನಿಯಾಗಿತ್ತೆಂದೂ ತಿಳಿದುಬಂದಿದೆ. ಸಿದ್ದಾಪುರವು ರಾಜರ ಪರಮಗುರುಗಳಾದ ಎಡೆಯೂರು ಸಿದ್ಧಲಿಂಗೇಶ್ವರನ ಹೆಸರಿನಲ್ಲಿ "**ಸಿದ್ಧಲಿಂಗಪುರ**" ಎಂಬ ಹೆಸರಿನಿಂದ ಕಟ್ಟಿಸಿದ ಊರೆಂದು ಹೇಳುತ್ತಾರೆ. ಮಧುಗಿರಿಯಲ್ಲಿರುವ ಶ್ರೀ ವೆಂಕಟರಮಣ ಮತ್ತು ಮಲ್ಲೇಶ್ವರ ದೇವಾಲಯಗಳು ಬಿಜ್ಜಾವರದ ಅರಸರ ಕಾಲದಲ್ಲಿ ಕಟ್ಟಿರುವುವೆಂದು ತಿಳಿಯಲಾಗಿದೆ. ಬಿಜ್ಜಾವರದ ರಾಜನಿಗೆ "ಮಹಾನಾಡಪ್ರಭು" ಎಂಬ ಬಿರುದಿದೆ. ಈಗ ಸಿದ್ದಾಪುರ, ಬಿಜ್ಜಾವರ ಮತ್ತು ಪುರವರಗಳಲ್ಲಿ ಅನ್ವೇಷಣೆ ಮಾಡಿದರೆ ಅನೇಕ ಶಿಲಾಶಾಸನಗಳು ಇರಬಹುದು ಎಂದು ತೋರುತ್ತದೆ. ಮುಖ್ಯವಾಗಿ ಈ ಪ್ರಾಚೀನ ರಾಜಧಾನಿಗಳಲ್ಲಿ ಸಂಶೋಧನೆ ನಡೆಯುವುದು ಅಗತ್ಯವಾಗಿದೆ.

ಬೋಳಬಸವೇಶ್ವರರು ವೀರಶೈವಧರ್ಮ ಮತ್ತು ಸಾಹಿತ್ಯದಲ್ಲಿ ಅತ್ಯಂತ ಪ್ರಖ್ಯಾತರು. ಮಹಾಕವಿ ಗುಬ್ಬಿ ಮಲ್ಲಣಾರ್ಯ, ಅವನ ಮಗ ಕವಿ ಶಾಂತೇಶ, ಶೂನ್ಯ ಸಂಪಾದನೆಯ ಕವಿ ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರ ಮೊದಲಾದವರಿಗೆ ಇವರು ಗುರುಗಳು, ವಿರಕ್ತ ತೋಂಟದಾರ್ಯರಿಗೆ ಇವರು ಗುರುಗಳ ಗುರುಗಳು. ಮೂರುಸಾವಿರ ವಿರಕ್ತರು, ಏಳುನೂರು ಚರಮೂರ್ತಿಗಳು ಇವರನ್ನು ಕಟ್ಟಿಕೊಂಡು ದೇಶಾಟನೆ ಮಾಡಿದರು. ಉತ್ತಮರನ್ನು ಕಾಪಾಡುತ್ತಾ ದುಷ್ಟರನ್ನು ಶಿಕ್ಷೆಮಾಡುತ್ತ ಇವರು ತಮ್ಮ ಗುರುಪೀಠದ ದರ್ಪವನ್ನು ಚೆನ್ನಾಗಿ ನಡೆಸಿದರು. ನಿರಂಜನವಂಶರತ್ನಾಕರದ ಪ್ರಕಾರ ಇವರು ಶೂನ್ಯಪೀಠಕ್ಕೆ ೧೯ ನೆಯ ಜಗದ್ಗುರುಗಳು. ಇವರು ತಮ್ಮ ಪ್ರವಾಸ ಕಾಲದಲ್ಲಿ ಅನೇಕ ಪರವಾದಿಗಳನ್ನು ವಾದಮಾಡಿ ಜಯಿಸಿದರು. ಶಿವಮತವನ್ನು ಪ್ರಚಾರಮಾಡಿದರು. ಇವರು ೭೨ ಬಿರುದುಗಳಿಂದ ವೈಭವವಾಗಿ ಮೆರೆದರು. ಮಧುಗಿರಿಯಲ್ಲಿ ಕೆಲವುಕಾಲವಿದ್ದು ಅನೇಕ ಮಹಿಮೆಗಳನ್ನು ನಡೆಸಿದರು. ಇವರು ೯೬ ವರ್ಷ ಜೀವಿಸಿದ್ದರು (ನಿರಂಜನವಂಶರತ್ನಾಕರ ಪುಟ ೫೫). ಇವರು ಎಡೆಯೂರಿನಲ್ಲಿ ಸ್ವಲ್ಪಕಾಲವಿದ್ದು ತಮ್ಮ ಗುರುಗಳ ಗದ್ದಿಗೆ ಪೂಜೆ ತೃಪ್ತಿಕರವಾಗಿ ಮಾಡುವಂತೆ ವ್ಯವಸ್ಥೆ ಮಾಡಿದರು.

ಸಿದ್ಧನಂಜೇಶನ ಗುರುರಾಜಚಾರಿತ್ರದಲ್ಲಿ ಈ ಬೋಳಬಸವೇಶ್ವರನ ಸಂಬಂಧವಾಗಿ ಈ ಮುಂದೆ ಹೇಳುವಂತೆ ನಿರೂಪಿತವಾಗಿದೆ :

ಪರಮ ಶಾಂತಿಯೆ ಮೂರ್ತಿವೆತ್ತು ಭೂತಳದಲ್ಲಿ
ಚರಿಸುವ ಮಹಾಮಹಿಮನೆಂದು ಸರ್ವರು ಪೊಗಳು
ತಿರೆ ಕೀರ್ತಿವೆತ್ತನಘ ಬೋಳಬಸವೇಶನೆಂದೆಂಬ ಪಾವನ ಸಂಯಮೀ ।
ಧರೆಗೆಸೆವ ಬಿಜ್ಜಾವರದೊಳಧಿಕ ಮಹಿಮೆಯುಂ
ಮೆರೆದು ಲಿಂಗಾಭಿಷೇಕೋದಕವ ಮಸ್ತಕದಿ
ಧರಿಸಿ ಶರಣಾಗತರ ವಾಂಛಿತಂಗಳನಿತ್ತು ಸಕಲರೊಳು ರೂಢಿವೆತ್ತು ॥

ಇರುತೊಂದು ದಿವಸದೊಳು ಒಣಗಿದತ್ತಿಯ ಮರನ
ಕರುಣದಿಂ ನೋಡಿಯಾಕ್ಷಣವೆ ಚಿಗುರಿಸಿ ಫಲವ
ಧರೆ ಪೊಗಳೆ ತೋರ್ದ ಶರಣ್ಗೊಂಡ ನಿರುಪಮಮಹಿಮನಪ್ರತಿಮಘನವಿರಕ್ತಂ ।
ನೆರೆ ಪ್ರಸಿದ್ಧತೆವಡೆದು ಇರುತ ಶ್ರೀಕೈಲಾಸ
ಪುರದ ಬಾಗಿಲೊಳು ತಮ್ಮಯ ಪಾದಸೇವನಾ
ತುರನು ಬಿಜ್ಜಾವರದ ಗೌಡ ತೋಂಟನ ತಡೆದು ಮಿರ್ದಪರು ನಾವು ಪೋಗಿ ॥

ಬಿಡಿಸಿ ಕರೆದೊಯ್ಯುವೆಳ್ಕೆಂದು ಸರ್ವರೊಳು ಉಸಿರ್ದು
ಪೊಡವಿ ಬೆರಗಾಗಲಾ ಶಿವಸಮಾಧಿಯೊಳೈದಿ
ಮೃಡನ ಸನ್ನಿಧಿಗೆ ಕರೆದೊಯ್ದು ಮೋಕ್ಷವನಿತ್ತ ಪ್ರತ್ಯಕ್ಷ ಶಿವಮೂರ್ತಿಯು ।

(ಗುರುರಾಜಚಾರಿತ್ರ, ಸಂಧಿ ೧೬, ಪದ್ಯ ೨-೪)

ಈ ಪದ್ಯಗಳಲ್ಲಿ ಶ್ರೀ ಬೋಳಬಸವೇಶ್ವರರು ಬಿಜ್ಜಾವರದಲ್ಲಿ ರಾಜಗೌರವದಿಂದ ಮೆರೆದರೆಂದೂ, ಅನೇಕ ಪವಾಡಗಳನ್ನು ಮಾಡಿದರೆಂದೂ, ಕಡೆಯಲ್ಲಿ ಬಿಜ್ಜಾವರದಲ್ಲೇ ಐಕ್ಯವಾದರೆಂದೂ ಹೇಳಲಾಗಿದೆ. ಕರ್ನಾಟಕದಲ್ಲಿ ಚೆನ್ನಬಸವೇಶ್ವರ (ಉಳವಿ), ಸಿದ್ಧರಾಮೇಶ್ವರ (ಸೊನ್ನಲಿಗೆ), ನಿರ್ವಾಣಿಯ ಗಣೇಶ್ವರ (ನಡುಮಲೆ), ಗೋಸಲ ಸಿದ್ಧೇಶ್ವರ (ಸಿದ್ಧಗಂಗೆ), ಗೋಸಲಚನ್ನಬಸವೇಶ್ವರ (ಗುಬ್ಬಿ), ಸಿದ್ಧಲಿಂಗೇಶ್ವರ (ಎಡೆಯೂರು), ಶಂಕರಾಚಾರ್ಯ (ಸಿದ್ಧರ ಬೆಟ್ಟ) ಮೊದಲಾದಕಡೆಗಳಲ್ಲಿ ಶೂನ್ಯ ಸಿಂಹಾಸನಾಧೀಶ್ವರರ ಶಿವಯೋಗ ಸಮಾಧಿಗಳು ವೈಭವದಿಂದ ಪೂಜೆಗೊಳ್ಳುತ್ತಿವೆ. ಇಲ್ಲೆಲ್ಲಾ ಪ್ರತಿವರ್ಷ ಜಾತ್ರೆಯಾಗುತ್ತದೆ. ಆದರೆ ಅದೇ ಪರಂಪರೆಯ ಶ್ರೀ ಜಗದ್ಗುರು ಬೋಳಬಸವೇಶ್ವರರ ಸಮಾಧಿಯು ಇರುವ ಸಿದ್ದಾಪುರವು ಒಂದು ಅನಾಮಧೇಯ ಗ್ರಾಮವೆನಿಸಿದೆ. ಬೋಳಬಸವೇಶ್ವರರ ಗದ್ದುಗೆಯು ಇಂತಹ ಕಡೆ ಎಂಬುದು ಆ ಪರಂಪರೆಯ ಗುರುಗಳಿಗೇ ಗೊತ್ತಿಲ್ಲ. ಆ ಮಹಾಕ್ಷೇತ್ರಕ್ಕೆ ಹೋಗಿ ತಮ್ಮ ಭಕ್ತಿಪೂಜೆಯನ್ನು ಯಾರೂ ನಡೆಸುತ್ತಿಲ್ಲ. ಆ ಗದ್ದುಗೆಯನ್ನು ಈಗ ಸಿದ್ದಾಪುರದ ಜನಗಳು **ಬೋಳಾರಾಧ್ಯರ ಮಠ, ಬಾಳಯ್ಯಸ್ವಾಮಿಗಳ ಮಠ** ಎಂದು ಮಾತ್ರ ಕರೆಯುತ್ತಾರೆ. ಈ ಸ್ಥಿತಿಯು ವೀರಶೈವಸಮಾಜದ ಭಾವದಾರಿದ್ರಕ್ಕೆ ಒಂದು ಒಳ್ಳೆಯ ನಿದರ್ಶನವಾಗಿದೆ.

■ ■

ಅಂಶಗಣದ ಇತಿಹಾಸ

ಎಂ. ಎಂ. ಕಲಬುರ್ಗಿ

"ಛಂದಸ್ಸಿನ ಮೂಲತತ್ವಗಳನ್ನು ಗುರುತಿಸುವ, ವಿವರಿಸುವ ಕಾಲ ಇನ್ನೂ ಬಂದಿಲ್ಲ. ಆವಶ್ಯಕ ಪರಿಕರಗಳು ಸಾಲದಿರುವುದು, ಸರಿಯಾದ ಪ್ರಾಥಮಿಕ ಅಭ್ಯಾಸ ನಡೆಯದಿರುವದು, ಮಿಗಿಲಾಗಿ ಅಭಿರುಚಿ ಕಡಿಮೆಯಾಗಿರುವುದು ಇದಕ್ಕೆ ಕಾರಣವಾಗಿರಬಹುದು."[೧]

ನಮ್ಮಲ್ಲಿ ನಡೆದ ಛಂದಸ್ಸಿನ ಅಭ್ಯಾಸದ ಬಗ್ಗೆ ೧೯೬೦ ರಲ್ಲಿ ಹೇಳಿದ ಮಾತಿದು. ಅಂಶಛಂದಸ್ಸಿನ ಅಭ್ಯಾಸದ ವಿಷಯವಾಗಿಯಂತೂ ಈ ಮಾತು ತೀರ ಸತ್ಯವಾದುದು.

ಆಧುನಿಕರಲ್ಲಿ ಅಂಶಛಂದಸ್ಸಿನ ಬಗೆಗೆ ಮೊದಲು ವಿವೇಚಿಸಿದವರು, ಶ್ರೀ ಬಿ. ಎಂ. ಶ್ರೀ. ಕನ್ನಡ ಛಂದಸ್ಸಿನ ತಿಳಿವಳಿಕೆ ಅಸ್ಪಷ್ಟವಾಗಿದ್ದ, ಅಭ್ಯಾಸ ಅಸಮರ್ಪಕವಾಗಿದ್ದ ಕಾಲವದು. ಆಗ ಹೇಳಿದ ಬಿ. ಎಂ. ಶ್ರೀ ಮಾತು, ಮಾರ್ಗವಾಗಿ ಪರಿಣಮಿಸಿತು. ಆ ಮೇಲೆ ಡಾ. ಡಿ. ಎಸ್. ಕರ್ಕಿ, ತೀ. ನಂ. ಶ್ರೀ, ಶಿವರಾಮ ಐತಾಳ, ಟಿ. ವ್ಹಿ. ವೆಂಕಟಾಚಲಶಾಸ್ತ್ರಿ ಮೊದಲಾದವರು ಒಂದೆರಡು ಹೊಸ ಸೂಚನೆಗಳನ್ನು ಮಂಡಿಸಿದರೂ ಬಿ. ಎಂ. ಶ್ರೀ ಮಾರ್ಗವೇ ಇವರಿಗೆ ಮೂಲ ಧನವಾಗಿ ನಿಂತಿದೆ. ಈಗ ಸರ್ವ ದ್ರಾವಿಡಭಾಷೆಗಳನ್ನು ಕಣ್ಣುಮುಂದಿಟ್ಟುಕೊಂಡು ಅಂಶಛಂದಸ್ಸಿನಲ್ಲಿ ಸಂಶೋಧನೆ ನಡೆಸುವುದು ಅತ್ಯವಶ್ಯವಿದೆ*. ಈ ಹಿನ್ನೆಲೆಯಲ್ಲಿ ಒಂದೆರಡು ಹೊಸ ಸಂಗತಿಗಳನ್ನು ಇಲ್ಲಿ ಮಂಡಿಸಬಹುದಾಗಿದೆ.

ಪದ್ಯವನ್ನು ಹಾಡುತ್ತ ಹೋದ ಹಾಗೆ ತಾಳಗಳು ಬೀಳುತ್ತಹೋಗುತ್ತವೆ. ಇಂಥ ಎರಡು ತಾಳಗಳ ಮಧ್ಯಭಾಗವೇ ಲಯ. ಈ ಲಯದಲ್ಲಿ ಮತ್ತೆ ಒಳಲಯಗಳು ಗೋಚರಿಸುತ್ತವೆ. ಉದಾ :

। ಅ . ಕ್ಕ . ತ್ತಂ । ಗೆರ . ಬ . ಣ್ಣ । ಅವ . ರಿ . ಹೂ । ವಿನ . ಬ . ಣ್ಣ

---

೧ ಕೆ. ಶಿವರಾಮ ಐತಾಳ, ಅಂಶಲಯ ವಿಚಾರ (ಹೊಸ ಬೆಳಕು, ಪು. ೧೩೧).

* (ಅ) ಪ್ರಥಮಾಂಶದಲ್ಲಿ ಒಂದು ಗುರು ಇಲ್ಲವೆ ಎರಡು ಲಘು ಬರಬೇಕು. ಪ್ರಥಮೇತರಾಂಶಗಳಲ್ಲಿ ಒಂದು ಗುರು ಇಲ್ಲವೆ ಒಂದು ಲಘು ಬರಬೇಕು– ಈ ಎರಡು ನಿಯಮಗಳ ಪರಿಷ್ಕರಣ ಕಾರ್ಯ ನಡೆಯಬೇಕಾಗಿದೆ. (ಆ) ಮಾತ್ರಾಪರಿಭಾಷೆಯ ಪ್ರಸ್ತಾರದಿಂದ ಅಂಶಛಂದಸ್ಸನ್ನು ಬೋಧಿಸುವುದು ಎಷ್ಟರಮಟ್ಟಿಗೆ ಸಾಧುವೆಂಬುದನ್ನು ವಿವೇಚಿಸಬೇಕಾಗಿದೆ.

ಇಲ್ಲಿ ಕೊರೆದ ಗೆರೆಗಳು ತಾಳ. ಎರಡು ಗೆರೆಗಳ ಮಧ್ಯಭಾಗ ಲಯ. ಈ ಲಯಗಳಲ್ಲಿ ಬಿಂದುಗಳಿಂದ ತೋರಿಸಿದ ಒಂದೊಂದೂ ಘಟಕ ಒಳಲಯಗಳು. ಛಂದಸ್ಸಿನ ಪರಿಭಾಷೆಯಲ್ಲಿ ಹೇಳುವುದಾದರೆ ಈ ಹೊರಲಯಗಳೇ ಗಣ; ಒಳಲಯಗಳೇ ಅಂಶ.

ಮೂಲತಃ ಒಂದು ಅಂಶವೆನ್ನುವದು ಒಂದು ಗುರುವಿಗೆ[೨] ಸಮಾನವಾದುದು. ಇಂಥ ಎರಡು ಅಂಶಗಳಿಂದ ಕೂಡಿದುದು ಬ್ರಹ್ಮಗಣ; ಮೂರು ಅಂಶಗಳಿಂದ ಕೂಡಿದುದು ವಿಷ್ಣುಗಣ. ಇವುಗಳನ್ನು ಹೀಗೆ ಬರೆಯಬಹುದು.

। — . — । ಬ್ರಹ್ಮಗಣ
। — . — . — । ವಿಷ್ಣುಗಣ

ನಾಲ್ಕು ಅಂಶ (— . — . — . —) ಗಳ ರುದ್ರಗಣವನ್ನು ನಾಗವರ್ಮ ಮೊದಲು ಮಾಡಿ ನವೀನ ವಿದ್ವಾಂಸರು ಹೇಳುವರಾದರೂ ರುದ್ರಗಣವೆಂಬುದು ಸಾಧ್ಯವಿಲ್ಲವೆಂದು ನನ್ನ ಅನಿಸಿಕೆ. ಅದು ಚರಣಮಧ್ಯದಲ್ಲಿ ಬಂದರೆ ಎರಡು ಬ್ರಹ್ಮವಾಗುವುದೂ[೩], ಚರಣಾಂತ್ಯದಲ್ಲಿ ಬಂದರೆ ವಿ + — ಆಗುವುದೂ ಈ ಅನಿಸಿಕೆಗೆ ಕಾರಣ. ಕರ್ನಾಟ ವಿಷಯಜಾತಿವೃತ್ತಗಳಲ್ಲಿ ರುದ್ರಗಣ ಒಮ್ಮೆಯೂ ಮಧ್ಯ ಬಂದಿಲ್ಲವೆಂಬುದನ್ನೂ ಕ್ವಚಿತ್ತಾಗಿ ಕೊನೆಗೇ ಬಂದಿದೆಯೆಂಬುದನ್ನೂ ಇಲ್ಲಿ ನೆನೆಯಬಹುದು. ಒಟ್ಟಿನಲ್ಲಿ ಅಂಶಗಣಗಳು ಎರಡು ಮಾತ್ರ. ಅವು : ಬ್ರಹ್ಮಗಣ, ವಿಷ್ಣುಗಣ. ಈ ಗಣಗಳು ತಮ್ಮ ಜೀವನೇತಿಹಾಸದಲ್ಲಿ ಅನುಭವಿಸಿದ ಎರಡು ಅವಸ್ಥೆಗಳು ಹೀಗಿವೆ :

ಪ್ರಥಮ ಅವಸ್ಥೆ

ಮೂಲತಃ ಅಂಶವೆನ್ನುವುದು 'ಗುರುವ್ಯಾಪ್ತಿ'ಯದೆಂಬ ಭಾವನೆಯಿಂದ, ಕೇವಲ ಗುರುವರ್ಣಗಳಿಂದ ಗಣ ಕಟ್ಟುವುದು ಅಸಾಧ್ಯ: ಎಲ್ಲ ಲಘುವರ್ಣಗಳನ್ನು ಎಳೆದು ಗುರುವನ್ನಾಗಿಸುವುದೂ ಅಸಾಧ್ಯ. ಈ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅರಿಯಬೇಕಾದರೆ ಗಣದ ಆದಿ, ಮಧ್ಯ, ಅಂತ್ಯ ಅಂಶಗಳ ಸ್ವರೂಪವನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

೧. **ಆದಿ ಅಂಶ** : ಹಾಡುವಾಗ ತಾಳ, ಗಣದ ಪ್ರಾರಂಭದಲ್ಲಿಯೇ ಬೀಳುತ್ತದೆ. ತಾಳದ ಈ ಭಾರವನ್ನು ಹೊರಬೇಕಾದುದರಿಂದ ಗಣದ ಪ್ರಥಮಾಂಶ ಗುರುವಾಗಿರಲೇಬೇಕು; ಇಲ್ಲವೆ ಆ 'ಗುರುವ್ಯಾಪ್ತಿ'ಗೆ ಸರಿಹೋಗುವ ಹಾಗೆ ಎರಡು

೨ ಇಲ್ಲಿ 'ಗುರು' ಶಬ್ದಕ್ಕೆ ಬದಲು 'ದೀರ್ಘ' ಶಬ್ದವನ್ನು ಬಳಸುವದು ಹೆಚ್ಚು ಶಾಸ್ತ್ರೀಯ.
೩ ಚರಣಮಧ್ಯದಲ್ಲಿ '೧ ವಿ + ೧ ಗು' ಬಂದಿದ್ದರೆ ವಾಸ್ತವವಾಗಿ ಅಲ್ಲಿ ಚರಣ ಮುಗಿದಿರುತ್ತದೆ.

ಲಘುವಿರಬೇಕು[೪]. ಈ ಕಷ್ಟಾಯ ಕಾರಣವಾಗಿ ಪ್ರಥಮಾಂಶದಲ್ಲಿ ಧ್ವನಿತರಂಗಕ್ಕೆ ಅವಕಾಶವಿರುವುದಿಲ್ಲ.

೨. **ಅಂತ್ಯ ಅಂಶ :** ಬ್ರಹ್ಮದ ಎರಡನೆಯ ಅಂಶ, ವಿಷ್ಣುವಿನ ಮೂರನೆಯ ಅಂಶಗಳು ಗಣದ ಅಂತ್ಯ ಅಂಶಗಳೆನಿಸುತ್ತವೆ. ಇವು ಗುರುವರ್ಣವಿದ್ದರಂತೂ ಸರಿಯೇ, ಲಘುವರ್ಣವಿದ್ದರೆ ಗಣದಿಂದ ಗಣಕ್ಕೆ ದಾಟಬೇಕಾಗುವ ಕಾರಣ ನಮಗರಿಯದಂತೆ ತಂತಾನೇ ಗುರುವರ್ಣವಾಗಿಬಿಡುತ್ತದೆ. ಅಂದರೆ ಅಂತ್ಯ ಅಂಶದಲ್ಲಿ ಧ್ವನಿತರಂಗಕ್ಕೆ ಅವಕಾಶವುಂಟು.

೩. **ಮಧ್ಯ ಅಂಶ :** ಇದು ವಿಷ್ಣುಗಣದ ಎರಡನೆಯ ಅಂಶ. ಗುರುವಿದ್ದರಂತೂ ಸರಿಯೇ, ಲಘುವಿದ್ದರೆ ಮಾತ್ರ ಅದನ್ನು ಗುರುವಿನಷ್ಟು ಹಿಗ್ಗಿಸಿ ಅಂಶಬೆಲೆಗೆ ಒಗ್ಗಿಸಬೇಕಾಗುತ್ತದೆ. ಉದಾ :

ಹೆಸ.ರಿs . ಗಿ । ರಬ . ಕs . ವಿ । ಮೊಸ.ರಿs . ಗಿ । ನೀ . ರಿ . ಲ್ಲ

ಇಲ್ಲಿ ರಿs, ಕs, ರಿs ಗಳು ಹಿಗ್ಗಿದುದನ್ನು ಗಮನಿಸಬೇಕು. ಅಂದರೆ ಮಧ್ಯ ಅಂಶದಲ್ಲಿಯೂ ಧ್ವನಿತರಂಗಕ್ಕೆ ಅವಕಾಶವಿದೆ; ಅದು ಸ್ಪಷ್ಟವಾಗಿಯೂ ಗಮನಕ್ಕೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಬ್ರಹ್ಮ, ವಿಷ್ಣುಗಣಗಳ ಸಾಧ್ಯತೆಗಳು ಹೀಗಾಗುತ್ತವೆ :

ಬ್ರಹ್ಮಗಣ		ವಿಷ್ಣುಗಣ
— . —	<	— . — . — — . — . ∪s (ತರಂಗಗಣ)
∪ ∪ . —	<	∪ ∪ . — . — ∪ ∪ . — ∪s (ತರಂಗಗಣ)
— . ∪s (ತರಂಗಗಣ)	<	— . ∪s . — (ತರಂಗಗಣ) — . ∪s . ∪s (ತರಂಗಗಣ)
∪ ∪ . ∪s (ತರಂಗಗಣ)	<	∪ ∪ . ∪s — (ತರಂಗಗಣ) ∪ ∪ . ∪s . ∪s (ತರಂಗಗಣ)

ಈ ಹನ್ನೆರಡು ಮೂಲ ಅಂಶಗಣಗಳು. ಇವುಗಳಲ್ಲಿ ಎಂಟು (ಬ್ರಹ್ಮ ೨, ವಿಷ್ಣು ೬) ತರಂಗ ಗಣಗಳಿವೆ. ಈ ಹನ್ನೆರಡು ಗಣಗಳ ಪರ್ಮ್ಯುಟೇಶನ್‌ದಿಂದ ರೂಪಗೊಂಡು,

---

೪ ಪ್ರಥಮೇತರಾಂಶದಂತೆ ಪ್ರಥಮಾಂಶವೂ ಒಂದು ಗುರುವಾಗಿರಬಹುದು; ಇಲ್ಲವೆ ಒಂದು ಲಘುವಾಗಿರಬಹುದು ಎಂಬ ನಿಯಮ ತೀರ ಪ್ರಾಚೀನ ಕಾಲದಲ್ಲಿದ್ದಿತೇನೋ. ತಮಿಳು ಛಂದೋಗ್ರಂಥಗಳಲ್ಲಿ ಇದಕ್ಕೆ ಮನ್ನಣೆಯಿದೆ. ಕನ್ನಡ ಜನಪದ ಸಾಹಿತ್ಯದಲ್ಲಿಯೂ ಇದಕ್ಕೆ ನಿದರ್ಶನಗಳು ಸಿಗುತ್ತವೆ.

ಉದಾ : । ಕಡ . ಲಿs . ಕಾ । ಳs . ತಿಂ . ದು । ಮಡ . ದs . ನೀ । ರs . ಕು . ಡ್ಬ

ದ್ರಾವಿಡ ಜನಾಂಗದಲ್ಲಿ ವ್ಯವಹರಿಸುತ್ತಿರುವ ಅನೇಕ ಉದ್ದಳತೆಯ ಚರಣಗಳನ್ನು ಎಣಿಸಿ ಹೇಳುವ ಕಾರ್ಯ ಈ ವರೆಗೂ ನಡೆದಿಲ್ಲ. ಗಣಿತದೃಷ್ಟಿಯಿಂದ ಹೇಳುವುದಾದರೆ ಅಂಶವೃತ್ತದ ಅತಿ ಸಣ್ಣ ಚರಣ ೧ ಗಣದ್ದು, ಅಂದರೆ ೨ ಅಂಶಗಳದ್ದು. ಒಮ್ಮೆ ಬಂದ ಗಣ ಇನ್ನೊಮ್ಮೆ ಬರದಂತೆ ಯೋಜಿಸಿದರೆ ಅತಿ ದೊಡ್ಡ ಚರಣ ೧೨ ಗಣದ್ದು, ಅಂದರೆ ೩೨ ಅಂಶ (ಬ್ರಹ್ಮದ ೮ ಅಂಶ, ವಿಷ್ಣುವಿನ ೨೪ ಅಂಶ) ಗಳದ್ದು. ಈ ೨ ಅಂಶ ೩೨ ಅಂಶಗಳ ಮಧ್ಯದ ಪರ್ಮಿಟೇಶನ್‌ದಿಂದ ಒಟ್ಟು ೧,೩೦,೨೦,೬೧,೩೪೪ ಬಗೆಯ ಚರಣಗಳಾಗುತ್ತವೆ.

ಒಂದು ವೇಳೆ ಇಲ್ಲಿಯ ಪ್ರತಿಯೊಂದು ಚರಣದ ಕೊನೆಗೆ ಒಂದು ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಚರಣಸಂಖ್ಯೆ ದ್ವಿಗುಣಿತಗೊಂಡು ೨,೬೦,೪೧,೨೨,೬೮೮ ಆಗುತ್ತದೆ. ಒಮ್ಮೆ ಬಂದ ಗಣ ಇನ್ನೊಮ್ಮೆ ಬರಲು ಅವಕಾಶ ಕೊಟ್ಟರೆ ಈ ಸಂಖ್ಯೆ ೨,೨೯,೬೬,೩೬,೧೪,೮೬,೪೨೮ ನ್ನು ತಲುಪುತ್ತದೆ. ಇಲ್ಲಿಯೂ ಪ್ರತಿಯೊಂದು ಚರಣದ ಕೊನೆಗೆ ಒಂದು ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಚರಣಸಂಖ್ಯೆಯೂ ದ್ವಿಗುಣಿತಗೊಂಡು ೪,೫೯,೩೨,೭೨,೨೯,೭೨,೮೫೬ ಆಗುತ್ತದೆ.[೫]

ಹೀಗೆ ಮೂಲದ ೪ ಬ್ರಹ್ಮಗಣ, ೮ ವಿಷ್ಣುಗಣಗಳನ್ನು ಪುನರುಕ್ತವಾಗದಂತೆ, ಪುನರುಕ್ತವಾಗುವಂತೆ ಬಳಸಿಕೊಂಡು, ಬೇಕಿದ್ದರೆ ಚರಣಾಂತ್ಯದಲ್ಲಿ ಒಂದು ಅಂಶವನ್ನು ಹೊಂದಿಸಿಕೊಂಡು ಅನೇಕ ಉದ್ದಳತೆಯ ಚರಣಗಳು ರೂಪಗೊಳ್ಳುತ್ತಿದ್ದ ಕಾಲವೊಂದಿತ್ತು[೬]. ಆಗ ಅಂಶವೃತ್ತಗಳು ತರಂಗದಿಂದ ತೊನೆಯುತ್ತಿದ್ದವು. ಇದು ಅಂಶಗಣಗಳ ಬಳಕೆಯ ಪ್ರಥಮ ಅವಸ್ಥೆ.

ದ್ವಿತೀಯ ಅವಸ್ಥೆ

ಈ ರೀತಿ ಮೂಲ ಅಂಶಗಣಗಳು ವ್ಯವಹರಿಸುತ್ತಿರುವಾಗ ಸಂಸ್ಕೃತದ ಅಕ್ಷರಗಣ ಮತ್ತು ಪ್ರಾಕೃತದ ಮಾತ್ರಾಗಣಗಳು ನಮ್ಮ ನಾಡನ್ನು ಪ್ರವೇಶಿಸಿದವು. ಇವುಗಳಲ್ಲಿ ಅಕ್ಷರಗಣದ ಪ್ರಭಾವಕ್ಕೆ ಪಕ್ಕಾಗದ ಅಂಶಗಣಗಳು, ಅನಿವಾರ್ಯವಾಗಿ ಮಾತ್ರಾಗಣದ ಪ್ರಭಾವಕ್ಕೆ ಗುರಿಯಾದವು. ಇದಕ್ಕೆ ಕಾರಣ, ಅಂಶಛಂದಸ್ಸಿನಂತೆ ಮಾತ್ರಾಛಂದಸ್ಸೂ ಬಹುಮಟ್ಟಿಗೆ ಲಯಾನುವರ್ತಿಯಾಗಿರುವುದು.

ಈಗ ತರಂಗಗುಣವಿಲ್ಲದ ಪ್ರಥಮಾಂಶ ಹಾಗೆಯೇ ಉಳಿದು ತರಂಗಗುಣವುಳ್ಳ ಪ್ರಥಮೇತರ ಅಂಶಗಳಲ್ಲಿ ಮಾತ್ರಾಛಂದಸ್ಸಿನ ಪ್ರಭಾವ ಪ್ರವೇಶ ಮಾಡಿತು. ಅಂದರೆ ಪ್ರಥಮೇತರಾಂಶಗಳಲ್ಲಿ ಒಂದು ಗುರುವಿನ (= ಗುರು ಅಂಶದ) ಬದಲು ಎರಡು ಲಘು ಬರುವುದು, ಒಂದು ಲಘುವಿನ (= ಲಘು ಅಂಶದ) ಬದಲು ಎರಡು ಲಘು ಬರು

---

[೫] ಶ್ರಮವಹಿಸಿ ಈ ಲೆಕ್ಕ ಮಾಡಿಕೊಟ್ಟವರು ಕರ್ನಾಟಕ ವಿಶ್ವವಿದ್ಯಾಲಯದ ಗಣಿತ ವಿಭಾಗದ ಪ್ರಾಧ್ಯಾಪಕರಾದ ಸ್ನೇಹಿತ ಡಾ. ವ್ಹಿ. ಎನ್. ಕುಲಕರ್ಣಿಯವರು.

[೬] ನಮಗೆ ಗೊತ್ತಿರುವಂತೆ ಇವುಗಳಲ್ಲಿ ಈಗ ಶುದ್ಧ ಅಂಶನಿಷ್ಠವಾಗಿರುವುದೆಂದರೆ ಸಾಂಗತ್ಯವೃತ್ತ. ಆದರೆ ಕೆಲವರು ಇಲ್ಲಿಯೂ ಅಂಶನಿಯಮ ಮೀರಿದ್ದಾರೆ.

ವುದು ರೂಢಗೊಂಡಿತು.[೬] ಇದರಿಂದ ಮೂಲ ಅಂಶಗಣಗಳು ಮಾತ್ರಾನಿಷ್ಠ ಅಂಶ ಗಣಗಳಾಗಿ ಬ್ರಹ್ಮ, ವಿಷ್ಣುಗಳ ಗಣಸಾಧ್ಯತೆಗಳು ಕೆಳಗಿನಂತೆ ಬೆಳೆದುನಿಂತವು.

ಬ್ರಹ್ಮಗಣ

ಮೂಲ ಅಂಶಗಣ			ಮಾತ್ರಾನಿಷ್ಠ ಅಂಶಗಣ	
—	—	——→	—	∪∪
∪∪	—	——→	∪∪	∪∪
			ಅಥವಾ	
—	∪S	——→	—	∪∪
∪∪	∪S	——→	∪∪	∪∪

ಹೀಗೆ ೪ ಮೂಲ ಬ್ರಹ್ಮಗಣಗಳ ಜೊತೆಗೆ ೨ ಮಾತ್ರಾನಿಷ್ಠ ಬ್ರಹ್ಮಗಣಗಳು ಹೊಸದಾಗಿ ಹುಟ್ಟಿ, ಬ್ರಹ್ಮಗಣದ ಸಂಖ್ಯೆ ೪ ರಿಂದ ೬ ಕ್ಕೇರಿತು. ಇಲ್ಲಿ ಮೂಲದ ಎರಡೂ ತರಂಗ ಗಣಗಳು ನಿಸ್ತರಂಗವಾದವು. ಇದೇ ರೀತಿ ಮೂಲದ ವಿಷ್ಣುಗಣಗಳು ಕೆಳಗಿ ನಂತೆ ಬೆಳೆದುನಿಂತವು.

ವಿಷ್ಣುಗಣ

ಮೂಲಅಂಶಗಣ			ಮಾತ್ರಾನಿಷ್ಠ ಅಂಶಗಣ	
—	—·—			
—	—·∪S	——→	—	—·∪∪
∪∪	—·—			
∪∪	—·∪S	——→	∪∪	—·∪∪
—	∪S·—	——→	—	∪∪·—
—	∪S·∪S	——→	—	∪∪·∪S*
		——→	—	∪S·∪∪*
		——→	—	∪∪·∪∪
∪∪	∪S·—	——→	∪∪	∪∪·—
∪∪	∪S·∪S	——→	∪∪	∪∪·∪S*
		——→	∪∪	∪S·∪∪*
		——→	∪∪	∪∪·∪∪

೬ ಈ ಸಂಗತಿಯನ್ನು ಕೈಪಿಡಿಕಾರರು, ಡಾ. ಡಿ. ಎಸ್. ಕರ್ಕಿ ಅವರು ಗುರುತಿಸಿದ್ದಾರೆ. ನೋಡಿರಿ. ಕನ್ನಡ ಕೈಪಿಡಿ (೧೯೫೫) ಪು. ೯೯, ಕನ್ನಡ ಛಂದೋವಿಕಾಸ (೧೯೫೬) ಪು. ೬೬–೬೭

* ಈ ನಾಲ್ಕು, ಮಾತ್ರಾನಿಷ್ಠ ಅಂಶಗಣಗಳಾಗಿದ್ದರೂ ಇಲ್ಲಿ ಲಘುಅಂಶಗಳು ಉಳಿದುಕೊಂಡ ಕಾರಣ ತರಂಗಕ್ಕೆ ಅವಕಾಶವುಂಟು.

ಹೀಗೆ ೮ ಮೂಲ ವಿಷ್ಣುಗಣಗಳ ಜೊತೆ ೧೦ ಮಾತ್ರಾನಿಷ್ಠ ವಿಷ್ಣುಗಣಗಳು ಹೊಸದಾಗಿ ಹುಟ್ಟಿ, ವಿಷ್ಣುಗಣದ ಸಂಖ್ಯೆ ೮ ರಿಂದ ೧೮ ಕ್ಕೇರಿತು. ಇಲ್ಲಿ ಮೂಲದ ೬ ತರಂಗ ಗಣಗಳು ನಿಸ್ತರಂಗವಾದವು.

ಒಟ್ಟಿನಲ್ಲಿ ಮೂಲದ ಬ್ರಹ್ಮ, ವಿಷ್ಣುವೆಂಬ ಎಲ್ಲ ೧೨ ಗಣಗಳಿಗೆ ಬದಲಾಗಿ ಮೂಲ ಮತ್ತು ಮಾತ್ರಾನಿಷ್ಠ ಬ್ರಹ್ಮವಿಷ್ಣುವೆಂಬ ೨೪ ಗಣಗಳು ವ್ಯವಹರಿಸತೊಡಗಿದವು. ಈಗ ಎಲ್ಲ ೮ ತರಂಗಗಣಗಳು ನಿಸ್ತರಂಗವಾದುವು.

ಗಣಿತ ದೃಷ್ಟಿಯಿಂದ ಹೇಳುವುದಾದರೆ ಮೂಲ ಮತ್ತು ಮಾತ್ರಾನಿಷ್ಠ ಅಂಶ ವೃತ್ತದ ಅತಿ ಸಣ್ಣ ಚರಣ ೧ ಗಣದ್ದು, ಅಂದರೆ ೨ ಅಂಶದ್ದು. ಒಮ್ಮೆ ಬಂದ ಗಣ ಇನ್ನೊಮ್ಮೆ ಬರದಂತೆ ಯೋಜಿಸಿದರೆ ಅತಿ ದೊಡ್ಡ ಚರಣ ೨೪ ಗಣದ್ದು, ಅಂದರೆ ೬೬ ಅಂಶದ್ದು (ಬ್ರಹ್ಮದ ೧೨ ಅಂಶ, ವಿಷ್ಣುವಿನ ೫೪ ಅಂಶ). ಈ ೨ ಅಂಶ ೬೬ ಅಂಶಗಳ ಪರ್ಮಿಟೇಶನ್‌ದಿಂದ ಅಗಣಿತ ಬಗೆಯ ಚರಣಗಳಾಗುತ್ತವೆ. ಒಂದು ವೇಳೆ ಇಲ್ಲಿಯೂ ಪ್ರತಿಯೊಂದು ಚರಣದ ಕೊನೆಗೆ ೧ ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಸಂಖ್ಯೆ ದ್ವಿಗುಣಿತಗೊಳ್ಳುತ್ತದೆ. ಒಮ್ಮೆ ಬಂದ ಗಣ ಇನ್ನೊಮ್ಮೆ ಬರಲು ಅವಕಾಶ ಮಾಡಿಕೊಟ್ಟರೆ ಈ ಸಂಖ್ಯೆ ಅಗಣಿತದಿಂದ ಅನಂತಕ್ಕೇರುತ್ತದೆ. ಇಲ್ಲಿಯೂ ಪ್ರತಿಯೊಂದು ಚರಣದ ಕೊನೆಗೆ ಒಂದು ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಅನಂತ ಸಂಖ್ಯೆ ದ್ವಿಗುಣಿತಗೊಳ್ಳುತ್ತದೆ.

ಹೀಗೆ ೬ ಬ್ರಹ್ಮಗಣ ೧೮ ವಿಷ್ಣುಗಣಗಳನ್ನು ಪುನರುಕ್ತವಾಗದಂತೆ, ಪುನರುಕ್ತವಾಗುವಂತೆ ಯೋಜಿಸಿಕೊಂಡೂ, ಬೇಕಿದ್ದರೆ ಚರಣಾಂತ್ಯದಲ್ಲಿ ಒಂದು ಗುರುವನ್ನು ಹೊಂದಿಸಿಕೊಂಡೂ ಅನೇಕ ಉದ್ದಳತೆಯ ಚರಣಗಳು ರೂಪಗೊಳ್ಳಲು ಪ್ರಾರಂಭವಾಯಿತು.

ಈ ಗಣಗಳ ಬಳಕೆ ವರ್ಧಿಸಿದಂತೆ ಅಂಶಗಣಗಳ ಶರೀರದಲ್ಲಿ ಈ ಕೆಳಗಿನ ಕೆಲವು ವ್ಯತ್ಯಾಸಗಳು ತಲೆದೋರಿದವು :

೧. ವೃತ್ತಗಳಲ್ಲಿಯೂ ಮೂಲ ಅಂಶಗಣಗಳು ಪಾಠಾಂತರ ಮಾಡಿಕೊಂಡು ಮಾತ್ರಾನಿಷ್ಠ ಅಂಶಗಣಗಳಾಗತೊಡಗಿದವು. ಉದಾ :

ಅಂಶಛಂದಸ್ಸು : । ಅ. ನ್ನs. ವ । ನೀ. ಡೂ. ದು । ನ. ನ್ನಿs. ಯು । ನುಡಿ. ವೂ. ದು೮

ಮಾತ್ರಾಛಂದಸ್ಸು : । ಅ ನ್ನವ.ನು । ನೀ.ಡುವು.ದು । ನ.ನ್ನಿಯು.ನು । ನುಡಿ.ಯುವು.ದು

೮ ಸರ್ವಜ್ಞನು ಶುದ್ಧ ಅಂಶಛಂದಸ್ಸಿನಲ್ಲಿ ಬರೆದಿದ್ದರೆ ಇದ್ದಿರಬಹುದಾದ ಚರಣವಿದು.

ಇಲ್ಲಿ ಮಧ್ಯದ ಒಂದು ಲಘು ಅಂಶಕ್ಕೆ ಬದಲು ೨ ಲಘು, ಒಂದು ಗುರು ಅಂಶಕ್ಕೆ ಬದಲು ೨ ಲಘು ಬಂದಿರುವುದನ್ನು ಗಮನಿಸಬೇಕು.

೨. ವೃತ್ತಗಳು ಸೃಷ್ಟಿಯಾಗುವಾಗ ಅಂಶಗಣಗಳ ಮಧ್ಯೆ ಕಣ್ಣು ತಪ್ಪಿಸಿ ಮಾತ್ರಾನಿಷ್ಠ ಅಂಶಗಣಗಳೂ ಅಲ್ಲಲ್ಲಿ ಸೇರತೊಡಗಿದವು. ಉದಾ :

। ಸ. ತ್ಯ. ರ । ನುಡಿ. ತೀ. ರ್ಥ । ನಿ. ತ್ಯ. ರ । ನಡೆ. ತೀ. ರ್ಥ
। ಉ. ತ್ತಮ. ರ । ಸಂಗ । ವದು. ತೀ. ರ್ಥ । ಹರಿ. ವ. ನೀ
। ರೆ. ತ್ತಣ. ದು । ತೀ. ರ್ಥ । ಸ. ರ್ವ. ಜ್ಞ

ಇಲ್ಲಿ ಎಲ್ಲವೂ ಮೂಲಅಂಶಗಣಗಳಾಗಿದ್ದರೆ 'ಉ. ತ್ತಮ. ರ' ಮತ್ತು 'ರೆ. ತ್ತಣ. ದು' ಮಾತ್ರಾನಿಷ್ಠ ಅಂಶಗಣಗಳಾಗಿವೆ.

೩. ಮೂಲ ಅಂಶಛಂದಸ್ಸಿನ ಪದ್ಯವನ್ನು ಮಾತ್ರಾನಿಷ್ಠ ಅಂಶಛಂದಸ್ಸಿನ ದೃಷ್ಟಿಯಿಂದ ಹಾಡುವುದು ಪ್ರಾರಂಭವಾಯಿತು. ಅಂದರೆ ಪ್ರಥಮೇತರ ಸ್ಥಾನದ ಲಘುರೂಪದ ಎರಡು ಸ್ವತಂತ್ರ ಅಂಶಗಳನ್ನು ಒಂದು ಅಂಶವನ್ನಾಗಿ ಭಾವಿಸುವುದು ರೂಢವಾಯಿತು. ಉದಾ :

ವಿ ಬ್ರ ವಿ ಬ್ರ ವಿ ವಿ ಗು
। ಮುರ.ರಿ.ಪು।ಬೊ.ಮ್ಮ।ಮುರ.ರಿ.ಪು।ಬೊ.ಮ್ಮ।ಮುರ.ರಿ.ಪು।ಶೂ.ಲ.ಧ।ರ

ನಾಗವರ್ಮನ ಪ್ರಕಾರ ಮೇಲಿನಂತೆ ಇದರ ಪ್ರಸ್ತಾರ. ಆದರೆ ಇಂದು

ಬ್ರ ಬ್ರ ಬ್ರ ಬ್ರ ಬ್ರ ಬ್ರ ಗು
। ಮುರ.ರಿಪು।ಬೊ.ಮ್ಮ।ಮುರ.ರಿಪು।ಬೊ.ಮ್ಮ।ಮುರ.ರಿಪು।ಶೂ.ಲಧ।ರ

ಹೀಗೆ ಸರ್ವ ಬ್ರಹ್ಮಲಯದಲ್ಲಿ ಹಾಡುತ್ತಾರೆ. ಮೂಲತಃ ಸ್ವತಂತ್ರವಾಗಿದ್ದ ರಿ, ಪು ಎಂಬ ಎರಡು ತರಂಗ ಅಂಶಗಳು ಹೊಂದಿಕೊಂಡು ಒಂದು ನಿಸ್ತರಂಗ ಅಂಶ ರೂಪ ತಾಳಿದೆ. ಹಾಗೆಯೇ ಲ, ಧ ಎಂಬ ಎರಡು ಸ್ವತಂತ್ರ ತರಂಗ ಅಂಶಗಳು ಹೊಂದಿಕೊಂಡು ಒಂದು ನಿಸ್ತರಂಗ ಅಂಶ ರೂಪತಾಳಿದೆ.

೪. ಮಾತ್ರಾನಿಷ್ಠ ಅಂಶಛಂದಸ್ಸಿನ ಪದ್ಯವನ್ನು ಮೂಲ ಅಂಶಛಂದಸ್ಸಿನ ದೃಷ್ಟಿಯಿಂದ ನೋಡುವುದೂ ಪ್ರಾರಂಭವಾಯಿತು. ಉದಾ :

ವಿ ವಿ ವಿ ಬ್ರ
। ಹಗ. ಲೆ. ನ್ನದೆ । ಇರು. ಳೆ. ನ್ನದೆ । ಗಗ. ನಾಂ. ಗಣ । ದ. ಲ್ಲಿ

ಈ ಪದ್ಯದ ನಿಜವಾದ ಪ್ರಸ್ತಾರವಿದು. ಆದರೆ ಪ್ರಥಮೇತರಸ್ಥಾನದಲ್ಲಿ ಗುರುವಿದ್ದರೂ ಒಂದು ಅಂಶ, ಲಘುವಿದ್ದರೂ ಒಂದು ಅಂಶವೆಂದು ನಂಬಿದ ಕನ್ನಡ ಕೈಪಿಡಿನಿಷ್ಠರು,

ರು ರು ರು ಬ್ರ
ಹಗ. ಲೆ. ನ್ನ. ದೆ । ಇರು. ಳೆ. ನ್ನ. ದೆ । ಗಗ. ನಾಂ. ಗ. ಣ । ದ.ಲ್ಲಿ

ಎಂದೂ ಈ ಪದ್ಯದ ಛಂದಸ್ಸನ್ನು ತಪ್ಪಾಗಿ ಭಾವಿಸುತ್ತಾರೆ. ಕಿವಿಯ ಛಂದಸ್ಸು ಕಣ್ಣಿನ ಛಂದಸ್ಸಾದುದರ ಫಲವಿದು.

ಮಾತ್ರಾಛಂದಸ್ಸಿನ ಆಗಮನದಿಂದ ಹೀಗೆ ಅಂಶಛಂದಸ್ಸು ತನ್ನ ಮೂಲ ಲಯವಿನ್ಯಾಸವನ್ನು ಬದಲಿಸಿಕೊಂಡಿತು. ಇದರಿಂದ ತರಂಗಗಣಗಳೆಲ್ಲ ನಿಸ್ತರಂಗ ಗೊಂಡು ಲಯದ ಮೇಲಿನ ಒತ್ತು ತಾಳದಮೇಲೆ ಬಂದಿತು. ಅಂಶಛಂದಸ್ಸು 'ನಾದಯುಕ್ತಾ, ತಾಲಮುಕ್ತಾ' ಎಂಬ ಮಾತು 'ನಾದಮುಕ್ತಾ, ತಾಲಯುಕ್ತಾ' ಎಂದು ತಿರುವುಮುರುವಾಯಿತು.

■ ■

ಗಂಡ ಹೆಂಡರಿಗೆ
ಮುಗದಾವ ಆ ಕ್ವಾಟಿ

(ಜಾನಪದ ದುರಂತಗೀತೆ)

ಎಚ್. ಬಾಲರಾಜು
ಎಸ್. ಎಸ್. ಹಿರೇಮಠ

ಸೀರಂಜಿ ಪಟ್ಟಣಕ ಎತ್ಹೋಗಿ ನಿಂತಾವ
ಸೀರಂಜಿ ಪಟ್ಟಣದ ಸೂಳೆರೇನು ಮಾಡತಾರ ।
ಹಾಲೀಲೆ ಮೊಸರೀಲೆ ಕೆಸರ ಕಲಸತಾರ
ಬೆಲ್ಲಾದ ಅಚ್ಚೀಲೆ ತರಗಳ ಕಟ್ಟುತಾರ ।
ಕಬ್ಬಿನ ಗಣಕೀಲೆ ತೊಲೆಗಂಬ ನಿಲ್ಲಿಸುತಾರ
ಮೆಂತ್ಯಾದ ಕಡ್ಡೀಲೆ ಜಂತಿ ಹರವುತಾರ ।
ಹಾಲೀಲೆ ಮೊಸರೀಲೆ ಮೇಲಮುದ್ದಿ ಹಾಕುತಾರ
ಕುಂಬಾಳ ಹೂವಿಲೆ ಕುಂಬಿ ಎಳೆಯುತಾರ ।
ಮಲ್ಲಿಗೆ ಹೂವಿಲೆ ಮಲ್ಲ ಮಾಡುತಾರ
ಕಣಗಲ ಹೂವಿಲೆ ಕಾಣೆ ತಿರುವುತಾರ ।
ಬಸವನ ಸೆಗಣೀಲೆ ನೆಲವ ಸವರುತಾರ
ಹಗಲಲ್ಲ ಕಟ್ಟೀದ ಕ್ವಾಟಿ ಮಿಂಚೇಲಿ ಬಿದ್ಹೋಗೇತೆ ।
ಹಂದರದಡಿಯಾಗ ಬಂದನ ದೋಸಿ ಬೀರಣ್ಣ
ಇದ್ದದ್ದಿದ್ದಂಗ ಹೇಳ ದೋಸಿ ಬೀರಣ್ಣ ।
ಮೇಲಾದೊತ್ತಿಗಿ ತಗದಾನ ದೋಸಿ ಬೀರಣ್ಣ
ಮಗನ ಬಸರಡ್ಡಿಯ ಬೇಡಿತೊ ಆ ಕ್ವಾಟಿ ।
ಬೆಳ್ಳೀಯ ಬಟಲಾಗ ಒಳ್ಳೆಣ್ಣಿ ತೊಗೊಂಡು
ನೆಲ್ಲಿ ಮಲ್ಲಮ್ಮನ ತಲೆಗಚ್ಚೀರೆ ।
ಕಂಚಿನ ಬಟಲಾಗ ಮಿಂಚೆಣ್ಣಿ ತೊಗೊಂಡು
ಕೆಂಚಿ ಮಲ್ಲಮ್ಮನ ತಲೆಗಚ್ಚೀರವ್ವ ।
ಹತ್ತ ಕೊಪ್ಪರಿಕೆ ಮೇಲೆ ಉಕ್ಕುತ ಕುದಿಯುತ
ಉತ್ತುತ್ತಿನಾಕಿ ಸುರಿ ಮರಳಿ ।
ಉತ್ತುತ್ತಿನಾಕಿ ಸುರುಮರಳಿದ ನೀರು
ಗಚ್ಚೀನ ಬಚ್ಚಲಕೆ ಹಿಡಿದಾರ ।

ಆರುಂ ಕೊಪ್ಪರಿಕೆ ನೀರು ಹಾರೂತ ತೂರಂತ
ನಾರಿ ಮಲ್ಲಮ್ಮನ ತೆಲಿಗೆರಿವಾಗ ।
ಎಚ್ಚೇರಾಗಿರುವ ಪಟ್ಟದಂಚಿನ ಸೀರಿ
ನಲ್ಲಿ ಮಲ್ಲವ್ವಗ ಉಡಕೊಡಿರವ್ವ ।
ಹಗ್ಗದ ಮೇಲಿರುವ ಮಂಗ್ಗಿ ಬಣ್ಣದ ಕುಬಸ
ನಿದ್ರಿ ಮಲ್ಲವ್ವಗ ತೊಡಕೊಡಿರವ್ವ ।
ಆರ ಕಾಲಿನೇಣಿ ಆ ಕ್ವಾಟಿ ನಿಲೆನಾಕಿ
ಹೊಯ್ದಾರ ಮಲ್ಲಮ್ಮನ ಕ್ವಾಟೆಮ್ಯಾಕ ।
ದಂಡಿಗೋದ ಬಸರಡ್ಡಿಗೆ ರಾತ್ರೀನೆಳೆದಾಗ
ಕೆಟ್ಟ ಕೆಟ್ಟ ಸಪುನ ಗವುದಾವ ಮನದಾಗ ।
ನೀಲ್‌ಗುದರಿ ಹತ್ಯಾನ ನಿಡಛತ್ರಿಕಿಡದಾನ
ಬಂದ್ ತಾಯಿ ಮನೆಗೆ ನಿಲೆ ನಿಂತ ।
ನಿಂಗವ್ ನೀರ ಕೊಡ ನೀಲವ್ ನೀರ ಕೊಡ
ನಿಮ್ಮಣ್ಣ ಬಸರಡ್ಡಿ ನಿಂತೈದಾನ ।
ನಿಂಗವ್ವ ನೀರ ಕೊಡಲಿಕ್ಕೆ ನೀಲವ್ ನೀರ ಕೊಡಲಿಕ್ಕೆ
ನೀವ್ ತಂದಂತ ಮಲ್ಲಿ ಎಲ್ಲೋಗ್ಯಾಳವ್ವ ।
ತೌರೇನ ಮನಿಯಾಗ ತಮ್ಮಾನ ಮದುವೆಂತೆ
ನಿನ್ಯೋಗ್ಯಾಳಪ್ಪ ತವರೀಗೆ ।
ನೀಲಗುದರಿ ಹತ್ಯಾನ ನೀಲಛತ್ರಿ ಹಿಡಿದಾನ
ಹೋಗಿ ಅತ್ತೀ ಮನಿಗೆ ನಿಲೆನಿಂತ ।
ಗಂಗವ್ವ ನೀರ ಕೊಡ ಗೌರವ್ವ ನೀರ ಕೊಡ
ನಿಮ್ಮಾವ ಬಸರಡ್ಡಿ ಬಂದು ನಿಂತೈದಾರ ।
ಗಂಗವ್ವ ನೀರ್ ಕೊಡಲಿಕ್ಕೆ ಗೌರವ್ವ ನೀರ್ ಕೊಡಲಿಕ್ಕೆ
ನೀವ್ ಕೊಟ್ಟಂತ ಮಲ್ಲಿ ಎಲ್ಲೋಗ್ಯಾಳವ್ವ ।
ಸಣ್ಣಾಕಿ ಇರ್ಲಿಕ್ಕೆ ಬಾಲ ದಾರಿ ಎರೆದೆ
ಕಂದಮ್ಮನ ಮಾರಿ ನಾ ಅರಿಯಪ್ಪ ।
ಚಿಕ್ಕಾಕಿ ಇರ್ಲಿಕ್ಕೆ ಪುತ್ರಾಗ ದಾರಿ ಎರೆದೆ
ಬಾಲಮ್ಮನ ಮಾರಿ ನಾನರಿಯೆನಪ್ಪ ।
ನೀಲಗುದರಿ ಹತ್ಯಾನ ನೀಲಛತ್ರಿಕಿಡದಾನ
ಬಂದು ಮಂಚಕ ಮಲಗ್ಯಾನ ।
ನಿಂಗವ್ವ ನೀನ ಎಬ್ಬಿಸ ನೀಲವ್ವ ನೀನ ಎಬ್ಬಿಸ
ನಿಮ್ಮಣ್ಣ ಬಸರಡ್ಡಿ ಬಂದು ಮನಿಗೈದಾರ ।

ಒಂದು ಸಲ ಏಬಿಸಾರ ಎರಡು ಸಲ ಏಬಿಸಾರ
ಮೂರನೇ ಸಾರಿಗೆ ಅಣ್ಣ ಸತ್ತಹೋಗಿದ್ದಾನ ।
ಒಂದು ಬಂಡಿಲೆ ಅಂಗಿ ಒಂದು ಬಂಡಿಲೆ ಪಂಜಿ
ಬಂದವ್ ಬಸರಡ್ಡಿ ಬಂಡಿಗಳು ।
ಹತ್ತ ಕಾಲಿನೇಣಿ ಆ ಕ್ವಾಟಿಗ್ ನಿಲೆಹಾಕಿ
ಹೊಯ್ದಾರ ಬಸರಡ್ಡಿನಾ ಕ್ವಾಟಿ ವ್ಯಾಕೆ ।
ಒಂದ ಪುಟ್ಟಿ ಕೆಸರೀಗೆ ಒಂದ ಪುಟ್ಟಿ ಕಲ್ಲೀಗೆ
ಗಂಡಹೆಂಡರಿಗೆ ಮುಗದಾವ ಆ ಕ್ವಾಟಿ ।
ಒಂದ ಪುಟ್ಟಿ ಹೆಂಡಿಗೆ ಒಂದ ಪುಟ್ಟಿ ಅರ್ಲೀಗೆ
ಗಂಡಹೆಂಡರಿಗೆ ಮುಗದಾವ್ ಆ ಕ್ವಾಟಿ ॥

■ ■

ಕವಿ ಶಾಂತಿಕೀರ್ತಿಮುನಿ

ಬಿ. ಬಿ. ಮಹೀಶವಾಡಿ

ಕರ್ನಾಟಕ ಕವಿಚರಿತೆಯ ದ್ವಿತೀಯ ಸಂಪುಟದಲ್ಲಿ ಆರ್. ನರಸಿಂಹಾಚಾರ್ಯರು ಶಾಂತಿಕೀರ್ತಿಮುನಿಯ ಬಗ್ಗೆ ಬರೆಯುತ್ತ ಹೀಗೆ ಹೇಳಿದ್ದಾರೆ :

'ಶಾಂತಿಕೀರ್ತಿಮುನಿ (೧೫೧೯) : ಈತನು ಶಾಂತಿನಾಥ ಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಕವಿ. ತುಳುದೇಶದೊಳಗಣ ವೇಣುಪುರದ ವೃಷಭ ಜಿನಾಲಯದಲ್ಲಿ ಈ ಗ್ರಂಥವನ್ನು ಶಕ ೧೪೪೦ ಪ್ರಮಾಥಿಯಲ್ಲಿ – ಎಂದರೆ ೧೫೧೯ ರಲ್ಲಿ ರಚಿಸಿದಂತೆ ಹೇಳುತ್ತಾನೆ ಎಂದು ಮಿ। ರೈಸ್ ಬರೆದಿದ್ದಾರೆ. ಇವನ ಗ್ರಂಥ ಶಾಂತಿನಾಥ ಚರಿತೆ. ಇದು ಸಾಂಗತ್ಯದಲ್ಲಿ ಬರೆದಿರುವಂತೆ ತೋರುತ್ತದೆ. ಸಂಧಿ ೨೩, ಇದರಲ್ಲಿ ೧೬ನೆಯ ತೀರ್ಥಂಕರನಾದ ಶಾಂತಿನಾಥನ ಕಥೆ ಹೇಳಿದೆ.'[೧]

ಮತ್ತೆ ಕರ್ನಾಟಕ ಕವಿಚರಿತೆಯ ತೃತೀಯ ಸಂಪುಟದಲ್ಲಿ ಆರ್. ನರಸಿಂಹಾಚಾರ್ಯರು ಶಾಂತಿಕೀರ್ತಿ ಎಂಬ ಇನ್ನೊಬ್ಬ ಕವಿಯ ಪರಿಚಯಮಾಡಿಕೊಟ್ಟಿದ್ದಾರೆ :

'ಶಾಂತಿಕೀರ್ತಿ (೧೭೫೫) : ಇವನು ದೇವಸೇನನ ಆರಾಧನಾಸಾರಕ್ಕೆ ಟೀಕೆಯನ್ನು ಬರೆದಿದ್ದಾನೆ. ಈತನು ಜೈನಕವಿ. ತನ್ನ ಟೀಕೆಯನ್ನು ಶಕ ೧೬೭೭ ರಲ್ಲಿ – ಎಂದರೆ ೧೭೫೫ ರಲ್ಲಿ ಬರೆದಂತೆ ಹೇಳುತ್ತಾನೆ.'[೨]

ಶಾಂತಿಕೀರ್ತಿಮುನಿ ಮತ್ತು ಶಾಂತಿಕೀರ್ತಿ ಬೇರೆಬೇರೆ ಕವಿಗಳೆಂದೂ, ಅವರು ಬೇರೆಬೇರೆ ಕಾಲದಲ್ಲಿ ಸುಮಾರು ೨೩೬ ವರ್ಷಗಳ ಅಂತರದಲ್ಲಿ ಬಾಳಿದವರೆಂದೂ, ಕವಿಚರಿತ್ರೆಕಾರರು ಸ್ಪಷ್ಟವಾದ ಅಭಿಪ್ರಾಯ ಹೊಂದಿದ್ದಾರೆ. ಕರ್ನಾಟಕ ಕವಿಚರಿತೆಯ ಸಂಪುಟಗಳು ಕಾಲಕಾಲಕ್ಕೆ ಪುನರ್ಮುದ್ರಣಗೊಳ್ಳುತ್ತ ಬಂದಿದ್ದರೂ ಕವಿಚರಿತೆಕಾರರ ಅಭಿಪ್ರಾಯಗಳನ್ನು, ಅವರು ಗತಿಸಿದಮೇಲೆ, ಹಾಗೇ ಇರಿಸಿಕೊಂಡು ಬಂದಿದ್ದಾರೆ. ದಿನಕಳೆದಂತೆ ಹೊಸ ಸಂಶೋಧನೆಗಳು ಪ್ರಕಟವಾಗಿ, ಕವಿಚರಿತ್ರೆಕಾರರ ಅನೇಕ

---

೧ ಆರ್. ನರಸಿಂಹಾಚಾರ್ಯ : ಕರ್ನಾಟಕ ಕವಿಚರಿತೆ. ಸಂ. ೨ (ತಿದ್ದಿದ ದ್ವಿ. ಮು. ೧೯೭೩) ಪು. ೧೪೬

೨ ಅದೇ – ಸಂ. ೩ (ದ್ವಿ. ಮು. ೧೯೭೪) ಪು. ೧೧೦

ಅಭಿಪ್ರಾಯಗಳನ್ನು ತಿದ್ದಿಕೊಳ್ಳುವ ಸಮಯ ಈಗ ಸನ್ನಿಹಿತವಾಗಿದೆ. ಅವುಗಳಲ್ಲಿ ಪ್ರಸ್ತುತ ಕವಿಯ ವಿಷಯವೂ ಒಂದು. ಶಾಂತಿಕೀರ್ತಿಮುನಿ ವಿರಚಿತ ಶಾಂತೀಶ್ವರ ಚರಿತಂ (ಶಾಂತಿನಾಥ ಚರಿತೆ) ಎಂಬ ಕಾವ್ಯವು ೧೯೩೮ ರಲ್ಲಿ ಎಂ. ನೇಮಿರಾಜಶಾಸ್ತ್ರಿಗಳಿಂದ ಸಂಪಾದಿಸಲ್ಪಟ್ಟು ಅಚ್ಚಾಗಿದೆ. ಅದರ ಮುನ್ನುಡಿಯಲ್ಲಿ ಕೆ. ಭುಜಬಲಿಶಾಸ್ತ್ರಿಗಳು ಹೀಗೆ ಬರೆದಿದ್ದಾರೆ :

'ಈ ಗ್ರಂಥದ ಅಂತಿಮ ಸಂಧಿಯಲ್ಲಿರುವ ೧೦೧, ೧೦೨, ೧೦೩ನೆಯ ಪದ್ಯಗಳಲ್ಲಿ ಗ್ರಂಥಕರ್ತರು, ಈ ಗ್ರಂಥವು ತೌಳವದೇಶದೊಳಗಣ ವೇಣುಪುರ (ಮೂಡಬಿದುರೆ) ದ ವೃಷಭಜಿನಾಲಯದಲ್ಲಿ ಶಕ ಸಂ. ೧೬೫೩ (ಕ್ರಿ. ಶ. ೧೭೩೨) ನೆಯ ವಿರೋಧಿಕೃತ್ ಸಂವತ್ಸರದ ಆಶ್ವೀಜ ಶುದ್ಧ ದಶಮಿ ಬುಧವಾರದಲ್ಲಿ ಸಮಾಪ್ತವಾಯಿತೆಂದೂ, ತಾವು ಮೂಲಸಂಘದೊಳಗಣ ದೇಶೀಯ ಗಣಾಂತರ್ಗತ ಕೊಂಡಕುಂದಾನ್ವಯಕ್ಕೆ ಸೇರಿದವರೆಂದೂ ಸ್ವಪರಿಚಯವನ್ನು ಸಂಕ್ಷೇಪದಿಂದ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ.'[೩]

ಕವಿಚರಿತೆಕಾರರು ಹೇಳಿದಂತೆ ಶಾಂತಿಕೀರ್ತಿಮುನಿಯ ಕಾಲ ಕ್ರಿ. ಶ. ೧೫೧೯ ಸರಿಯಲ್ಲವೆಂದೂ, ಕೆ. ಭುಜಬಲಿಶಾಸ್ತ್ರಿಯವರು ಹೇಳಿದ ಕ್ರಿ. ಶ. ೧೭೩೨ ಕವಿ ಶಾಂತಿಕೀರ್ತಿಮುನಿಯ ಕಾಲ ಸರಿಯಾಗಿದೆಯೆಂದೂ ಗೊತ್ತಾಗುವುದು. ಶಾಂತಿನಾಥ ಚರಿತೆಯ ಮೂಲಪ್ರತಿಯನ್ನು ಹಾಗೂ ಅದರಲ್ಲಿರುವ ಕವಿ ಹೇಳಿದ ಕಾಲಸೂಚಕ ಪದ್ಯವನ್ನೂ ಕವಿಚರಿತಕಾರರು ಕಂಡಂತೆ ತೋರುವುದಿಲ್ಲ. ರೈಸ್ ಅವರ ಅಭಿಪ್ರಾಯವನ್ನೆ ಎತ್ತಿಕೊಂಡು ಹೇಳಿದ್ದಾರೆ. 'ಇದು ಸಾಂಗತ್ಯದಲ್ಲಿ ಬರೆದಿರುವಂತೆ ತೋರುತ್ತದೆ'– ಎಂಬ ಕವಿಚರಿತೆಕಾರರ ವಾಕ್ಯದಿಂದಲೂ ಆ ಮಾತು ಸ್ಪಷ್ಟವಾಗುತ್ತದೆ; ಅವರು ಕೃತಿಯನ್ನು ನೋಡಿಲ್ಲ. ಅದರಂತೆ, ಅವರು ಸೂಚಿಸಿದ ಕೃತಿಯ ಸಂಧಿಗಳು ೨೩ ಎಂಬುದೂ ಸರಿಯಾಗಿಲ್ಲ. ಈಗ ಪ್ರಕಟವಾದ ಶಾಂತೀಶ್ವರ ಚರಿತದಲ್ಲಿ ಕೇವಲ ೧೧ ಸಂಧಿಗಳುಂಟು. ಗ್ರಂಥ ಅಷ್ಟರಲ್ಲಿಯೇ ಪೂರ್ಣವಾಗಿದೆ.[೪]

ಕ್ರಿ. ಶ. ೧೭೩೨ ರಲ್ಲಿ ಬರೆದ ಶಾಂತೀಶ್ವರಚರಿತ ಹಾಗೂ ೧೭೫೫ ರಲ್ಲಿ ಬರೆದ ದೇವಸೇನನ ಆರಾಧನಾಸಾರದ ಟೀಕೆ ಶಾಂತಿಕೀರ್ತಿ ಎಂಬ ಒಬ್ಬನೇ ಕವಿಯಿಂದ ರಚಿಸಲ್ಪಟ್ಟ ಕೃತಿಗಳೆಂದು ತಿಳಿಯಲು ಹೆಸರು ಮತ್ತು ಕಾಲ ಅನುಕೂಲವಾಗಿವೆ.

ಶಾಂತಿಕೀರ್ತಿಮುನಿ ತನ್ನ ಶಾಂತೀಶ್ವರಚರಿತೆಯ ಕೊನೆಯ ಸಂಧಿಯಲ್ಲಿ[೫]– ಕವಿಪ್ರಶಸ್ತಿಯಲ್ಲಿ ಹೀಗೆ ಹೇಳಿಕೊಂಡಿದ್ದಾನೆ :

---

೩ ಸಂ : ಎಂ. ನೇಮಿರಾಜಶಾಸ್ತ್ರಿ : ಶ್ರೀ ಶಾಂತೀಶ್ವರಚರಿತಂ (೧೯೩೮) ಮುನ್ನುಡಿ–ಪು ii

೪ ಸಂ : ಎಂ. ನೇಮಿರಾಜಶಾಸ್ತ್ರಿ : ಶ್ರೀ ಶಾಂತೀಶ್ವರಚರಿತಂ (೧೯೩೮)

೫ ಅದೇ– ಪು. ೯೪

ಭರತಾರ್ಯಖಂಡದ ತೌಳವ ದೇಶದ
ನಿರುಪಮ ವೇಣುಪುರದ
ಪುರುಪರಮೇಶ ಶ್ರೀಪಾದಸನ್ನಿಧಿಯೊಳು
ಪರಿಪೂರ್ಣವಾಗಿ ಈ ಕೃತಿಯಂ (೧೧ : ೧೦೧)

ಧರಣಿಪ ಶಕಕಾಲ ಸಂದೊಂದುಸಾವಿರ
ದರುನೂರ್ರೈವತ್ತಮೂರನೆಯ
ವಿರೋಧಿಕೃತ್ಸಂವತ್ಸರಾಶ್ವೀಜ ಶುದ್ಧ ಭಾ
ಸುರ ದಶಮಿಯ ಬುಧವಾರ (೧೧: ೧೦೨)

ಶ್ರೀಮೂಲಸಂಘ ದೇಶಿಯಗಣ ಕೊಂಡಕುಂ
ದಾಮುನಿವಂಶಾಬ್ಜ ಭಾನು
ಕಾಮವಿಜಯ ಶಾಂತಿಕೀರ್ತಿಮುನಿಪ ಪೇಳ್ದ
ಸ್ವಾಮಿಶಾಂತೀಶಚರಿತವಂ (೧೧: ೧೦೩)

ಶಕಕಾಲ ೧೬೫೩ (ಸಾವಿರದರುನೂರ್ರೈವತ್ತಮೂರನೆಯ) – ಎಂದರೆ ಕ್ರಿ. ಶ. ೧೭೩೧ (=೧೬೫೩+೭೮) ರಲ್ಲಿ ವಿರೋಧಿ ಸಂವತ್ಸರ ಆಶ್ವಿಜ ಶುದ್ಧ ದಶಮಿ ಬುಧವಾರ ದಿನ ತುಳುನಾಡಿನ ವೇಣುಪುರದ (ಮೂಡಬಿದುರೆಯ) ಪುರುಪರಮೇಶ್ವರ (ಋಷಭನಾಥ) ನ ಶ್ರೀಪಾದಸನ್ನಿಧಿಯಲ್ಲಿ (ಬಸದಿಯಲ್ಲಿ) ಶ್ರೀಮೂಲಸಂಘ ದೇಶಿಯಗಣದ ಕೊಂಡಕುಂದ ಮುನಿವಂಶದ ಶಾಂತಿಕೀರ್ತಿಮುನಿಪನು ಶಾಂತೀಶಚರಿತವನ್ನು ಬರೆದುಮುಗಿಸಿದನು, ಎಂಬ ವಿಷಯ ಯಾವ ಸಂಶಯಕ್ಕೂ ಆಸ್ಪದವಿಲ್ಲದಂತೆ ಸ್ಪಷ್ಟವಾಗಿದೆ.

ಶಾಂತಿಕೀರ್ತಿಮುನಿ 'ಷೋಡಶಭಾವನಾಚರಿತೆ'[೬] ಎಂಬ ಸಾಂಗತ್ಯ ಗ್ರಂಥವೊಂದನ್ನು ಬರೆದಿರುವ ವಿಷಯ ವಿದ್ವಾಂಸರ ಗಮನಕ್ಕೆ ಬಂದಂತೆ ತೋರುವುದಿಲ್ಲ. ಕರ್ನಾಟಕ ಕವಿಚರಿತೆಯ ಮೂರೂ ಸಂಪುಟಗಳಲ್ಲಿ ಎಲ್ಲಿಯೂ ಶಾಂತಿಕೀರ್ತಿಮುನಿವಿರಚಿತ ಷೋಡಶಭಾವನಾಚರಿತೆಯ ಉಲ್ಲೇಖ ದೊರೆಯುವುದಿಲ್ಲ. ಆರ್. ನರಸಿಂಹಾ ಚಾರ್ಯರ ಕಣ್ಣಿಗೆ ಬೀಳದ ಈ ಕೃತಿಯ ಬಗ್ಗೆ ಇಂದಿನವರೆಗೂ ಯಾವ ವಿದ್ವಾಂಸರೂ ಏನನ್ನೂ ಬರೆದಿಲ್ಲ. ಪ್ರಸ್ತುತ ಷೋಡಶಭಾವನಾಚರಿತೆಯ ಮೂಲಪ್ರತಿ ನಮ್ಮಲ್ಲಿ ಉಂಟು. ಅದು ಐದು ಸಂಧಿಗಳುಳ್ಳ ಸುಮಾರು ಐನೂರು ಪದ್ಯಗಳ ಪುಟ್ಟ ಸಾಂಗತ್ಯ ಗ್ರಂಥ. ಅದರ ಕೊನೆಯ ಸಂಧಿಯಲ್ಲಿ ಬರುವ ಕವಿಪ್ರಶಸ್ತಿ ಪದ್ಯಗಳು ಹೀಗಿವೆ :

ಇದು ಶ್ರೇಣಿಕಮಹಾಮಂಡಲೇಶ್ವರನಿಗೆ
ಮದನಾರಿಜಿನಮುಖೋದ್ಭೂತ
ಪದಿನಾರು ಭಾವನೆಗಳ ಗೌತಮರು ಪೇ
ಳಿದ ಶಾಸ್ತ್ರವ ಕಿರಿದರೊಳು (೫ : ೧೧೮)

೬ ಬಿ. ಬಿ. ಮಹೀಶವಾಡಿ ಸಂಗ್ರಹಿಸಿದ ಅಪ್ರಕಟಿತ ಹಸ್ತಪ್ರತಿ : ಶಾಂತಿಕೀರ್ತಿಮುನಿವಿರಚಿತ ಷೋಡಶಭಾವನಾಚರಿತೆ

ದಾರುಣೀಶ್ವರ ಶಕಕಾಲ ಸಾಸಿರದರು
ನೂರರುವತ್ತಮೂರನೆಯ
ಚಾರು ದುರ್ಮತಿ ವತ್ಸರದ ಮಾಘಪೌರ್ಣಮಿ
ತಾರಾಧಿಪನ ವಾರದೊಳು (೫ : ೧೧೯)

ಭರತಾರ್ಯಖಂಡ ಕುಂತಳದೇಶದ
ಮೆರೆವ ಗೋಕಾವಿನಗರದ
ಪರಮ ಸುಪಾರ್ಶ್ವ ಜಿನೇಶ್ವರ ಶ್ರೀಪಾದ
ಸರಸಿಜಂಗಳ ಸನ್ನಿಧಿಯೊಳು (೫ : ೧೨೦)

ಹಿಂದಕನಾದಿಕಾಲದಿಂ ಜಿನರುಪದೇಶ
ದಿಂದ ಬಂದುದನೀಗಳೆಲ್ಲ
ಮಂದಮತಿಗಳಿಗೆ ತಿಳಿವಂತು ಕನ್ನಡ
ದಿಂದ ಭಾವನೆಗಳೀರೆಂಟ (೫ : ೧೨೧)

ಶ್ರೀಮೂಲಸಂಘ ದೇಶಿಯಗಣ ಕೊಂಡಕುಂ
ದಾಮುನಿವಂಶಾಬ್ಧಿ ಚಂದ್ರ
ಕಾಮಾರಿ ಶ್ರೀ ಶಾಂತಿಕೀರ್ತಿಮುನಿಪ ಪೇಳ್ದ
ನೇಮದೀರೆಂಟು ಭಾವನೆಯು (೫ : ೧೨೨)

ಶಕಕಾಲ ೧೬೬೩ (ಸಾಸಿರದರುನೂರರುವತ್ತಮೂರನೆಯ)– ಅಂದರೆ ಕ್ರಿ. ಶ. ೧೭೪೧ (=೧೬೬೩+೭೮) ರಲ್ಲಿ ದುರ್ಮತಿ ಸಂವತ್ಸರ ಮಾಘಪೌರ್ಣಮಿ ಸೋಮವಾರ (ತಾರಾಧಿಪನವಾರ) ಕುಂತಲದೇಶದ ಗೋಕಾವಿನಗರ (ಬೆಳಗಾವಿ ಜಿಲ್ಹೆಯ ಗೋಕಾಕ) ದಲ್ಲಿ ಪಾರ್ಶ್ವನಾಥ ಬಸದಿಯಲ್ಲಿ ಶ್ರೀಮೂಲಸಂಘದ ದೇಶಿಯಗಣದ ಕೊಂಡಕುಂದ ಮುನಿಯ ವಂಶಜನಾದ ಶ್ರೀ ಶಾಂತಿಕೀರ್ತಿಮುನಿ ಹಿಂದಕ್ಕೆ ಅನಾದಿಕಾಲದಿಂದ ಉಪದೇಶಮಾಡುತ್ತಬಂದ ಈ ಈರೆಂಟು (ಷೋಡಶ)ಭಾವನೆಗಳನ್ನು ಮಂದಮತಿಗಳೂ ಸಹ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ಹೇಳಿ ಈ ಕೃತಿಯನ್ನು ಮುಗಿಸಿದನೆಂದು ಮೇಲಿನ ಪದ್ಯಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

೧. ಶಾಂತಿಕೀರ್ತಿಮುನಿ : ಶಾಂತೀಶ್ವರಚರಿತಂ (೧೭೩೧)
೨. ಶಾಂತಿಕೀರ್ತಿಮುನಿ : ಷೋಡಶಭಾವನಾಚರಿತೆ (೧೭೪೧)
೩. ಶಾಂತಿಕೀರ್ತಿ : ದೇವಸೇನನ ಆರಾಧನಾಸಾರ – ಟೀಕೆ (೧೭೫೫)

ಈ ಮೇಲೆ ಹೇಳಿದ ಮೂರೂ ಕೃತಿಗಳನ್ನು ಒಬ್ಬನೇ ಕವಿ ಬರೆದಿರುವನು, ಎಂಬ ವಿಷಯ ಕನ್ನಡಿಗರ ಗಮನಕ್ಕೆ ಇದೀಗ ಪ್ರಥಮಸಲ ಬರುವಂತಾಗಿದೆ. ಹೆಸರು, ಮುನಿವಂಶದ ವಿವರಣೆ, ಭಾಷಾಶೈಲಿ ಇತ್ಯಾದಿ ವಿವರಗಳಿಂದಲೂ ಮತ್ತು ಕೃತಿರಚನಾ ಕಾಲಗಳು ಅನುಕೂಲಪರವಾಗಿರುವುದರಿಂದಲೂ ಶಾಂತೀಶ್ವರಚರಿತೆ ಮತ್ತು ಷೋಡಶ ಭಾವನಾಚರಿತೆಗಳನ್ನು ಶಾಂತಿಕೀರ್ತಿಮುನಿ ಎಂಬ ಒಬ್ಬನೇ ಕವಿ ಬರೆದಿರುವನೆಂದು

ನಿರ್ಧರಿಸಲು ಯಾವ ಸಂಶಯಗಳೂ ಉಳಿಯುವದಿಲ್ಲ. ಆದರೆ, ಮೂರನೇ ಕವಿ ಮತ್ತು ಕೃತಿಗಳ ವಿವರ ತಿಳಿದಿಲ್ಲ. ಕವಿಚರಿತ್ರೆಕಾರರು ಹೇಳಿದ ಸಂಗತಿಗಳಷ್ಟೇ ಈಗ ನಮಗೆ ಆಧಾರಗಳಾಗಿವೆ. ಅಷ್ಟರಿಂದಲೇ ಶಾಂತಿಕೀರ್ತಿಮುನಿ ಮತ್ತು ಶಾಂತಿಕೀರ್ತಿ ಭಿನ್ನರಾಗಿರಲಿಕ್ಕಿಲ್ಲವೆಂದೂ, ದೇವಸೇನನ ಆರಾಧನಾಸಾರದ ಟೀಕೆಯನ್ನು ರಚಿಸಿದ ಕಾಲವೂ (೧೭೫೫) ಒಬ್ಬನೇ ಕವಿಯೆಂದು ಹೇಳಲು ಅನುಕೂಲವಾಗಿರುವುದರಿಂದಲೂ ಹಾಗೆ ಭಾವಿಸಿದರೆ ತಪ್ಪೇನಿಲ್ಲ.

ಶಾಂತಿಕೀರ್ತಿಮುನಿ ಜೈನಸನ್ಯಾಸಿಯಾಗಿದ್ದುದರಿಂದ ಸಂಚಾರಿಜೀವಿಯಾಗಿದ್ದು, ಶಾಂತೀಶ್ವರಚರಿತೆಯನ್ನು ಮೂಡಬಿದುರೆಯಲ್ಲಿಯೂ, ಷೋಡಶಭಾವನಾಚರಿತೆಯನ್ನು ಗೋಕಾವಿ (ಗೋಕಾಕ) ಯಲ್ಲಿಯೂ ಬರೆದಿರುವುದು ತೀರ ಸಹಜವಾಗಿದೆ. ಈಗ ಅವನ ಕೃತಿಗಳನ್ನು ಅವಲೋಕಿಸಿದರೆ ಕನ್ನಡಿಗರ ಹೃದಯದಲ್ಲಿ ಗಟ್ಟಿಯಾಗಿ ನೆಲೆನಿಲ್ಲಬಲ್ಲ ಕವಿ ಎಂಬುದು ಸ್ಪಷ್ಟವಾಗುತ್ತದೆ.

■ ■

ಕೆಳದಿ ಅರಸರ ಕಾಲನಿರ್ಣಯ

ಗುಂಡಾ ಜೋಯಿಸ್

ಭಾರತದ ಕೆಲವೇ ಪ್ರಮುಖ ಸಂಸ್ಥಾನಗಳ ಸಾಲಿನಲ್ಲಿ ಕೆಳದಿಯೂ ಒಂದೆನ್ನಲಡ್ಡಿಯಿಲ್ಲ. ಕ್ರಿ. ಶ. ೧೫ ನೆಯ ಶತಮಾನದ ಕೊನೆಯಿಂದ ೧೮ ನೆಯ ಶತಮಾನದವರೆಗೆ ಬಾಳಿ ಬೆಳಗಿದ ಈ ಸಂಸ್ಥಾನವು ಇತರ ಯಾವ ರಾಜ್ಯಕ್ಕೂ ಕಿರಿದಲ್ಲ. ಸಾಂಪತ್ತಿಕ, ಸಾಂಸ್ಕೃತಿಕ ಹಾಗೂ ವೈಭವ ಪರಂಪರೆಯಲ್ಲಿ ವಿಜಯನಗರದ ನಂತರ ಕೆಳದಿಗೇ ಅಗ್ರಸ್ಥಾನವು ಸಲ್ಲುತ್ತದೆ. ಇಂತಹ ಪರಂಪರೆಯ ಪರಾಕಾಷ್ಠತೆಯನ್ನು ಗಳಿಸಿದ್ದ ಕೆಳದಿಯು ಇತಿಹಾಸದ ಕಾಲಗರ್ಭದಲ್ಲಿ ಅವಿತುಕೊಂಡಿರುವುದು ನಿಜಕ್ಕೂ ಶೋಚನೀಯವಾಗಿದೆ. ತುಸು ಸಮಾಧಾನದ ಅಂಶವೆಂದರೆ, ಈಚೆಗೆ ವಿದ್ವಾಂಸರು ಹಲವು ವಿಧಗಳಲ್ಲಿ ಇದರ ಅಧ್ಯಯನವನ್ನು ಕೈಗೊಳ್ಳಲು ಉತ್ಸುಕರಾಗಿರುವುದು ಶುಭ ಸಂಕೇತವಾಗಿದೆ. ಹೀಗಿದ್ದರೂ ಈ ಇತಿಹಾಸವು ಸಮಗ್ರ ಆಧಾರಾಂಶಗಳಿಂದ ನಿಲುಕದಿರುವುದು ಒಂದು ಕೊರತೆಯೇ ಸರಿ ! ಇದಕ್ಕೆ ಕಾರಣ ಈ ಮನೆತನದ ಅಥವಾ ರಾಜ್ಯದ ಇತಿಹಾಸವನ್ನು ಅಭ್ಯಸಿಸಿ ಸಮರ್ಪಕವಾಗಿ ನಿರೂಪಿಸುವ ಯತ್ನ ನಡೆದಿರುವುದಿಲ್ಲ. ವಿವಿಧ ವಿದ್ವಾಂಸರಿಂದ ಸಂಶೋಧನಾತ್ಮಕವಾಗಿ ರೂಪಿಸಿದ ತರ್ಕಗಳಲ್ಲಿ ಈ ನಾಯಕರ ಕಾಲನಿರ್ಣಯವೂ ಅವುಗಳಲ್ಲೊಂದಾಗಿದೆ.

ಕೆಳದಿ ಇತಿಹಾಸದ ಸಂಶೋಧನೆಯಲ್ಲಿ ಈಚೆಗೆ ವಿವಿಧ ಪ್ರಾಚ್ಯಸಂಗ್ರಹಗಳು ಹಾಗೂ ಮಾಹಿತಿಗಳು ಉಪಲಬ್ಧವಿದ್ದರೂ, ಈ ನಾಯಕರ ಕಾಲವು ಒಮ್ಮತಕ್ಕೆ ಬಾರದಿರುವುದು ಹಿತಕರವಲ್ಲ. ಇದು ಸಮಸ್ಯಾತ್ಮಕವಾಗಿರುವುದಕ್ಕಿಂತ ಒಂದು ಗೊತ್ತಾದ ಖಚಿತ ರೂಪವನ್ನು ತಳೆಯುವುದರಿಂದ ಮುಂದೆ ಇತಿಹಾಸ ರಚನೆಗೆ ಮಾರ್ಗ ಸುಗಮವಾಗುತ್ತದೆ.

ಕೆಳದಿ ಇತಿಹಾಸ ರಚನೆಗೆ ಕೆಳದಿ ನೃಪವಿಜಯ, ಶಿವತತ್ವ ರತ್ನಾಕರ ಮತ್ತು ವೀರಶೈವ ಧರ್ಮಶಿರೋಮಣಿಯು ಆಯಾ ಕಾಲದ ರಚನೆಯಾಗಿದ್ದರೆ, Nayakas of Ikkeri, ಕೆಳದಿ ನಾಯಕರು, ಇಕ್ಕೇರಿ ಅರಸರು, Keladi polity ಮತ್ತು

* ಕರ್ನಾಟಕ ಗೆಜೆಟೀರ್‌ನ ಸಂಪಾದಕರಾದ ಶ್ರೀ ಅಭಿಶಂಕರ್‌ರವರು ಈ ದಿಸೆಯಲ್ಲಿ ನನ್ನ ಗಮನವನ್ನು ಹರಿಸಿ, ವಿಚಾರ ಪ್ರಚೋದನೆಯುಂಟು ಮಾಡಿದ್ದರಿಂದ ವಿದ್ವಾಂಸರ ಗಮನ ಸೆಳೆಯಲು ಈ ಲೇಖನವನ್ನು ಸಿದ್ಧಪಡಿಸಲು ಕಾರಣವಾಯಿತು.

Gezetteer ಮುಂತಾದುವು ಈಚಿನ ಕೃತಿಗಳೆನಿಸಿವೆ. ಇವುಗಳ ಅಧ್ಯಯನದಿಂದ ಈ ನಾಯಕರ ಕಾಲನಿರ್ಣಯದಲ್ಲಿ ಅಪಾರ ವ್ಯತ್ಯಾಸಗಳು ಉಂಟಾಗಿವೆ.

ಹಿನ್ನೆಲೆ :

ವಿಜಯನಗರದ ಉನ್ನತ ಕಾಲದಲ್ಲಿ ಚಿಕ್ಕ ಪಾಳೆಯಪಟ್ಟಾಗಿ ರೂಪುಗೊಂಡ ಕೆಳದಿಯು ಕ್ರಿ. ಶ. ೧೪೯೯ ರಿಂದ ೧೭೬೩ರ ವರೆಗೆ ಬಾಳಿತು. ಈ ಪಾಳೆಯಪಟ್ಟು ಆರಂಭದಲ್ಲಿ ಕೆಳದಿಯಲ್ಲಿ ಜನ್ಮತಾಳಿತು. ನಂತರ ರಾಜಧಾನಿಯನ್ನು ಇಕ್ಕೇರಿಗೆ ಬದಲಾಯಿಸಿ, ಆ ಕಾಲದ ವಿದೇಶಿಯರಿಂದಲೂ ಮೆಚ್ಚುಗೆ ಗಳಿಸುವ ರೀತಿಯಲ್ಲಿ ಇಲ್ಲಿಂದಲೇ ರಾಜ್ಯಭಾರ ಕ್ರಮವನ್ನು ಕೈಗೊಂಡು ಕಾರ್ಯಾರಂಭ ಮಾಡಿತು. ಈ ರಾಜಧಾನಿಯೂ ವಿಧಿವಶದಿಂದ ದುರ್ದೆಸೆಯನ್ನು ಹೊಂದಿದ ಕಾರಣ ಬಿದನೂರಿಗೆ (ಈಗಿನ ಹಳೆಯ ನಗರ) ವರ್ಗಾಯಿಸಿ, ಅಲ್ಲಿ ಸ್ಥಿರವಾಗಿ ನೆಲೆಗೊಂಡು ಕ್ರಿ. ಶ. ೧೭೬೩ ರಂದು ಅಂತ್ಯಗೊಂಡಿತು.

ಕೆಳದಿ ಸಂಸ್ಥಾನವು ಕ್ರಿ. ಶ. ೧೪೯೯ ರಲ್ಲಿ ಜನ್ಮತಾಳಿತು. ಹಲವು ಅಘಟಿತ ಘಟನೆಗಳು ಈ ಪಾಳೆಯಪಟ್ಟಿನ ಜನ್ಮದ ಹಿನ್ನೆಲೆಯಲ್ಲಿ ಗೋಚರಿಸಿ ಇದರ ರೂಪರೇಖೆಗೆ ತಳಹದಿಯನ್ನುಂಟು ಮಾಡಿತು. ಕೆಳದಿ ಚೌಡಪ್ಪನಾಯಕ, ಭದ್ರಪ್ಪನಾಯಕ ಹಾಗೂ ವೆಂಕಟಾದ್ರಿಜೋಯ್ಸರು ಇದಕ್ಕೆ ಅಸ್ತಿಭಾರವನ್ನು ಹಾಕಿದರು. ಚೌಡಪ್ಪನಾಯಕನ ಆದಿಯಾಗಿ ಈ ನಾಯಕರ ಕಾಲವನ್ನು ಹಲವು ಗ್ರಂಥಗಳು ಈ ಕೆಳಕಂಡಂತೆ ತರ್ಕವಿತರ್ಕಗಳಿಂದ ವಿಶ್ಲೇಷಿಸುತ್ತವೆ.

೧. ಚೌಡಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯ	೧೫೦೦–೧೫೧೪
ಕೆಳದಿ ನಾಯಕರು	೧೫೦೦–೧೫೪೦
Keladi Polity	೧೪೯೯–೧೫೧೩
QJMS	೧೪೯೯–೧೫೧೫
Vij. Sex. Com. Vol.	೧೫೦೬– ?
Nayakas of Ikkeri	೧೫೦೮– ?
ಕೆಳದಿ ಅರಸರು ಹಾಗೂ ಪೋರ್ತುಗೀಜರು	೧೪೯೯–೧೫೧೩
Rice	೧೪೯೯–೧೫೧೩[೨]
Selections from the Records of the Sringeri Mutt, Vol. I	೧೪೯೯–೧೫೧೩

	ಕ್ರಿ. ಶ.
ಕೆಳದಿಯ ಅರಸರು ಮತ್ತು ಕನ್ನಡಸಾಹಿತ್ಯ	೧೫೦೦–೧೫೧೪
ರಾಣಿ ವೀರಮ್ಮಾಜಿ	೧೫೦೦–೧೫೪೦
Karnataka through the ages– (ಕರ್ಣಾಟಕದ ಪರಂಪರೆ)	೧೫೦೦– ?
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೫೦೦–೧೫೪೦
ಕನ್ನಡ ವಿಶ್ವಕೋಶ	?

೨. ಸದಾಶಿವನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೫೧೪–೧೫೪೬
ಕೆಳದಿ ನಾಯಂಕರು	೧೫೪೪–೧೫೬೫
Keladi Polity	೧೫೧೩–೧೫೬೩
QJMS	೧೫೧೩–೧೫೪೫
Vij. Sex. Com. Vol.	೧೫೪೪/೪೫–೧೫೬೫
Nayakas of Ikkeri	೧೫೪೦(?)–೧೫೬೫
ಕೆಳದಿ ಅರಸರು ಹಾಗೂ ಪೋರ್ತುಗೀಜರು	? –೧೫೬೫[೩]
Rice	೧೫೧೩–೧೫೪೫
Selections from the Records of Sringeri Mutt, Vol. I	೧೫೧೩–೧೫೪೫
ಕೆಳದಿಯ ಅರಸರು ಮತ್ತು ಕನ್ನಡಸಾಹಿತ್ಯ	೧೫೧೪–೧೫೩೭
ರಾಣಿ ವೀರಮ್ಮಾಜಿ	೧೫೪೦–೧೫೬೫
Karnatak through the ages (ಕರ್ಣಾಟಕದ ಪರಂಪರೆ)	೧೫೪೪–೧೫೬೫
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೫೪೦–೧೫೬೬
ಕನ್ನಡ ವಿಶ್ವಕೋಶ	?
Robert Sewell	೧೫೬೦–೧೫೭೬
Shama Shastry	೧೫೪೫–೧೫೬೧[೪]
Rajavamshavali	೧೫೧೩–೧೫೪೫[೫]
Aygal	೧೫೧೩–೧೫೪೫[೬]

೩. ಇಮ್ಮಡಿ ಸದಾಶಿವನಾಯಕ ಮತ್ತು ದೊಡ್ಡ ಸಂಕಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೫೪೬–೧೫೫೯
ಕೆಳದಿ ನಾಯಕರು	೧೫೬೬– ?
Keladi Polity	೧೫೬೩–೧೫೭೦
QJMS	೧೫೪೫–೧೫೫೮
Vij. Sex. Cent. Com. Vol.	೧೫೬೬– ?
Nayakas of Ikkeri	೧೫೬೬–೧೫೭೧
ಕೆಳದಿ ಅರಸರು ಹಾಗೂ ಪೋರ್ತುಗೀಜರು	?
Rice	೧೫೪೫–೧೫೫೮
ಕೆಳದಿಯ ಅರಸರು ಮತ್ತು ಕನ್ನಡಸಾಹಿತ್ಯ	೧೫೩೭–೧೫೪೬ ೧೫೪೬–೧೫೫೯
ರಾಣಿ ವೀರಮ್ಮಾಜಿ	೧೫೬೬–೧೫೭೧
Karnataka through the age (ಕರ್ನಾಟಕ ಪರಂಪರೆ)	೧೫೬೭–೧೫೭೧
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೫೬೬–೧೫೭೦
ಕನ್ನಡ ವಿಶ್ವಕೋಶ	೧೫೬೬–೧೫೭೦
Sewell	೧೫೮೫–೧೫೯೬
Buchanan	೧೫೮೪–೧೫೯೫
Rajavamsavali	೧೫೪೬–೧೫೫೯[೭]
ತಮಿಳುನಾಡಿನ ಇತಿಹಾಸ	೧೫೬೬–೧೫೭೧[೮]

೪. ಚಿಕ್ಕಸಂಕಣ್ಣನಾಯಕ ಮತ್ತು ರಾಮರಾಜನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೪೮೧–೧೪೯೩ ೧೪೯೩–೧೫೦೫
ಕೆಳದಿಯ ನಾಯಕರು	೧೫೭೦–೧೫೮೦ ೧೫೭೦–೧೫೮೬
Keladi Polity	೧೫೭೦–೧೫೮೦
QIMS	೧೫೫೮–೧೫೭೦
Vij. Sex. Cent. Com. Vol.	೧೫೭೦–೧೫೮೦

	ಕ್ರಿ. ಶ.
Nayakas of Ikkeri	೧೫೭೦–೧೫೮೬
ಕೆಳದಿ ಅರಸರು ಹಾಗೂ ಹಾಗೂ ಪೋರ್ತುಗೀಜರು	?
Rice	೧೫೫೮–೧೫೭೦[೯]
ಕೆಳದಿಯ ಅರಸರು ಮತ್ತು ಕನ್ನಡಸಾಹಿತ್ಯ	೧೫೫೯–೧೫೭೧ ೧೫೭೧–೧೫೮೩
ರಾಣಿ ವೀರಮ್ಮಾಜಿ	೧೫೭೧–೧೫೮೬
Karnataka through the ages (ಕರ್ಣಾಟಕ ಪರಂಪರೆ)	? –೧೫೮೦
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೫೭೦–೧೫೮೦ ೧೫೮೦–೧೫೮೬
ಕನ್ನಡ ವಿಶ್ವಕೋಶ	೧೫೭೦–೧೫೮೦ ೧೫೭೦–೧೫೮೬
Sewell	೧೫೯೬–೧೬೦೩
Rajavamsavali	೧೫೫೯–೧೫೭೧

೫. ಹಿರಿಯ ವೆಂಕಟಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೫೮೩–೧೬೩೦
ಕೆಳದಿ ನಾಯಕರು	೧೫೯೨–೧೬೨೯
Keladi Polity	೧೫೮೨–೧೬೨೯
QJMS	೧೫೮೨–೧೬೨೯ ೧೫೯೨–೧೬೨೯
Vij. Sex. Cent. Com. Vol.	೧೫೯೨–೧೬೨೯
Nayakas of Ikkeri	೧೫೯೬–೧೬೨೯
ಕೆಳದಿ ಅರಸರು ಹಾಗೂ ಪೋರ್ತುಗೀಜರು	?–೧೦–೧೧–೧೬೨೯[೧೦]
Rice	೧೫೮೨–೧೬೨೯
ಕೆಳದಿಯ ಅರಸರು ಮತ್ತು ಕನ್ನಡಸಾಹಿತ್ಯ	೧೫೮೩–೧೬೩೦
ರಾಣಿ ವೀರಮ್ಮಾಜಿ	೧೫೮೬–೧೬೨೯
Karnataka through the ages (ಕರ್ಣಾಟಕ ಪರಂಪರೆ)	೧೫೮೬–೧೬೨೯
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೫೮೬–೧೬೨೯

	ಕ್ರಿ. ಶ.
ಕನ್ನಡ ವಿಶ್ವಕೋಶ	೧೫೮೫–೧೬೨೯
Sewell	೧೬೦೪–೧೬೨೬
Rajavamshavali	೧೫೮೩–೧೬೨೯

೬. ವೀರಭದ್ರನಾಯಕ[೧೧]

	ಕ್ರಿ. ಶ
ಕೆಳದಿನೃಪವಿಜಯಂ	೧೬೩೦–೧೬೪೬
ಕೆಳದಿ ನಾಯಕರು	೧೬೨೯–೧೬೪೫
Keladi Polity	,, ,,
QJMS	,, ,,
Vij. Sex. Cent. Com. Vol.	,, ,,
Nayakas of Ikkeri	,, ,,
ಕೆಳದಿ ಅರಸರು ಹಾಗೂ ಪೋರ್ತುಗೀಜರು	,, ,,
Rice	,, ,,
ಕೆಳದಿಯ ಅರಸರು ಮತ್ತು ಕನ್ನಡಸಾಹಿತ್ಯ	೧೬೩೦–೧೬೪೬
ರಾಣಿ ವೀರಮ್ಮಾಜಿ	೧೬೨೯–೧೬೪೫
Karnataka through the ages (ಕರ್ನಾಟಕ ಪರಂಪರೆ)	,, ,,
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	,, ,,
ಕನ್ನಡ ವಿಶ್ವಕೋಶ[೧೨]	,, ,,
Rajavamsavali	೧೬೩೦–೧೬೩೬[೧೩]

೭. ಶಿವಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೬೪೬–೧೬೬೧
ಕೆಳದಿ ನಾಯಕರು	೧೬೪೫–೧೬೬೦
Keladi Polity	,, ,,
QJMS	,, ,,
Vij. Sex. Cent. Com. Vol.	,, ,,
Nayakas of Ikkeri	೧೬೪೫–೧೬೬೦

	ಕ್ರಿ. ಶ.
ಕೆಳದಿ ಅರಸರು ಹಾಗೂ ಪೋರ್ತುಗೀಜರು	೧೬೪೫–೧೬೬೦
Rice	,, ,,
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೬೪೬–೧೬೬೧
ರಾಣಿ ವೀರಮ್ಮಾಜಿ	೧೬೪೫–೧೬೬೦
Karnataka through the ages (ಕರ್ಣಾಟಕ ಪರಂಪರೆ)	೧೬೪೫–೧೬೬೧
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೬೪೫–೧೬೬೦
ಕನ್ನಡ ವಿಶ್ವಕೋಶ	,, ,,
Rajavamsavali	೧೬೪೬–೧೬೬೧[೧೪]
Sewell	೧೬೪೯–೧೬೭೧
Selections from the records of Sringeri Mutt, Vol. I	೧೬೪೬–೧೬೬೧

೮. ಕಿರಿಯ ವೆಂಕಟಪ್ಪನಾಯಕ[೧೫]

	ಕ್ರಿ. ಶ.
ಕೆಳದಿನೃಪವಿಜಯ	೧೬೬೧–೧೬೬೨
ಕೆಳದಿ ನಾಯಕರು	೧೬೬೦–೧೬೬೧
Keladi Polity	,, ,,
QJMS	,, ,,
Vij. Sex. Cent. Com. Vol.	,, ,,
Nayakas of Ikkeri	,, ,,
ಕೆಳದಿ ಅರಸರು ಹಾಗೂ ಪೋರ್ತುಗೀಜರು	,, ,,
Rice	,, ,,
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೬೬೧–೧೬೬೨
ರಾಣಿ ವೀರಮ್ಮಾಜಿ	೧೬೬೦–೧೬೬೧
Karnataka through the ages (ಕರ್ಣಾಟಕ ಪರಂಪರೆ)	?
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೬೬೦–೧೬೬೨
ಕನ್ನಡ ವಿಶ್ವಕೋಶ	?

೯. ಭದ್ರಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೬೬೨–೧೬೬೪
ಕೆಳದಿ ನಾಯಂಕರು	೧೬೬೧–೧೬೬೩
Keladi Polity	,, ,,
QJMS	,, ,,
Vij. Sex. Gent. Com. Vol.	,, ,,
Nayakas of Ikkeri	೧೬೬೨–೧೬೬೪
ಕೆಳದಿ ಅರಸರು ಹಾಗೂ ಪೋರ್ತುಗೀಜರು	,, ,,
Rice	೧೬೬೧–೧೬೬೩
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೬೬೨–೧೬೬೪
ರಾಣಿ ವೀರಮ್ಮಾಜಿ	,, ,,
Karnataka through the ages (ಕರ್ಣಾಟಕ ಪರಂಪರೆ)	?
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೬೬೨–೧೬೬೪
ಕನ್ನಡ ವಿಶ್ವಕೋಶ	,, ,,
Selections from the records of Sringeri Mutt, Vol. I	೧೬೬೧–೧೬೬೨[೧೬]

೧೧. ಹಿರಿಯ ಸೋಮಶೇಖರನಾಯಕ

	ಕ್ರಿ. ಶ.
ಕೆಳದಿನೃಪವಿಜಯು	೧೬೬೪–೧೬೭೨
ಕೆಳದಿ ನಾಯಂಕರು	೧೬೬೩–೧೬೭೧
Keladi Polity	೧೬೬೧–೧೬೭೭
QJMS	೧೬೬೩–೧೬೭೧[೧೭]
Vij. Sex. Cent. Com. Vol.	,, ,,
Nayakas of Ikkeri	೧೬೬೪–೧೬೭೧
ಕೆಳದಿ ಅರಸರು ಹಾಗೂ ಪೋರ್ತುಗೀಜರು	,, ,,
Rice	೧೬೬೩–೧೬೭೧
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೬೬೪–೧೬೭೨
ರಾಣಿ ವೀರಮ್ಮಾಜಿ	೧೬೬೪–೧೬೭೧

	ಕ್ರಿ. ಶ.
Karnataka through the ages (ಕರ್ನಾಟಕ ಪರಂಪರೆ)	೧೬೬೪–೧೬೭೧(?)
ಕರ್ನಾಟಕ ಸಂಕ್ಷಿಪ್ತ ಇತಿಹಾಸ	೧೬೬೪–೧೬೭೬
ಕನ್ನಡ ವಿಶ್ವಕೋಶ	?
Selections from the records of Sringeri Mutt, Vol. I	೧೬೬೪–೧೬೭೨[೧೮]
Rajavamshavali	.. ..
Sewell	೧೬೮೧–೧೬೮೬

೧೧. ಚೆನ್ನಮ್ಮಾಜಿ

	ಕ್ರಿ. ಶ.
ಕೆಳದಿನೃಪವಿಜಯ	೧೬೭೨–೧೬೯೮
ಕೆಳದಿ ನಾಯಕರು	೧೬೭೧–೧೬೯೭
Keladi Polity	೧೬೬೧–೧೬೯೭
QJMS	೧೬೭೧–೧೬೭೯
Vij. Sex. Com. Vol.	೧೬೬೧–೧೬೯೭
Nayakas of Ikkeri	೧೬೭೧–೧೬೯೬
ಕೆಳದಿ ಅರಸರು ಹಾಗೂ ಪೋರ್ತುಗೀಜರು	.. ..
Rice	೧೬೭೧–೧೬೯೭
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೬೭೨–೧೬೯೮
ರಾಣಿ ವೀರಮ್ಮಾಜಿ	೧೬೭೧–೧೬೯೬
Karnataka through the ages (ಕರ್ನಾಟಕ ಪರಂಪರೆ)	.. .. [೧೯]
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೬೭೭–೧೬೯೭
ಕನ್ನಡ ವಿಶ್ವಕೋಶ	?
Selections from the Records of Sringeri Mutt, Vol. I	೧೬೯೧–೧೬೯೨[೨೦]

೧೨. ಹಿರಿಯ ಬಸವಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯ	೧೬೯೮–೧೭೧೫
ಕೆಳದಿ ನಾಯಕರು	೧೬೯೭–೧೭೧೪

	ಕ್ರಿ. ಶ.
Keladi Polity	೧೬೯೭–೧೭೧೪
QJMS	೧೬೭೯–೧೭೧೪
Vij. Sex. Cent. Com. Vol.	೧೬೯೭–೧೭೧೪
Nayakas of Ikkeri	೧೬೯೬–೧೭೧೪
ಕೆಳದಿ ಅರಸರು ಹಾಗೂ ಪೋರ್ತುಗೀಜರು	೧೬೯೭–೧೭೧೪[೨೧]
Rice	,, ,,
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೬೯೮–೧೭೧೫
ರಾಣಿ ವೀರಮ್ಮಾಜಿ	೧೬೯೬–೧೭೧೪
Karnataka through the ages (ಕರ್ನಾಟಕ ಪರಂಪರೆ)	,, ,,
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೬೯೭–೧೭೧೪
ಕನ್ನಡ ವಿಶ್ವಕೋಶ	೧೬೯೪–೧೭೧೪

೧೩. ಕಿರಿಯ ಸೋಮಶೇಖರನಾಯಕ

	ಕ್ರಿ. ಶ.
ಕೆಳದಿನೃಪವಿಜಯಂ	೧೭೧೫–೧೭೪೦
ಕೆಳದಿ ನಾಯಕರು	೧೭೧೪–೧೭೩೯
Keladi Polity	,, ,,
QJMS	,, ,,
Vij. Sex. Cent. Com. Vol.	,, ,,
Nayakas of Ikkeri	,, ,,
ಕೆಳದಿ ಅರಸರು ಹಾಗೂ ಪೋರ್ತುಗೀಜರು	,, ,,
Rice	,, ,,
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೭೧೫–೧೭೪೦
ರಾಣಿ ವೀರಮ್ಮಾಜಿ	೧೭೧೪–೧೭೩೯
Karnataka through the ages (ಕರ್ನಾಟಕ ಪರಂಪರೆ)	,, ,,
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	,, ,,
ಕನ್ನಡ ವಿಶ್ವಕೋಶ	೧೭೧೫–೧೭೩೯

೧೪. ಕಿರಿಯ ಬಸಪ್ಪನಾಯಕ
(ಎರಡನೆಯ)

	ಕ್ರಿ. ಶ.
ಕೆಳದಿನೃಪವಿಜಯ	೧೭೪೦–೧೭೫೫
ಕೆಳದಿ ನಾಯಕರು	೧೭೩೯–೧೭೫೪
Keladi Polity	,, ,,
QJMS	,, ,,
Vij. Sex. Cent. Com. Vol.	,, ,,
Nayakas of Ikkeri	೧೭೩೯–೧೭೫೭
ಕೆಳದಿ ಅರಸರು ಹಾಗೂ ಪೋರ್ತುಗೀಜರು	೧೭೩೯–೧೭೫೫
Rice	೧೭೩೯–೧೭೫೪
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೭೪೦–೧೭೫೫
ರಾಣಿ ವೀರಮ್ಮಾಜಿ	೧೭೩೯–೧೭೫೫
Karnataka through the ages (ಕರ್ನಾಟಕ ಪರಂಪರೆ)	,, ,,
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೭೩೯–೧೭೫೪
ಕನ್ನಡ ವಿಶ್ವಕೋಶ	೧೭೩೯–೧೭೫೫

೧೫. ಚನ್ನಬಸಪ್ಪನಾಯಕ

	ಕ್ರಿ. ಶ.
ಕೆಳದಿನೃಪವಿಜಯ	೧೭೫೫–೧೭೫೮
ಕೆಳದಿ ನಾಯಂಕರು	೧೭೫೫–೧೭೫೭
Keladi Polity	೧೭೫೪–೧೭೫೭
QJMS	(೧೭೫೪)
Vij. Sex. Cent. Com. Vol.	೧೭೫೪–೧೭೫೭
Nayakas of Ikkeri	೧೭೩೯–೧೭೫೭[೨೨]
ಕೆಳದಿ ಅರಸರು ಹಾಗೂ ಪೋರ್ತುಗೀಜರು	೧೭೫೫–೧೭೫೭
Rice	೧೭೫೪–೧೭೫೭
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೭೫೫–೧೭೫೮
ರಾಣಿ ವೀರಮ್ಮಾಜಿ	೧೭೫೫–೧೭೫೭
Karnataka through the ages (ಕರ್ನಾಟಕ ಪರಂಪರೆ)	,, ,,

ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೭೫೪–೧೭೫೭
ಕನ್ನಡ ವಿಶ್ವಕೋಶ	೧೭೫೫–೧೭೫೬

೧೬. ವೀರಮ್ಮಾಜಿ ಮತ್ತು ಮುಮ್ಮಡಿ ಸೋಮಶೇಖರನಾಯಕ

	ಕ್ರಿ. ಶ.
ಕೆಳದಿನೃಪವಿಜಯ	೧೭೫೮–೧೭೬೩
ಕೆಳದಿ ನಾಯಕರು	೧೭೫೭–೧೭೬೩
Keladi Polity	,, ,,
QJMS	೧೭೫೪–೧೭೫೭[೨೯] ೧೭೫೭–೧೭೬೩
Vij. Sex. Cent. Com. Vol.	೧೭೫೭–೧೭೬೩
Nayakas of Ikkeri	,, ,,
ಕೆಳದಿ ಅರಸರು ಹಾಗೂ ಪೋರ್ಚುಗೀಜರು	,, ,,
Rice	,, ,,
ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೭೫೮–೧೭೬೩
ರಾಣಿ ವೀರಮ್ಮಾಜಿ	೧೭೫೭–೧೭೬೩
Karnataka through the ages (ಕರ್ನಾಟಕ ಪರಂಪರೆ)	,, ,,
ಕರ್ನಾಟಕದ ಸಂಕ್ಷಿಪ್ತ ಇತಿಹಾಸ	,, ,,
ಕನ್ನಡ ವಿಶ್ವಕೋಶ	೧೭೫೬–೧೭೬೩

ಕೆಳದಿ ದೊರೆಗಳ ಕುಲವನ್ನು ನಿಖರವಾಗಿ ರೂಪಿಸಲು ನಡೆಸಿರುವ ಸಂಶೋಧನೆಯ ಪ್ರಯತ್ನಗಳು ಹೆಚ್ಚಿನ ಪ್ರಗತಿಯನ್ನು ಹೊಂದಿರುವುದಿಲ್ಲವೆಂಬುದನ್ನು ಕಂಡುಕೊಳ್ಳ ಬಹುದಾಗಿದೆ. ಶಾಸನಾಧಾರಗಳು ಒಂದು ರೀತಿ ಉಲ್ಲೇಖಿಸಿದರೆ, ಇತರ ಮೂಲಗಳು ವಿಭಿನ್ನವಾಗಿವೆ. ಸಂಶೋಧನೆಯಲ್ಲಿಯೂ ಈ ನಿಟ್ಟಿನಲ್ಲಿ ಸಾಕಷ್ಟು ವಿಪುಲವಾಗಿಯೇ ಚರ್ಚೆಗಳು ನಡೆದಿವೆ. ಹೀಗಿದ್ದರೂ ಒಮ್ಮತದ ಅಭಿಪ್ರಾಯಗಳು ವ್ಯಕ್ತಪಟ್ಟಿರುವು ದಿಲ್ಲ. ಕೆಳದಿ ಅರಸನಾದ ಬಸವಪ್ಪನಾಯಕನಿಂದಲೇ ರಚಿಸಲ್ಪಟ್ಟ ಶಿವತತ್ವರತ್ನಾಕರ ಗ್ರಂಥದಲ್ಲಿಯೂ ಈ ದೊರೆಗಳ ಕಾಲಾನುಕ್ರಮಣಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದಿಲ್ಲ. ರಾಬರ್ಟ್ ಸೀವೆಲ್ ಹಾಗೂ ಲೂಯಿ ರೈಸ್ ಮುಂತಾದ ಪ್ರಸಿದ್ಧ ವಿದ್ವಾಂಸರು ನಮ್ಮ ದೇಶದ ಇತಿಹಾಸದಲ್ಲಿ ಆಸ್ಥೆವಹಿಸಿ, ಆಳವಾಗಿ ಅಧ್ಯಯನ ನಡೆಸಿ ನೀಡಿದ ಮಾಹಿತಿಗಳೂ ಅಷ್ಟು ಸಾಧಾರವಾಗಿ ಕಂಡುಬಾರದಿದ್ದರೂ, ಅವರ ಸಂಶೋಧನೆಯು ನಮ್ಮ ಇತಿಹಾಸಕ್ಕೆ ಮಾರ್ಗದರ್ಶನವನ್ನು ಒದಗಿಸುತ್ತವೆ.

ಇಲ್ಲಿ ಕುತೂಹಲಕರವಾದ ಅಂಶವೊಂದು ಗಮನಾರ್ಹವಾಗಿದೆ; ಕೆಳದಿ ನೃಪವಿಜಯವು ಕೆಳದಿ ಅರಸರ ಕಾಲವನ್ನು ಮಾಸ, ಪಕ್ಷ, ದಿವಸ ಹಾಗೂ ತೇದಿಗಳ ರೂಪದಲ್ಲಿ ನಿರೂಪಿಸಲ್ಪಟ್ಟಿರುವುದು ಮಹತ್ವದ ಹೆಜ್ಜೆಯಾಗಿದೆ. ಇದರ ಕೃತಿಕಾರನೂ ಹಾಗೂ ಕೆಳದಿ ಅರಸರ ಆಸ್ಥಾನ ಕವಿಯೂ ಆದ ಕವಿ ಲಿಂಗಣ್ಣನ ಐತಿಹಾಸಿಕಪ್ರಜ್ಞೆಯು ಕ್ರಿ. ಶ. ೧೮ನೆಯ ಶತಮಾನದಲ್ಲಿ ಕಂಡುಬಂದಿರುವುದು ಹೆಗ್ಗಳಿಕೆಗಳಲ್ಲಿ ಒಂದೆನ್ನಲಡ್ಡಿ ಯಿಲ್ಲ. ಕವಿ ಲಿಂಗಣ್ಣನು ನಿರೂಪಿಸಿದ ಕಾಲಾನುಕ್ರಮಣಿಕೆಯನ್ನು ರಾಬರ್ಟ್ ಸೀವೆಲ್ ರವರ ಕ್ರಿಸ್ತಶಕದ ಕಾಲಾನುಕ್ರಮಣಿಕೆಯಲ್ಲಿ ಪರಿಶೀಲಿಸಿ ನೋಡಿದಲ್ಲಿ, ಸರಿಸುಮಾರಾಗಿ ಹೊಂದಿಕೊಂಡಿರುವುದು ನಿಜಕ್ಕೂ ಕುತೂಹಲಕರವೆನಿಸಿದೆ.[೨೪]

ವಿದ್ವಾಂಸರುಗಳ ಇಂತಹ ವಿಭಿನ್ನ ಅಭಿಪ್ರಾಯಗಳು ವಿವಿಧ ತರ್ಕವಿತರ್ಕಗಳಿಂದ ಕೂಡಿರುವುದು ಚರ್ಚೆಗೆಡೆಯೀಯುತ್ತದೆ. ಹಲವು ವಿದ್ವಾಂಸರು ಕೇವಲ ಶಾಸನಾಧಾರ ಗಳನ್ನೇ ಆಧರಿಸಿದ್ದರೆ, ಇತರ ಸಂಶೋಧನತಜ್ಞರು ವಿದೇಶಿಯ ದಾಖಲೆಗಳ ಉಲ್ಲೇಖಗಳನ್ನು ಆಧರಿಸುತ್ತಿದ್ದಾರೆ. ಈ ಶಾಸನಾಧಾರದಲ್ಲಿಯೂ ಒಮ್ಮತ ಏರ್ಪಟ್ಟಿರುವುದಿಲ್ಲ; ಹಲವು ಶಾಸನಗಳು ಗೋತ್ರ ಪ್ರವರಗಳನ್ನು ಹೇಳುತ್ತ ಅರಸರ ಸರಮಾಲೆಗಳನ್ನು ವ್ಯಕ್ತಪಡಿಸುತ್ತವೆ; ಅವುಗಳಲ್ಲಿ ಅನೇಕ ಶಾಸನಗಳು ರಾಜರ ಅಂಕಿತನಾಮದಲ್ಲಿಯೂ ಕೊಟ್ಟಿರುವ ನಿದರ್ಶನಗಳಿವೆ.[೨೫] ಹೀಗಿದ್ದರೂ ಇವುಗಳನ್ನು ಸಂಪೂರ್ಣವಾಗಿ ಆಧರಿಸಿಕೊಂಡಿರುವುದು ಪ್ರಶ್ನಾರ್ಹವೆನಿಸುತ್ತದೆ ! ಕೆಳದಿ ಅರಸರ ಕಾಲದ ಶಾಸನಾಧಾರಗಳು ಈ ಸ್ವರೂಪದಲ್ಲಿರುವುದರಿಂದ ಹಾಗೂ ಇದು ಸಂಶೋ ಧನೆಯ ಮುಂಖಾಂತರ ಬೃಹತ್ಸಂಪುಟವಾಗಿ ಪ್ರಕಟಗೊಳ್ಳುವವರೆಗೂ ನಿಖರವಾಗಿ ನಿರ್ಧರಿಸಲು ಬಾರದಂತಿವೆ.

ಐತಿಹಾಸಿಕ ದಾಖಲೆಗಳು :

ಕೆಳದಿ ಇತಿಹಾಸರಚನೆಯ ಸಾಮಗ್ರಿಗಳಲ್ಲಿ ಈ ಕೆಳಕಂಡ ಗ್ರಂಥಗಳು ಸಧ್ಯಕ್ಕೆ ಉಪಲಬ್ಧವಿರುತ್ತವೆ. ಅನುಬಂಧಗಳಲ್ಲಿ ಹೇಳಿರುವಂತೆ[೨೬] ಇವುಗಳನ್ನು ಹೀಗೆ ವಿಂಗಡಿಸಬಹುದು :

೧. ಪ್ರಾಚ್ಯ ದಾಖಲೆಗಳು
೨. ಆಧುನಿಕ ಸಂಶೋಧನೆಗಳು
೩. ವಿದೇಶಿ ಉಲ್ಲೇಖಗಳು

ಪ್ರಾಚೀನ ಆಧರಿತ ಗ್ರಂಥಗಳ ಗುಂಪಿನಲ್ಲಿ ಕೆಳದಿನೃಪವಿಜಯ ಮತ್ತು ಶಿವತತ್ವರತ್ನಾಕರ ಕೃತಿಗಳು ಪ್ರಮುಖ ಐತಿಹಾಸಿಕ ಸಾಮಗ್ರಿ ಎನಿಸಿವೆ.

ಕೆಳದಿನೃಪವಿಜಯವು ಆಸ್ಥಾನ ಕವಿಯಾದ ಲಿಂಗಣ್ಣನಿಂದ ರಚಿಸಲ್ಪಟ್ಟು, ಚಾರಿತ್ರಿಕ ಭಾಗವನ್ನೊಳಗೊಂಡ ಐತಿಹಾಸಿಕ ಚಂಪೂಕಾವ್ಯ. ಭಾರತದ ಅನೇಕ ಸಂಸ್ಥಾನದ ಅರಸರ ಚರಿತ್ರೆಗಳು ಇಲ್ಲಿ ಹಾಸುಹೊಕ್ಕಾಗಿ ಸಂಚರಿಸಿವೆ. ಕನ್ನಡದ ಕೆಲವೇ ಐತಿಹಾಸಿಕ ಜ್ಞಾನಸಂಪತ್ತಿನಲ್ಲಿ ಇದೊಂದು ಕೆಳದಿ ಅರಸರ ಕಾಲದ ಮೇರುಕೃತಿಯಾಗಿದೆ. ಇದರಲ್ಲಿ ದೊರಕುವ ಕಾಲ–ಕಾರ್ಯಾದಿ ಸಂಗತಿಗಳು ಖಚಿತ ರೂಪವನ್ನು ಹೊಂದುವಷ್ಟು ಮುಂದೆ ಹೋಗಿವೆ; ಕಾಲನಿರ್ಣಯವನ್ನು ಗೊತ್ತುಮಾಡಲು ಇದೊಂದು ಉತ್ಕೃಷ್ಟ ಕೃತಿಯೆನಿಸಿದೆ.

ಶಿವತತ್ವರತ್ನಾಕರವು ಕೆಳದಿ ಅರಸನಾದ ಬಸವಪ್ಪನಾಯಕನಿಂದ ರಚಿಸಲ್ಪಟ್ಟ ಕೃತಿ. ಸಂಸ್ಕೃತದಲ್ಲಿರುವ ಇದು ವಿಶ್ವಕೋಶವೆನಿಸಿದೆ. ಈ ಗ್ರಂಥವು ಆಧ್ಯಾತ್ಮಿಕ, ವೇದಾಂತ, ಜ್ಯೋತಿಷ, ಧರ್ಮಶಾಸ್ತ್ರ, ರಾಜಕೀಯ ಮತ್ತು ಸಾಮಾಜಿಕ ಸ್ವರೂಪಗಳನ್ನು ಪ್ರತಿಬಿಂಬಿಸುತ್ತದೆ. ಕೆಳದಿ ಅರಸರ ಕಾಲ–ಕಾರ್ಯಾದಿಗಳ ಸಂಗತಿಗಳು ಈ ಕೃತಿಯಲ್ಲಿ ಸ್ವಲ್ಪವೇ ಸರಿಸುಮಾರಾಗಿ ಉಪಲಬ್ಧವಿರುತ್ತವೆ.

ಇದಲ್ಲದೆ ವೀರಶೈವಧರ್ಮಶಿರೋಮಣಿ[೨೭] ಎಂಬ ಕೃತಿಯೊಂದು ಷಡಕ್ಷರ ಮಂತ್ರಿಯಿಂದ ರಚಿಸಲ್ಪಟ್ಟಿದೆ. ಈ ಕೃತಿಯಲ್ಲಿಯೂ ಕಾಲನಿರ್ಣಯವನ್ನು ಗೊತ್ತುಪಡಿಸಲು ಸಾಧನವು ಅಷ್ಟಾಗಿ ದೊರಕುವುದಿಲ್ಲ.

ವಿದೇಶಿ ಐತಿಹಾಸಿಕ ದಾಖಲೆಗಳು :

ಕೆಳದಿ ಇತಿಹಾಸದ ಅರಸರ ಕಾಲನಿರ್ಣಯದಲ್ಲಿ ವಿದೇಶಿ ಐತಿಹಾಸಿಕ ಉಲ್ಲೇಖಗಳೂ ಹಲವು ಸಾಮಗ್ರಿಗಳನ್ನು ನೀಡುತ್ತವೆ. ಅವುಗಳಲ್ಲಿ ಪಿಯತ್ರೋ ಡೆಲ್ಲಾವಲ್ಲೆ, ಪೀಟರ್ ಮಂಡಿ, ದುಆರ್ತೆ ಬಾರ್ಬೋಸಾ ಹಾಗೂ ಜಾಕೋಬಸ್ ಕ್ಯಾಂಟರ್ ವಿಶ್ಚಾರ್‌ರವರ ಕಥನ ಮುಂತಾದವುಗಳು ಪ್ರಮುಖವಾಗಿವೆ. ಆದರೆ ಇವುಗಳ ಅಧ್ಯಯನದಲ್ಲಿಯೂ ಕಾಲನಿರ್ಣಯದಲ್ಲಿ ಸಾಕಷ್ಟು ಪ್ರಗತಿ ಕಂಡುಬಂದಿರುವುದಿಲ್ಲ.

ಇವುಗಳಲ್ಲದೆ ಡಚ್ಚರು, ಪೋರ್ಚುಗೀಜರು, ಫ್ರೆಂಚರು ಮತ್ತು ಈಸ್ಟ್ ಇಂಡಿಯಾ ಕಂಪನಿಗಳ ಸರಕಾರಿ ದಾಖಲೆಪತ್ರಗಳೂ ಸಮಕಾಲೀನ ಘಟನೆಗಳನ್ನು ಆಧರಿಸುತ್ತವೆ. ಇವುಗಳ ಸಾರ್ವಕಾಲಿಕ ಅಧ್ಯಯನವೂ ಅತ್ಯಗತ್ಯ.

ಆಧುನಿಕ ಸಂಶೋಧನೆಗಳು :

ಕೆಳದಿ ಅರಸರ ಕಾಲಾನುಕ್ರಮಣಿಕೆ ಬಗ್ಗೆ Nayakas of Ikkeri,[೨೮] Keladi Polity[೨೯] ಮತ್ತು ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ[೩೦] ಮುಂತಾದ

ಸಂಶೋಧನಾ ಮಹಾಪ್ರಬಂಧಗಳು ಪ್ರಕಟವಾಗಿವೆ. ಇವುಗಳಲ್ಲಿಯೂ ವಿದ್ವಾಂಸರು ವಿಭಿನ್ನ ಅಭಿಪ್ರಾಯಗಳನ್ನು ತಳೆದಿರುವುದು ಕಂಡುಬರುತ್ತದೆ. ಅವುಗಳನ್ನು ಈ ಕೆಳಕಂಡಂತೆ ಕಾಣಬಹುದು.

ಅನುಬಂಧ ೧

ಕ್ರ ಸಂಖ್ಯೆ	Keladi Polity ಕ್ರಿ. ಶ.	Nayakas of Ikkeri ಕ್ರಿ. ಶ.	ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ ಕ್ರಿ. ಶ.
೧	೧೫೦೦	೧೪೯೯—೧೫೧೩	೧೫೦೦—೧೫೧೪
೨	೧೫೪೦— ೬೫	೧೫೧೩— ೬೩	೧೫೧೪— ೩೭
೩	೧೫೬೬— ೭೧	೧೫೬೩— ೭೦	೧೫೩೭— ೪೬ ೧೫೪೬— ೫೯
೪	೧೫೭೦— ೮೬	೧೫೭೦— ೮೦	೧೫೫೯— ೭೧ ೧೫೭೧— ೮೩
೫	೧೫೮೬—೧೬೨೯	೧೫೮೨—೧೬೨೯	೧೫೮೩—೧೬೩೦
೬	೧೬೨೯— ೪೫	೧೬೨೯— ೪೫	೧೬೩೦— ೪೬
೭	೧೬೪೫— ೬೦	೧೬೪೫— ೬೦	೧೬೪೬— ೬೧
೮	೧೬೬೦— ೬೧	೧೬೬೦— ೬೧	೧೬೬೧— ೬೨
೯	೧೬೬೨— ೬೪	೧೬೬೧— ೬೩	೧೬೬೨— ೬೪
೧೦	೧೬೬೪— ೭೧	೧೬೬೧— ೭೭	೧೬೬೪— ೭೨
೧೧	೧೬೭೧— ೯೬	೧೬೬೧— ೯೭	೧೬೭೨— ೯೮
೧೨	೧೬೯೬—೧೭೧೪	೧೬೯೭—೧೭೧೪	೧೬೯೮—೧೭೧೫
೧೩	೧೭೧೪— ೩೯	೧೭೧೪— ೩೯	೧೭೧೫— ೪೦
೧೪	೧೭೩೯— ೫೭	೧೭೩೯— ೫೪	೧೭೪೦— ೫೫
೧೫	೧೭೩೯— ೫೭	೧೭೫೪— ೫೭	೧೭೫೫— ೫೮
೧೬	೧೭೫೭— ೬೩	೧೭೫೭— ೬೩	೧೭೫೮— ೬೩

ಅನುಬಂಧ ೧ ರಲ್ಲಿ ಕಂಡುಬರುವಂತೆ ಕೇವಲ ಕೆಲವೇ ಅರಸರ ಕಾಲಾನುಕ್ರಮ ಣಿಕೆಯು ಸರಿತೋರಿದ್ದು, ಬಹುಪಾಲು ಒಮ್ಮತದಿಂದ ಕೂಡಿರುವುದಿಲ್ಲ; ಹೀಗೆಯೇ ಇತರ ಮೂಲಗಳಿಂದಲೂ ಕೈಗೊಂಡಿದ್ದ ಸಂಶೋಧನೆಗಳೂ ಖಚಿತ ಅಭಿಪ್ರಾಯವನ್ನು ನಿರೂಪಿಸಲು ವ್ಯರ್ಥ ಪ್ರಯತ್ನಗಳನ್ನು ನಡೆಸಿವೆ. ಆಧುನಿಕ ಇತಿಹಾಸ ಸಂಶೋಧನೆಗೆ ಇದು ಕಳಂಕಪ್ರಾಯವಾಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಹೀಗೆ ವಿಶ್ಲೇಷಿಸ ಬಹುದಾಗಿದೆ :

(ಅ) ಕೆಳದಿ ಇತಿಹಾಸ ರಚನೆಯಲ್ಲಿ ಸಾಕಷ್ಟು ಉಪಲಬ್ಧ ಮಾಹಿತಿಗಳಿದ್ದರೂ ಸಮಗ್ರ ಸ್ವರೂಪದ ಸಂಶೋಧನೆಯ ಪ್ರಯತ್ನಗಳು ಈವರೆಗೆ ನಡೆಯದಿರುವುದು.

(ಬ) ಕೆಳದಿ ಇತಿಹಾಸ ಕಥನದಲ್ಲಿ ಸಮಸ್ಯಾತ್ಮಕ ಅಂಶಗಳು ಅನೇಕವಿದ್ದು ಅವುಗಳಲ್ಲಿ ವಿದ್ವಾಂಸರಲ್ಲಿಯೇ ಒಮ್ಮತಾಭಿಪ್ರಾಯಗಳು ಕಂಡುಬಾರದಿರುವುದು.

(ಕ) ಹಲವು ಅಪ್ರಕಟಿತ ಕೃತಿಗಳು ಬೆಳಕಿಗೆ ಬಾರದಿರುವುದು.

(ಡ) ಐತಿಹಾಸಿಕ ಪ್ರಜ್ಞೆಯಿಂದಲೂ ಸುವ್ಯವಸ್ಥಿತ ರೀತಿಯ ಸಂಶೋಧನೆ ಯಿಂದಲೂ ಈ ಇತಿಹಾಸ ರಚನೆಯ ದಿಸೆಯಲ್ಲಿ ಈವರೆಗೆ ಪ್ರಗತಿ ಕಂಡುಬಾರದಿರು ವುದು.

ಹೀಗೆಯೇ ಇನ್ನೂ ಅನೇಕ ಕಾರಣಗಳನ್ನು ಉದಾಹರಿಸಬಹುದು. ರಚನಾತ್ಮಕ ವಾಗಿಯೂ ಆರ್ಥಿಕವಾಗಿಯೂ ಹಾಗೂ ಆಸಕ್ತಿಯಿಂದಲೂ ಸಂಶೋಧನೆ ನಡೆಸುವ ತಜ್ಞರು ಈ ಮನೆತನದ ಸಂಶೋಧನೆಯನ್ನು ಕೈಗೊಂಡಲ್ಲಿ ಇದು ಶ್ರೀಮಂತ ಹೊತ್ತಗೆ (ಕೃತಿ) ಯಾಗುವುದರಲ್ಲಿ ಯಾವ ಅನುಮಾನವೂ ಇರುವುದಿಲ್ಲ. ಇದು ಪ್ರಕೃತ ನಡೆಯಬೇಕಾದ ಅಗತ್ಯ ಕೆಲಸಗಳಲ್ಲೊಂದಾಗಿದೆ. ಈ ಕಾರಣಗಳಿಂದಲೇ ಸಧ್ಯಕ್ಕೆ ಲಿಂಗಣ್ಣ ಕವಿಯಿಂದ ರಚಿತವಾದ ಕೆಳದಿನೃಪವಿಜಯದಲ್ಲಿ ಹೇಳಿದ ಕಾಲಮಾನಾದಿ ಗಳನ್ನು ಆಧರಿಸಿಕೊಳ್ಳಲು ಒಪ್ಪಿಕೊಳ್ಳಬಹುದಾಗಿದೆ.

ವಿದ್ವಾಂಸರು ಇವುಗಳನ್ನು ಅವಲೋಕಿಸಿ, ಸೂಕ್ತ ಮಾರ್ಗದರ್ಶನ ನೀಡಲು ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಅನುಬಂಧ ೨

ಕ್ರಿ.ಶ.

ಗ್ರಂಥಗಳ ಹೆಸರು	ಚೌಡಪ್ಪ ನಾಯಕ ೧	ಸದಾಶಿವ ನಾಯಕ ೨	ದೊಡ್ಡ ಸಂಕಣ್ಣ ನಾಯಕ ೩	ಚಿಕ್ಕಸಂಕಣ್ಣ ರಾಮರಾಜ ೪	ಹಿರಿಯ ವೆಂಕಟಪ್ಪ ನಾಯಕ ೫	ವೀರಭದ್ರ ನಾಯಕ ೬	ಶಿವಪ್ಪ ನಾಯಕ ೭	ಕಿರಿಯ ವೆಂಕಟಪ್ಪ ನಾಯಕ ೮	ಭದ್ರಪ್ಪ ನಾಯಕ ೯	ಹಿರಿಯ ಸೋಮಶೇಖರ ನಾಯಕ ೧೦	ಚೆನ್ನಮ್ಮಾಜಿ ೧೧	ಹಿರಿಯ ಬಸಪ್ಪನಾಯಕ ೧೨	ಕಿರಿಯ ಸೋಮಶೇಖರ ನಾಯಕ ೧೩	ಕಿರಿಯ ಬಸಪ್ಪನಾಯಕ ೧೪	ಚೆನ್ನಬಸಪ್ಪ ನಾಯಕ ೧೫	ವೀರಮ್ಮಾಜಿ ಹಾಗೂ III ಸೋಮಶೇಖರ ನಾಯಕ ೧೬
೧. ಕೆಳದಿನೃಪವಿಜಯ	೧೫೦೦–೧೪	೧೫೧೪–೪೬	೧೫೪೬–೫೯	೧೫೫೯–೭೧ ೧೫೭೧–೮೩	೧೫೮೩–೧೬೩೦	೧೬೩೦–೪೬	೧೬೪೬–೬೧	೧೬೬೧–೬೨	೧೬೬೨–೬೪	೧೬೬೪–೭೨	೧೬೭೨–೯೮	೧೬೯೮–೧೭೧೫	೧೭೧೫–೧೭೪೦	೧೭೪೦–೫೫	೧೭೫೫–೫೮	೧೭೫೮–೬೩
೨. ಕೆಳದಿ ನಾಯಕರು	೧೫೦೦–೪೦	೧೫೪೪–೬೫	೧೫೬೬– ?	೧೫೭೦–೮೦ ೧೫೭೦–೮೬	೧೫೯೨–೧೬೨೯	೧೬೨೯–೪೫	೧೬೪೫–೬೦	೧೬೬೦–೬೧	೧೬೬೧–೬೩	೧೬೬೩–೭೧	೧೬೭೧–೯೭	೧೬೯೭–೧೭೧೪	೧೭೧೪–೩೯	೧೭೩೯–೫೫	೧೭೫೫–೫೭	೧೭೫೭–೬೩
೩. Keladi polity	೧೪೯೯–೧೫೧೩	೧೫೧೩–೬೩	೧೫೬೩–೭೦	೧೫೭೦–೮೦	೧೫೮೨–೧೬೨೯	"	"	"	"	೧೬೬೧–೭೭	೧೬೬೧–೯೭	"	"	೧೭೩೯–೫೪	೧೭೫೪–೫೭	"
೪. QJMS	೧೪೯೯–೧೫೧೫	೧೫೧೩–೪೫	೧೫೪೫–೫೮	೧೫೫೮–೭೦	" (೧೫೯೨–೧೬೨೯)	"	"	"	"	೧೬೬೩–೭೧	೧೬೭೧–೭೯	೧೬೭೯–೧೭೧೪	"	"	(೧೭೫೪)	೧೭೫೪–೫೭ ೧೭೫೭–೬೩
೫. Vij. Sex. Com. Vol.	೧೫೦೬–	೧೫೪೪ ೪೫ –೬೫	೧೫೬೬– ?	೧೫೭೦–೮೦	೧೫೯೨–೧೬೨೯	"	"	"	"	"	೧೬೬೧–೯೭	೧೬೯೭–೧೭೧೪	"	"	೧೭೫೪–೫೭	೧೭೫೭–೬೩
೬. Nayakas of Ikkeri	೧೫೦೦–	೧೫೪೦–೧೫೬೫	೧೫೬೬–೭೧	೧೫೭೦–೮೬	೧೫೮೬–೧೬೨೯	"	"	"	೧೬೬೨–೬೪	೧೬೬೪–೭೧	೧೬೭೧–೯೬	೧೬೯೬–೧೭೧೪	"	೧೭೩೯–೫೭	೧೭೩೯–೫೭	"
೭. ಕೆಳದಿ ಅರಸರು ಹಾಗೂ ಪೋರ್ತುಗೀಜರು	೧೪೯೯–೧೫೧೩	? –೧೫೬೫	—	—	? –೧೬೨೯	"	"	"	"	"	"	೧೬೯೭–೧೭೧೪	"	೧೭೩೯–೫೫	೧೭೫೫–೫೭	"
೮. Rice	"	೧೫೧೩–೧೫೪೫	೧೫೪೫–೫೮	೧೫೫೮–೭೦ ೧೫೭೦–೮೨	೧೫೮೨–೧೬೨೯	"	"	"	೧೬೬೧–೬೩	೧೬೬೩–೭೧	೧೬೭೧–೯೭	"	"	೧೭೩೯–೫೪	೧೭೫೪–೫೭	"
೯. Sringeri mutt	"	"	—	—	? –೧೬೦೦ ೧	—	೧೬೪೬–೬೧	"	೧೬೬೧–೬೨	೧೬೬೪–೭೨						
೧೦. ಕೆಳದಿ ಅರಸರು ಮತ್ತು ಕನ್ನಡಸಾಹಿತ್ಯ	೧೫೦೦–೧೫೧೪	೧೫೧೪–೫೧೩೭	೧೫೩೭–೪೬ ೧೫೪೬–೫೯	೧೫೫೯–೭೧ ೧೫೭೧–೮೩	೧೫೮೩–೧೬೩೦	೧೬೩೦–೪೬	"	೧೬೬೧–೬೨	೧೬೬೨–೬೪	"	೧೬೭೨–೯೮	೧೬೯೮–೧೭೧೫	೧೭೧೫–೪೦	೧೭೪೦–೫೫	೧೭೫೫–೫೮	೧೭೫೮–೬೩
೧೧. Sewell		೧೫೬೦–೭೬	೧೫೮೫–೯೬	೧೫೯೬–೧೬೦೩	೧೬೦೪–೨೬		೧೬೪೯–೭೦			೧೬೮೧–೮೬		೧೬೯೮–೧೭೧೪				
೧೨. Shama Shastry		೧೫೪೫–೬೧														
೧೩. Rajavamsavali		೧೫೧೩–೪೫	೧೫೪೬–೫೯	೧೫೫೯–೭೧	೧೫೮೩–೧೬೨೯	೧೬೩೦–೪೬	೧೬೪೬–೬೧			೧೬೬೪–೭೨		೧೭೧೩–೧೭೩೧				
೧೪. Aygal		"	—													
೧೫. ರಾಣಿ ವೀರಮ್ಮಾಜಿ	೧೫೦೦–೧೫೪೦	೧೫೪೦–೬೫	೧೫೬೬–೭೧	೧೫೭೧–೮೬	೧೫೮೬–೧೬೨೯	೧೬೨೯–೪೫	೧೬೪೫–೬೦	೧೬೬೦–೬೧	೧೬೬೧–೬೪	೧೬೬೪–೭೧	೧೬೭೧–೯೬	೧೬೯೬–೧೭೧೪	೧೭೧೪–೩೯	೧೭೩೯–೫೫	೧೭೫೫–೫೭	೧೭೫೭–೬೩
೧೬. Karnataka through the ages	೧೫೦೦–	೧೫೪೪–೬೫	೧೫೬೭–೭೦	? –೧೫೮೦	"	"	೧೬೪೫–೬೧			"	"	"	"	"	"	"
೧೭. ಕನ್ನಡ ವಿಶ್ವಕೋಶ			೧೫೬೬–೭೦	೧೫೭೦–೮೦ ೧೫೭೦–೮೬	೧೫೮೫–೧೬೨೯	"	೧೬೪೫–೬೦		೧೬೬೨–೬೪			೧೬೯೪–೧೭೧೪	೧೭೧೫–೩೯	"	೧೭೫೫–೫೬	೧೭೫೬–೬೩
೧೮. Buchaman			೧೫೮೪–೯೫													
೧೯. ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೫೦೦–೪೦	೧೫೪೦–೬೬	೧೫೬೬–೭೦	೧೫೭೦–೮೦ ೧೫೮೦–೮೬	೧೫೮೬–೧೬೨೯	೧೬೨೯–೪೫	೧೬೪೫–೬೦	೧೬೬೦–೬೧	೧೬೬೧–೬೪	೧೬೬೪–೭೭	೧೬೭೭–೯೭	೧೬೯೭–೧೭೧೪	೧೭೧೪–೩೯	೧೭೩೯–೫೪	೧೭೫೪–೫೭	೧೭೫೭–೬೩
೨೦. ತುಳುನಾಡಿನ ಇತಿಹಾಸ			೧೫೬೬–೭೦													

ಅಡಿಟಿಪ್ಪಣಿಗಳು

೨. ಕೆಳದಿಯಿಂದ ರಾಜಧಾನಿಯು ಕ್ರಿ. ಶ. ೧೫೬೦ ರಲ್ಲಿ ವರ್ಗಾಯಿಸಲ್ಪಟ್ಟಿತೆಂದು ಹೇಳಿದ್ದಾರೆ. ಕವಿ ಲಿಂಗಣ್ಣನು ಪ್ರಜೋತ್ಪತ್ತಿ ಸಂವತ್ಸರವೆಂದಿರುತ್ತಾನೆ; ಇದು ಸರಿಸುಮಾರಾಗಿ ಕ್ರಿ. ಶ. ೧೫೧೨–೧೩ ಆಗುತ್ತದೆ (ಕೆ. ನೃ. ವಿ. ಪುಟ ೨೬, ದ್ವಿ. ಮು). ಡಾ. ಚಿಟ್ನೀಸ್‌ರವರು ಕ್ರಿ. ಶ. ೧೫೧೧–೧೨ ರಲ್ಲಿ ರಾಜಧಾನಿಯು ಕೆಳದಿಯಿಂದ ಇಕ್ಕೇರಿಗೆ ಬದಲಾವಣೆಯಾಯಿತೆಂದು ಹೇಳಿದ್ದಾರೆ (Keladi Polity ಪು. ii). ಚೌಡಪ್ಪನು ಕೆಳದಿಯಲ್ಲಿ ಕೇವಲ ೧೩ ವರ್ಷಗಳವರೆಗೆ ನೆಲೆಸಿ, ನಂತರ ಇಕ್ಕೇರಿಗೆ ನಿರ್ಗಮಿಸಿರುವುದು ಕಂಡು ಬರುತ್ತದೆ. ಕನ್ನಡ ವಿಶ್ವಕೋಶದಲ್ಲಿಯೂ ಕ್ರಿ. ಶ. ೧೫೬೦ ಎಂದಿದೆ (ಪುಟ ೨೦೬, ಸಂಪುಟ ೫).

೩. ಸದಾಶಿವನಾಯಕನು ಕ್ರಿ. ಶ. ೧೫೫೪ರಲ್ಲಿ ಬಾರಕೂರು ಮತ್ತು ಮಂಗಳೂರಿನ ರಾಜ್ಯಪಾಲನಾಗಿ ನೇಮಿಸಲ್ಪಟ್ಟನು.

೪. QJMS, XII P. 47

೫. Mac. Call., 18-15-15 (N. I, P. 21)

೬. Aygal – History of South Kanara, P. 188

೭. Mac. Call., 18-15-15 (N. I, P. 32)

೮. ತುಳುನಾಡಿನ ಇತಿಹಾಸ ಪು. ೧೧೭ ಮತ್ತು ೧೧೮.

೯. ಕ್ರಿ. ಶ. ೧೫೭೦ ರಿಂದ ೧೫೮೨ ರವರೆಗೆ ರಾಮರಾಜನಾಯಕನು ಆಳಿದನೆಂದು ರೈಸ್ ಸಾಹೇಬರು ಹೇಳಿದ್ದಾರೆ.

೧೦. ಕೆಳದಿ ಅರಸರು ಹಾಗೂ ಪೋರ್ತುಗೀಜರು – ಪುಟ ೪೧.

೧೧. ಹಲವು ಉಲ್ಲೇಖಗಳು ವೀರಭದ್ರನಾಯಕನ ಕಾಲದಲ್ಲಿ ಉದ್ಧರಿಸಲ್ಪಟ್ಟಿವೆ. ಆದರೆ ಶೃಂಗೇರಿಮಠದ ರಿಕಾರ್ಡಿನಲ್ಲಿ ಇದು ದೊರೆಯದಿರುವುದು ಚರ್ಚಾಸ್ಪದವಾಗಿದೆ.

೧೨. ಕ್ರಿ. ಶ. ೧೬೩೯ ರಲ್ಲಿ ರಾಜಧಾನಿಯು ಇಕ್ಕೇರಿಯಿಂದ ಬಿದನೂರಿಗೆ ಬದಲಾಯಿಸಲ್ಪಟ್ಟಿತು ಎಂದು ವಿಶ್ವಕೋಶವು ಹೇಳುತ್ತದೆ (ಪುಟ ೩೧೩, ಸಂಪುಟ ೨). ಅದೇ ವಿಶ್ವಕೋಶದಲ್ಲಿ ಕ್ರಿ. ಶ. ೧೬೩೮ ರಲ್ಲಿ ರಾಜಧಾನಿಯು ಇಕ್ಕೇರಿಯಿಂದ ಬಿದನೂರಿಗೆ ಬದಲಾಯಿಸಲ್ಪಟ್ಟಿತು ಎಂದು ಉಕ್ತವಾಗಿದೆ.

೧೩. Mac. Call., 1630-36 (18-15-15) N. I, P. 67.

೧೪. ಅದೇ (Rajavamsavali – 18-15-15)

ಶಾಸನಾಧಾರವು ಶಿವಪ್ಪನಾಯಕನ ಕಾಲವನ್ನು ಕ್ರಿ. ಶ. ೧೬೫೨ ರಿಂದ ೧೬೬೦ ರವರೆಗೆ ತೋರಿಸುತ್ತದೆ.

೧೫. ಶೃಂಗೇರಿಮಠದ ದಾಖಲೆಗಳ ಪ್ರಕಾರ ಹೀಗೆ ಹೇಳಲಾಗಿದೆ :

And in 1960-61 AD, the grant of lands of the value of 122 Pagodas and 6 Fanams in Holehonnur and other parts were ordered by the same prince in accordance with a reference made by the Guru (Serial No. 15) ಇದು ಶಿವಪ್ಪನಾಯಕರು ಸರಸಗೆ ಬರಸಿ ಕಳುಹಿದ ಕಾರ್ಯವೆಂದಿರುವುದರಿಂದ ವೆಂಕಟಪ್ಪನಾಯಕನೇ ಶಿವಪ್ಪನಾಯಕನ ಹೆಸರಿನಲ್ಲಿ ಕಳಿಸಿರಬಹುದೇ ? P. LXXIV and P. 32.

೧೬. ಅದೇ ಶೃಂಗೇರಿಮಠದ ೧೬ ನೇ ಶಾಸನವೊಂದು ಹೀಗೆ ಹೇಳುತ್ತದೆ :

hadrappa Nayaka ordered the restoration to the Mutt of the Villages of Kerehalli and Gavatur with an aggregate income of 460 Pagodas and 6 Fanams which had lapsed to the palace (Sl. No. 16).

೧೭. Nayakas of Ikkeri ಯಲ್ಲಿ ೧೬೬೩-೧೬೭೭ ಎಂದಿದೆ ಪು. ೧೦೯.

೧೮. In 1663-64 AD he made a present of valuable cloths to the Guru at the time of Deepavali (Sl. No. 17).

೧೯. ಪ್ರಖ್ಯಾತಳಾದ ಚನ್ನಮ್ಮಾಜಿಯು ಚಿತ್ತೂರನ್ನು ಕ್ರಿ. ಶ. ೧೬೭೧-೧೬೯೬ ರಲ್ಲಿ ಆಳಿದಳು ಎಂದಿದೆ. ಇದು ಅಸಂಭವ. ಈಕೆಯು ಚಿತ್ತೂರನ್ನು ಆಳಿದ್ದಲ್ಲ (ಕರ್ನಾಟಕ ಪರಂಪರೆ ಪುಟ ೧೯೪).

೨೦. ಆ ಕಾಲದಲ್ಲಿ ಚನ್ನಮ್ಮಾಜಿಯು ಶ್ರೀ ಗುರುಗಳಿಗೆ ಹಲವು ರಿಯಾಯ್ತಿಗಳನ್ನು ನೀಡಿದ ಉಲ್ಲೇಖಗಳೇ ಹೊರತು, ಇದು ಕಾಲಾನುಕ್ರಮಣಿಕೆಯಲ್ಲಿ ಬರುವುದಿಲ್ಲ.

೨೧. ಚನ್ನಮ್ಮಾಜಿಯ ಮರಣಕಾಲವು ದಿನಾಂಕ ೨೯-೩-೧೬೯೭ ಕ್ಕೆ ಕೆಲವು ದಿನಗಳ ಮುಂಚೆ ಆಗಿರಬೇಕು !

೨೨. ಆ ಕಾಲದಲ್ಲಿ ಎರಡನೆಯ ಬಸವಪ್ಪನಾಯಕ ಮತ್ತು ಚೆನ್ನಬಸಪ್ಪನಾಯಕರು ರಾಜ್ಯವಾಳಿದುದು ಕಂಡುಬರುತ್ತದೆ.

೨೩. ನರಹರಯ್ಯನವರು ವೀರಮ್ಮಾಜಿಯ ಕಾಲವು ಕ್ರಿ. ಶ. ೧೭೫೪–೫೭ ಮತ್ತು ಮುಮ್ಮಡಿ ಸೋಮಶೇಖರನಾಯಕನ ಕಾಲವು ಕ್ರಿ. ಶ. ೧೭೫೭–೬೩ ಎಂದು ಹೇಳಿದ್ದಾರೆ.

೨೪. ಕರ್ನಾಟಕ ಭಾರತಿ, ಸಂ. ೭, ಸಂ. ೨, ೧೯೭೪, ಪು. ೮೩ ನೋಡಿರಿ.

೨೫. (a) In 1757–58 AD the then Ruler Somasekhara Nayak presented land yeilding 360 Pagodas and 4 Phanams on the occassion of the visit of His Highness Shri Sringeri Swamy to Bednur... P. LXXV.
(b) ಹೀಗೆಯೇ ೨೮ ಮತ್ತು ೨೯ ರ ಕ್ರಿ. ಶ. ೧೭೬೧–೬೨ ರ ಶಾಸನವೂ ಸೋಮಶೇಖರನಾಯಕನ ಹೆಸರಿನಲ್ಲಿ ನೀಡಿರುವುದು ವ್ಯಕ್ತಪಡುತ್ತದೆ P. 39–40.

೨೬. ಅನುಬಂಧ ೨

೨೭. ವೀರಶೈವಧರ್ಮಶಿರೋಮಣಿ – ಸಂಪಾದಕರು ಪಿ. ಆರ್. ಕರಿಬಸವಶಾಸ್ತ್ರಿ, ಎಂ. ಬಸವಲಿಂಗಶಾಸ್ತ್ರಿ ಮತ್ತು ಎನ್. ಆರ್. ಕರಿಬಸವಶಾಸ್ತ್ರಿ (೧೯೦೮).

೨೮. ೧೯೫೭ ರಲ್ಲಿ ಮದರಾಸ್ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ.

೨೯. ೧೯೭೪ ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ.

೩೦. ೧೯೭೦ ರಲ್ಲಿ – ಅದೇ .. ..

೩೧. ಈ ಸಂಖ್ಯೆಗಳನ್ನು ಕೆಳದಿ ಅರಸರ ಅನುಕ್ರಮಣಿಕೆಯ ಮೇರೆಗೆ ಸೂಚಿಸಲಾಗಿದೆ.

ಆಧಾರ ಗ್ರಂಥಗಳು

೧. ಕೆಳದಿನೃಪವಿಜಯ – (ಲಿಂಗಣ್ಣ ಕವಿ)

೨. ಶಿವತತ್ವರತ್ನಾಕರ – ಬಸವ ಭೂಪಾಲ

೩. ವೀರಶೈವಧರ್ಮಶಿರೋಮಣಿ – ಷಡಕ್ಷರ ಮಂತ್ರಿ

೪. ಕೆಳದಿಯ ಅರಸರು ಹಾಗೂ ಪೋರ್ತುಗೀಜರು
– ಡಾ. ಬಿ. ಕೆ. ಶಾಸ್ತ್ರೀ, ಗೋವಾ

೫. ಕೆಳದಿ ನಾಯಕರು – ಪ್ರೊ. ಜಿ. ಎಸ್. ದೀಕ್ಷಿತ್

೬. Rice – (Gezetteer)

೭. Hayavadana Rao – (Gezetteer)
೮. QJMS
೯. Karnataka through the ages
೧೦. Vij. Sex. Cent. Com. Volume
೧೧. Nayakas of Ikkeri – (Dr. Swaminathan)
೧೨. Keladi Polity – (Dr. K. N. Chitnis)
೧೩. ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ – ಡಾ. ಸಾ. ಶಿ. ಮರುಳಯ್ಯ
೧೪. ಕರ್ನಾಟಕದ ಸಂಕ್ಷಿಪ್ತ ಇತಿಹಾಸ – ಡಾ. ಸೂರ್ಯನಾಥ ಕಾಮತ್
೧೫. Selections from the records of Sringeri Mutt Vol. I
೧೬. ರಾಣಿ ವೀರಮ್ಮಾಜಿ – ಜಿ. ಪಿ. ರಾಜರತ್ನಂ
೧೭. ಕನ್ನಡ ವಿಶ್ವಕೋಶ – ಮೈಸೂರು ವಿಶ್ವವಿದ್ಯಾನಿಲಯ
೧೮. Travel of Buchaman
೧೯. ತುಳುನಾಡಿನ ಇತಿಹಾಸ – ಡಾ. ಕೆ. ವ್ಹಿ. ರಮೇಶ್.

■ ■

ದ್ರಾವಿಡ ಸಂಧ್ಯಕ್ಷರಗಳು

(ಒಂದು ಪರಿಶೀಲನೆ)

ಸಂಗಮೇಶ ಸವದತ್ತಿಮಠ

ದ್ರಾವಿಡಭಾಷೆಗಳಲ್ಲಿ ಸಂಧ್ಯಕ್ಷರಗಳ ಅಸ್ತಿತ್ವದ ಪ್ರಶ್ನೆ ಬಹು ಕಾಲದಿಂದಲೂ ಸಂದಿಗ್ಧವಾಗಿತ್ತು. ದ್ರಾವಿಡ ಸಂಧ್ಯಕ್ಷರಗಳ ಬಗೆಗೆ ಕಾಲ್ಡವೆಲ್, ಗುಂಡರ್ಟ, ಷಣ್ಮುಗಂ ವಿಳ್ಳೈ, ಸುಬ್ರಹ್ಮಣ್ಯಂ, ವಿಲ್ಯಂ ಬ್ರೈಟ, ಕಮಿಲ್ ಜ್ವಿಲೆವಿಲ್ ಮುಂತಾದ ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ತಮಿಳು, ಕನ್ನಡ ಮುಂತಾದ ಕೆಲವು ದ್ರಾವಿಡ ಭಾಷೆಗಳಲ್ಲಿ ಸಂಧ್ಯಕ್ಷಗಳಿಗೆ ಲಿಪಿಯಲ್ಲಿ ಸ್ವತಂತ್ರ ರೂಪದ ಅಸ್ತಿತ್ವವನ್ನು ನೀಡಿರುವುದರಿಂದ ಬಹಳ ಮಟ್ಟಿಗೆ ಅವುಗಳನ್ನು ವರ್ಣಮಾಲೆಯಲ್ಲಿ ಸೇರಿಸಿಬಿಡುವ ವಾಡಿಕೆ ಇದೆ. ಮೂಲದ್ರಾವಿಡದಲ್ಲಿಲ್ಲದ ಸಂಧ್ಯಕ್ಷರಗಳು ತಮಿಳು, ಕನ್ನಡಗಳಂತಹ ಪ್ರಮುಖ ಭಾಷೆಗಳಲ್ಲಿ ಸೇರಲು ಕಾರಣವೇನು ? ಅಥವಾ ಅವು ಬಳಕೆಯಾಗತೊಡಗಿದ ಕಾಲವಾವುದು? ಆಧುನಿಕಭಾಷೆಗಳಲ್ಲಿ ಅವುಗಳ ಸ್ಥಾನವೇನು? ಎಂಬ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಚಾಕ್ಷುಸರೂಪದಲ್ಲಿ ತಮ್ಮ ವರ್ಣಮಾಲೆಯಲ್ಲಿ ಸೇರಿಸಿಕೊಂಡಿರುವ ತಮಿಳು ಹಾಗೂ ಕನ್ನಡ ಭಾಷೆಗಳನ್ನು ಮುಖ್ಯವಾಗಿಟ್ಟುಕೊಂಡು ಇವುಗಳ ಮರು ಪರಿಶೀಲನೆಯ ಒಂದು ಪ್ರಯತ್ನ, ಈ ಲೇಖನ.

ಪಾಣಿನಿ ಬಳಸದ 'ಸಂಧ್ಯಕ್ಷರ' ಎಂಬ ಪದ ಕಾತಂತ್ರ ವ್ಯಾಕರಣದಲ್ಲಿದೆ. ಸಂಸ್ಕೃತ ವ್ಯಾಕರಣಗಳ ಅನುಸಾರ ಸಂಧ್ಯಕ್ಷರಗಳು ನಾಲ್ಕು — ಏ, ಓ, ಐ ಹಾಗೂ ಔ. ದ್ರಾವಿಡಭಾಷೆಗಳ ಮಟ್ಟಿಗೆ ಏ ಹಾಗೂ ಓ ಇವು ಸಂಧ್ಯಕ್ಷರಗಳಲ್ಲ, ದೀರ್ಘಸ್ವರಗಳು ಮಾತ್ರ. ಒಂದು ಉಚ್ಚಾರದಲ್ಲಿ ಎರಡು ಸ್ವರಗಳ ಅಥವಾ ಒಂದು ಸ್ವರ, ಇನ್ನೊಂದು ಅರ್ಧ ಸ್ವರದ ಅಂಶಗಳು ಸೇರಿ ಉಚ್ಚರಿಸಲ್ಪಡುತ್ತವೆಯೆಂಬುದನ್ನು ಕೆಲವು ಭಾಷೆಗಳಲ್ಲಿ ಸಾಮಾನ್ಯವಾಗಿ ಮನಗಾಣಬಹುದು. ಅಂತೆಯೆ ಸಂಸ್ಕೃತದಲ್ಲೂ ಒಂದು ಕಾಲದಲ್ಲಿ ಎರಡು ಭಿನ್ನ ಸ್ವರಗಳ ಅಂಶಗಳು ಏ ಹಾಗೂ ಓಗಳಲ್ಲಿ ಸೇರಿ ಉಚ್ಚರಿತವಾಗುತ್ತಿರಬೇಕು. ಅವುಗಳನ್ನು 'ಸಂಧ್ಯಕ್ಷರಗಳು' ಎಂದು ಹೆಸರಿಸಿದ್ದಾರೆ.

ಸಂಧ್ಯಕ್ಷರಗಳನ್ನು ಉಚ್ಚಾರಕ್ಕನುಗುಣವಾಗಿ ಮೂರು ರೀತಿಯಲ್ಲಿ ನಾವು ವಿಂಗಡಿಸಬಹುದಾಗಿದೆ :

೧ ಸಂಯುಕ್ತ ವರ್ಣಗಳು

೨ ಸ್ವರಾನುವೃತ್ತಿ

೩ ಅರ್ಧ ಸ್ವರದಿಂದೊಡಗೂಡಿದ ಸ್ವರಾನುವೃತ್ತಿ

ಎರಡು ಸ್ವರಗಳು ತಮ್ಮ ಮೂಲ ಗುಣಧರ್ಮಗಳನ್ನು ಒಟ್ಟಿಗೆ ಉಚ್ಚರಿತವಾಗುವಂತೆ ಸಂಯುಕ್ತಗೊಳಿಸಿಕೊಂಡು ಭಾಷೆಯಲ್ಲಿ ವರ್ಣವೈಶಿಷ್ಟ್ಯ ಹೊಂದಿ ಬಳಕೆಗೊಳ್ಳುತ್ತಿದ್ದರೆ ಅವುಗಳಿಗೆ ಸಂಯುಕ್ತವರ್ಣಗಳೆನ್ನಬಹುದು. ಉದಾಹರಣೆಗೆ ಸಂಸ್ಕೃತದ ಏ ಓ ಐ ಹಾಗೂ ಔ.[೧]

ಸ್ವರಾನುವೃತ್ತಿಯಲ್ಲಿ ಎರಡು ಸ್ವರಗಳು ಒಂದರ ಅನಂತರ ಮತ್ತೊಂದು ಅನುಕ್ರಮವಾಗಿ ಬಂದು ಉಚ್ಚರಿಸಲ್ಪಡುತ್ತವೆ. ಅರ್ಧಸ್ವರದಿಂದೊಡಗೂಡಿದ ಸ್ವರಾನುವೃತ್ತಿಯು ಸ್ವರಾನುವೃತ್ತಿಯಂತೆಯೇ ಇದ್ದು, ಸ್ವರದ ಮುಂದೆ ಅರ್ಧಸ್ವರ ಒಡಗೂಡಿರುತ್ತದೆ. ಸಂಧ್ಯಕ್ಷರಗಳಲ್ಲಿ ಸ್ವರಾನುವೃತ್ತಿ ಅ+ಇ, ಅ+ಉ ಎಂಬುದಾಗಿಯೂ ಅರ್ಧಸ್ವರಾನುವೃತ್ತಿ ಅ+ಯ್, ಅ+ವ್ ಎಂಬುದಾಗಿಯೂ ಆಗುತ್ತದೆ.

ದ್ರಾವಿಡಭಾಷೆಗಳಲ್ಲಿ ಸಂಧ್ಯಕ್ಷರಗಳನ್ನು ಸಂಯುಕ್ತ ವರ್ಣಗಳೆಂದು ಪರಿಗಣಿಸಬೇಕೋ, ಸ್ವರಾನುವೃತ್ತಿ ಅಥವಾ ಅರ್ಧಸ್ವರಾನುವೃತ್ತಿ ಎಂದು ಪರಿಗಣಿಸಬೇಕೋ ಎಂಬ ಬಗೆಗೆ ಪಂಡಿತರಲ್ಲಿ ಏಕಾಭಿಪ್ರಾಯವಿಲ್ಲ.

ಪೂರ್ವದ್ರಾವಿಡಭಾಷೆಗಳಲ್ಲಿ ಸಂಧ್ಯಕ್ಷರಗಳ ಉಚ್ಚಾರವು ಸಂಸ್ಕೃತಕ್ಕಿಂತ ಬೇರೆಯಾಗಿರಬೇಕು. ಸಂಸ್ಕೃತದ ಪ್ರಭಾವದಿಂದಲೇ ದ್ರಾವಿಡಭಾಷೆಗಳಲ್ಲಿ ನುಸುಳಿಬಂದ ಸಂಧ್ಯಕ್ಷರಗಳ ಉಚ್ಚಾರದ ಸೂಕ್ಷ್ಮ ಭೇದವನ್ನು ಹಿಂದಿನ ವೈಯ್ಯಾಕರಣಿಗಳು ಅಷ್ಟಾಗಿ ಗಮನಿಸಲ್ಲಿಲ್ಲ, ಅಲ್ಲದೆ ಸಂಸ್ಕೃತ ವ್ಯಾಕರಣಗಳೇ ಅವರಿಗೆ ಮಾದರಿಯಾಗಿ ಕಣ್ಣೆದುರಿಗೆ ಇದ್ದುದರಿಂದ ಅಲ್ಲಿದ್ದಂತೆಯೆ ತಮ್ಮ ಭಾಷೆಗನ್ವಯಿಸಿ ಸಂಧ್ಯಕ್ಷರಗಳನ್ನು ವಿವರಿಸಿದರು. ಡಾ. ಕಾಲ್ಡ್‌ವೆಲ್‌ರು ದ್ರಾವಿಡ ಐ ಹಾಗೂ ಔ ಸಂಧ್ಯಕ್ಷರಗಳ ಬಗೆಗೆ ಖಚಿತವಾಗಿ ಅಭಿಪ್ರಾಯಗಳನ್ನು ನೀಡಿದ್ದಾರೆ.[೨]

'ಐ' ಸಂಧ್ಯಕ್ಷರದ ಉಚ್ಚಾರ ಸಂಸ್ಕೃತದಲ್ಲಿ 'ಅ ಇ' ಎಂದಾದರೆ ದ್ರಾವಿಡ ಭಾಷೆಗಳಲ್ಲಿ 'ಎ ಇ' ಅಥವಾ 'ಎಯ್' ಆಯಿತು. 'ಔ' ಸಂಧ್ಯಕ್ಷರದ ಸಂಸ್ಕೃತದ ಅನುಕರಣೆ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವುದಾದರೂ 'ಔ' ದ ಉಚ್ಚಾರವೂ ಕೂಡ 'ಅ ಉ' ಎಂಬಂತಾಗದೆ 'ಅವ್' ಎಂಬಂತೆ ಆಗುತ್ತದೆ. ಇಷ್ಟು ಕಾಲ್ಡ್‌ವೆಲ್‌ರ ವಿವೇಚನೆಯ ತಿರುಳು.[೩] ಅವರು ಹೇಳಿರುವ ವಿಚಾರಗಳಲ್ಲಿ ತಥ್ಯವಿದೆ. ಕಾಲ್ಡ್‌ವೆಲ್‌ರ ಈ ಅಭಿಪ್ರಾಯ ದ್ರಾವಿಡಭಾಷೆಗಳಲ್ಲಿಯ ಸಂಧ್ಯಕ್ಷರಗಳು ಅರ್ಧಸ್ವರದಿಂದೊಡಗೂಡಿದ

---

೧ ಇಲ್ಲಿ ಹೇಳಿರುವ ಸಂಯುಕ್ತ ವರ್ಣಗಳು cluster ಗಳಿಗಿಂತ ಭಿನ್ನವೆಂಬುದನ್ನು ಗಮನಿಸಬೇಕು.

೨, ೩ ವಿವರಗಳಿಗಾಗಿ ನೋಡಿ : Caldwell : Comparative Grammer of the Dravidian or South Indian family of Languages, p. 136

ಸ್ವರಾನುವೃತ್ತಿಯಾಗುತ್ತವೆ ಎಂಬುದನ್ನು ಸೂಚಿಸುತ್ತದೆ. ಅವು ಸ್ವತಂತ್ರ ವರ್ಣಗಳಂತೂ ಅಲ್ಲ. ಬಹುಜನ ವಿದ್ವಾಂಸರು ಕಾಲ್ಡವೆಲ್‌ರ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ.

ಅ + ಇ = ಐ, ಅ + ಉ = ಔ ಎಂದಿಟ್ಟುಕೊಂಡರೆ ದ್ರಾವಿಡ ಹ್ರಸ್ವಸ್ವರಗಳಾದ ಅ, ಇ, ಉ, ಎ, ಒ ಇವುಗಳು ಪರಸ್ಪರ ಸೇರುವುದರಿಂದ ೨೦ ಸಂಧ್ಯಕ್ಷರಗಳ ಉಚ್ಚಾರಗಳಾದರೂ ಹೊರಡಬೇಕು. ಭಾಷೆ ಒಂದು "ವ್ಯವಸ್ಥೆ" ಎಂದ ಮೇಲೆ ಐ, ಔ ಬಿಟ್ಟರೆ ಇನ್ನುಳಿದ ೧೮ ಸಂಧ್ಯಕ್ಷರಗಳ ಸಾಧ್ಯತೆ ಇರಬೇಕಲ್ಲವೆ? ಆದರೆ ದ್ರಾವಿಡಭಾಷೆಗಳಲ್ಲಿ ಹಾಗಾಗಿಲ್ಲ.

ಅ + ಇ = ಐ; ಅ + ಉ = ಔ; ಸಾಧ್ಯತೆ ಇದ್ದರೆ,
ಅ + ಎ; ಅ + ಒ; ಇ + ಅ; ಇ + ಉ; ಇ + ಎ; ಇ + ಒ; ಉ + ಅ; ಉ + ಇ; ಉ + ಎ; ಉ + ಒ; ಎ + ಅ; ಎ + ಇ; ಎ + ಉ; ಎ + ಒ; ಒ+ ಅ; ಒ + ಇ ಒ + ಉ; ಒ + ಎ; – ಇವುಗಳ ಸಾಧ್ಯತೆ ಏಕಿಲ್ಲ ?[೪]

ಮೂಲದ್ರಾವಿಡ ಕಲ್, ಕಣ್, ಉರಲ್ ಮುಂತಾದ ಶಬ್ದಗಳಲ್ಲಿ ಅಲ್, ಅಣ್, ಇಂತಹ ಪ್ರಕೃತಿ ಸಾಧಕ ಪ್ರತ್ಯಯಗಳು (—◡C) ಬಂದಿರುವಂತೆಯೆ 'ಕಮ್' ಎಂಬ ಶಬ್ದಗಳಲ್ಲಿ ಕ್+ಅ+ಇ (– ◡◡) ಎಂಬ ಧ್ವನಿಮಾಗಳಿರದೆ ಕ್+ಅ+ಯ್ (– ◡C) ಎಂಬುದಾಗಿ ಇದ್ದು,

ಅ+ಯ್ > ಅಯ್ ಎಂಬ ಉಚ್ಚಾರವಿರಬೇಕೇ ವಿನಃ
ಅ + ಇ > ಐ ಉಚ್ಚಾರವಿಲ್ಲ.

ಕನ್ನಡದಲ್ಲಿ ಹಸಿರು, ಪಯಿರು ಎಂಬ ಶಬ್ದಗಳಿವೆ. ಹಸಿರು ಮೂಲದಲ್ಲಿ ಪಸಿರು, ಅದಕ್ಕೂ ಹಿಂದೆ ಪಚಿರ್ ಆಗಿತ್ತು. ಮೂಲದಾವಿಡ ಪಚ್+ಇರ್ > ಪಯ್+ಇರ್ ಆಯಿತು. ಆದ್ದರಿಂದ ಇಲ್ಲಿ ಚ್ > ಯ್ ಅಥವಾ ಚ > (ಲೋಪ) ಆಗಿರಬೇಕಾಯಿತು. ಮೂಲದ್ರಾವಿಡದಲ್ಲಿ ಅ+ಇ ಎಂಬುದಾಗಿ ಎರಡು ಸ್ವರಗಳು ಒಟ್ಟಿಗೆ ಉಚ್ಚರಿತವಾಗುವ ಬಗೆ ಇರಲಿಲ್ಲ. ಈ ಕಾರಣದಿಂದ ಪಯಿರ್ ಶಬ್ದದಲ್ಲಿ 'ಐ' ಎಂಬ ನಿರ್ದಿಷ್ಟ ಸಂಧ್ಯಕ್ಷರವಿಲ್ಲ. ಆದರೂ ಅದನ್ನಿಂದು ನಾವು 'ಪೈರು' ಎಂಬುದಾಗಿ ಬರೆದು

---

೪ ಈ ವಿಚಾರವಾಗಿ ಡಾ. ವಿ ಶಿವಾನಂದರೊಡನೆ ನಾನು ಚರ್ಚಿಸಿದಾಗ ಅವರು 'ಐ' 'ಔ' ಸಂಧ್ಯಕ್ಷರಗಳು ಕನ್ನಡದಲ್ಲಿ ಎ, ಒ ಸ್ವರಗಳಿಂದಲೆ ಬೆಳವಣಿಗೆ ಹೊಂದಿರಬೇಕು ಎಂದು ಅಭಿಪ್ರಾಯಪಟ್ಟರು. ಅವರು ತಮ್ಮ ಅಭಿಪ್ರಾಯ ಸಮರ್ಥನೆಗೆ ನೀಡಿದ ಉದಾಹರಣೆಗಳು : ಬಂದೆ> ಬಂದೈ, ತಂದೆ> ತಂದೈ, ಕೇಳಿ> ಕೇಳೈ, ಬಂದೋನು> ಬಂದೌನು. ಕೇಳೋನು > ಕೇಳೌನು, ಅಪ್ಪೋದು> ಹೌದು ಇತ್ಯಾದಿ.

ಚಾಕ್ಷುಸವಾಗಿ ಐ ದ ರೂಪವನ್ನು ತೋರುತ್ತೇವೆ. ಇದು ಸಂಸ್ಕೃತ ಪ್ರಭಾವದಿಂದಲ್ಲದೆ ಬೇರೇನೂ ಅಲ್ಲ. ಇಲ್ಲಿ ಚ್+ಯ್ ಬದಲಾವಣೆಯೆ ನಿಶ್ಚಿತವಾಗಿ ನಡೆದಿರ ಬಹುದಾದ್ದರಿಂದ ಪ್ರಥಮಾಕ್ಷರದ 'ಅ' ಹಾಗೂ ದ್ವಿತಿಯಾಕ್ಷರದ 'ಇ' ಸ್ವರಗಳ ಮಧ್ಯೆ 'ಯ್' ಅರ್ಧಸ್ವರ ಸೇರಿದೆ. ಕನ್ನಡದ 'ಐದು' ಎಂಬ ಸಂಖ್ಯಾವಾಚಕವನ್ನು ಮೂಲ ದ್ರಾವಿಡದಲ್ಲಿ 'ಚ್' ಎಂಬುದಾಗಿ ಪುನರ್‌ರಚಿಸಬಹುದು.[೫] ದ್ರಾವಿಡ ಶಬ್ದಗಳಲ್ಲಿ ಬರುವ 'ಅಯ್' ಉಚ್ಚಾರವು ಸಂಸ್ಕೃತದ 'ಐ' ಸಂಧ್ಯಕ್ಷರದಂತೆ ಭಾಸವಾಗತೊಡಗಿರ ಬೇಕು. 'ಕವುಂಗು' ಪದದಲ್ಲಿ ಪ್ರಥಮಾಕ್ಷರದ 'ಅ' ಹಾಗೂ ದ್ವಿತಿಯಾಕ್ಷರದ 'ಉ' ಸ್ವರಗಳ ಮಧ್ಯ 'ವ್' ಅರ್ಧಸ್ವರ ಸೇರಿತು. ಇಲ್ಲಿಯೂ 'ಅ+ಉ' ಗಳ ಉಚ್ಚಾರ ದ್ರಾವಿಡಕ್ಕೆ ಸಹಜವಲ್ಲದುದರಿಂದ ಹೀಗಾಗಿದೆ. ಮೂರೂ ಸ್ವರಗಳ ಒಟ್ಟು ಉಚ್ಚಾರ ಸಂಸ್ಕೃತಕ್ಕೆ ಸಮೀಪವೆನಿಸುವ ಔ ಸಂಧ್ಯಕ್ಷರದಂತೆ ಭಾಸವಾಗತೊಡಗಿತು.

ಕನ್ನಡದಲ್ಲಿ ಔಂಕು, ಕೌಂಗು, ಮೈ, ಗೈ ಮುಂತಾದವುಗಳನ್ನು ಅವುಂಕು, ಕವುಂಗು, ಮೆಯ್, ಗೆಯ್ ಎಂಬುದಾಗಿ ಬರೆಯುವ ವಾಡಿಕೆ ಇದೆ. ಕೇಶಿರಾಜನು ಕೂಡ ಕನ್ನಡ ವರ್ಣಮಾಲೆಯಲ್ಲಿ ಸಂಧ್ಯಕ್ಷರಗಳನ್ನು ಸೇರಿಸಿದ್ದರೂ ಅವುಗಳ ಬದಲಾಗಿ ಅಯ್/ಅವ್ ಎಂಬುದಾಗಿ ಬಳಸಬಹುದೆಂದು ಹೇಳಿದ್ದಾನೆ.[೬] ಸಂಧ್ಯಕ್ಷರಗಳ ಉಚ್ಚಾರದ ಬಗೆಗೆ ಕೇಶಿರಾಜನಿಗೆ ಸ್ಪಷ್ಟವಾದ ಕಲ್ಪನೆ ಇರಬೇಕು. ಅಂತೆಯೆ ಅವನಿಗೆ ಸಂಶಯ ಬಂದು ಈ ರೀತಿಯಾಗಿ ಹೇಳಿರಬಹುದು. ಏಕೆಂದರೆ ಕೇಶಿರಾಜನ ಕಾಲದಲ್ಲಿ ಆಡುನುಡಿಯ ಕನ್ನಡದಲ್ಲಿ ಸಂಧ್ಯಕ್ಷರಗಳ ಉಚ್ಚಾರ ಸಂಸ್ಕೃತದಂತೆ ಇಲ್ಲದೆ ಇರುವುದು ಹಾಗೂ ಗ್ರಂಥಸ್ಥ ಕನ್ನಡದಲ್ಲಿ ಅವುಗಳಿಗೆ ಸ್ವತಂತ್ರ ಸ್ಥಾನ ಕೆಲವೆಡೆ ಇಲ್ಲದಿರುವುದು ಅವನ ಹೇಳಿಕೆಗೆ ಹಿನ್ನೆಲೆಯಾಗಿರಬೇಕು. ಸಂಸ್ಕೃತ 'ಐ' ಹಾಗೂ 'ಔ' ಇವುಗಳನ್ನು ಹೊಂದಿದ ಪದಗಳನ್ನು ಕನ್ನಡವು ತದ್ಭವೀಕರಿಸಿಕೊಳ್ಳುವಾಗ ಅವುಗಳನ್ನು ಸುಲಭ ಉಚ್ಚಾರಕ್ಕೆ ಅಳವಡಿಸಿಕೊಳ್ಳುವುದು ಕಂಡುಬರುತ್ತದೆ.

ಉದಾ : ದ್ರೌಪದಿ > ದುರುಪದಿ, ಕೌಪೀನ > ಕೋವಣ, ಔಷದ > ಅಗಸುದ್ದಿ, ಯೌವ್ವನ > ಜವ್ವನ, ವೈಶಾಖ > ಬೇಸಗೆ, ವೈದ್ಯ > ಬೆಜ್ಜ, ಸೈಂಧವ > ಸೆಂದವ ಇತ್ಯಾದಿ.

ಹೀಗೆ ಸುಲಭೀಕರಣ ನಡೆದಿರುವುದು ಆಕಸ್ಮಿಕವಂತೂ ಅಲ್ಲ. ಮೂಲದ್ರಾವಿಡದಲ್ಲಿ ಐ ಔ ಸಧ್ಯಕ್ಷರಗಳು ಇದ್ದಿದ್ದರೆ ಕನ್ನಡದಲ್ಲಿ ಈ ರೀತಿ ಬದಲಾವಣೆ ಸಾಧ್ಯವಿಲ್ಲ. ಆದರೆ ಇದೊಂದೆ ಕಾರಣದಿಂದ ಸಂಧ್ಯಕ್ಷರಗಳು ಮೊದಲು ಇದ್ದು ಅನಂತರ ಉಚ್ಚಾರದಲ್ಲಿ ಸುಲಭಗೊಂಡಿವೆಯೆಂದೂ ಹೇಳಬಾರದು.

---

೫ ನೋಡಿ : ಹಂಪನಾಗರಾಜಯ್ಯ, 'ದ್ರಾವಿಡ ಸಂಖ್ಯಾವಾಚಕಗಳು' ಪು. 46

೬ ನೋಡಿ : ಡಾ. ಆರ್. ಸಿ. ಹಿರೇಮಠ, The Structure of Kannada p. 2

ಬಯ್ – ಬಾಯ್, ಕಯ್ – ಕಾಯ್
ಪಯ್ – ಪಾಯ್, ಸಯ್ – ಸಾಯ್

ಇಂತಹ ಹಲವಾರು ಉದಾಹರಣೆಗಳಲ್ಲಿ 'ಅಯ್' ಹಾಗೂ 'ಆಯ್' ಇವುಗಳಿಗೆ ಸ್ಪಷ್ಟವಾದ ಭಿನ್ನತೆಯನ್ನು ಮನಗಾಣಬಹುದು. ಆದ್ದರಿಂದ 'ಅಯ್' ಇದನ್ನು ಸಂಧ್ಯಕ್ಷರವೆಂದು ಪರಿಗಣಿಸಿ 'ಐ' ಎಂಬ ಚಾಕ್ಷುಸರೂಪವನ್ನು ಕೊಟ್ಟಿರುವಂತೆ 'ಆಯ್' ರೂಪವನ್ನು ದೀರ್ಘ ಸಂಧ್ಯಕ್ಷರವೆಂದು ಪರಿಗಣಿಸಿ ,ಅದಕ್ಕೊಂದು ಹೊಸ ಚಾಕ್ಷುಸ ರೂಪವನ್ನೇಕೆ ಕೊಡಬಾರದು ? ಎನಿಸುತ್ತದೆ. ಹಾಗಿಲ್ಲವೆಂದ ಮೇಲೆ 'ಐ' ಇದು ಕೇವಲ ಹ್ರಸ್ವಸ್ವರಗಳಿಗೆ ಮಾತ್ರ ಸೀಮಿತವೆನ್ನುವುದು ಸ್ಪಷ್ಟವಾಗುತ್ತದೆ. 'ಅಯ್' 'ಆಯ್' ಎಂಬ ಉಚ್ಚಾರಗಳನ್ನು ಅಂತೆಯೆ ಅವುಗಳನ್ನು ಬರೆದರೆ ಯಾವ ಅಭ್ಯಂತರವಿಲ್ಲವೆಂದ ಮೇಲೆ 'ಐ' 'ಔ' ಗಳಿಗೆ ಸ್ವತಂತ್ರವಾದ ಚಾಕ್ಷುಸ ಸಂಕೇತದ ಅವಶ್ಯಕವೆನಿಸುವುದಿಲ್ಲ.

ತೊಲ್ಕಾಪ್ಪಿಯಂ ತಮಿಳು ವ್ಯಾಕರಣ ಗ್ರಂಥದಲ್ಲಿ 'ಐ' ಸಂಧ್ಯಕ್ಷರವನ್ನು ಅ+ಇ ಎಂಬ ದ್ವಿತ್ವಾಕ್ಷರವೆಂದು ಹೇಳಿ 'ಅ' ಹಾಗೂ 'ಯ್' ವರ್ಣಗಳನ್ನು ಒಟ್ಟಿಗೆ ಉಚ್ಚರಿಸಿದರೆ 'ಐ' ಎಂಬ ಧ್ವನಿ ಬರುತ್ತದೆಂದೂ ಶಬ್ದಾಂತ್ಯದಲ್ಲಿರುವ 'ಇ' ಸಂಜ್ಞೆ 'ಯ್' ಎಂಬುದಾಗಿ ಉಚ್ಚರಿಸಲ್ಪಡುತ್ತದೆಂದೂ ಸೂಚಿಸಲಾಗಿದೆ. ಇದರಂತೆಯೆ 'ಔ' ಸಂಧ್ಯಕ್ಷರವನ್ನೂ ಅ+ಉ ಸ್ವರಗಳ ಅನುವೃತ್ತಿಯೆಂದು ಹೇಳಿ ಇಲ್ಲಿಯು 'ಉ' ಸ್ವರವು 'ವ್' ಎಂಬುದಾಗಿ ಉಚ್ಚರಿಸಲ್ಪಡುತ್ತದೆಂದು ಹೇಳಿದೆ.[೭]

ಒಟ್ಟಿನಲ್ಲಿ ದ್ರಾವಿಡಭಾಷೆಗಳಲ್ಲಿ ಸಂಧ್ಯಕ್ಷರಗಳು ಇಲ್ಲದಿದ್ದರೂ ಅ+ಯ್।ವ್ ಎಂಬ ಸ್ವರ+ವ್ಯಂಜನ (ಅರ್ಧಸ್ವರ) ಎಂಬ ಅನುವೃತ್ತಿಯು ಉಚ್ಚಾರವೇ ವಿಪುಲವಾಗಿರುವುದು ಸ್ಪಷ್ಟವಾಗಿದೆ.[೮] ಸ್ವರ+ಸ್ವರ (ಅ+ಇ ಅಥವಾ ಅ+ಉ) ಎಂಬುದಾಗಿ ಮಾತ್ರ ಅಲ್ಲವೆನ್ನುವುದೂ ಅಷ್ಟೇ ಸ್ಪಷ್ಟ. ಕಮಿಲ್ ಅವರು ೯ ಕಾರಣಗಳನ್ನು ನೀಡಿ ಮೂಲ ದ್ರಾವಿಡಭಾಷೆಯಲ್ಲಿ 'ಐ' ಹಾಗೂ 'ಔ' ಇವುಗಳನ್ನು ಅಯ್ ಹಾಗೂ 'ಅವ್' ಎಂದು ಪುನರ್ರಚಿಸಿದ್ದಾರೆ.[೯]

ಮೂಲದ್ರಾವಿಡ 'ಅಯ್' ಎಲ್ಲ ದ್ರಾವಿಡಭಾಷೆಗಳಲ್ಲಿ 'ಅಯ್' ಆಗಿಯೇ ಉಳಿದಿರುವಂತೆ ತೋರುವುದಿಲ್ಲ. ಇದು ದಕ್ಷಿಣದ್ರಾವಿಡಭಾಷೆಗಳಲ್ಲಿ ಮಾತ್ರ ಹೆಚ್ಚು

---

೭ ತೊಲ್ಕಾಪ್ಪಿಯಂ – ಎಳುತ್ತು – ೫೪ ರಿಂದ ೫೬

೮ ಕ್ರಿ. ಶ. ೭೩೨ ರ ಕನ್ನಡ ಶಾಸನಗಳಲ್ಲಿ 'ಆಯ್‌ದು' 'ಅಯ್ವತ್ತು' ಎಂಬ ರೂಪಗಳಿರುವುದನ್ನು ಗಮನಿಸಬೇಕು (ನೋಡಿ : Historical Grammar of old Kannada — G. S. Gai page 6)

೯ Kamil Zwelebil — Comparative Dravidian Phonology p. 71-72

ಬಳಕೆಯಲ್ಲಿ ಇದೆ. ಉತ್ತರ ಮತ್ತು ಮಧ್ಯದ್ರಾವಿಡಭಾಷೆಗಳಲ್ಲಿ 'ಅಯ್' ರೂಪಕ್ಕಿಂತ 'ಎಯ್' ಹೆಚ್ಚು ಬಳಕೆಯಲ್ಲಿದ್ದಂತೆ ಕಂಡುಬರುತ್ತದೆ. ಕನ್ನಡದಲ್ಲೂ ಕೆಲವೆಡೆ 'ಎಯ್' ಬಳಕೆ ಆಗಿರುವುದರಿಂದ ಮೂಲದ್ರಾವಿಡದಲ್ಲಿಯೇ 'ಅಯ್' ಹಾಗೂ 'ಎಯ್' ಎರಡೂ ರೂಪಗಳು ಬಳಕೆಯಲ್ಲಿ ಇದ್ದಿರಬೇಕೆಂದು ಊಹಿಸಲು ಅವಕಾಶವಿದೆ.

ಕನ್ನಡಭಾಷೆಯಲ್ಲಿ ಎಯ್ > ಎ ಆಗಿ ಪದಾಂತ್ಯದಲ್ಲಿ ಬೆಳವಣಿಗೆಯಾಗಿದೆ. ಉದಾ ವಿಳೈ > ಬೆಳೆ, ತಿಪ್ಪೈ > ತಿಪ್ಪೆ, ಪಿಳ್ಳೈ > ಪಿಳ್ಳೆ, ವಿಲೈ > ಬೆಲೆ, ತಲೈ > ತಲೆ ಇತ್ಯಾದಿ.[೧೦]

ಕೊನೆಯದಾಗಿ ಆಧುನಿಕ ಕನ್ನಡದಲ್ಲಿ ಲಿಪಿ ಸೌಕರ್ಯಕ್ಕಾಗಿ ಮಾತ್ರ ಸಂಧ್ಯಕ್ಷರಗಳನ್ನು ಅವುಗಳು ಈಗಿರುವ ಐ ಹಾಗೂ ಔ ಎಂಬ ಚಾಕ್ಷುಸರೂಪಗಳಲ್ಲಿಯೆ ಇಟ್ಟುಕೊಳ್ಳಬಹುದೇ? ಎಂಬ ಪ್ರಶ್ನೆ. ಕನ್ನಡ ವರ್ಣಮಾಲೆಯಲ್ಲಿ ಈಗಾಗಲೆ 'ಅ', 'ಯ್', 'ವ್' ಇರುವುದರಿಂದ ಐ, ಔ ಗಳನ್ನು ಬಿಟ್ಟರೆ ವರ್ಣಮಾಲೆಯ ಸಂಖ್ಯೆ ಭೌತಿಕವಾಗಿ ಎರಡು ಕಡಿಮೆಯಾಗುವುದರಿಂದಲೂ ಇವುಗಳನ್ನು ವರ್ಣಮಾಲೆಯಿಂದ ತೆಗೆದು ಹಾಕುವುದರಿಂದ ಯಾವ ಕೊರತೆಯೂ ಆಗುವುದಿಲ್ಲ.

■ ■

---

೧೦ ಕ್ರಿ. ಶ. ೧೮ ನೆಯ ಶತಮಾನದ ಕನ್ನಡ ಶಾಸನಗಳಲ್ಲಿಯೇ ಅಯ್ > ಎ; ಅವ್ > ಒ ಬದಲಾವಣೆಯ ಉದಾಹರಣೆ ದೊರೆಯುತ್ತವೆ. ಉದಾ : ತೈಲಂ > ತೇಲಂ, ಮೌನಂ > ಮೋನಂ, ಇತ್ಯಾದಿ. (ನೋಡಿ : EC. II. S. B. 24, 35 ಹಾಗೂ IA vol. VIII p. 285)

ಪಂಚಮಿ

ಸಿದ್ಧಲಿಂಗ ದೇಸಾಯಿ

ಪಂಚಮಿ ಸುತ್ತ: ಕಟ್ಟಿದ ಕಣಜ
ಒಟ್ಟಿದ ಬಣವಿ, ತುಂಬಿದ ಹಗೆ
ಖಾಲಿಯಾದಂತೆ; ಇರುವ
ಪ್ರೀತಿಯನೆಲ್ಲ ಬರಿದುಮಾಡಿ ಹೋದಿ.
ಅದೂ ಹೋಗಲಿ—
ಮುಂಗಾರಿ ಬೆಳೆ ತೆಗೆದು
ಬಿತ್ತಲಿಕೊಂದು ಗಳಗೆಯಲ್ಲಿ ಬೂದಿ ಕಲಿಸಿಟ್ಟ
ಕರುಣೆ–ಕಡಲೆಯನೂ
ಅಪಹರಿಸಿದ ಮೇಲೆ; ಬರಿ ನನ್ನಲ್ಲಿ
ದ್ವೇಷದ ಬಣವಿ ಒಟ್ಟಿ, ಅಸೂಯೆಯ ಕಣಜ ಕಟ್ಟಿ
ನೆನಪಾದರೆ ಎದೆ ಭಗಲ್ ಎನ್ನುವ ಹಗೆ ತುಂಬಿ
ಎದೆ ಗಳಗೆಯಲ್ಲಿ ವಿಷಬೀಜ ಬೂದಿ ಕಲಿಸಿ
ಇಡುವಂತೆ ಮಾಡಿದೆಯಲ್ಲ.
ಈಗ: ಆ ಪಂಚಮಿಯ ಜಡಿಮಳಿಗೆ
ತೋಯಿಸಿಕೊಂಡು,
ಎಂದೂ ಆರದ ನೆನಪಿನ ಒದ್ದೆಯರಿವೆಯಲ್ಲಿ
ಮುದ್ದೆಯಾಗಿ ಕುಂತಿದ್ದೇನೆ ಸೇಡುಹತ್ತಿ.

■ ■

ಕವಿ ಚಿಕ್ಕಮಲ್ಲಣನ ಅಳ್ನಾವರ ನಿಷಿಧಿಶಾಸನ

ಆರ್. ಎನ್. ಗುರವ

ಅಳ್ನಾವರವು ಧಾರವಾಡ ತಾಲೂಕಿನಲ್ಲಿ ಒಂದು ದೊಡ್ಡ ಗ್ರಾಮ. ಧಾರವಾಡ ದಿಂದ ಪಶ್ಚಿಮಕ್ಕೆ ಸುಮಾರು ೩೦ ಕಿಲೋಮೀಟರ ಅಂತರದಲ್ಲಿ ದಕ್ಷಿಣಮಧ್ಯ ರೈಲು ಮಾರ್ಗದ ಮೇಲೆ ಒಂದು ನಿಲ್ದಾಣವಾಗಿದೆ. ಇಮಾರತಿ ಕಟ್ಟಿಗೆ ಮತ್ತು ಸೌದೆಗಳ ಪ್ರಖ್ಯಾತ ಸಂಗ್ರಹ ಸ್ಥಳ ಹಾಗೂ ಮಾರುಕಟ್ಟೆ ಆಗಿದೆ. ಸಂತೆ, ಪೇಟೆ, ಚಿತ್ರಮಂದಿರ, ಪ್ರವಾಸಿಮಂದಿರ ಮುಂತಾದವುಗಳಿಂದ ಸೌಕರ್ಯಪೂರ್ಣ ಗ್ರಾಮವಾಗಿದೆ. ಮಲೆನಾಡಿನ ಅಂಚಿನಲ್ಲಿರುವ ಈ ಗ್ರಾಮದ ಪರಿಸರವು ಸೃಷ್ಟಿಸೌಂದರ್ಯದಿಂದ ತುಂಬಿದೆ. ಗ್ರಾಮದ ಬಳಿ ಹನ್ನೆರಡು ತಿಂಗಳೂ ಹರಿಯುವ ಒಂದು ಹಳ್ಳವಿದೆ. ಇಂತಹ ಈ ಗ್ರಾಮವು ಹನ್ನೊಂದು–ಹದಿಮೂರು ಶತಮಾನಗಳಲ್ಲಿ ಗೋವೆಯ ಕದಂಬರ ರಾಜಧಾನಿ ಪಟ್ಟಣ ಗಳಲ್ಲಿ ಒಂದಾಗಿತ್ತು. ಈ ಗ್ರಾಮದ ಪ್ರಾಚೀನ ಹೆಸರು ಅಣಿಲಾಪುರ. ಇದೇ ಗ್ರಾಮದ ಶಾಸನವೊಂದರಲ್ಲಿ[೧] 'ರಾಜಧಾನಿ ಯಣಿಲಾಪುರ'ವೆಂದು ಅದರ ಉಲ್ಲೇಖ ಬರುತ್ತದೆ. ಆ ಕಾಲದಲ್ಲಿ ಅಳ್ನಾವರದಲ್ಲಿ ಜೈನಧರ್ಮವು ಸಾಕಷ್ಟು ಪ್ರಬಲವಾಗಿತ್ತು.

ಪ್ರಸ್ತುತ ಶಾಸನವು ಈ ಗ್ರಾಮದಲ್ಲಿ, ರೈಲು ಮಾರ್ಗದ ದಕ್ಷಿಣಕ್ಕೆ ಅರಣ್ಯ ಇಲಾಖೆಯ ತಪಾಸಣೆ ಕಟ್ಟೆಯ ಎದುರಿನಲ್ಲಿದ್ದ ಕಟ್ಟಿಗೆ ಕೊರೆಯುವ ಒಂದು ಕಾರ್ಖಾನೆಯ ಆವರಣದಲ್ಲಿ ಇರುತ್ತದೆ. ಕಾರ್ಖಾನೆಯ ಹೆಸರು 'ಮಹಾವೀರ ಸಾ ಮಿಲ್'. ಸೌಥ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ ಸಂಪುಟ XV ರಲ್ಲಿ[೨] ಈ ಶಾಸನವು ಲಿಂಗಾಯತ ಮಠದ ಭೂಮಿಯಲ್ಲಿರುತ್ತದೆ ಎಂದು ಹೇಳಲಾಗಿದೆ. ಮಹಾವೀರ ಸಾ ಮಿಲ್ಲವು ಇದೇ ಭೂಮಿಯಲ್ಲಿ ಇದ್ದಂತೆ ತಿಳಿದುಬರುತ್ತದೆ. ಶಾಸನವು ಸಾಧಾರಣ ಸ್ಥಿತಿಯಲ್ಲಿ ಇದೆ. ಬರಹಗಾರನ ಹಸ್ತಾಕ್ಷರವು ಅಷ್ಟು ಅಂದವಾಗಿಲ್ಲ. ಕೆಲವು ಅಕ್ಷರ ಗಳು ಅಸ್ಪಷ್ಟವಾಗಿವೆ ಹಾಗೂ ಬರೆವಣಿಗೆಯಲ್ಲಿ ಕೆಲವು ಸ್ಖಾಲಿತ್ಯಗಳು ಕಂಡುಬರುತ್ತವೆ.

ಶಾಸನದ ಮೇಲ್ಭಾಗದಲ್ಲಿ ಸುಮಾರು ಒಂದು ಅಡಿ ಎತ್ತರದ **ಚಿಕ್ಕಮಲ್ಲಣನ ಮೂರ್ತಿಯನ್ನು** ಕೊರೆಯಲಾಗಿದೆ. ಮೂರ್ತಿಯ ಎರಡು ಪಕ್ಕಗಳಲ್ಲಿ ಚೌರಿಯನ್ನು ಹಿಡಿದ ದಂಪತಿಗಳ ಚಿತ್ರಗಳಿವೆ.[೩]

---

೧ South Indian Inscriptions, Vol. XV, No. 225; p. 276; A.D. 1081

೨ Ibid No. 693; p. 432

೩ ಛಾಯಾಚಿತ್ರವನ್ನು ನೋಡಿರಿ.

ಶಾಸನದಲ್ಲಿಯ ವಿಷಯ : ಶ್ರಾವಕನೊಬ್ಬನು ಸಲ್ಲೇಖನವಿಧಿಯಿಂದ ಮರಣಹೊಂದಿದ ಸ್ಮಾರಕಶಿಲಾಶಾಸನವಿದು. ಇದರಲ್ಲಿ ಯಾವ ಅರಸರ ಆಳಿಕೆಯ ಪ್ರಸ್ತಾಪವಿಲ್ಲ. ಹುಬ್ಬಳ್ಳಿಯ ಸಿದ್ಧಣಾಂಕನ ಮಗನಾದ ಚಿಕ್ಕಮಲ್ಲಿಸೆಟ್ಟಿಯೆಂಬವನು ಉಕ್ತವಾದ ತಿಥಿಯಲ್ಲಿ ಇಪ್ಪತ್ತೊಂದು ದಿವಸಗಳ ಸಲ್ಲೇಖನದಿಂದ ಸ್ವರ್ಗಸ್ಥನಾದನೆಂದು ಹಾಗೂ ಆತನ ಮೃತದೇಹವನ್ನು ಹೊಳೆಯ ದಂಡೆಯಲ್ಲಿ ದಹನ ಮಾಡಿದರೆಂದು ಶಾಸನದಲ್ಲಿ ಹೇಳಲಾಗಿದೆ. ಆಮೇಲೆ ಆತನ ವರ್ಣನಾತ್ಮಕವಾದ ಮೂರು ಪದ್ಯಗಳನ್ನು ಕೊಡಲಾಗಿದೆ.

ಶಾಸನದ ತಿಥಿ : ಸಾಲು ೩–೫ ರಲ್ಲಿ 'ಸಕವರ್ಷ ಸಾವಿರದ ನಾನೂಱಿಪ್ಪತ್ತೆಂಟನೆಯ ಕ್ರೋದನ ಸಂವಛರದ ಆಶ್ವಿಜ ಬಹುಳ [ಬಾಉದಿನ] ಚತುರ್ದಶಿ' ಎಂದು ಬಂದಿದೆ. ಪಿಳ್ಳೆಯವರ ಜಂತ್ರಿಯ ಪ್ರಕಾರ ಕ್ರೋಧನ ಸಂವತ್ಸರವು ಶಕ ವರ್ಷ ೧೪೨೭ ಕ್ಕೆ ಬರುತ್ತಿದ್ದು, ಶಾಸನದಲ್ಲಿ ಅದನ್ನು ೧೪೨೮ ಎಂದು ಹೇಳಲಾಗಿದೆ. ಹೀಗೆ ಸಂವತ್ಸರದ ಉಲ್ಲೇಖವು ಒಂದು ವರ್ಷದಿಂದ ತಡವಾಗಿದೆ. ಶ. ವ. ೧೪೨೭ ಕ್ಕೆ ಸರಿ ಹೋಲುವ ಈ ಕ್ರೋಧನ ಸಂವತ್ಸರದಲ್ಲಿ ಆಶ್ವೀನ ಬಹುಳ ಚತುರ್ದಶಿ **ರವಿವಾರ ದಿನಾಂಕ ೨೬, ಅಕ್ಟೋಬರ ೧೫೦೫ ಕ್ಕೆ** ಸಮಾನವಾಗುತ್ತದೆ. ವಾರದ ಉಲ್ಲೇಖವಿಲ್ಲದುದರಿಂದ ಇದೇ ಶಾಸನದ ಸರಿಯಾದ ಮಿತಿ ಎಂದು ನಾವು ಭಾವಿಸಬಹುದು.

ದಕ್ಷಿಣಭಾರತ ಶಾಸನ ಸಂಪುಟ XV ರಲ್ಲಿ ಶಕವರ್ಷವನ್ನು 'ಸಾವಿರದ ನಾನೂಱೆಪ್ಪತ್ತೆಂಟನೆಯ ಕ್ರೋಧನ ಸಂವತ್ಸರ'ವೆಂದು ಓದಿ ಶಾಸನದ ಮಿತಿಯನ್ನು ಕ್ರಿ. ವ. ೧೫೬೫ ರಲ್ಲಿಯ ಅಕ್ಟೋಬರ ೧೫ ಕ್ಕೆ ಹೋಲಿಸಲಾಗಿದೆ. ಶಾಸನದಲ್ಲಿ ಱಿ ಅಕ್ಷರವನ್ನು ಬರೆದ ಸ್ಥಳ ಸವೆದಿದ್ದ ಮೂಲಕ ಆ ಅಕ್ಷರವನ್ನು ಱೆ ಎಂದೂ ಓದಬಹುದು. ಆದರೆ, ಚಿಕ್ಕಮಲ್ಲಣನ ಕೃತಿಯಾದ ಸಮ್ಯಕ್ತ್ವಕೌಮುದಿಯ ಮಿತಿಯನ್ನು (ಕ್ರಿ. ವ. ೧೪೯೨) ಗಮನಿಸಿದರೆ, ಕ್ರಿ. ವ. ೧೫೬೫ ಕ್ಕಿಂತ ಕ್ರಿ. ವ. ೧೫೦೫ ಹೆಚ್ಚು ಸಮಂಜಸವಾದುದು ಎಂದು ಮನವರಿಕೆಯಾಗುವುದು.

ಆಶ್ವೀನ ಬಹುಳ ಚತುರ್ದಶಿ ಸೂರ್ಯೋದಯದ ಪೂರ್ವದಲ್ಲಿ ಒಂದು ಪ್ರಹರ, ಮಹಾವೀರ ತೀರ್ಥಂಕರರು ಮೋಕ್ಷಕ್ಕೆ ಹೋದ ದಿನ ಮತ್ತು ವೇಳೆ. ಅದೇ ದಿನ ಮತ್ತು ಕಾಲಕ್ಕೆ ತನ್ನ ಸಲ್ಲೇಖನಮರಣವನ್ನು ಸಾಧಿಸಿದ ಚಿಕ್ಕಮಲ್ಲಣನ ಧರ್ಮನಿಷ್ಠೆ ಹಾಗೂ ಧಾರ್ಮಿಕಜೀವನದ ಪರಿಪಕ್ವತೆ ಅಸಾಮಾನ್ಯವಾಗಿರುತ್ತವೆ.

ಶಾಸನದಲ್ಲಿಯ ಕೆಲವು ಪಾಠಗಳನ್ನು ಪ್ರೊ. ಬಿ. ಬಿ. ಮಹೀಶವಾಡಿ ಅವರ ಜೊತೆ ಚರ್ಚಿಸುವಾಗ ಚಿಕ್ಕಮಲ್ಲಣನೆಂಬ ಕವಿಯೊಬ್ಬನ ಅಪ್ರಕಟಿತ ಕೃತಿಯೊಂದು ತಮ್ಮ ಹತ್ತಿರ ಇದ್ದುದು ಅವರಿಗೆ ಜ್ಞಾಪಕಕ್ಕೆ ಬಂದಿತು. ಆ ಕೃತಿಯನ್ನು ತೆಗೆದು

ಜಿಜ್ಞಾಸಾಪೂರ್ವಕವಾಗಿ ನೋಡಲಾಗಿ, ಕಾವ್ಯಕರ್ತೃವಾದ ಚಿಕ್ಕಮಲ್ಲಣನೇ ಈ ನಿಷಿಧಿಗಲ್ಲಿನಲ್ಲಿ ಹೇಳಿದ ಚಿಕ್ಕಮಲ್ಲಣನೆಂದು ನಮಗೆ ಖಂಡಿತವಾಗಿ ತಿಳಿದುಬಂದಿತು. ಈ ಕಾವ್ಯದ ಹೆಸರು ಸಮ್ಯುಕ್ತ್ವಕೌಮುದಿ. ಪ್ರೊ. ಮಹೀಶವಾಡಿ ಅವರು ತಿಳಿಸಿದ ಪ್ರಕಾರ ಅದು ಸಾಂಗತ್ಯದಲ್ಲಿದ್ದು ೨೪ ಸಂಧಿ, ೨೨೧೫ ಪದ್ಯಗಳುಳ್ಳ ಒಂದು ಧಾರ್ಮಿಕ ಕಥಾಸಂಗ್ರಹ.

ಈ ನಿರ್ಣಯಕ್ಕೆ ಕಾರಣವಾದ ಅಂಶಗಳು ಹೀಗಿವೆ :

೧. ಶಾಸನದಲ್ಲಿ, ಸ್ವರ್ಗಸ್ಥನಾದವನ ಹೆಸರು ಹುಬ್ಬಳ್ಳಿಯ ಚಿಕ್ಕಮಲ್ಲಿಸೆಟ್ಟಿಯೆಂದು (ಸಾ. ೭–೮), ಚಿಕ್ಕಮಲ್ಲಣನೆಂದು (ಸಾ. ೧೫), ಹುಬ್ಬಳ್ಳಿ ಸಿದ್ಧೇಂದ್ರತನುಸಂಜಾತ ಸುರಸಕೋವಿದ ಚಿಕ್ಕಮಲ್ಲಣನೆಂದು (ಸಾ. ೨೧–೨೨), ಮತ್ತು ಸಿದ್ಧಣಾಂಕನ ತನೂಭವ....... ಚಿಕ್ಕಮಲ್ಲನೆಂದು (ಸಾ. ೨೫–೨೭) ನಾಲ್ಕುಸಲ ಬರುತ್ತದೆ.

ಸಮ್ಯುಕ್ತ್ವಕೌಮುದಿಯ ೨೪ ನೆಯ ಸಂಧಿಯ ೮೯ ನೆಯ ಪದ್ಯದಲ್ಲಿ 'ವಿನುತ ಬಡವರಾಧಾರ ಸಿದ್ಧೇಂದ್ರನ । ತನಯ ಮಲ್ಲಿಕಾರ್ಜುನನಾ । ಅನುಜ ಚಿಕ್ಕಮಲ್ಲಣ ಕೌಮುದಿಯನು । ಜನಹಿತವಾಗಿ ಹೇಳಿದನು ॥' ಎಂದು, ಮತ್ತು ಅದೇ ಸಂಧಿಯ ೯೭ನೆಯ ಪದ್ಯದಲ್ಲಿ 'ಅಕ್ಕರಿಂ ಜನರು ಕೇಳಿದ ಹುಬ್ಬಳ್ಳಿಯ। ಚಿಕ್ಕಮಲ್ಲಣ ವಿರಚಿಸಿದಾ। ತಕ್ಕ ಕೌಮುದಿಯು ಮುಗಿದಿದೆಂದು ಸಕಲ ಜ । ನಕ್ಕೆ ಪೇಳಿದ ನಲುವಿಂದ ॥' ಎಂದು, ಮತ್ತು ಪ್ರತಿಯೊಂದು ಸಂಧಿಯ ಕೊನೆಯ ಭಾಗದಲ್ಲಿಯೂ ಕಾವ್ಯವನ್ನು ರಚಿಸಿದವನ ಹೆಸರು ಹುಬ್ಬಳ್ಳಿಯ ಚಿಕ್ಕಮಲ್ಲಣನೆಂದು ಉಲ್ಲೇಖಗಳುಬರುತ್ತವೆ.

ಹೀಗೆ ಕವಿಯ ಹೆಸರು, ಆತನ ತಂದೆಯ ಹೆಸರು ಮತ್ತು ಆತನ ಊರ ಹೆಸರು ಶಾಸನದಲ್ಲಿ ಹಾಗೂ ಕಾವ್ಯದಲ್ಲಿ ಒಂದೇ ರೀತಿಯಾಗಿ ಬರುತ್ತವೆ.

೨. ಶಾಸನದ ಮೂರನೆಯ ಪದ್ಯದಲ್ಲಿ ಚಿಕ್ಕಮಲ್ಲಣನನ್ನು ಬಡವರ ಬೇಲಿಯೆಂದು ವರ್ಣಿಸಲಾಗಿದೆ. ಮೇಲೆ ಉದ್ಧೃತಮಾಡಿದ ಕಾವ್ಯದಲ್ಲಿಯ ಮೊದಲನೆಯ ಪದ್ಯದಲ್ಲಿ ಬಡವರಾಧಾರವೆಂದು ಆತನನ್ನು ವರ್ಣಿಸಲಾಗಿದೆ.

೩. ಶಾಸನದಲ್ಲಿ ಉಲ್ಲೇಖಿತವಾದ ಮತ್ತಿಯ ಪಾರಿಶ್ವೇಶ್ವರನು ಕಾವ್ಯದಲ್ಲಿಯೂ ಕವಿಯ ಇಷ್ಟದೇವತೆಯಾಗಿ ಕಾಣುತ್ತಾನೆ. ಕಾವ್ಯದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಪದ್ಯಗಳು ಹೀಗೆ ಇವೆ :

ಉತ್ತಮವಪ್ಪ ಕೌಮುದಿ ಚರಿತೆಯೊಳುಳ್ಳ । ವೃತ್ತಾಂತವ ತಿಳಿದರಿಗೆ ।
ತಥ್ಯಮುಕ್ತಿಲಕ್ಷ್ಮಿಯೀವ ಹುಬ್ಬಳ್ಳಿಯ । ಮತ್ತಿಯ ಪಾರಿಶ್ವ ಜಿನನು ॥

(ಸಮ್ಯಕ್ತ್ವ ಕೌಮುದಿ ೨೪–೯೫)

ಪೊಡೆಗಾಲತೊಡೆಯುನ ಪಿಡೆದಿಃಡುಕುರೆ ಬೆ । ಳ್ಗೊಡೆನುಡೆಗಡಲ್ಗಡೆ ಗಂಡಾ ।
ಎಡೆವಿಡದೆನೆತಸಿದೆಡರ ಪರಿಹರಿಪನೆ । ನ್ನೊಡೆಯ ಮತ್ತಿಯ ಜಿನಚಂದ್ರಾ ॥
(ಸಮ್ಯಕ್ತ್ವ ಕೌಮುದಿ ೨೪–೯೮)

ಹೀಗೆ ಕವಿಯು ಆರಾಧ್ಯದೇವತೆಯಲ್ಲಿ ಎರಡೂ ಕಡೆ ಸಾಮ್ಯವಿದೆ.

೪. ಸಮ್ಯಕ್ತ್ವಕೌಮುದಿಯ ಕಾಲವು ಹೀಗೆ ಬದಿಂದೆ :

ಎರಡೇಳ್ನೂರೆರಡೇಳರ ಸಖದೊಳು । ಪರಿಧಾವಿಯೆನಿಪ ಸಂವತ್ಸರದಿ ।
ಉರುತರ ಚೈತ್ರ ಸು ಪಂಚಮಿಯೊಳ್ ಕಥೆ । ವಿರಚಿತವಾಯ್ತುದು ಕೇಳ್ ॥
(ಸಮ್ಯಕ್ತ್ವ ಕೌಮುದಿ ೨೪–೯೬)

ಶಕವರ್ಷ ೧೪೧೪ ನೆಯ ಪರಿಧಾವಿ ಸಂವತ್ಸರದ ಚೈತ್ರ ಶುದ್ಧ ಪಂಚಮಿಯೆಂದು ಉಲ್ಲೇಖಿತವಾದ ಈ ತಿಥಿಯು ಕ್ರಿ. ವ. ೧೪೯೨ ಮಾರ್ಚ ೩, ಶನಿವಾರಕ್ಕೆ ಸಮಾನವಾಗುತ್ತದೆ. ಶಾಸನದ ಪ್ರಕಾರ ಚಿಕ್ಕಮಲ್ಲಣನ ಮರಣದ ಕಾಲ ಕ್ರಿ. ವ. ೧೫೦೫ ಇರುತ್ತದೆ. ಕಾಲದ ಈ ಉಲ್ಲೇಖಗಳು ಒಂದಕ್ಕೊಂದು ಪೋಷಕವಾಗಿವೆ.

ಶಾಸನದಲ್ಲಿಯ ವೃತ್ತಗಳು : ಮೊದಲನೆಯ ಪದ್ಯ ಶಾರ್ದೂಲವಿಕ್ರೀಡಿತ, ಎರಡನೆಯ ಪದ್ಯ ಲಲಿತರಗಳೆ, ಮೂರನೆಯದು ಚಂಪಕಮಾಲೆ. ಶಾಸನದಲ್ಲಿ ಲಲಿತರಗಳೆ ಅತಿ ವಿರಳವಾಗಿ ಕಂಡುಬರುವುದರಿಂದ ಇಲ್ಲಿಯ ಅದರ ಪ್ರಯೋಗ ಗಮನಾರ್ಹವಾಗಿದೆ.[೪]

ಭೌಗೋಲಿಕ ಉಲ್ಲೇಖಗಳು : (೧) ಹುಬ್ಬಳ್ಳಿ (ಸಾ. ೭, ೪) ತಾಲೂಕ ಸ್ಥಳವಾದ ಹುಬ್ಬಳ್ಳಿ, ದೇವರ ಹುಬ್ಬಳ್ಳಿ, ಗಿಡದ ಹುಬ್ಬಳ್ಳಿ, ಮುಗುಟಖಾನ ಹುಬ್ಬಳ್ಳಿ ಎಂಬ ಕೆಲವು ಹುಬ್ಬಳ್ಳಿಗಳು ಇವೆ. ಆದರೆ ಶಾಸನದಲ್ಲಿ ಬರುವ ಹುಬ್ಬಳ್ಳಿ ಶಬ್ದದ ಹಿಂದೆ ದೇವರ, ಗಿಡದ ಮುಂತಾದ ವಿಶೇಷಣಗಳು ಇರುವುದಿಲ್ಲ. ತಾಲೂಕ ಸ್ಥಳವಾದ ದೊಡ್ಡ ಹುಬ್ಬಳ್ಳಿಗೆ ಜನಸಾಮಾನ್ಯರು ಹುಬ್ಬಳ್ಳಿಯೆಂದು ಮಾತ್ರ ಕರೆಯುವುದು. ಕಾರಣ, ಶಾಸನದಲ್ಲಿ ಉಕ್ತವಾದ ಹುಬ್ಬಳ್ಳಿ, ತಾಲೂಕ ಸ್ಥಳವಾದ ಪ್ರಖ್ಯಾತ ಹುಬ್ಬಳ್ಳಿಯೇ ಎಂದು ಭಾವಿಸುವುದು ಸಯುಕ್ತಿಕ.

(೨) ಹೊಳೆ (ಸಾ. ೯) : ಅಳ್ನಾವರ ಗ್ರಾಮದ ಪಕ್ಕದಲ್ಲಿ ದಕ್ಷಿಣಾಭಿಮುಖಿಯಾಗಿ ಸದಾಕಾಲ ಹರಿಯುವ ಹಳ್ಳವೇ ಈ ಹೊಳೆ. ಗ್ರಾಮದಲ್ಲಿ ವಿಚಾರಿಸಲಾಗಿ ಊರಲ್ಲಿ ನಿಧನ ಹೊಂದಿದವರನ್ನು ಇದೇ ಹಳ್ಳದ ದಂಡೆಯಲ್ಲಿ ದಹನ ಮಾಡುತ್ತಾರೆ ಎಂದು ತಿಳಿದುಬರುತ್ತದೆ.

---

೪ ಈ ರಗಳೆಯನ್ನು ಗುರುತಿಸಿ, ಪಾಠವನ್ನು ಹೊಂದಿಸಿ ಕೊಟ್ಟ ಪ್ರೊ. ಜಿ. ಎಸ್. ಕಾಪಸೆ ಅವರಿಗೆ ನನ್ನ ಕೃತಜ್ಞತೆಗಳು.

ಭಾಷಿಕ ಹಾಗೂ ಪಾರಿಭಾಷಿಕ ಶಬ್ದಗಳು : (೧) ಸ್ಯಾದ್ವಾದ (ಸಾ. ೧): ಪದಾರ್ಥಗಳು ಅನೇಕ ಗುಣಗಳಿಗೆ ಆಶ್ರಯವಾದುದರಿಂದ ಅವುಗಳನ್ನು ಹಲವು ಬಗೆಗಳಿಂದ ನಿರೂಪಿಸಬಹುದು. ಒಂದು ವಸ್ತುವನ್ನು ನಿರೂಪಿಸುವ ಎಲ್ಲ ಬಗೆಗಳನ್ನು ಗಮನಿಸಿದರೆ ಆ ಬಗೆಗಳು ಏಳು ಆಗುವವು. ಇದು ಜೈನ ತತ್ವದ ಸಪ್ತಭಂಗಿನ್ಯಾಯ ಇಲ್ಲವೆ ಸ್ಯಾದ್ವಾದ. (೧) ಸ್ಯಾದಸ್ತಿ, (೨) ಸ್ಯಾನ್ನಾಸ್ತಿ, (೩) ಸ್ಯಾದಸ್ತಿನಾಸ್ತಿ, (೪) ಸ್ಯಾದವಕ್ತವ್ಯಂ, (೫) ಸ್ಯಾದಸ್ತ್ಯವಕ್ತವ್ಯಂ, (೬) ಸ್ಯಾನ್ನಾಸ್ತ್ಯವಕ್ತವ್ಯಂ, (೭) ಸ್ಯಾದಸ್ತಿನಾಸ್ತ್ಯವಕ್ತವ್ಯಂ ಎಂಬಿವು ಸಪ್ತಭಂಗಿಗಳು. ಇವುಗಳಿಂದ ವಸ್ತು ಸ್ವರೂಪವನ್ನು ವಿಚಾರ ಮಾಡುವುದೇ ಸ್ಯಾದ್ವಾದವೆನಿಸುವುದು.

(೨) ಬಾಳುದಿನ (ಸಾ. ೪) : ಈ ಶಬ್ದದ ವಾಚನವಾಗಲಿ, ಅರ್ಥವಾಗಲಿ ಸರಿಯಾಗಿ ತಿಳಿದುಬರುವುದಿಲ್ಲ.

(೩) ಸಲ್ಲೇಖನವಿಧಿ (ಸಾ. ೫–೬) : ಶ್ರಾವಕನು ತನಗೆ ಮರಣವು ಸಮೀಪಿಸಿ ದುದನ್ನು ಮುಂಚಿತವಾಗಿ ತಿಳಿದುಕೊಂಡು, ಎಲ್ಲರಲ್ಲಿ ಕ್ಷಮೆಯನ್ನು ಬೇಡಿ ಗುರುಗಳ ಸನ್ನಿಧಿಯಲ್ಲಿ, ತನ್ನ ಜೀವಿತಾವಧಿಯಲ್ಲಿ ಘಟಿಸಿದ ಸಮಸ್ತ ವಿಷಯಗಳನ್ನು ಆಲೋಚಿಸಿ, ಕ್ರಮದಿಂದ ಆಹಾರವನ್ನು ತ್ಯಜಿಸಿ, ಪಂಚಪದಗಳನ್ನು ಭಾವಿಸುತ್ತ, ನಿಜ ಶುದ್ಧಾತ್ಮವನ್ನು ಚಿಂತಿಸುತ್ತ, ಲೋಕಾಗ್ರದಲ್ಲಿ ಮತಿಯನ್ನಿರಿಸಿ ಶರೀರಭಾರವನ್ನಿಳುಹುದು ಸಲ್ಲೇಖನ. ಇದನ್ನು ಪೂರ್ತಿಮಾಡಲು ವಿಶಿಷ್ಟವಾದ ವಿಧಾನವನ್ನು ಹಾಕಿಕೊಟ್ಟಿರುತ್ತಾರೆ.

(೪) ಪಂಚಪದ (ಸಾ. ೧೭) : ಅರ್ಹಂತರು, ಸಿದ್ಧರು, ಉಪಾಧ್ಯಾಯರು, ಆಚಾರ್ಯರು ಮತ್ತು ಸಾಧುಗಳು ಇವರಿಗೆ ಪಂಚಪರಮೇಷ್ಠಿಗಳೆಂಬ ಹೆಸರು. ಇವರನ್ನು ನಮಸ್ಕರಿಸುವಾಗ ಹೇಳುವ (೧) ಣಮೋ ಅರಹಂತಾಣಂ (ಅರ್ಹಂತರಿಗೆ ನಮಸ್ಕಾರ), (೨) ಣಮೋ ಸಿದ್ಧಾಣಂ (ಸಿದ್ಧರಿಗೆ ನಮಸ್ಕಾರ), (೩) ಣಮೋ ಆಯರಿಯಾಣಂ (ಆಚಾರ್ಯರಿಗೆ ನಮಸ್ಕಾರ), (೪) ಣಮೋ ಉವಜ್ಝಾಯಣಂ (ಉಪಾಧ್ಯಾಯರಿಗೆ ನಮಸ್ಕಾರ), (೫) ಣಮೋ ಲೋಏ ಸವ್ವ ಸಾಹೂಣಂ (ಲೋಕ ದೊಳಗಿನ ಎಲ್ಲ ಸಾಧುಗಳಿಗೆ ನಮಸ್ಕಾರ), ಈ ಐದು ಮಂತ್ರಗಳು ಪಂಚಪದವಾಗು ತ್ತವೆ. ಇವುಗಳಲ್ಲಿ ಉಕ್ತವಾದ ಪಂಚಪರಮೇಷ್ಠಿಗಳ ನಾಮದ ಮಹಿಮೆಯನ್ನು ಬೋಧಿಸುವುದಕ್ಕಾಗಿ ಆಚಣ್ಣನು 'ಶ್ರೀಪದಾಶೀತಿ' ಎಂಬ ಗ್ರಂಥವನ್ನು ರಚಿಸಿದ್ದಾನೆ.

(೫) ಉಗ್ರಮಯೂಖ (ಸಾ. ೧೩–೧೪) : ಸೂರ್ಯ.

(೬) ಭಾವಜರೂಪಗುತ್ತಮಂ (ಸಾ. ೨೩–೨೪) : ಕಾಮನಂತೆ ಮನೋಹರ ರೂಪ ಉಳ್ಳವನು.



ಕವಿ ಚಿಕ್ಕಮಲ್ಲಣನ ಅಳ್ವಾವರ ನಿಷಿಧಿಶಾಸನದ ಮೇಲ್ಭಾಗ

(೭) ಜಾವ (ಸಾ. ೭); ದ್ಭ : ಯಾಮ (ಸಂ) = ಏಳುವರೆ ಗಳಿಗೆಯ ಕಾಲ; ಗಳಿಗೆ = ೨೪ ನಿಮಿಷಗಳ ಕಾಲ; ಏಳುವರೆ ಗಳಿಗೆ = ಮೂರು ಘಂಟೆ ಇಲ್ಲವೆ ಒಂದು ಪ್ರಹರ.[೫]

ಶಾಸನಪಾಠ[೬]

೧. ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ [।*] ಜೀ-
೨. ಯಾತ್ರೈಲೋಕ್ಯನಾತ(ಥ)ಸ್ಯ [ಶಾ*]ಸನಂ[೭] ಜಿನಶಾಸನಂ [।।*]
೩. ।।೧।। ಸ[ಕ ವ]ರ್ಷ ಸಾವಿರದ ನಾನೂಱಿಪ್ಪತ್ತೆಂಟನೆಯ[೮] ಕ್ರೋ-
೪. ದನ ಸಂವಛರದ[೯] ಆಶ್ವಿಜ ಬಹುಳ [ಬಾಳುದಿನ] ಚತು-
೫. ರ್ದಶಿಯಲು ಯಿಪ್ಪತ್ತವೊಂದು ದಿನ ಸಲ್ಲೇಖನ[ವಿ]-
೬. ಧಿಯಿಂದ ಚತುರ್ದಶಿ ಸೂರ್ಯ್ಯ ಉದಯ
೭. ವೊಂದು ಜಾವದಲ್ಲಿ ಹುಬ್ಬಳ್ಳಿಯ ಚಿಕ್ಕಮ-
೮. ಲ್ಲಿ ಸೆಟ್ಟಿಯರು ಸ್ವರ್ಗಸ್ಥರಾದರು ॥ ಅ-
೯. ವರನು ಹೊಳೆಯ ದಂಡೆಯಲಿ ದಹನವ ಮಾಡಿದ[ರು] [।।*]
೧೦. ।।।। ೧ ।।।। ೧ ।।। ೧ ।।। ೧ ।।। ೧ ।।।। ೧ ।।
೧೧. ಶ್ರೀಮಂನಮ್ರಸುರಾಸುರೋರಗನರೇಶಾನರ್ಘ್ಯ[೧೦]
೧೨. ಮೌಲಿಪ್ರಭಾಸ್ತೋಮೋದ್ಭಾಸಿತಪಾದಪದ್ಮಯುಗಲಂ
೧೩. ಮುಕ್ತ್ಯಂಗನಾವಲ್ಲಭಂ ಕಾಮಾಂಧೋಗ್ರಮ-
೧೪. ಯೂಖನೆಂದೆನಿಸುತಿರ್ಪ್ಪಂ[೧೧] ಮತ್ತಿ[೧೨] ಪಾರಿಶ್ವೇಶ್ವರಂ[೧೩] ಶ್ರೀ-

---

೫ ಪ್ರೊ. ಬಿ. ಬಿ. ಮಹೇಶವಾಡಿ ಅವರ ಸಹಕಾರ ಮತ್ತು ಸಹೃದಯತೆಗಳಿಗೆ ನನ್ನ ಕೃತಜ್ಞತೆಗಳು.

೬ ೧೯೬೪-೬೫ ರಲ್ಲಿ ನಾನು ಧಾರವಾಡದಲ್ಲಿ ಡೆಪ್ಯೂಟಿ ಕಮೀಶನರರ ಪರ್ಸನಲ್ ಆಸಿಸ್ಟಂಟ ಮತ್ತು ಆಡಿಶನಲ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನಾಗಿದ್ದ ಸಮಯದಲ್ಲಿ ತೆಗೆದುಕೊಂಡ ಶಾಸನದ ಪಡಿಯಚ್ಚುಗಳಿಂದ.

೭ ದ ಭಾ. ಶಾ. ಸಂಪುಟ XV, ಕ್ರಮಾಂಕ ೬೯೩ ರಲ್ಲಿಯ ಪಾಠ 'ಸಾ[ಸ*]ನಂ'

೮ ಅದೇ ಕ್ರಮಾಂಕದಲ್ಲಿಯ ಪಾಠ 'ನಾನೂಱಿತಿಪ್ಪತ್ತೆಂಟನೆಯ'.

೯ ,, ,, ,, 'ಕ್ರೋಧನ ಸಂವತ್ಸರ'.

೧೦ ,, ,, ,, 'ನರೇಶಾನಮ್ಯ'.

೧೧ ,, ,, ,, 'ದೆನಿಸುತಿ[ರ್ಪ್ಪಂ]'.

೧೨ ,, ,, ,, 'ಮಕ್ತಿ[ಪಾ]ವಿಶ್ವೇಶ್ವರಂ'.

೧೩ ವೃತ್ತದ ಸಲುವಾಗಿ 'ಪಾರ್ಶ್ವೇಶ್ವರಂ' ಎಂದು ಓದಿರಿ.

ಯಂ[೧೪] ಕೈವಿುಗೆ ಚಿಕ್ಕಮಲ್ಲಣಗೆ ಮಾಳ್ಕಿಪ್ಪಾರ್ಥ[೧೫]ಸಂಸಿದ್ಧಿಯಂ
॥ ೧ ॥ ಮತ್ತಮತಿಶಯಜಿನಪದಾಂಭೋಜಷಟ್ಚರಣ ಬಿತ್ತರಿ-
ಪ ಪಂಚಪದಪೂರಿತಾಂತಃಷ್ಕ(ಕ)ರಣ ಗುರುಪದಾಂಬು-
ಜಪರಾಗಸ್ವರಂಜಿತಭಾಳ[೧೬] ಭರತಕಾವ್ಯಪ್ರಮುಖನಾ-
ನಾಕಳಾಜಾಳ ವಸುಂ[ಧಾ]ಂತರಾಳವಿಶ್ರುತವಿವಿಧ ಸುಜ-
ರಿತ್ರರ್ಲ(ಲ)ಸಿತಜಿನಗಂಧ[೧೭]ಪುಷ್ಕರಪವಿತ್ರಿತಗಾತ್ರ ಧ-
ರೆಗೆ ಹುಬ್ಬಳ್ಳಿ ಸಿದ್ಧೇಂದ್ರತನುಸಂಜಾತ ಸುರಸ-
ಕೋವಿದ ಚಿಕ್ಕಮಲ್ಲಣನತಿಖ್ಯಾತಾ ॥ ೨ ॥ ಬಡವ[೧೮]ಲ-
ರ ಬೇರಿ ಭಾಸುರಗುಣಾಗ್ರಣಿ ಭಾವಜರೂಪ[೧೯]-
ಗುತ್ತಮಂ ಪೊಡವಿಯೊಳತ್ಯಧಿಃಶಜಿನಧರ್ಮ್ಮಪರಾಯ-
ಣ ದಾನಶೀಲನೀ ಕಡುಗಲಿ ಸಿದ್ಧಣಾಂಕನ ತನೂ-
ಭವನೀತನೆನುತ್ತ[೨೦] ಮೂಜಗಂ ಸಡಗರದಿಂದ ಬಂ-
ಣಿಪುದು ಬಲ್ಲರ ಬಲ್ಲಹ ಚಿಕ್ಕಮಲ್ಲನಂ ॥ ೩ ॥
ಮಂಗಳ ಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ

---

೧೪ ದ. ಭಾ. ಶಾ. ಸಂಪುಟ XV, ಕ್ರಮಾಂಕ ೬೯೩ ರಲ್ಲಿಯ ಪಾಠ 'ಪ್ರೇಮಂ'.

೧೫ ಅದೇ ಕ್ರಮಾಂಕದಲ್ಲಿಯ ಪಾಠ 'ವಸಾಳಿಪ್ಪಾರ್ಥ'.

೧೬ ಅದೇ ಕ್ರಮಾಂಕದಲ್ಲಿ 'ಭಾಳ' ಶಬ್ದವನ್ನು ಓದಿಲ್ಲ.

೧೭ ದ. ಭಾ. ಶಾ. ಸಂಪುಟ XV, ಕ್ರಮಾಂಕ ೬೯೩ ರಲ್ಲಿಯ ಪಾಠ 'ಜನಗಂಧ'.

೧೮ ಅದೇ ಕ್ರಮಾಂಕದಲ್ಲಿಯ ಪಾಠ 'ಬ[ವವ]'.

೧೯ ಅದೇ ಕ್ರಮಾಂಕದಲ್ಲಿ ೨೩ ನೆಯ ಸಾಲನ್ನು ಪೂರ್ಣವಾಗಿ ಬಿಟ್ಟಿರುವುದು. ಆದರಿಂದ ಮುಂದಿನ ಸಾಲುಗಳ ಸಂಖ್ಯಾನುಕ್ರಮವು ತಪ್ಪಿಹೋಗಿರುತ್ತದೆ.

೨೦ ದ. ಭಾ. ಶಾ. ಸಂಪುಟ XV, ಕ್ರಮಾಂಕ ೬೯೩ ರಲ್ಲಿಯ ಪಾಠ 'ನೆನುತ'.

ಪ್ರಾಚೀನ ಭಾರತದಲ್ಲಿ ನ್ಯಾಯಾಡಳಿತ

ಕಂಠೀರಾವ್

'ಸ್ಮೃತಿಸ್ತು ವೇದೋ ವಿಜ್ಞೇಯೋ ಧರ್ಮಶಾಸ್ತ್ರಂತು ವೈಸ್ಮೃತಿಃ' ಎಂಬುದು ಹಿಂದೂ ಧರ್ಮಶಾಸ್ತ್ರದಲ್ಲಿ ಸ್ಮೃತಿಗಳಿಗಿರುವ ಮಹತ್ವವನ್ನು ಸೂಚಿಸುವುದು. ಅಪಸ್ತಂಬ, ಬೌಧಾಯನ, ಪಾರಸ್ಕರ, ಗೌತಮ ಮೊದಲಾದ ಋಷಿಪುಂಗವರು ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದ ವೈಯಕ್ತಿಕ, ಸಾಮಾಜಿಕ, ವ್ಯಾವಹಾರಿಕ, ಅಪರಾಧಿಕ ಮತ್ತು ಮತೀಯ ಪ್ರಕ್ರಿಯೆಗಳನ್ನೆಲ್ಲ ವಿಮರ್ಶಿಸಿ, ಕ್ರೋಢೀಕರಿಸಿ ಧರ್ಮಸೂತ್ರಗಳನ್ನು ರಚಿಸಿದ್ದಾರೆ. ಈ ಮಹಾಕಾರ್ಯವು ಕ್ರಿಸ್ತಪೂರ್ವ ಕೆಲವು ಶತಮಾನಗಳಷ್ಟು ಹಿಂದೆಯೇ ನಡೆಯಿತೆಂದು ಮಹಾಮಹೋಪಾಧ್ಯಾಯ ಆಚಾರ್ಯ ಶ್ರೀ ಪಾ. ವೆಂ. ಕಾಣೆಯವರು, ಶ್ರೀ ಡಿ. ಎಫ್. ಮುಲ್ಲಾ ಅವರೂ ನಿರ್ಧರಿಸಿದ್ದಾರೆ. ಈ ಸೂತ್ರರೂಪದಲ್ಲಿದ್ದ ನ್ಯಾಯದರ್ಶನವೇ ಮನು, ಪರಾಶರ ಯಾಜ್ಞವಲ್ಕ್ಯ ಮತ್ತು ನಾರದೀಯ ಸ್ಮೃತಿಗಳಲ್ಲಿಯೂ ನಿರೂಪಿತವಾಗಿದೆಯೆಂದು ಹೇಳಬಹುದು. ಶುಕ್ರನೀತಿಯೂ ಧರ್ಮಶಾಸ್ತ್ರಗ್ರಂಥವೆಂದು ಪ್ರಸಿದ್ಧಿ ಪಡೆದಿದೆ.

ಈ ಅಪಾರ 'ಧರ್ಮಶಾಸ್ತ್ರ' ಸಾಹಿತ್ಯವನ್ನು ಮೈಗೂಡಿಸಿಕೊಂಡು ಮಹಾ ಮೇರು ಕೃತಿಯಾಗಿ ಬೆಳೆದು ನಿಂತಿದೆ, ಕೌಟಿಲ್ಯನ ಅರ್ಥಶಾಸ್ತ್ರ. ರಾಜ್ಯಭಾರಕ್ಕೆ ಧರ್ಮವೇ ಮೂಲವೆಂದು ಗ್ರಹಿಸಿದ ಕೌಟಿಲ್ಯನು ಧರ್ಮಶಾಸ್ತ್ರಗಳಲ್ಲಿ ಉಕ್ತವಾದ ಎಲ್ಲ ಅಂಶ ಗಳನ್ನು ತನ್ನ ಗ್ರಂಥದಲ್ಲಿ ಕೂಲಂಕಷವಾಗಿ ನಿರೂಪಿಸಿದುದಲ್ಲದೆ ಗ್ರಂಥದುದ್ದಕ್ಕೂ ಮನುಸ್ಮೃತಿಯನ್ನು ಉಲ್ಲೇಖಿಸುತ್ತಾನೆ.

ಈ ಪ್ರಾಚೀನ ಶಾಸ್ತ್ರಜಾಲದ ಮೂಲದಿಂದ ನಮಗೆ ದೊರೆಯುವ ಭಾರತದ ಪ್ರಾಚೀನ ನ್ಯಾಯ ವ್ಯವಸ್ಥೆಯ ಸ್ಥೂಲ ರೂಪರೇಷೆಯನ್ನು ಈ ಕೆಳಗಿನಂತೆ ವಿವರಿಸ ಬಹುದು.

'ರಾಜಾಪ್ರತ್ಯಕ್ಷ ದೇವತಾ :', 'ರಾಜಾಕಾಲಸ್ಯ ಕಾರಣಂ' ಎಂಬ ಕಲ್ಪನೆಗಳು ನ್ಯಾಯವ್ಯವಸ್ಥೆಯ ಅಡಿಗಲ್ಲಾಗಿದ್ದುವು. ರಾಜನೇ ನ್ಯಾಯಕ್ಕೆ ಮೂಲನಾಗಿದ್ದನು. 'ಧರ್ಮ' (ಲಾ) ಎಂಬುದು ಋತಸತ್ಯವಾದ ಸೃಷ್ಟಿ ನಿಯಮವಾಗಿದ್ದು, ಅದು ಯುಗ ಯುಗಾಂತರಗಳಿಂದ ಪ್ರಪಂಚದ ಆಗುಹೋಗುಗಳನ್ನೂ, ಮಾನವ ಜೀವಿತವನ್ನೂ

ನಿಗ್ರಹಿಸಿ ನಿಯಂತ್ರಿಸಿಕೊಂಡು ಬಂದಿದೆಯೆಂದೂ, ಅದರ ಬೆಳಕಿನಲ್ಲಿಯೇ ಮಾನವನು ನಡೆದು ದಿವ್ಯಜೀವನದ ಸಾಫಲ್ಯವನ್ನು ಕಂಡುಕೊಳ್ಳಬೇಕೆಂದೂ ಪ್ರಾಚೀನರು ನಂಬಿದ್ದರು. ರಾಜರು ತಾವು ಶಾಸನಕಾರರಲ್ಲ, 'ಶಾಸನ ವಿಷಯದಲ್ಲಿ ನಿರಂಕುಶರಲ್ಲ' ಎಂಬ ಅರಿವನ್ನು ಸದಾ ಹೊಂದಿರುತ್ತಿದ್ದರು. ಸ್ಮೃತ್ಯುಕ್ತವಾದ ಮಾರ್ಗದಲ್ಲಿ ಧರ್ಮ ಪರಿಪಾಲನೆ ಮಾಡುವುದೂ ರಾಜ್ಯಭಾರಮಾಡುವುದೂ ತಮ್ಮ ಪರಮ ಕರ್ತವ್ಯವೆಂಬುದನ್ನು ನಹುಷ, ಅಂಬರೀಷ, ನಳ ಮಾಂಧಾತಾದಿ ರಾಜರು ನಂಬಿನಡೆದರು. ಗೌತಮ ಭರದ್ವಾಜ, ವಶಿಷ್ಠವಿಶ್ವಾಮಿತ್ರ, ಅತ್ರಿಅಂಗೀರಸರೇ ಮೊದಲಾದ ತಾಪಸರು ಸ್ಮೃತ್ಯುಕ್ತ ಧರ್ಮಾಚರಣೆಯನ್ನು ಅನುಜೀವನವಾಗಿ ಘೋಷಿಸಿಕೊಂಡು ಬಂದು ರಾಜರ ಪ್ರಜರ ಕ್ಷೇಮಚಿಂತನೆ ಮಾಡಿ ವಿಪತ್ಕಾಲಗಳಲ್ಲಿ ತಮ್ಮ ಧರ್ಮ ಸಂಪನ್ನವಾದ ತಪಃ ಪ್ರಭಾವವನ್ನು ಧಾರೆಯೆರೆದು ರಾಜರನ್ನೂ ರಾಷ್ಟ್ರವನ್ನೂ ರಕ್ಷಿಸಿದರು.

ಭಾರತದ ಮಹಾ ಸಾಮ್ರಾಟನೆನಿಸಿದ ಚಂದ್ರಗುಪ್ತ ಮೌರ್ಯನಿಗೆ ಜಗದ್ವಿಖ್ಯಾತ ಅರ್ಥಶಾಸ್ತ್ರ ನಿಪುಣನಾದ ಕೌಟಿಲ್ಯನು ಮಂತ್ರಾಲೋಚಕನಾಗಿದ್ದನೆಂಬುದು ಇತಿಹಾಸ ಪ್ರಸಿದ್ಧ ವಿಷಯವೇ. ಚಕ್ರವರ್ತಿಗಳೂ, ಮಹಾಮಂಡಲೇಶ್ವರರೂ, ವೀರನರಪತಿಗಳೂ, ಅಷ್ಟೇಕೆ ತೀರ ಇತ್ತೀಚಿನ ಕನ್ನಡನಾಡಿನ ಗಾವುಂಡರೂ ಒಡೆಯರೂ ಈ ಪ್ರಾಚೀನ ಮಾರ್ಗದಲ್ಲಿಯೇ ನ್ಯಾಯಪರಿಪಾಲನೆ ಮಾಡಿದ ದೃಷ್ಟಾಂತಗಳು ಇತಿಹಾಸದುದ್ದಕ್ಕೂ ಹೇರಳವಾಗಿ ಸಿಕ್ಕುತ್ತವೆ. 'ಕರ್ನಾಟ ಕ್ಷೋಣಿಪಾಲ ಪ್ರತಿಪದರಚಿತಾನೇಕರತ್ನಾಭಿಷೇಕಃ' ಎಂಬ ಶಾಸನದ ಮಾತು ವಿಜಯ ನಗರದರಸರು ತಮಗೆ ಮಂತ್ರಾಲೋಚನೆಯನ್ನು ದಯಪಾಲಿಸಿ ಸಂರಕ್ಷಿಸುತ್ತಿದ್ದ ಗುರುಗಳ ಪ್ರತಿ ಶ್ಲೋಕೋಚ್ಚಾರಕ್ಕೆ ಅವರ ಅಡಿದಾವರೆಗಳಿಗೆ ಅನೇಕ ರತ್ನಾಭಿಷೇಕ ಮಾಡುತ್ತಿದ್ದರೆಂದು ತಿಳಿದಾಗ ಕನ್ನಡಿಗರ ಮೈಪುಳಕಿತವಾಗದೆಯಿರಲು ಸಾಧ್ಯವೆ? ಧಾರ್ಮಿಕ, ಸಾಮಾಜಿಕ, ವ್ಯಾವಹಾರಿಕ, ಅಪರಾಧಿಕ ನ್ಯಾಯತೀರ್ಮಾನಕ್ಕಾಗಿ ಪ್ರಾಚೀನ ಭಾರತದ ಚಕ್ರವರ್ತಿ ಅಶೋಕ, ಚಂದ್ರಗುಪ್ತ ಹರ್ಷರೇ ಮೊದಲಾದವರು ಮತ್ತು ಕನ್ನಡನಾಡಿನ ಕದಂಬರು, ಗಂಗರಸರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ವೀರನರಪತಿಗಳು, ಒಡೆಯರು ಮಾಡಿದ ವ್ಯವಸ್ಥೆಗಳನ್ನು ಗಮನಿಸಿದಾಗ, ಅಂದಿನ ರಾಜರ ಮತ್ತು ಪ್ರಜರ ನ್ಯಾಯಪ್ರಜ್ಞೆಯ ಅರಿವಾಗದೆಯಿರದು. ಒಡೆಯರು ದೂರುಬಂದ ಸ್ಥಳಕ್ಕೆ ಸಂದರ್ಶನವಿತ್ತು ಸ್ಥಳದಲ್ಲಿಯೇ ನ್ಯಾಯದಾನ ಮಾಡಿದ ಹಲವಾರು ಸಂದರ್ಭಗಳು ಶಾಸನೋಕ್ತವಾಗಿವೆ.

ರಾಜ್ಯಪರಿಪಾಲನೆಯು ಎಷ್ಟೇ ಧರ್ಮದಿಂದ ನಡೆದರೂ ಜೀವರ ಗುಣಧರ್ಮದಲ್ಲಿ ವೈವಿಧ್ಯವಿದೆ. ಆದ್ದರಿಂದ ನೀತಿ–ನಡವಳಿಕೆಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ, ಧ್ಯೇಯಧೋರಣೆಗಳಲ್ಲಿ ವೈಷಮ್ಯ ನೈರ್ಘಣ್ಯಗಳು ಇದ್ದೇ ಇರುತ್ತವೆ. ಆಚಾರ–ವಿಚಾರ

ಗಳು ವ್ಯತಿಕ್ರಮವಾಗುತ್ತವೆ, ಆದುದರಿಂದ ರಾಜದಂಡವೇ ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡುವ ಪ್ರಬಲ ಸಾಧನ ಎಂಬುದನ್ನು ಅಂದಿನ ರಾಜರೂ ಪ್ರಜರೂ ಚೆನ್ನಾಗಿ ಅರಿತವರಾಗಿದ್ದರು.

ರಾಜಾಸ್ಥಾನವೇ ಪರಮ ಶ್ರೇಷ್ಠವಾದ ನ್ಯಾಯಸ್ಥಾನವಾಗಿತ್ತು. ಪ್ರಜೆಗಳು ಪ್ರವಾಸ ಸೌಕರ್ಯವಿಲ್ಲದ ಆ ಕಾಲದಲ್ಲಿ ಪ್ರತಿ ಸಣ್ಣ-ಪುಟ್ಟ ವಿವಾದಕ್ಕಾಗಿ ರಾಜಾಸ್ಥಾನಕ್ಕೆ ಬರಬೇಕಾಗಿರಲಿಲ್ಲ. ಒಳನಾಡಿನಲ್ಲಿ, ಅಂತಪಾಲದುರ್ಗ 'ಸಂಗ್ರಹಣ', 'ದ್ರೋಣಮುಖ' ಮತ್ತು 'ಸ್ಥಾನೀಯ' ವೆಂಬ ವಿವಿಧ ವಿಸ್ತಾರದ ಅಧಿಕಾರವ್ಯಾಪ್ತಿಯುಳ್ಳ ನ್ಯಾಯವಿತರಣ ಕೇಂದ್ರಗಳೂ ಇರುತ್ತಿದ್ದುವು. 'ಗ್ರಾಮಸಭೆ'ಗಳೂ, 'ಮಹಾಜನ'ಗಳೂ ನ್ಯಾಯ ತೀರ್ಮಾನ ಮಾಡುತ್ತಿದ್ದುವು. 'ಕುಲವು' ಒಳನಾಡಿನ ಪ್ರಥಮ ನ್ಯಾಯಸ್ಥಾನವಾಗಿತ್ತು. 'ಕುಲ', 'ಗ್ರಾಮಸಭೆ', 'ಮಹಾಜನ' ಇವುಗಳ ತೀರ್ಮಾನಗಳು ಪಕ್ಷಕಾರರಿಗೆ ಸಮಾಧಾನಕರವೆನಿಸದಿದ್ದಾಗ ಅಲ್ಲಲ್ಲಿ ನಿಯುಕ್ತವಾಗಿದ್ದ 'ಶ್ರೇಣಿ'ಗಳು ಅಂದರೆ ವಾಣಿಜ್ಯ ಸಂಸ್ಥೆಗಳು 'ಪೂಗ'ಗಳು ಅಂದರೆ ವೃತ್ತಿಸಂಸ್ಥೆಗಳು[೧] ನ್ಯಾಯತೀರ್ಮಾನದ ಮಧ್ಯ ಘಟ್ಟಗಳಾಗಿ ಕಾರ್ಯನಿರ್ವಹಿಸುತ್ತಿದ್ದುವು. ರಾಜಾಸ್ಥಾನವೇ ಮೇಲು ಮನವಿಯ ನ್ಯಾಯಸ್ಥಾನವಾಗಿರುತ್ತಿತ್ತು.

ರಾಜರು ಸಾಮ್ರಾಜ್ಯದ ಜಟಿಲ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ, ರಾಜನೀತಿಕ ಸಮಸ್ಯೆಗಳ ದೀರ್ಘಾಲೋಚನೆಯಲ್ಲಿ ತೊಡಗಿರುವಾಗ, ರಾಜನಿಯುಕ್ತರಾಗಲಿ ಇತರ ಅಧಿಕಾರಿಗಳಾಗಲಿ ನ್ಯಾಯತೀರ್ಮಾನಮಾಡುತ್ತಿದ್ದರು.[೨]

ಸಾಮಾನ್ಯತಃ ರಾಜರು ನ್ಯಾಯಪರಿಣತ ಧರ್ಮಜ್ಞರಿಂದಲೂ ವಿಷಯಪರಿಣತ ಅಮಾತ್ಯರಿಂದಲೂ ಕೂಡಿಕೊಂಡೇ ನ್ಯಾಯನಿರ್ಣಯ ಮಾಡುತ್ತಿದ್ದರು. ಕ್ಲಿಷ್ಟ ಸಮಸ್ಯೆಗಳು ಉದ್ಭವಿಸಿದಾಗ, ಇನ್ನೂ ಹೆಚ್ಚಿನ ವಿಧಿಪರಾಮರ್ಶವನ್ನೂ ತಜ್ಞ ಮಂತ್ರಾಲೋಚನೆಯನ್ನೂ ಪಡೆದುಕೊಳ್ಳಲು ಶಾಸ್ತ್ರಕೋವಿದರನ್ನು ಗೌರವಪೂರ್ವಕವಾಗಿ ಆಸ್ಥಾನಕ್ಕೆ ಬರಮಾಡಿಕೊಳ್ಳುತ್ತಿದ್ದರು.

---

೧ "ಶ್ರೇಣಿ" ಮತ್ತು "ಪೂಗ"ಗಳು ಈಸ್ಟ ಇಂಡಿಯಾ ಕಂಪನಿ ಕಾಲದ ಕಂಪನಿ ನಿರ್ದೇಶಕರಿಂದ ಕೂಡಿದ್ದ ನ್ಯಾಯಾಲಯಗಳನ್ನು ಹೋಲುತ್ತವೆ. ಇಂದಿನ ಮಾರಾಟಕರ, ಆದಾಯಕರ ನ್ಯಾಯಾಧಿಕರಣಗಳು, ಕಾರ್ಮಿಕ ನ್ಯಾಯಾಲಯಗಳು ಸ್ವಲ್ಪಮಟ್ಟಿಗೆ ಇವೇ ಮಾದರಿಯದಾಗಿವೆಯೆಂದು ಹೇಳಬಹುದು.

೨ ಇದು ನ್ಯಾಯಿಕ ಅಧಿಕಾರಗಳ ಪ್ರತ್ಯಾಯೋಜನೆಯ (Delegation of Powers) ಅಂದಿನ ವ್ಯವಸ್ಥೆಯನ್ನು ಸೂಚಿಸುವುದು.

ನ್ಯಾಯಪೀಠಾಸನ್ನ ರಾಜನಾಗಲಿ ನ್ಯಾಯಾಧೀಶನಾಗಲಿ ಶಾಸ್ತ್ರೋಕ್ತವಾದ ತನ್ನ ವ್ಯಕ್ತಿತ್ವವನ್ನು ಸದಾ ಕಾಪಾಡಿಕೊಂಡು ಬರುತ್ತಿದ್ದನು.[೩] ತನ್ನ ಆಶೆ–ಆಕಾಂಕ್ಷೆಗಳನ್ನು, ಕೋಪಾ–ಟೋಪಗಳನ್ನು, ಗರ್ವ–ಗಾಂಭೀರ್ಯಗಳನ್ನು, ಅಸೂಯೆ–ಆವೇಶಗಳನ್ನು ನಿಗ್ರಹಿಸಿಕೊಂಡು ಪ್ರಮಾದಕ್ಕೆಡೆಯಿಲ್ಲದಂತೆ ನಡೆದುಕೊಳ್ಳುತ್ತಿದ್ದನು. ಮತ್ತತೆಯಿಂದ ಸದಾ ದೂರವಿರುತ್ತಿದ್ದನು. ಸುಖಗಳನ್ನು ಬೆನ್ನಟ್ಟಿಕೊಂಡು ಹೋಗುತ್ತಿರಲಿಲ್ಲ. ಆಟ–ಪಾಟಗಳಲ್ಲಿ, ನೃತ್ಯ–ಗೀತ–ಸಂಗೀತಾದಿಗಳಲ್ಲಿ, ವಾದ್ಯ–ಮೇಳಗಳಲ್ಲಿ ಸದಾ ಭಾಗವಹಿಸಿ ಸುಲಭ ಲಭ್ಯವಾಗುತ್ತಿರಲಿಲ್ಲ. ಹಗಲು ನಿದ್ರಿಸುತ್ತಿರಲಿಲ್ಲ. ಮದ್ಯಪಾನಾಸಕ್ತನಾಗುತ್ತಿದ್ದಿಲ್ಲ. ಅನ್ಯಾಸ್ತಿಯನ್ನು ಕನಸಿನಲ್ಲಿಯೂ ಬಯಸುತ್ತಿರಲಿಲ್ಲ. ಅನ್ಯರ ಗುಣೋತ್ಕರ್ಷವನ್ನು ಕಂಡು ಎಂದೂ ಅಸಹನೆ ವ್ಯಕ್ತಪಡಿಸುತ್ತಿರಲಿಲ್ಲ. ಅನ್ಯರನ್ನು[೪] ಖಂಡಿಸುವುದನ್ನು, ನಿಂದಿಸುವುದನ್ನು ಸದಾ ವರ್ಜಿಸುತ್ತಿದ್ದನು.

ನ್ಯಾಯದಾನಮಾಡುವ ರಾಜನಾಗಲಿ, ನ್ಯಾಯಾಧೀಶನಾಗಲಿ ದೈವನಿಯುಕ್ತನು; ಅವನು ಮಾನವ ಮಾತ್ರನೆಂದು ಭಾವಿಸಕೂಡದು. ದೈವಪ್ರೇರಣೆಯಿಂದಲೇ ಅವನು ನ್ಯಾಯ ತೀರ್ಮಾನ ಮಾಡುತ್ತಾನೆ.[೫] ಎಂಬ ಕಲ್ಪನೆಗಳಿದ್ದುವು. ಅವರು ನಿರ್ಲಿಪ್ತರು, ವಿಧಿನಿಷೇಧರಹಿತರು ಎಂದೂ ಜನ ಭಾವಿಸುತ್ತಿದ್ದರು.[೬] ಅವನಿಗೆ ಸಮಾಜದಲ್ಲಿ ಅತ್ಯಧಿಕ ಗೌರವವಿತ್ತು. ರಾಜಾಸ್ಥಾನ ನ್ಯಾಯಸ್ಥಾನಗಳಲ್ಲಿ ವಿರಾಜಮಾನರಾದಾಗ ಅವರಲ್ಲಿ ದೋಷಾರೋಪಣೆ ಮಾಡಲು ಬರುವಂತಿದ್ದಿಲ್ಲ. ವ್ಯಕ್ತಿಸ್ವರೂಪದಲ್ಲಿ ಅವರು ಅಪರಾಧಿಗಳೆಂದು ಕಂಡುಬಂದಾಗ ಅವರನ್ನು ಸ್ಥಾನಭ್ರಷ್ಟರನ್ನಾಗಿ ಮಾಡಿದ ನಿದರ್ಶನಗಳು ಭಾರತದ ಪ್ರಾಚೀನ ಇತಿಹಾಸದಲ್ಲಿ ಸಾಕಷ್ಟು ಸಿಕ್ಕುತ್ತವೆ.[೭]

---

೩ ನ್ಯಾಯಾಧೀಶನು ಹಾಸ್ಯೋಕ್ತಿಪ್ರಿಯನಾಗಿರುವುದಕ್ಕಿಂತ ಹೆಚ್ಚಾಗಿ ವಿದ್ವಾಂಸನಾಗಿರಬೇಕು. ಜನಪ್ರಿಯನಾಗಿರುವುದಕ್ಕಿಂತ ಹೆಚ್ಚಾಗಿ ನ್ಯಾಯ–ನಿಷ್ಠುರನಾಗಿರಬೇಕು, ತಿಳಿದುದಕ್ಕಿಂತ ಹೆಚ್ಚು ತಿಳಿದುಕೊಳ್ಳಲು ಸದಾ ತವಕಪಡುತ್ತಿರಬೇಕು. ಚಾರಿತ್ರ್ಯಶುದ್ಧಿಯು ಅವನ ಗುಣಧರ್ಮವಾಗಿರಬೇಕು ಎಂದು ಹೇಳುವ ಆಧುನಿಕ ಪಾಶ್ಚಾತ್ಯವಿಧಿಕೋವಿದನಾದ ಬೇಕನ್ನನ ಮಾತುಗಳನ್ನು ಇಲ್ಲಿ ಗಮನಿಸಬಹುದು.

೪ ಅನ್ಯರು ಎಂಬುದಕ್ಕೆ ಅನ್ಯಮತ, ಅಭಿಪ್ರಾಯ, ಪಕ್ಷವೆಂದೂ ಗ್ರಹಿಸಬೇಕು. ನ್ಯಾಯಾಧೀಶರಾದವರು ರಾಜಕೀಯ ಪಕ್ಷಗಳ ಧೇಯಧೋರಣೆಗಳನ್ನು ಕುರಿತು ಚರ್ಚಿಸಕೂಡದೆಂಬ ನಿಯಮವು ಈಗಲೂ ಇದೆ.

೫ ಪ್ರಾಚೀನ ಗ್ರೀಕರಲ್ಲಿ ಬಳಕೆಯಲ್ಲಿದ್ದ ಥೆಮಿಸ್ಟೆಸ ಎಂಬುದು ಇದನ್ನೇ ಸೂಚಿಸುವುದು.

೬ ಜೀವರ ಕರ್ಮಾಕರ್ಮಫಲಗಳನ್ನು ನಿರ್ಣಯಿಸಿ ನಿಗ್ರಹಾನುಗ್ರಹ ಮಾಡುವ ಭಗವಂತನಿಗೆ ವಿಧಿನಿಷೇಧಗಳಿಲ್ಲ. ಅವನು ನಿರ್ಲಿಪ್ತನು ಎಂಬ ಕಲ್ಪನೆ ಭಾರತೀಯ ವೇದಾಂತದಲ್ಲಿ ಬಹುಮುಖ್ಯ ಅಂಶವಾಗಿದೆಯೆಂಬುದನ್ನು ಇಲ್ಲಿ ಸ್ಮರಿಸಬಹುದು; 'King is above law' 'King can do no wrong' ಎಂಬ ಪಾಶ್ಚಾತ್ಯ ತತ್ವವೂ ಇದನ್ನೇ ಸೂಚಿಸುವುದು.

೭ ಮತ್ಸ್ಯನ್ಯಾಯದಿಂದ ಪೀಡಿತರಾದ ಪ್ರಜೆಗಳು ವಿವಸ್ವತವನ್ನು ಸಿಂಹಾಸನದಿಂದ ಕೆಳಗಿಳಿಸಿ ಅವನ ಮಗನಾದ ಮನುವನ್ನು ರಾಜನನ್ನಾಗಿ ಮಾಡಿದರೆಂದು ತಿಳಿದುಬರುವುದು. ಕೌಟಿಲ್ಯ ಅರ್ಥಶಾಸ್ತ್ರ (ಕೆ. ಕೃಷ್ಣಭಟ್ಟರು) ಪುಟ ೪೫.

ದಂಡನೆಯೂ ದೈವಾಯತ್ತ ನಿಯಮ; ನ್ಯಾಯಾಧೀಶನು ಶಾಸ್ತ್ರಸಮ್ಮತವಾದ ದಂಡನೆಯನ್ನು ವಿಧಿಸಿದರೆ ಮಾತ್ರ ಪ್ರಜರು ನ್ಯಾಯಪ್ರಿಯರಾಗಿ ಸಮಾಜದ ಕಟ್ಟಳೆಗಳಿಗೆ ವಿಧೇಯರಾಗಿ ವರ್ತಿಸುತ್ತಾರೆ. ಇಲ್ಲದಿದ್ದರೆ, ರಾಜ್ಯವೂ ಆಸ್ತಿ-ಪಾಸ್ತಿಗಳೂ ನಾಶವಾಗಿ ವಿಪ್ಲವಾವಸ್ಥೆಯು ತಲೆದೋರುವುದು ಎಂಬುದನ್ನೂ ಪ್ರಾಚೀನ ರಾಜರೂ ಮನವಾರೆ ಅರಿತವರಾಗಿದ್ದರು.

ನ್ಯಾಯವನ್ನು ಯಾಚಿಸಿ ನ್ಯಾಯಸ್ಥಾನಕ್ಕೆ ಬರುವ ಮುದುಕರು, ಮಕ್ಕಳು ಮತ್ತು ಸಂತ್ರಸ್ತರು ಆಡುವ ಮಾತುಗಳನ್ನು ನ್ಯಾಯಾಧೀಶನು ಸಹನೆಯಿಂದ ಆಲಿಸಬೇಕು. ತಂದೆ, ತಾಯಿ, ಆಚಾರ್ಯ, ಪುರೋಹಿತ, ಹೆಂಡತಿ, ಮಗ, ಮಿತ್ರ ಯಾರೇ ಇರಲಿ, ಅವರು ಅಪರಾಧಿಗಳಾಗಿದ್ದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಬೇಕು. ಪಕ್ಷಪಾತ ತೋರಿ ನ್ಯಾಯಸ್ಥಾನವನ್ನು ನ್ಯಾಯಾಧೀಶನು ಕಲುಷಿತಗೊಳಿಸಬಾರದು- ಎಂಬ ನಿಯಮಗಳಿದ್ದವು.

ಯಾವುದೇ ವ್ಯಾವಹಾರಿಕ ವಿವಾದವಾಗಲಿ ಅಪರಾಧದ ಆರೋಪಿಯಾಗಲಿ ನ್ಯಾಯಾಧೀಶನ ಮುಂದೆ ಬಂದಾಗ, ನ್ಯಾಯಾಧೀಶನು, ನಡೆದ ಎಲ್ಲ ಸಂಗತಿಗಳ ಕೂಲಂಕಷ ತನಿಖೆ ಮಾಡುತ್ತಿದ್ದನು; ಪಕ್ಷಕಾರರನ್ನು ನಾನಾ ರೀತಿಯಲ್ಲಿ ಪರೀಕ್ಷಿಸಿ ಸಾಕ್ಷ್ಯ ತೆಗೆದುಕೊಳ್ಳುತ್ತಿದ್ದನು; ತಮ್ಮ ವಿಷಯವನ್ನು ಪ್ರತಿಪಾದಿಸಲು ಪಕ್ಷಕಾರರು, ನ್ಯಾಯವಾದಿಗಳನ್ನು ನಿಯೋಜಿಸಿಕೊಳ್ಳಬಹುದಾಗಿತ್ತು. ಆದರೆ ಕೊಲೆ, ಸುಲಿಗೆ, ವ್ಯಭಿಚಾರ, ಅಭಕ್ಷ್ಯಭಕ್ಷಣ, ಅಪೇಯಪಾನ, ಆಗಮನಾಗಮನ, ಮಿಥ್ಯಾನಿಂದೆ, ಕನ್ಯಾಪ್ರಕರ್ಮ, ಸ್ತ್ರೀಯರ ಲಜ್ಜಾಭಂಗ, ರಾಜದ್ರೋಹ, ವಂಚನೆ ಮತ್ತು ನ್ಯಾಯಾಧೀಶನ ಆಸ್ತಿನಾಶ ಈ ಸಂದರ್ಭಗಳಲ್ಲಿ ಮಾತ್ರ ಆಪಾದಿತನು ಅನ್ಯಸಹಾಯರಹಿತನಾಗಿ ತನ್ನ ವಿಚಾರವನ್ನು ಸ್ವತಃ ತಾನೇ ನಿವೇದಿಸಿಕೊಳ್ಳಬೇಕಾಗುತ್ತಿತ್ತು ಮತ್ತು ನ್ಯಾಯಾಧೀಶನ ಪ್ರಶ್ನೆಗೆ ಉತ್ತರಿಸಬೇಕಾಗುತ್ತಿತ್ತು. ಆದರೆ, ಇಂಥ ಸಂದರ್ಭಗಳಲ್ಲಿಯೂ ಕೂಡ, ಸ್ತ್ರೀಯರಿಗೆ, ಅಲ್ಪವಯಸ್ಕರಿಗೆ ಮತ್ತು ಹುಚ್ಚರಿಗೆ ನ್ಯಾಯವಾದಿಯ ಸಹಾಯ ಪಡೆಯಲು ಅವಕಾಶ ನೀಡಲಾಗುತ್ತಿತ್ತು.

ವಾದಮಂಡನೆಯಲ್ಲಿ ನಿರತನಾಗಿರುವ ನ್ಯಾಯವಾದಿಯನ್ನು ಹೆದರಿಸುತ್ತಿರಲಿಲ್ಲ ಮತ್ತು ಬಂಧಿಸುತ್ತಿರಲಿಲ್ಲ. ವಿವಾಹಾದಿ ಮಂಗಲ ಕಾರ್ಯಗಳಲ್ಲಿ, ಪೂಜಾದಿಗಳಲ್ಲಿ,ಳ ಯಜ್ಞಯಾಗಾದಿಗಳಲ್ಲಿ ತೊಡಗಿದ ಆಚಾರ್ಯ ಅಥವಾ ಪುರೋಹಿತರನ್ನು, ದನಕರುಗಳನ್ನು ಮೇಯಿಸುತ್ತಿರುವವನನ್ನು, ತನ್ನ ಹೊಲಗದ್ದೆಗಳಲ್ಲಿ ಉಳುಮೆಯನ್ನು ನಿರೀಕ್ಷಿಸುತ್ತಿರುವವನನ್ನು, ಯುದ್ಧರತನನ್ನು, ವರ್ಣಚಿತ್ರಕಾರ್ಯದಲ್ಲಿ, ವಾಸ್ತುಕರ್ಮದಲ್ಲಿ ಅಥವಾ ದೌತ್ಯದಲ್ಲಿ ತೊಡಗಿರುವವನನ್ನು ಬಂಧಿಸುತ್ತಿರಲಿಲ್ಲ.

ಳ ಹ್ಯಾಮ್ಲೆಟ್ ನೋಡಿ

ಸುಳ್ಳು ಸಾಕ್ಷ್ಯ ಕೊಡುವುದು ಮಹಾಪರಾಧವಾಗಿತ್ತು. ಅಂಥ ಅಪರಾಧಿಯು ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದನು. ಸಾಕ್ಷಿದಾರರು ಸ್ನಾನ ಮಾಡಿ ಶುಚಿರ್ಭೂತರಾಗಿ ಬಂದು, ದೈವಸಾನಿಧ್ಯವಿದೆಯೆಂದು ನಂಬಿದ ಪೂರ್ವ ಅಥವಾ ಉತ್ತರ ದಿಕ್ಕುಗಳಿಗೆ ಅಥವಾ ಭರತಭೂಮಿಯ ಪುಣ್ಯತೀರ್ಥಕ್ಷೇತ್ರಗಳೂ, ನದಿ–ಜಲ–ತಟಾಕಗಳೂ ಇರುವ ದಿಕ್ಕುಗಳಿಗೆ ಮುಖ ಮಾಡಿ ಸಾಕ್ಷ್ಯ ನುಡಿಯುತ್ತಿದ್ದರು. ಸಾಕ್ಷ್ಯ ಕೊಡುವುದಕ್ಕೆ ಮೊದಲು ಅವರು ನಿಜವನ್ನೇ ಅರುಹಬೇಕೆಂದೂ, ಇಲ್ಲದಿದ್ದರೆ ಇಹ–ಪರರಲ್ಲಿ ಕಠೋರ ಶಿಕ್ಷೆಗೆ ಗುರಿಯಾಗುವರೆಂದೂ ಸಾಕ್ಷಿದಾರರಿಗೆ ಹೇಳಲಾಗುತ್ತಿತ್ತು. ವ್ಯಾಜ್ಯದಲ್ಲಿ ಅಡಗಿದ ಸತ್ಯವನ್ನು ಕಂಡುಹಿಡಿಯುವುದೇ ನ್ಯಾಯಸ್ಥಾನದ ಪರಮಧರ್ಮವಾಗಿತ್ತು. ಧರ್ಮಸ್ಯ ಸೂಕ್ಷ್ಮಂ ನಿಹಿತಂ ಗುಹಾಯಾಮ ಎಂಬುದು ನ್ಯಾಯಾಧೀಶರಿಗೆ ತಾರಕಮಂತ್ರ ವಾಗಿತ್ತು. ಧರ್ಮಶೀಲರಾದ ಸಾಕ್ಷಿದಾರರನ್ನು ಸೌಜನ್ಯದಿಂದಲೂ ಗೌರವದಿಂದಲೂ ಕಾಣುತ್ತಿದ್ದರು. ಅವರೆಂದೂ ಸುಳ್ಳಾಡುವುದಿಲ್ಲವೆಂಬ ನಂಬಿಕೆಯಿದ್ದ ಕಾರಣ ನಿಜ ಹೇಳಬೇಕೆಂದು ಅವರಿಗೆ ಆಗ್ರಹಪಡಿಸುತ್ತಿರಲಿಲ್ಲ.

ಪಕ್ಷಕಾರರು, ತಮ್ಮ ಪರ ಸಾಕ್ಷ್ಯ ಕೊಡಲು ಅರ್ಹರಿರುವ ಸ್ವಮತೀಯರನ್ನೇ ಆರಿಸಿಕೊಳ್ಳಬೇಕೆಂಬ ನಿಯಮವಿತ್ತು. ಅಂಥವರು ದೊರೆಯದಿರುವಾಗ ಮಾತ್ರ ಸ್ಥಳದಲ್ಲಿಯೇ ಲಭ್ಯವಿರುವ ಬೇರಾವ ಮತೀಯನನ್ನಾದರೂ ನಿಯೋಜಿಸಿಕೊಳ್ಳಲು ಅನುಮತಿಯಿತ್ತು. ವೇದ ಪಾರಂಗತನಾದವನನ್ನು ಅಥವಾ ಸಂನ್ಯಾಸಿಯನ್ನು ಸಾಕ್ಷ್ಯ ಕೊಡಲು ನ್ಯಾಯಾಲಯಕ್ಕೆ ಬರುವಂತೆ ಸಾಮಾನ್ಯವಾಗಿ ನ್ಯಾಯಧೀಶರು ಕೇಳುತ್ತಿರ ಲಿಲ್ಲ.[೯]

ಕೊಲೆ, ಕಳವು, ವ್ಯಭಿಚಾರ, ನಿಂದೆ ಮೊದಲಾದ ಅಪರಾಧವೆಸಗಿದವರು ಸಾಕ್ಷಿ ದಾರರಾಗಲು ಅನರ್ಹರಾಗಿದ್ದರು. ಅದೇ ರೀತಿಯಾಗಿ, ಮಾರ್ಗಗಳ್ಳರು, ಮಾಯಾವಿ ಗಳು, ಮಾಂತ್ರಿಕರು, ಇಂದ್ರಜಾಲಿಕರು ಮತ್ತು ಸದಾ ವ್ಯಾಜ್ಯನಿರತರು ಅಥವಾ ದ್ಯೂತಾ ಸಕ್ತರು (ಜೂಜಾಡುವವರು) ಅನರ್ಹರಾಗಿದ್ದರು. ದಾಸ್ಯವೃತ್ತಿಯಲ್ಲಿರುವ ಸ್ತ್ರೀ–ಪುರುಷರು, ೧೫ಕ್ಕೆ ಮೀರದ ಅಲ್ಪವಯಸ್ಕರು, ೮೦ ರ ಗಡಿ ದಾಟಿದ ವಯೋವೃದ್ಧರು ಹಾಗೂ ಕುಷ್ಟಾದಿ ರೋಗಸಂಸರ್ಗಿಗಳು ಸಾಕ್ಷಿದಾರರಾಗಲು ಅನರ್ಹರಾಗಿದ್ದರು.

ಘಟನೆಯನ್ನು ಸಾಕ್ಷಾತ್ತಾಗಿ ನೋಡಿದವನು, ತನ್ನ ಕಿವಿಯಿಂದಲೇ ಕೇಳಿದವನು, ತನ್ನ ಕೈ ಮೈ ಸ್ಪರ್ಶದಿಂದ ಶೀತೋಷ್ಣಾದಿಗಳನ್ನು ಅರಿತವನು, ತನ್ನ ಮೂಗಿನಿಂದಲೇ ಹಿತಾಹಿತ ವಾಸನೆಯನ್ನು ಅನುಭವಿಸಿದವನು, ತನ್ನ ನಾಲಿಗೆಯಿಂದಲೇ ಪಥ್ಯಾಪಥ್ಯ

೯ ಈಗಿರುವ 'ಕಮಿಷನ್' ಪದ್ಧತಿಯಂತೆ ಅಗತ್ಯವಿದ್ದಾಗ ಅವರಿರುವಲ್ಲಿಯೇ ಹೋಗಿ ಸಾಕ್ಷ್ಯ ಪಡೆಯುತ್ತಿದ್ದರೆಂದು ಊಹಿಸಬಹುದಾಗಿದೆ.

ರುಚಿಯನ್ನು (ಆಸ್ಪತ್ರೆಗಳಲ್ಲಿ ನಿವಾಸಿ ವೈದ್ಯಾಧಿಕಾರಿಯು ನೋಡುವಂತೆ) ನೋಡಿದವನು, ಸಾಕ್ಷ್ಯ ಕೊಡಲು ಪರಮಸಮರ್ಥನಾಗಿದ್ದನು. ಇದನ್ನೇ ಪ್ರತ್ಯಕ್ಷಪ್ರಮಾಣವೆಂದು ಕರೆಯುತ್ತಿದ್ದರು. ಕುರುಡ, ಕಿವುಡ, ಕಣ್ಣಿಗೆ ಪೊರೆ ಬಂದವನು ಮದ್ಯಪಾನಾದಿಗಳಿಂದ ಮತ್ತನಾದವನು ಕೊಡುವ ಸಾಕ್ಷ್ಯಕ್ಕೆ ಮಾನ್ಯತೆಯಿರಲಿಲ್ಲ. ಜ್ಞಾನಕಾರ್ಯಕ್ಕೆ ಸಾಧಕವಾದ ಇಂದ್ರಿಯವು ದುರ್ಬಲವಾಗಿದ್ದರೆ ಜ್ಞಾನವು ಯಥಾರ್ಥವಾಗಿರುವುದಿಲ್ಲವೆಂಬುದೇ ಇದಕ್ಕೆ ಕಾರಣವಾಗಿತ್ತು. ಅಂತೆಯೇ ನಿರ್ದುಷ್ಟೇಂದ್ರಿಯಸನ್ನಿಕರ್ಷಜನ್ಯಜ್ಞಾನಮೇವ ಯಾತಾರ್ಥ್ಯಂಪ್ರಾಮಾಣ್ಯಂ ಎಂಬುದು ತರ್ಕಬದ್ಧಸಿದ್ಧಾಂತವಾಗಿತ್ತು. ಯಥಾರ್ಥವೊಂದೇ ನಿಜವಾದ ಪ್ರಮಾಣವೆಂದೂ (Truth) ತತ್ಸಾಧಕವು ಅನುಪ್ರಮಾಣವೆಂದೂ (Circumstantial evidence) ಪ್ರಮಾಣಲಕ್ಷಣಕಾರರು ನಿರೂಪಿಸಿರುವುದನ್ನು ನ್ಯಾಯಾಧೀಶರು ಸದಾ ಗಮನದಲ್ಲಿಡುತ್ತಿದ್ದರು.

ವಾದ ಪ್ರತಿವಾದ ಪತ್ರಗಳನ್ನು ಸುಳ್ಳು ಸಾಕ್ಷಿಗೆ ಆಸ್ಪದವಿಲ್ಲದಂತೆ ಬರೆಯಬೇಕೆಂಬ ನಿಯಮವಿತ್ತು. ಮೊದಲು ಬರೆದುದನ್ನು ಅಳಿಸಿ ಮತ್ತೊಂದು ಬರೆಯುವುದು, ಹಿಂದಿನ ಪ್ರತಿಪಾದನೆಗೂ ಮುಂದಿನ ಪ್ರತಿಪಾದನೆಗೂ ತಾಳವಿರದಿರುವುದು, ನಿಂದನೀಯವಲ್ಲದ ಮಾತುಗಳನ್ನು ಬರೆದು ಸಮರ್ಥಿಸಿಕೊಳ್ಳದಿರುವುದು, ಸಾಕ್ಷಿ ಕೊಡಲು ಪ್ರತಿಜ್ಞೆ ಮಾಡಿ ಸಾಕ್ಷಿಯ ವಿಳಾಸವನ್ನು ತಿಳಿಸದಿರುವುದು, ಹೆಚ್ಚಿನ ಸಾಕ್ಷಿ ಕೊಡುವುದಾಗಿ ಪ್ರತಿಜ್ಞೆ ಮಾಡಿ ಕಡಿಮೆ ಸಾಕ್ಷಿ ಕೊಡುವುದು, ಅನರ್ಹರನ್ನು ಸಾಕ್ಷಿಗಳಾಗಿ ನಮೂದಿಸುವುದು, ನಿರ್ದಿಷ್ಟವಾದ ಸಾಕ್ಷಿಗಳನ್ನು ಬಿಟ್ಟು ಬೇರೆಯವರನ್ನು ತರುವುದು, ತನ್ನ ಸಾಕ್ಷಿಯು ಪ್ರತ್ಯಕ್ಷವನ್ನು ನಿರೂಪಿಸುತ್ತಿರುವಾಗ ತಾನೇ ಅದನ್ನು ಅಲ್ಲಗಳೆಯುವುದು, ಸಾಕ್ಷಿವಚನದಿಂದ ನಿರ್ಣೀತವಾದುದನ್ನು ಒಪ್ಪದಿರುವುದು, ಸಂಭಾಷಣೆಗೆ ಯೋಗ್ಯವಲ್ಲದ ಸ್ಥಳದಲ್ಲಿ ಸಾಕ್ಷಿಯೊಡನೆ ಸಮಾಲೋಚನೆ ನಡೆಸುವುದು– ಇವು ಪರಾಜಯಕ್ಕೆ ಕಾರಣವೆಂದು ವಿಧಿಸಲಾಗಿತ್ತು.

ವಿಚಾರಣೆಯು ಕಠೋರವಾದ ಅಗ್ನಿ–ಜಲ ಪರೀಕ್ಷಾದಿಗಳಿಂದ ನಡೆಯುತ್ತಿತ್ತು.[೧೦] ಇದರಿಂದ ಅಪರಾಧಿತ್ವ, ನಿರಪರಾಧಿತ್ವ ಸಿದ್ಧಿಸುವುದೆಂಬ ನಂಬಿಕೆಯಿತ್ತ ಎಲ್ಲ ಸಂದರ್ಭಗಳಲ್ಲಿಯೂ ಅಗ್ನಿ–ಜಲಪರೀಕ್ಷೆಗಳಿಗೆ ಹೆಚ್ಚಿನ ಪ್ರಾಮಾಣ್ಯ ಪ್ರಾಪ್ತವಾಗಿತ್ತು. ಇಂಥ

೧೦ ಕನ್ನಡನಾಡಿನ ಗಂಗರಾಜರ ಕಾಲದಲ್ಲಿಯೂ ಆ ಮುಂದೆಯೂ ಸಮತೋಲ ದಿವ್ಯ, ಅಗ್ನಿ ದಿವ್ಯ, ಜಲದಿವ್ಯ, ವಿಷದಿವ್ಯ, ತಂಡುಲದಿವ್ಯಗಳೆಂಬ ಘೋರ ಪರೀಕ್ಷೆಗಳಿದ್ದುವು. ಆಪಾದನೆಯ ಶಿರಪತ್ರವನ್ನು ಪ್ರಮಾಣಕರ್ತೃವಿನ ತಲೆಯ ಮೇಲಿಟ್ಟು ಅಭಿಮಾನಿ ದೇವತೆಯ ಮಂತ್ರೋಚ್ಚಾರಣೆ ಮಾಡಿ ಸಾಕ್ಷಿ ತೆಗೆದುಕೊಳ್ಳಲಾಗುತ್ತಿತ್ತು; ೧೨ನೆಯ ಶತಮಾನದ ಪಂಪರಾಮಾಯಣದಲ್ಲಿ ಸೀತೆಯನ್ನು ತುಡುಗಿದ ರಾವಣನನ್ನು ಹೀಗೆ ವರ್ಣಿಸಲಾಗಿದೆ :

ದೋಷಿ ಪಿಡಿದಂತೆ ದಿವ್ಯದ ಕಾಸಿದ ಕುಳಮಂ – ಇತ್ಯಾದಿ ಕಿತ್ತೂರ – ದೇಗಾವಿ ಶಾಸವವನ್ನು ನೋಡಿ.

ಪರೀಕ್ಷೆಗಳಲ್ಲಿ ವಿನಿಯೋಗಿಸಲು ಪೂತಾಗ್ನಿಯನ್ನು (Holy fire) ಅಭಿಮಂತ್ರಿತ ಜಲವನ್ನು (Holy water) ಸಿದ್ಧಪಡಿಸುತ್ತಿದ್ದರು. ಈ ಪರೀಕ್ಷೆಗಳಲ್ಲಿ ಪ್ರಮಾಣಕರ್ತೃವು ಯಾವುದಾದರೊಂದನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ಕೊಡಲಾಗುತ್ತಿತ್ತು. ಅಪರಾಧಸ್ವರೂಪವನ್ನವಲಂಬಿಸಿ ಆಯ್ಕೆಯ ನಿರ್ಣಯವಾಗುತ್ತಿತ್ತು. ಕೆಂಡ ಕಾರುತ್ತಿರುವ ಕಬ್ಬಿಣದ ತುಂಡನ್ನು ಕೈಯಿಂದ ಹಿಡಿಯುವುದು, ಬರಿಗಾಲಿನಲ್ಲಿ ಕಾಯ್ದ ಕಬ್ಬಿಣದ ಪಟ್ಟಿಯ ಮೇಲೆ ನಡೆಯುವುದು;[೧೧] ಅಗ್ನಿಪರೀಕ್ಷೆಯೆನಿಸುತ್ತಿತ್ತು. ಅಬಾಧಿತನಾಗಿ ಪಾರಾದವನು ನಿರಪರಾಧಿಯೆಂದು ತೀರ್ಮಾನಿಸಲಾಗುತ್ತಿತ್ತು.

ಜಲಪರೀಕ್ಷೆಯ ವಿಧಾನವೂ ಕುತೂಹಲಕಾರಿಯಾದೆ. ಆರೋಪಿಯು ಕುದಿಯುವ ನೀರಿನಲ್ಲಿ ಹಾರುವುದು, ಮಂಜುಗಡ್ಡೆಯಂತಿರುವ ತಣ್ಣೀರಿನ ನದಿಯಲ್ಲಾಗಲಿ ಕೊಳದಲ್ಲಾಗಲಿ ಧುಮುಕುವುದು, ಈ ಪರೀಕ್ಷಾ ಕ್ರಮಗಳಾಗಿದ್ದುವು. ಮೊಸಳೆಗಳಿಂದ ತುಂಬಿದ ಜಲರಾಶಿಯನ್ನು ಎದೆಗುಂದದೆ ಈಜಿ ಸಜೀವನಾಗಿ ಪಾರಾಗಿ ಬರುವುದು ಮತ್ತೊಂದು ವಿಧಾನ.[೧೨] ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರನ್ನು ನಿರಪರಾಧಿಗಳೆಂದು ಘೋಷಿಸಲಾಗುತ್ತಿತ್ತು.

ಇದಲ್ಲದೆ ದ್ವಂದ್ವಯುದ್ಧ ಅಥವಾ ಪಂದ್ಯ (ಪಣ) ಕಟ್ಟುವುದು ಇವೂ ಪ್ರಮಾಣ ಪರೀಕ್ಷಾಕ್ರಮಗಳಾಗಿದ್ದುವು. ತನ್ನ ಪಕ್ಷವು ನಿರ್ದುಷ್ಟವಾಗಿದೆಯೆಂದು ನಂಬಿದವನು ತನಗೆ ಜಯ ಲಭಿಸಲಿ ಎಂದು ಇಷ್ಟದೈವವನ್ನು ಪ್ರಾರ್ಥಿಸಿ ಕಣಕ್ಕಿಳಿಯುತ್ತಿದ್ದನು.[೧೩]

ಭೂಮಿಯ ಹಕ್ಕನ್ನು ಸ್ಥಾಪಿಸಲು ಅಥವಾ ಅಪರಾಧ ಸಿದ್ಧಮಾಡಲು ಪಕ್ಷಕಾರರು ಇಂಥ ದ್ವಂದ್ವಕಾಳಗಕ್ಕಿಳಿಯುತ್ತಿದ್ದರು. ಬಾಲಕರು ಅಥವಾ ಅರವತ್ತರ ಗಡಿ ದಾಟಿದ ವೃದ್ಧರು ತಮ್ಮ ಪರವಾಗಿ ಕುಸ್ತಿ ಗಡಿಗಳನ್ನು ನಿಯೋಜಿಸಿ ಕಾಳಗಗಳನ್ನು ನಡೆಸುತ್ತಿ

---

೧೧ ರಾಮಾಯಣ ಕಾಲದ ಸೀತೆಯ ಅಗ್ನಿಪರೀಕ್ಷೆಯು ಪೌರಾಣಿಕ ನಿದರ್ಶನವಾಗಿದೆ. ಇಂಥ ಕಠೋರ ಪರೀಕ್ಷೆಯು (Trial by ordeal) ಹಿಂದೆ ಗ್ರೀಸ್, ಭಿಥೀನಿಯಾ, ಸಯಾಮ, ಇಂಗ್ಲೆಂಡ್ ಇವೇ ಮೊದಲಾದ ದೇಶಗಳಲ್ಲಿ ರೂಢಿಯಲ್ಲಿತ್ತೆಂದು ತಿಳಿದುಬರುವುದು. 1042–46 ರಲ್ಲಿ ಇಂಗ್ಲೆಂಡಿನ ರಾಜನಾದ ಎಡ್ವರ್ಡ್ ಕನಫೆಷರನ ತಾಯಿ 'ಎಮ್ಮಾರಾಣಿ'ಯು ವಿಂಚೆಸ್ಟರ್ ಬಿಷಪ್‌ನೊಂದಿಗೆ ಸ್ನೇಹಬೆಳೆಸಿದಳೆಂಬ ಸಂದೇಹ ಬಂದಾಗ ತನ್ನಿವಾರಣೆಗಾಗಿ ಇಂಥ ಕಠೋರ ಪರೀಕ್ಷೆಗೆ ಗುರಿಯಾಗಿ ತನ್ನ ಚಾರಿತ್ರ್ಯರಕ್ಷಣೆ ಮಾಡಿಕೊಂಡಳೆಂದು ಐತಿಹ್ಯವಿದೆ.

೧೨ ಮಲಬಾರ ಕರಾವಳಿಯಲ್ಲಿ ಈ ಪದ್ಧತಿ ಪ್ರಚಲಿತವಿತ್ತಂತೆ.

೧೩ ನಾರ್ಮಂಡಿಯಲ್ಲಿ ಪ್ರಚಲಿತವಿದ್ದ ಇಂಥ ಪದ್ಧತಿಯನ್ನು (1066–67 ರಲ್ಲಿ) ವಿಜಯೀ ವಿಲಿಯಮನು ಇಂಗ್ಲೆಂಡಿನಲ್ಲಿಯೂ ಜಾರಿಗೆ ತಂದನೆಂದು ಹೇಳುತ್ತಾರೆ. ಇದನ್ನು ಅಬಲೆಯರ ಮಧ್ಯದಲ್ಲಿ ಪೌರುಷ ಸ್ಥಾಪನೆಗೂ, ಅಬಲಾ ಮಾನರಕ್ಷಣೆಗೂ ಉಪಯೋಗಿಸಿಕೊಳ್ಳಲಾಗುತ್ತಿತ್ತು.

ದ್ದರು. ಈ ಪದ್ಧತಿಯನ್ನು ಮುಂದೆ ಕಾಲಕ್ರಮದಲ್ಲಿ ಎಲ್ಲ ವ್ಯಾವಹಾರಿಕ ಮತ್ತು ಅಪರಾಧಿಕ ವ್ಯಾಜ್ಯ ತೀರ್ಮಾನಕ್ಕೆ ಬಳಸಿಕೊಳ್ಳಲಾರಂಭಿಸಿದರು. ನ್ಯಾಯಸ್ಥಾನದಲ್ಲಿ ನೆರೆದ ಜನರಿಂದ ಕೋರಿಕೆ ಬಂದರೆ, ಪಕ್ಷಕಾರರು ಸ್ವತಃ ಕಣಕ್ಕಿಳಿದು ಜಯಾಪಜಯ ಪರೀಕ್ಷೆಗೆ ಒಳಗಾಗುತ್ತಿದ್ದರು. ದುಷ್ಕೃತ್ಯದ ಸಂದರ್ಭದಲ್ಲಿ ಆಪಾದಕನು ಮತ್ತು ಆಪಾದಿತನು ಸ್ವತಃ ಕೈಯಲ್ಲಿ ಚರ್ಮದ ಢಾಲು, ಸುತ್ತಿಗೆ ಹಿಡಿದು ನಿಷ್ಪಿಷ್ಟಗಾತ್ರರಾಗುವವರೆಗೆ ಕಾದುತ್ತಿದ್ದರು. ಬಸವಳಿದು ಭೂಮಿಗುರುಳಿದವನು ಸೋತನೆಂದು ಗ್ರಹಿಸಲ್ಪಟ್ಟು ತನ್ನ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದನು ಅಥವಾ ದಂಡನೆಗೆ ಗುರಿಯಾಗುತ್ತಿದ್ದನು. ಈ ನಿರ್ಣಯಕಾಳಗಪದ್ಧತಿಯನ್ನು ೧೮೧೯ ರಲ್ಲಿ ವಿಸರ್ಜಿಸಲಾಯಿತೆಂದು ತಿಳಿದು ಬರುತ್ತದೆ.

ನ್ಯಾಯಸ್ಥಾನದ ವಿಚಾರಣೆಗೆ ಬರುತ್ತಿದ್ದ ಪ್ರಕರಣಗಳ ಸಂಖ್ಯೆ ಸುದೀರ್ಘವಾಗಿದೆ. ಕೆಲವನ್ನು ಮಾತ್ರ ಇಲ್ಲಿ ದಿಗ್ದರ್ಶಿಸಬಹುದು;

ವಾರಸು ಮತ್ತು ಉತ್ತರಾಧಿಕಾರದ ಸಮಸ್ಯೆಗಳು; ಆಸ್ತಿಪಾಸ್ತಿಯ ಹಕ್ಕು ಬಾಧ್ಯತೆಗಳು; ಋಣ, ಭೋಗ್ಯ ಮತ್ತು ಪೂರ್ವಾಧಿಗಳು; ಆಸ್ತಿಹಸ್ತಾಂತರಣ ಸಮಸ್ಯೆಗಳು; ಗಾಳಿ–ಬೆಳಕು–ಮಾರ್ಗಾಧಿಕಾರಗಳು; ಅನುಭೋಗ ಸೌಕರ್ಯಗಳು; ಕ್ರಯವಿಕ್ರಯಗಳು; ವಂಚನೆ, ಮೋಸದ ಸಮಸ್ಯೆಗಳು; ಕರಾರು, ಸಂಧಿಭಂಗದ ಸಮಸ್ಯೆಗಳು; ವಿವಾಹ ಮತ್ತು ದಾಂಪತ್ಯಸಮಸ್ಯೆಗಳು– ಇವು ವ್ಯಾವಹಾರಿಕ ವರ್ಗಕ್ಕೆ ಸೇರಿದುವು;

ವಾಕ್ಪಾರುಷ್ಯ, ಮೂದಲಿಕೆ, ನಿಂದೆ, ಕ್ಷತಿ, ಅಪಮಾನ ಮೊದಲಾದ ಅಲ್ಪಾಪರಾಧಗಳು; ವ್ಯಭಿಚಾರ, ಕನ್ಯಾಪ್ರಕರ್ಮ, ಸ್ತ್ರೀಯರ ಲಜ್ಜಾಭಂಗದ ಅಪರಾಧಗಳು; ಸಾರ್ವಜನಿಕರು ಉಪಯೋಗಿಸುವ ಗಿರಿ ಭೂದುರ್ಗಗಳನ್ನು, ಕುಡಿಯುವ ಮತ್ತು ಸ್ನಾನಾದಿಗಳನ್ನು ಮಾಡುವ ನದಿಜಲ ಕೂಪತಟಾಕಾದಿಗಳನ್ನು ಅಶುದ್ಧಗೊಳಿಸಿದ ಅಪರಾಧಗಳು; ನರ–ಶಿಶು–ಭ್ರೂಣಹತ್ಯಾದಿ ಅಪರಾಧಗಳು; ಆಸ್ತಿ–ಪಾಸ್ತಿ ಪಶುಪಕ್ಷಿಗಳ ಅಪಹರಣ ಅಥವಾ ಅವುಗಳನ್ನು ನಾಶಮಾಡಿದ ಅಪರಾಧಗಳು; ಕಳವು, ಸುಲಿಗೆ, ಬೆಂಕಿಯಿಡುವುದು, ವಿಷವಿಡುವುದು; ರಾಜದ್ರೋಹ, ರಾಜ್ಯದ್ರೋಹಮಾಡುವುದು, ವಿದ್ರೋಹ ಮಾಡುವುದು– ಇವು ಘೋರ ಅಪರಾಧವೆಂದು ಪರಿಗಣಿತವಾಗಿದ್ದುವು. ಇವುಗಳಲ್ಲಿ ಕೆಲವನ್ನು ಮಾಡಿದವರಿಗೆ ಅತತಾಯಿಗಳೆಂದು ಕರೆಯುತ್ತಿದ್ದರು.

ಅಗ್ನಿದಹಃ ಗರದಶ್ಚೈವ ಶಸ್ತ್ರಪಾಣಿಃ
ಧನಾಪಃ ಕ್ಷೇತ್ರದಾರಾಪ ಹಾರೀತ
ಷಡ್ರೈತೇಹ್ಯಾತತಾಯಿನಃ
ಆತತಾಯಿನಾಮಯಾಂತಂ ಹನ್ಯಾದೇವನ ಸಂಶಯಃ

ಆಜ್ಞಾಭಂಗೋ ನರೇಂದ್ರಾಣಾಮ್
ವಿಪ್ರಾಣಾಮ್ ಮಾನಖಂಡನಮ್
ಪ್ರಥಕ್ ಶಯ್ಯಾ ಚ ನಾರೀಣಾಮ್
ಅಶಸ್ತ್ರ ವಧವುಚ್ಯತೆ —ಮನು

ರಾಜನ ಆಜ್ಞಭಂಗಮಾಡಿದರೆ ರಾಜನನ್ನು ದಂಡಿಸಿದಂತೆ. ಇದು ಈಗಿನ ಆಜ್ಞಾ ಭಂಗ ಚಳವಳಿಗೆ (Civil disobediance) ಮೂಲವೆಂಬುದನ್ನು ಅರಿತುಕೊಳ್ಳ ಬಹುದು. ಪಂಡಿತನನ್ನು ಮತ್ತು ಶಾಸ್ತ್ರಪಾರಂಗತನನ್ನು ಅವಮಾನಮಾಡಿದರೆ ಅವ ನನ್ನು ದಂಡಿಸಿದಂತೆ. ಹೆಂಡತಿಯನ್ನು ಬಿಟ್ಟು ದೂರ ಮಲಗಿದರೆ ಅವಳನ್ನು ದಂಡಿ ಸಿದಂತೆ. ಈ ದಂಡನೆಗಳು ಶಸ್ತ್ರವಿಲ್ಲದೆ ಅವರನ್ನು ವಧಿಸಿದಷ್ಟು ತೀಕ್ಷ್ಣವಾಗಿವೆ ಯೆಂದು ಮನು ಹೇಳುತ್ತಾನೆ. ದಂಡನಪದ್ಧತಿಯಲ್ಲಿಯೂ ನಮ್ಮ ಪ್ರಾಚೀನರು ಸಾಧಿಸಿದ ಸಾಂಸ್ಕೃತಿಕ ಹಿರಿಮೆಯನ್ನು ಇದರಿಂದ ಅರಿತುಕೊಳ್ಳಬಹುದಾಗಿದೆ.

ಸಾಮಾನ್ಯವಾಗಿ ನಿಂದಾವಚನ, ಅಪಮಾನಕರಮಾತು, ದುಂಡಾವರ್ತನೆ ಮತ್ತು ಕ್ಷತಿಯುಂಟುಮಾಡುವ ಅಲ್ಪಾಪರಾಧಗಳಿಗೆ ಹಣದಂಡವನ್ನೇ (ಜುಲ್ಮಾನೆ) ವಿಧಿಸ ಲಾಗುತ್ತಿತ್ತು. ವಂಚಕರ ಮತ್ತು ಅಪರಾಧಿಗಳ ಸ್ಥಾನಮಾನವನ್ನು ಗಮನಿಸಿ ದಂಡ ಗಳೂ ವ್ಯತ್ಯಸ್ತವಾಗುತ್ತಿದ್ದುವು. ಘೋರಾಪರಾಧಿಗಳಿಗೆ ಮತ್ತು ಅತತಾಯಿಗಳಿಗೆ ಮಾತ್ರ ಮರಣದಂಡನೆಯೇ ನಿಯಮವಾಗಿತ್ತು.

ಕುದುರೆ, ಆಡು, ಒಂಟೆಯನ್ನು ಕೊಂದರೆ ಕೊಂದವನ ಒಂದು ಕಾಲನ್ನು ಕಡಿಯು ತ್ತಿದ್ದರು. ಉಪಯುಕ್ತ ಪಶುಪಕ್ಷಿಗಳಾದ ಎತ್ತು, ಹಸು, ಎಮ್ಮೆ, ಕೋಣ, ನವಿಲು, ಕ್ರೌಂಚ, ಕಪೋತ, ಹಂಸ, ಮೀನು, ಕುರಿ ಇವೇ ಮೊದಲಾದವುಗಳನ್ನು ನಾಶಮಾಡು ವುದು ಅಥವಾ ಗಾಯಗೊಳಿಸುವುದು ದಂಡನಾರ್ಹವಾಗಿತ್ತು. ಮಾರ್ಗದಲ್ಲಿ ರಭಸ ದಿಂದ ಅಥವಾ ನಿರ್ಲಕ್ಷ್ಯತೆಯಿಂದ ವಾಹನ ನಡೆಸಿ ಹಾನಿ ಅಥವಾ ಮರಣವುಂಟು ಮಾಡಿದರೆ ಉಗ್ರಶಿಕ್ಷೆವಿಧಿಸಲಾಗುತ್ತಿತ್ತು. ಮನೆಗೆ ಕನ್ನ ಹಾಕುವವನ ಎರಡೂ ಕೈಗಳನ್ನು ಕತ್ತರಿಸುತ್ತಿದ್ದರು. ಮಾರ್ಗಗಳ್ಳರನ್ನೂ ಹಗಲುಗಳ್ಳರನ್ನೂ ಹೆಡಮುರಿಗೆ ಕಟ್ಟಿ ಎಸೆಯುತ್ತಿದ್ದರು. ದರೋಡೆಕಾರರನ್ನು ಗಲ್ಲಿಗೇರಿಸುತ್ತಿದ್ದರು ಅಥವಾ ಗುಂಡಿಕ್ಕಿ ಕೊಲ್ಲುತ್ತಿದ್ದರು. ಸ್ತ್ರೀಪುರುಷರನ್ನು ಅಪಹರಿಸುವವರನ್ನು ಹುಲ್ಲಿನ ರಾಶಿಯಲ್ಲಿ ಹೂಳಿ ಸುಡುತ್ತಿದ್ದರು. ಅಥವಾ ಎರಡೂ ಕೈಗಳನ್ನು ಕಡಿದು ಅಡ್ಡದಾರಿಯಲ್ಲಿ ಎಸೆಯು ತ್ತಿದ್ದರು. ಸಾಕುಪ್ರಾಣಿಗಳನ್ನು ಕದಿಯುವವರಿಗೂ ಇದೇ ಬಗೆಯ ಶಿಕ್ಷೆ ಕಾದಿರು ತ್ತಿತ್ತು. ಕತ್ತೆ ಉಚ್ಚೆಹಾಕಿ ತಲೆ ಬೋಳಿಸುವ ಪದ್ಧತಿಯೂ ಪ್ರಾಚೀನ ಭಾರತದಲ್ಲಿ

ಪ್ರಚಾರದಲ್ಲಿತ್ತು.[೧೪] ಇದರಿಂದ ದೈಹಿಕ ವೇದನೆಗಿಂತ ಹೆಚ್ಚಾಗಿ ಅಪಮಾನವುಂಟಾಗಿ ಸ್ವತಃ ನಾಚಿಕೆಯೂ ಜಿಗುಪ್ಸೆಯೂ ಹುಟ್ಟಿ ನೋಡುವ ಜನಗಳಲ್ಲಿ ಅಪರಾಧಿಮನೋಭಾವವು ಕಡಮೆಯಾಗಲಿ ಎಂಬುದೇ ಮುಖ್ಯೋದ್ದೇಶವಾಗಿತ್ತು. ಗೋದಿ, ಕಡಲೆ, ಸಾಸಿವೆ ಮತ್ತು ಆಹಾರಧಾನ್ಯಗಳನ್ನು ಕದಿಯುವವರಿಗೂ ಒಮ್ಮೊಮ್ಮೆ ಮರಣದಂಡನೆ ವಿಧಿಸಲಾಗುತ್ತಿತ್ತು.[೧೫]

ವ್ಯಭಿಚಾರದ ಅಥವಾ ಬಲಾತ್‌ಸಂಭೋಗದ ಅಪರಾಧಗಳನ್ನು ಸಿದ್ಧಮಾಡಲು ಈಗ ಕೇವಲ ಲೈಂಗಿಕ ಅಥವಾ ಕಾಮುಕ ಸಂಭೋಗವು ಸಿದ್ಧವಾದರೆ ಸಾಕು. ಆದರೆ ಪ್ರಾಚೀನ ಭಾರತದಲ್ಲಿ ವ್ಯಭಿಚಾರದ ವ್ಯಾಖ್ಯೆಗೆ ಇನ್ನೂ ಅನೇಕ ಸೂಕ್ಷ್ಮಾಂಶಗಳೂ ಒಳಪಡುತ್ತಿದ್ದುವು ಎಂಬುದನ್ನು ಧರ್ಮಶಾಸ್ತ್ರಕಾರರು ವಿವರಿಸಿರುವುದು ವಿಸ್ಮಯಕಾರಕವಾಗಿದೆ.

ವ್ಯಭಿಚಾರವು ಮೂರು ವಿಧವೆಂದು ಶಾಸ್ತ್ರಕಾರರ ಮತವಾಗಿತ್ತು. ಪರಸ್ತ್ರೀಯರೊಡನೆ ಅಲೆಯುವುದು, ಅವಳ ವಸ್ತ್ರಾಲಂಕಾರಗಳನ್ನು ಸ್ಪರ್ಶಿಸುವುದು, ಅವುಗಳೊಡನೆ ಚೆಲ್ಲಾಟವಾಡುವುದು, ಅವಳ ಬಳಿಗೆ ಮಧ್ಯವರ್ತಿಯನ್ನು ಕಳಿಸುವುದು, ಜನಸಾಂದ್ರತೆಯಿರದ ಸ್ಥಳಗಳಲ್ಲಿ ಅವಳನ್ನು ಸಂಧಿಸುವುದು, ಒಂದೇ ಕೊಳದಲ್ಲಿ ಅವಳೊಡನೆ ಸ್ನಾನಕ್ಕಿಳಿಯುವುದು,[೧೬] ಸಂಭಾಷಣೆಗೆ ತೊಡಗುವುದು, ಪರಸ್ಪರ ನೇತ್ರಸೂಚನೆ ಮಾಡುವುದು, ಹುಬ್ಬು ಹಾರಿಸುವುದು, ಮಂದಹಾಸಗಳಿಂದ ವ್ಯವಹರಿಸುವುದು, ಅಯೋಗ್ಯ ಸಮಯಗಳಲ್ಲಿ ಅವಳೊಡನೆ ಸಂಧಿಸುವುದು— ಇವೆಲ್ಲವೂ ಶಾಸ್ತ್ರಕಾರರ ದೃಷ್ಟಿಯಲ್ಲಿ ವ್ಯಭಿಚಾರದ ನಾನಾಪ್ರಕಾರಗಳಾಗಿದ್ದುವೆಂದು ಹೇಳಬಹುದು.

---

೧೪ ಇವು ಇಂಗ್ಲೆಂಡಿನಲ್ಲಿಯೂ ಹಿಂದೆ ಪ್ರಚಲಿತವಿದ್ದ 'ಸಾಕ್ಸ' ಮತ್ತು 'ಪಿಲ್ಲರಿ' ಪದ್ಧತಿಯ ದಂಡನೆಗಳನ್ನು ಹೋಲುತ್ತವೆ. ವಿಶಿಷ್ಟರೀತಿಯಲ್ಲಿ ತಲೆ ಮತ್ತು ಕೈಗಳನ್ನು ಬಿಗಿದು ಕೂಡಿಸುವುದೂ (ಹೆಡಮುರಿಗೆ) ತಲೆಯೆತ್ತಿ ಕೈಗಳನ್ನು ಹಿಂದೆ ಕಟ್ಟಿ ಕಂಬಕ್ಕೆ ಬಿಗಿಯುವುದೂ ಈ ಪದ್ಧತಿಯ ಲಕ್ಷಣಗಳಾಗಿದ್ದುವೆಂದು ತಿಳಿದುಬರುವುದು.

೧೫ ಡೇನಿಷ್ ಮತ್ತು ಸ್ಯಾಕ್ಸನ್ ರಾಜರು ಇಂಗ್ಲಂಡಿನಲ್ಲಿ ವಿಧಿಸುತ್ತಿದ್ದ ಶಿಕ್ಷೆಗಳು ಇನ್ನೂ ಉಗ್ರವಾಗಿದ್ದುವೆಂದು ಹೇಳುತ್ತಾರೆ. ಅಪರಾಧಿಯ ಕಣ್ಣುಗಳನ್ನು ಕೀಳುವುದು, ನಾಸಾಪುಟವನ್ನೂ ಕಿವಿ–ತುಟಿಗಳನ್ನೂ ಛಿದ್ರವಿಚ್ಛಿದ್ರಗೊಳಿಸುವುದು, ಚರ್ಮಸುಲಿದು ಕೊಲ್ಲುವುದು– ಇವು ಭಯಾನಕವೂ ಅನಾಗರಿಕವೂ ಆದ ದಂಡನೆಗಳಾಗಿದ್ದವು. ಡೆನ್ಮಾರ್ಕ್ ಮತ್ತು ಇಂಗ್ಲಂಡಿನ ರಾಜನಾದ ಸೆಟ್ ಎಂಬಾತನು (1017–35) ಡೇನಿಷ್ ಪದ್ಧತಿಯನ್ನನುಸರಿಸಿ ಇಂಗ್ಲಂಡಿನ ಅರಣ್ಯ ಶಾಸನಗಳಲ್ಲಿ ಇಂಥ ಅಂಗವಿಚ್ಛೇದನ ಶಿಕ್ಷೆಗಳನ್ನು ಕಲ್ಪಿಸಿದನೆಂದು ಪ್ರತೀತಿ. ರಾಜಾರಣ್ಯಗಳಲ್ಲಿ ಬೇಟೆಯಾಡುವವರಿಗೆ ವಿಜಯೀ ವಿಲಿಯಮ್‌ನು ಇಂಥ ಶಿಕ್ಷೆಗಳನ್ನು ವಿಧಿಸುತ್ತಿದ್ದನಂತೆ.

೧೬ ಕ್ರಿಶ್ಚನ್ ಕೀಲರಳೊಡನೆ ಕೊಳದಲ್ಲಿ ಸ್ನಾನಕ್ಕಿಳಿದು ಸಂಭಾಷಿಸಿದ ಬ್ರಿಟಿಷ್ ಮಂತ್ರಿಯ ಇತ್ತೀಚಿನ ಪ್ರಸಂಗವು ಎಂಥ ರಾಜಕೀಯ ಬಿರುಗಾಳಿಗೆ ಕಾರಣವಾಯಿತೆಂಬುದನ್ನು ಗಮನಿಸಿ.

ಈ ಬಗೆಯ ಅಪರಾಧಗಳಿಗೆ ಅಲ್ಪ ಪ್ರಮಾಣದ ಹಣದಂಡಗಳನ್ನು ವಿಧಿಸಲಾಗುತ್ತಿತ್ತು. ಆದರೆ ಪರಸ್ತ್ರೀಯರಿಗೆ ಚಂದನಾದಿ ಸುಗಂಧ ದ್ರವ್ಯಾದಿಗಳನ್ನೂ ಮಣಿಹಾರಗಳನ್ನೂ ರತ್ನಾಭರಣಗಳನ್ನೂ ವಸ್ತ್ರಾಲಂಕಾರಗಳನ್ನೂ ಕಳಿಸುವುದು ವ್ಯಭಿಚಾರದ ವರ್ಗಕ್ಕೆ ಸೇರಿದ ಉಗ್ರ ಅಪರಾಧವೆಂದು ಪರಿಗಣಿಸಿ, ಇನ್ನೂ ಹೆಚ್ಚಿನ ಹಣದಂಡವನ್ನು (ಜುಲ್ಮಾನೆಯನ್ನು) ವಿಧಿಸುತ್ತಿದ್ದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪರಸ್ತ್ರೀಯರೊಡನೆ ಏಕಶಯ್ಯೆಯಲ್ಲಿರುವುದು ಕಂಡುಬಂದರೆ ಅಥವಾ ಅವಳನ್ನು ಚುಂಬಿಸುವುದು, ಆಲಂಗಿಸುವುದು, ಓಲೈಸುವುದು ಅಥವಾ ಅವಳ ಅನುಮತಿಯಿಂದಲೇ ಅವಳೊಡನೆ ನಿರ್ಜನಪ್ರದೇಶಕ್ಕೆ ಹೋಗುವುದು ಕಂಡುಬಂದರೆ, ಇದು ವ್ಯಭಿಚಾರದ ಮೂರನೆಯ ವರ್ಗದ ಹೀನಾಪರಾಧವೆಂದು ಪರಿಗಣಿಸಿ ಇನ್ನೂ ಅಧಿಕ ಹಣದಂಡವನ್ನು (ಜುಲ್ಮಾನೆಯನ್ನು) ವಿಧಿಸುತ್ತಿದ್ದರು. ಮಧ್ಯವರ್ತಿಗೂ ಶಿಕ್ಷೆಯಾಗದಿರುತ್ತಿರಲಿಲ್ಲ. ಸ್ತ್ರೀಯರೇ ಇಂಥ ಕಾರ್ಯಕ್ಕೆ ಕೈಹಾಕಿದರೂ ದಂಡನೆಯಿಂದ ಅವರಿಗೆ ವಿಮೋಚನೆಯಿರಲಿಲ್ಲ.

ಈ ವರ್ಗದ ಘೋರಾಪರಾಧವೆಂದರೆ ಅಬಲೆಯರ ಮೇಲೆ ಅತ್ಯಾಚಾರವೆಸಗುವುದು. ಅಂಥ ಅಪರಾಧಿಯ ಆಸ್ತಿಪಾಸ್ತಿಯನ್ನು ಹರಣಮಾಡುವುದಲ್ಲದೆ ಅವನ ಶಿಶ್ನಚ್ಛೇದ ಮಾಡಿ ಅಥವಾ ವೃಷ್ಣತಾಡನ ಮಾಡಿ ಅಥವಾ ಅವನನ್ನು ಷಂಢನನ್ನಾಗಿ ಮಾಡಿ ಕತ್ತೆಯ ಮೇಲೆ ಕೂಡಿಸಿ ಹಣೆಯ ಮೇಲೆ ದೊಡ್ಡದಾಗಿ ಸಂಕೇತಹಾಕಿ, ಪಟ್ಟಣದ ಅಥವಾ ಗ್ರಾಮದ ಬೀದಿಬೀದಿಗಳಲ್ಲಿ ಮೆರೆಯಿಸುತ್ತಿದ್ದರು. ಇಂಥ ಅಪರಾಧಿಗಳನ್ನು ಅಗ್ನಿಗಾಹುತಿಗೊಟ್ಟ ನಿದರ್ಶನಗಳೂ ಉಂಟು. ಅತ್ಯಾಚಾರ ಮತ್ತು ವ್ಯಭಿಚಾರಗಳಿಗೆ ಸ್ತ್ರೀ–ಪುರುಷರಿಬ್ಬರಿಗೂ ಶಾಸ್ತ್ರಕಾರರು ಇನ್ನೂ ಅನೇಕ ದಂಡನೆಗಳನ್ನು ವಿಧಿಸಿದ್ದಾರೆ. ಪಶುಗಮನಕ್ಕೂ ಕಠಿಣ ಶಿಕ್ಷೆಯಿತ್ತು.

ಬ್ರಾಹ್ಮಣನು ಮದ್ಯಪಾನ ಮಾಡುವುದು, ವ್ಯಭಿಚಾರದಲ್ಲಿ ತೊಡಗಿರುವುದು ಅಥವಾ ಕೊಲೆಮಾಡುವುದು ಸಿದ್ಧವಾದರೆ ಅವನ ಹಣೆಯ ಮೇಲೆ ಅಪರಾಧ ಸಂಕೇತಾಕ್ಷರದ ಬರೆ ಎಳೆದು ದಂಡಿಸಲಾಗುತ್ತಿತ್ತು.[೧೭]

೧೭ ಇಂಥ ಸಾಂಕೇತಿಕ ಬರೆಹಾಕುವ ಪದ್ಧತಿ ಬೇರೆ ದೇಶಗಳಲ್ಲಿಯೂ ಪ್ರಚಲಿತವಿತ್ತು. ಅಮೇರಿಕದ ವಸಾಹತುದಂಡನೆ ನೀತಿಯಲ್ಲಿ ಇಂಥ ನಿದರ್ಶನಗಳು ದೊರೆಯುತ್ತವೆ. ದರೋಡೆಯ ಮೊದಲನೆಯ ಅಪರಾಧಕ್ಕಾಗಿ ಕೈಮೇಲೆ 'ಟಿ' ಅಕ್ಷರವನ್ನು. ಎರಡನೆಯ ಅಪರಾಧಕ್ಕಾಗಿ ಹಣೆಯಮೇಲೆ 'ಆರ್' ಅಕ್ಷರವನ್ನೂ ಬರೆಹಾಕುತ್ತಿದ್ದರು ಎಂಬುದು ಪೂರ್ವ ಜೆರ್ಸಿ ಸಂಹಿತೆಗಳಲ್ಲಿ (೧೬೬೮–೭೫) ಉಕ್ತವಾಗಿದೆ. ಮೇರಿಲ್ಯಾಂಡ ವಸಾಹತದಲ್ಲಿ ಅಪಪ್ರಚಾರ ಮಾಡಿದವನಿಗೆ "ಬಿ" ಬರೆಹಾಕಿ ದಂಡಿಸುತ್ತಿದ್ದರು. ಇಂಗ್ಲಂಡಿನಲ್ಲಿ ವ್ಯಭಿಚಾರದೋಷಕ್ಕೆ ಗುರಿಯಾದ ಹೆಂಗಸು ತನ್ನ ಕೊರಳಲ್ಲಿ ಅಪರಾಧ ಸಂಕೇತಾಕ್ಷರವನ್ನು ಸದಾ ಧರಿಸಬೇಕಾಗುತ್ತಿತ್ತು.

ಹಿಂದೂಧರ್ಮಶಾಸ್ತ್ರಗಳ ರೀತ್ಯಾಪಾತಕಗಳಿಗೆ ವಿಧಿಸಿದ ದಂಡನೆಗಳು, ಪ್ರಾಚೀನ ಆಂಗ್ಲ ಅಥವಾ ಮಹಮ್ಮದೀಯ ಶಾಸನಗಳನ್ನು ನೋಡಲಾಗಿ ಅಥವಾ ಸಮಕಾಲೀನ ಯಾವುದೇ ದೇಶದ ಶಾಸನಗಳನ್ನು ನೋಡಲಾಗಿ ಅಷ್ಟು ಉಗ್ರವಾಗಿರಲಿಲ್ಲವೆಂದೂ ಮಾನವೀಯ ಅನುಕಂಪದಿಂದ ಕೂಡಿದ್ದುವೆಂದೂ ಕಂಡುಬಾರದೆ ಇರದು. ಹಿಂದೂ ದಂಡನ ನೀತಿಯನ್ನು 'ರ್ಯಾಕಿನ್' ಮೊದಲಾದ ಲೇಖಕರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಪ್ರಾಚೀನ ಶಾಸ್ತ್ರಕಾರರು ದಂಡನನೀತಿಯಲ್ಲಿ ಉಚ್ಚವರ್ಗದವರಿಗೆ ತಾರತಮ್ಯ ತೋರಿದ್ದಾರೆ ಎಂದು ಹೇಳುವವರುಂಟು; ಪರಕೀಯರ ಇಂಥ ವಾದದಲ್ಲಿ ಹುರುಳಿಲ್ಲ. ಶಾಸ್ತ್ರಪಾರಂಗತರೂ ರಾಷ್ಟ್ರಕಲ್ಯಾಣಾಕಾಂಕ್ಷಿಗಳೂ ಸದಾ ರಾಜರ-ಪ್ರಜರ ತುಷ್ಟಿಪುಷ್ಟಿಗಾಗಿ 'ಕಾಲೇವರ್ಷತು ಪರ್ಜನ್ಯಃ ಪೃಥ್ವೀ ಸಸ್ಯಶಾಲಿನೀ' ಎಂದೂ 'ಸರ್ವೇಜನಾಃ ಸುಖಿನೋಭವಂತು' ಎಂದೂ ಹಾರೈಸುತ್ತ ಯಜನ ಯಾಜನ ನಿರತರಾಗಿ, ನಿರ್ಜನಪ್ರದೇಶಗಳಲ್ಲಿ, ಕಾನನಗಳಲ್ಲಿ, ಗುಹೆಗಳಲ್ಲಿ, ಆಶ್ರಮಗಳಲ್ಲಿ ಅಲ್ಪೋಪಹಾರದಿಂದಲೂ ಯಮನಿಯಮ ಅಷ್ಟಾಂಗಾದಿ ವ್ರತಬದ್ಧರಾಗಿಯೂ ಶಮದಮಾದಿ ಸಂಪತ್ತಿಯನ್ನು ಹೊಂದಿ ಸಮಾಜದ ಘನನಿಧಿಗಳಾಗಿ ಶೋಭಿಸುತ್ತಿದ್ದವರೂ ಆಗಿದ್ದ ಆಚಾರ್ಯವರ್ಗವನ್ನು ಪಾಶ್ಚಾತ್ಯವಿಮರ್ಶಕರು ಅರಿತುಕೊಳ್ಳಲೆತ್ನಿಸಲಿಲ್ಲವೆಂದು ಶ್ರೀ ಎಚ್. ಪಿ. ದುಬೆಯವರು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯದಲ್ಲಿ ಮಹಾಮಹೋಪಾಧ್ಯಾಯ ಆಚಾರ್ಯ ಶ್ರೀ ಪಿ ವ್ಹಿ. ಕಾಣೆಯವರೂ ಶ್ರೀ ಡಿ. ಎಫ್. ಮುಲ್ಲಾ ಅವರೂ ಬಹು ಹಿಂದೆಯೇ ತಮ್ಮ ಅಮೋಘ ಕೃತಿಗಳಿಂದ ಔದಾರ್ಯಶೂನ್ಯ ವಿಮರ್ಶಕರ ಭ್ರಮನಿರಸನ ಮಾಡಿದ್ದಾರೆ. ಅಷ್ಟೇ ಅಲ್ಲ, ಪುರೋಹಿತವರ್ಗಕ್ಕೆ ವಿಶೇಷ ಮನ್ನಣೆ, ರಕ್ಷಣೆ ಪಾಶ್ಚಾತ್ಯದೇಶಗಳಲ್ಲಿಯೂ ಇತ್ತೆಂಬುದನ್ನು ಸಿದ್ಧಮಾಡಿ ತೋರಿಸಿದ್ದಾರೆ. ಇಂಗ್ಲೀಷರಲ್ಲಿಯೂ ಅಪರಾಧಿಕ ಹೊಣೆಯ ವಿಷಯಗಳಲ್ಲಿ ಪಾದ್ರಿಗಳಿಗೂ (ಕ್ಲರ್ಜಿ) ಮೌಲ್ವಿಗಳಿಗೂ ವಿಶೇಷ ಶಾಸನರಕ್ಷಣೆಯಿತ್ತೆಂಬುದನ್ನು ಎತ್ತಿತೋರಿಸಿದ್ದಾರೆ. ಇಗ್ಲಂಡ ಮತ್ತು ರೋಮ ನಗರರಾಜ್ಯಗಳಲ್ಲಿ ಪೌರೋಹಿತ್ಯದ ಘನತೆಯ ಲಾಭಪಡೆದುಕೊಳ್ಳುವ ರೂಢಿ ಬಹುಕಾಲಪ್ರಚಲಿತವಿತ್ತೆಂದೂ ಇಂಗ್ಲಂಡಿನಲ್ಲಿ ಅಪರಾಧಕ್ಕೊಳಗಾದ ಪಾದ್ರಿಗಳಿಗೆ ಅಥವಾ ಧರ್ಮಗುರುಗಳಿಗೆ ಅಷ್ಟೇ ಅಲ್ಲದೆ ಧರ್ಮಗ್ರಂಥಗಳಿಂದ ಒಂದು ಶ್ಲೋಕವನ್ನು ಪಠಿಸಲು ಸಾಧ್ಯವಿದ್ದ ಎಲ್ಲರಿಗೂ, ಈ ವಿಶೇಷ ರಕ್ಷಣೆ ದೊರೆಯುತ್ತಿತ್ತೆಂದೂ ನಿದರ್ಶನಗಳನ್ನು ಎತ್ತಿ ತೋರಿಸಿದ್ದಾರೆ. ೧೮೨೭ರಷ್ಟು ಈಚೆಗೆ ಈ ವಿಶೇಷ ರಕ್ಷಣೆಯು ಮಾಯವಾಯಿತಂತೆ.

ಕಾರಾವಾಸದ ದಂಡನೆಯಾದಾಗ ಅಪರಾಧಿಗಳಿಗೆ ತಲೆಯ ಮೇಲೆ ಹೊಡೆಯ ಕೂಡದು. ಬೆನ್ನಿನ ಮೇಲೆ ಮಾತ್ರ ಬಿದಿರಿನ ಚಡಿಯಿಂದ ಅಥವಾ ಸರಪಣಿಯಿಂದ ಹೊಡೆದು ದಂಡಿಸಬೇಕು ಎಂಬ ವಿಧಿಯಿತ್ತು. ಅಗ್ನಿ-ಜಲ ಪರೀಕ್ಷಾಕ್ರಮದ ಕಠೋರತೆಯೆಲ್ಲಿ ? ಈ ಸೌಮ್ಯದಂಡನಾದೇಶವೆಲ್ಲಿ ? ಇದರಿಂದ ದಂಡನೆಗಿಂತ ಅಪರಾಧ ನಿರೋಧವೇ ಮೇಲೆಂಬ ಭಾವನೆಯಿತ್ತೆಂದು ತಿಳಿಯಬರುವುದಿಲ್ಲವೆ ?

ಅಪರಾಧ ಒಪ್ಪಿಕೊಂಡು ಆಸ್ತಿಪಾಸ್ತಿಗಳನ್ನೂ ಅಪಹರಿಸಿದ ವಸ್ತುಗಳನ್ನು ಹಿಂದಿರುಗಿಸುವವರಿಗೆ ಮತ್ತು ಪಶ್ಚಾತ್ತಾಪಪಡುವವರಿಗೆ ಕ್ಷಮಾದಾನವನ್ನೂ ನೀಡಲಾಗುತ್ತಿತ್ತು.

ಪ್ರಾಚೀನ ನ್ಯಾಯವ್ಯವಸ್ಥೆಯಲ್ಲಿ ಇಂದಿನಂತೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂಬ ಕಟ್ಟುನಿಟ್ಟಾದ ವಿಭಜನೆಯಿರಲಿಲ್ಲ. ರಾಜನೇ ಪರಮ ನ್ಯಾಯದಾನಿಯಾಗಿದ್ದನೆಂಬುದನ್ನು ಹಿಂದೆಯೇ ವಿಚಾರಿಸಿದ್ದಾಗಿದೆ.

ರಾಜರ ಅಥವಾ ನ್ಯಾಯಾಧೀಶರ ತೀರ್ಮಾನಗಳು 'ಲೇಖನ' ರೂಪದಲ್ಲಿ ಹೊರಡುತ್ತಿದ್ದುವು. ರಾಜನ ಆಣತಿ ಪಡೆದು ರಾಜನಿಯುಕ್ತರೂ ಅಮಾತ್ಯರೂ ಆಜ್ಞೆ ಹೊರಡಿಸುತ್ತಿದ್ದರು. ಇಂಥ ಆಜ್ಞೆಗಳನ್ನು ಮತ್ತು ಆದೇಶಪತ್ರಗಳನ್ನು, 'ಲೇಖನ' ಗಳೆಂದು (Writs) ಕರೆಯುತ್ತಿದ್ದರು.

'ಲೇಖನ' ಗಳು ಅರ್ಥಕ್ರಮ, ಸಂಬಂಧ, ಪರಿಪೂರ್ಣತೆ, ಮಾಧುರ್ಯ, ಔದಾರ್ಯ ಮತ್ತು ಸ್ಪಷ್ಟತೆಗಳಿಂದ ಕೂಡಿರಬೇಕೆಂಬ ನಿಯಮವಿತ್ತು. ಇದನ್ನು 'ಲೇಖನ ಸಂಪತ್ತು' ಎಂದು ಕರೆದಿದ್ದಾರೆ. ರಾಜಾಜ್ಞೆಗಳು ಸಂದಿಗ್ಧವಾಗಿರಕೂಡದು, ಅಪರಿಪೂರ್ಣವಾಗಿರಕೂಡದು, ಹೀನವಚನಗಳಿಂದ ಕೂಡಿರಕೂಡದು ಎಂದು ನಮ್ಮ ಪ್ರಾಚೀನರು ಹೇಳಿರುವುದನ್ನು ವಾಚಕರು ಗಮನಿಸಬೇಕು. ಅಸ್ಪಷ್ಟ ಆದೇಶಗಳಿಂದ ವ್ಯಾಜ್ಯಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದನ್ನು ಕಂಡರಿತ ಆಧುನಿಕರಿಗೆ ಕೌಟಿಲ್ಯನ ಈ ಕಿವಿಮಾತು ಅದೆಷ್ಟು ಅಪ್ಯಾಯಮಾನವಾಗಿದೆ !

'ಲೇಖನ'ಗಳನ್ನು ಬರೆಯುವ ರೀತಿಯನ್ನೂ, ಸಮಾಸಗಳ ಜೋಡಣೆಯನ್ನೂ ಲಿಂಗ, ವಚನ, ವಿಭಕ್ತ್ಯಾದಿ ವಿಷಯ ನಿರ್ದೇಶನಗಳನ್ನೂ ಸೂಚಿಸಿ, ಕೊನೆಗೆ ಇತಿ ಎಂದು ಸೇರಿಸಬೇಕೆಂಬ ಕೌಟಲ್ಯನ ಸಲಹೆ ಗಮನಾರ್ಹವಾಗಿದೆ. ಮುಕ್ತಾಯದಲ್ಲಿ ಇತಿ ಸೇರಿಸಿದರೆ ವಿಕ್ಷಿಪ್ತಾಕ್ಷರಗಳಿಗೆ (Interpollations) ಆಸ್ಪದವಿರುವುದಿಲ್ಲವೆಂದು ಸೂಚಿಸುವ ಕೌಟಿಲ್ಯನ ಹಿತೋಕ್ತಿ ಎಷ್ಟು ಸಮಂಜಸವಾಗಿದೆ.

'ಲೇಖನ'ಗಳು ಹದಿಮೂರು ಬಗೆಯಾಗಿವೆ. ನ್ಯಾಯಸ್ಥಾನದ ದೃಷ್ಟಿಯಿಂದ ಮುಖ್ಯವಾದುವುಗಳೆಂದರೆ ಪೃಚ್ಛೆ, ಆಖ್ಯಾನ ಮತ್ತು ಅನುನಯ ಪೃಚ್ಛೆ, ಹೀಗೆ ಮಾಡಬೇಕೆಂದು ಕೇಳುವ ಕರ್ತವ್ಯ ಜಿಜ್ಞಾಸೆಗೆ ಸಂಬಂಧಿಸಿದ್ದು, ಆಖ್ಯಾನ, ಕೇಳಿದವನಿಗೆ ಹೀಗೆ ಮಾಡಬೇಕೆಂದು ಉಪದೇಶಿಸುವುದು ಅನುನಯ, ಪುರುಷಾದಿ ವ್ಯಸನನಿಮಿತ್ತದ್ದು; ಕೆಲಸದಲ್ಲಿ ಉದಾಸೀನರಾದವರಿಗೆ ಕೆಲಸಮಾಡುವಂತೆ ಆದೇಶ ನೀಡಲು ಮತ್ತು ತಮ್ಮ ಮಾತಿಗೆ ಕಿವಿಗೊಡದಿರುವುದರಿಂದ ಸಂತ್ರಸ್ತರಾಗಿ ಬಂದವರಿಗೆ ಪರಿಹಾರ ಒದಗಿಸಲು ಅನುನಯ 'ಲೇಖನ' ವನ್ನು ಬಳಸಿಕೊಳ್ಳಲಾಗುತ್ತಿತ್ತು. ಇದು 'ಲೇಖನ' ಗಳ

ನ್ಯಾಯಿಕ ಸ್ವರೂಪವನ್ನು ಎತ್ತಿ ತೋರಿಸುತ್ತದೆ. ಅನುನಯ 'ಲೇಖನವು' ಇಂದಿನ ನ್ಯಾಯಿಕ ಪರಿಹಾರ ರೂಪದ ಉಚ್ಚನ್ಯಾಯಾಲಯದ ಲೇಖನಗಳನ್ನು (Writs) ಹೋಲುವುದೆಂದು ಹೇಳಬಹುದು.

ಜನಸಾಮಾನ್ಯರ ಅದರಲ್ಲಿಯೂ ವಿಶೇಷವಾಗಿ ಅಧಿಕಾರಿಗಳ ನಿಗ್ರಹಾನುಗ್ರಹಕ್ಕಾಗಿ ಹೊರಡುತ್ತಿದ್ದ ರಾಜಾಜ್ಞೆಗಳು 'ಅಜ್ಞಾಲೇಖ' ಗಳಾಗಿದ್ದುವು.

ಕೈಕೊಳ್ಳಬೇಕಾದ ಪ್ರಯತ್ನಗಳನ್ನು ಕುರಿತು ಎಚ್ಚರಿಕೆ ಕೊಡುವ 'ಲೇಖನ'ವು ಪ್ರಾವೃತ್ತಿಕಲೇಖವಾಗಿತ್ತು.

'ಲೇಖನ'ವನ್ನು ಕೋಳಕಾದ ಕಪ್ಪಾದ ಕಾಗದದಲ್ಲಿ ಬರೆಯುವುದು, ಅತಿ ದೊಡ್ಡ ಅತಿ ಸಣ್ಣ ಅಕ್ಷರಗಳಲ್ಲಿ ಬರೆಯುವುದು, ಅಂದವಾಗಿ ಶುದ್ಧವಾಗಿ ಬರೆಯದಿರುವುದು, ನೀರುಮಸಿಯಿಂದ ಬರೆಯುವುದು, 'ಅಕಾಂತಿದೋಷ'ವೆನಿಸುತ್ತಿತ್ತು. ಹಿಂದು–ಮುಂದಿನ ಅರ್ಥಗಳಿಗೆ ಪರಸ್ಪರ ವಿರುದ್ಧವಾಗಿ ಬರೆಯುವುದು ವ್ಯಾಘಾತದೋಷವಾಗಿತ್ತು. ಹೇಳಿದ್ದನ್ನೆ ಮತ್ತೆ ಹೇಳುವುದು ಪುನರುಕ್ತದೋಷವೆನಿಸುತ್ತಿತ್ತು. ಲಿಂಗಭೇದ, ವಚನಭೇದ, ವಿಭಕ್ತಿಭೇದಗಳನ್ನರಿಯದೆ ವ್ಯತ್ಯಯಗಳಿಂದ ಕೂಡಿದ್ದನ್ನು ಸಂಪ್ಲವ ದೋಷವೆಂದು ಹೇಳುತ್ತಿದ್ದರು. 'ಲೇಖನ'ವು ಈ ದೋಷಗಳಿಂದ ಮುಕ್ತವಾಗಿರಬೇಕೆಂಬ ನಿಯಮವಿತ್ತು.

ರಾಜಸಭೆಗಳಲ್ಲಿ ನ್ಯಾಯಸ್ಥಾನಗಳಲ್ಲಿ ಗುರುತರ ಹೊಣೆ ಹೊತ್ತು, 'ಲೇಖಕ'ರು ಮತ್ತು 'ಶಾಸನಾಧಿಕಾರಿಕಾಕ್ಷಪಣಕ'ರು ಇರುತ್ತಿದ್ದರು. 'ಲೇಖಕ'ನು ಆಸ್ಥಾನದ ಎಲ್ಲ ದಾಖಲೆಗಳನ್ನು ಸರಿಯಾಗಿ ಬರೆದಿಟ್ಟುಕೊಳ್ಳುತ್ತಿದ್ದನು. ಅಭಿಲೇಖಗಳನ್ನು (ರಿಕಾರ್ಡ್ಸ್) ಕಾಯ್ದಿಟ್ಟುಕೊಳ್ಳುವುದೂ ಅವನ ಕರ್ತವ್ಯವಾಗಿತ್ತು. ನ್ಯಾಯಸ್ಥಾನಗಳಲ್ಲಿ ವಿಚಾರಣೆ ನಡೆದಾಗ ಅವನು ಅತಿ ಜಾಗರೂಕತೆಯಿಂದ ಟಿಪ್ಪಣಿಗಳನ್ನು ಬರೆಯಬೇಕಾಗುತ್ತಿತ್ತು. ರಾಜನು ಅಥವಾ ನ್ಯಾಯಾಧೀಶನು ವಿಚಾರಣ ಮಧ್ಯದಲ್ಲಿ ಅಥವಾ ತೀರ್ಮಾನಾನ್ತ್ಯ ಅಭಿಲೇಖಿಸಿದುದನ್ನು ಓದಲು ಹೇಳಿದರೆ 'ಲೇಖಕ'ನು ಚಾಚೂ ತಪ್ಪದೆ ಅಸ್ಖಲಿತವಾಗಿ ಯಥಾವತ್ತಾಗಿ ತಾನು ಬರೆದಿಟ್ಟುದನ್ನು ಓದಬೇಕಾಗುತ್ತಿತ್ತು. ಕೌಟಿಲ್ಯನು, 'ಲೇಖಕನು' ಸ್ಫುಟ ಸುಸ್ವರ ಯಥಾಸ್ಥಾನ ಪ್ರಧಾನಾ ವಿಶ್ರಮ ಸುಭಗ ಪ್ರವೀಣನಾಗಬೇಕೆಂದು ಹೇಳಿದ್ದಾರೆ. ಈ ಮಾತು ಎಷ್ಟು ಔಚಿತ್ಯಪೂರ್ಣವಾಗಿದೆಯೆಂಬುದನ್ನು ಆಧುನಿಕರು ಗಮನಿಸಬೇಕು. ನ್ಯಾಯವರದಿಗಾರರು, ಬೆಂಚಕ್ಲಾರ್ಕಗಳು ಕುಶಾಗ್ರಮತಿಗಳೂ ಸೂಕ್ಷ್ಮಗ್ರಾಹಿಗಳೂ ಆಗಿರಬೇಕೆಂದು ಸೂಚಿಸುವ ಆಧುನಿಕ ವಿಧಿಕೋವಿದರ ಮಾತಿಗಿಂತ ಕೌಟಿಲ್ಯನು ಕೊಡುವ 'ಲೇಖಕ'ನ ಚಿತ್ರವು ಎಷ್ಟು ಪರ್ಯಾಪ್ತವಾಗಿದೆಯೆಂಬುದನ್ನು ಗಮನಿಸಬೇಕು.

'ಶಾಸನಾಧಿಕಾರಿಕಾಕ್ಷಪಣಕ' ನು ರಾಜಾಜ್ಞೆಗಳ ಪ್ರತಿಗಳಿಗೆ ಹಸ್ತಾಕ್ಷರ ಹಾಕುತ್ತಿದ್ದನು. ದಾಖಲೆಗಳ ಅಧಿಕೃತ ನಕಲುಗಳನ್ನು ಕೊಡುವುದು, ಪ್ರಮಾಣಿತ ಪ್ರತಿಗಳಿಗೆ ಪ್ರತಿಹಸ್ತಾಕ್ಷರ ಹಾಕುವುದು (ಕೌಂಟರಸೈನ್) ಹೊಣೆಗಾರಿಕೆಯ ಕೆಲಸವೆಂದು ಹೇಳಬೇಕೆ? ಇಂಥ ಅಧಿಕಾರಿ ಸಂಪತ್ತನ್ನು ಹೊಂದಿದ ಪ್ರಾಚೀನ ನ್ಯಾಯಸ್ಥಾನಗಳು ಪ್ರಾಯಶಃ ಬೇರೆ ಇನ್ನಾವ ಜನಾಂಗದ ಪ್ರಾಚೀನ ಇತಿಹಾಸದಲ್ಲಿಯೂ ಕಾಣಸಿಗುವುದಿಲ್ಲ. ಗ್ರೀಕ್, ರೋಮನ್ ಮತ್ತು ಇಂಗ್ಲಿಷ್ ನ್ಯಾಯಪದ್ಧತಿಗಳೇ ಆಧುನಿಕ ನ್ಯಾಯವ್ಯವಸ್ಥೆಗೆ ಆಧಾರವಾಗಿರುವುದೇನೋ ನಿಜ. ಆದರೆ ಭಾರತದ ನ್ಯಾಯವ್ಯವಸ್ಥೆಯು ಇವೆಲ್ಲವುಗಳಿಗಿಂತ ಪ್ರಾಚೀನವಾದುದು ಮತ್ತು ಸ್ಪಷ್ಟ ನ್ಯಾಯದರ್ಶನಸಂಪನ್ನವಾದುದು ಎಂಬುದನ್ನು ವಿಧಿವೇತ್ತರನೇಕರು ಈಗಾಗಲೇ ಸಂಸ್ಥಾಪಿಸಿದ್ದಾರೆ.

ಕರೀಮ್‌ನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು

ಸೀತಾರಾಮ ಜಾಗೀರ್‌ದಾರ್

'ಕರೀಂನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು' ಎಂಬ ಲೇಖನವೊಂದು 'ಕರ್ನಾಟಕ ಭಾರತಿ' ಪತ್ರಿಕೆಯಲ್ಲಿ ಪ್ರಕಟವಾಗಿದೆ.[೧] ಪಂಪನ ಅಭ್ಯಾಸಿಗಳಿಗೆ ಇದೊಂದು ಅತ್ಯುಪಯುಕ್ತ ಲೇಖನ. ಈ ಲೇಖನವನ್ನು ಪ್ರಕಟಿಸಿದ ಶ್ರೀ ಪಿ. ವ್ಹಿ. ಪರಬ್ರಹ್ಮ ಶಾಸ್ತ್ರಿಗಳೂ ಹಾಗೂ ಡಾ. ಎಂ. ಎಂ. ಕಲಬುರ್ಗಿಯವರೂ ಅಭಿನಂದನಾರ್ಹರು. ಶ್ರೀ ಶಾಸ್ತ್ರಿಗಳು, ಈ ಶಾಸನವನ್ನು ಮೊದಲು ಆಂಧ್ರಪ್ರದೇಶ ಸರ್ಕಾರದ ಪುರಾತತ್ವ ಶಾಖೆಯವರು ಪ್ರಕಟಿಸಿರುವ 'ಕರೀಮ್‌ನಗರ ಜಿಲ್ಲೆಯ ಶಾಸನಗಳು' ಎಂಬ ಶಾಸನ ಸಂಪುಟದಲ್ಲೂ ಪ್ರಕಟಿಸಿದ್ದಾರೆ; ಎರಡೆಡೆಯಲ್ಲೂ ಶಾಸನದ ಪಾಠ ಒಂದೇ ಆಗಿದ್ದು ಅದು ಪ್ರಾಯಃ ಕನ್ನಡ ಭಾಷೆ ಚೆನ್ನಾಗಿ ಬರದ ಕಾರಣದಿಂದ ಅನೇಕ ತಪ್ಪುಗಳಿಂದ ಒಡಗೂಡಿದೆ. ನಮಗೆ ತಪ್ಪುಗಳು ಮುಖ್ಯವಲ್ಲ; ಆದರೆ ಸತ್ಯವನ್ನು ಅರ್ಥ ಮಾಡಿಕೊಳ್ಳುವಲ್ಲಿ ತಪ್ಪುಗಳನ್ನೇ ಸರಿಯೆಂದು ಗ್ರಹಿಸಿಕೊಂಡುಹೋಗುವುದೂ ಸಲ್ಲ! ಶಾಸನದ ವಿಷಯವನ್ನು ವಿಮರ್ಶಿಸಬೇಕಾದರೆ ಪರಿಶೀಲನೆಗೆ ತೊಡಗುವ ಮೊದಲು ಶುದ್ಧಪಾಠವನ್ನು ಕೊಡುವುದು ವಿಹಿತ.[೩]

I[೪]

ಒಂದನೆಯ ಮುಖ

೧ ಸ್ವಸ್ತಿ ಶ್ರೀ ಮಚ್ಚಳು–
೨ ಕ್ಯ ವಂಸ [ವ್ಯೋ][೫] ಮಾ–

೧ ಕರ್ನಾಟಕ ಭಾರತಿ, ಸಂಪುಟ–೭, ಸಂಚಿಕೆ–೩, ಪು. ೧೧೭–೧೨೫

೨ P. V. Parabrahma Shastry, Inscriptions of Andhra Pradesh. Karimnagar District. No. 1, pp. 104 & Photo.

೩ ಪ್ರತಿಯೊಂದು ಪಾಠವನ್ನು ಅ. ಟಿಪ್ಪಣಿ ಹಾಕಿ ತೋರಿಸುವುದಕ್ಕಿಂತ ಶುದ್ಧಪಾಠವನ್ನು ಕೊಡುವುದೇ ಲೇಸೆಂದು ಬಗೆದು ಹೀಗೆ ಮಾಡಿರುವೆ. ಇನ್ನು ನನ್ನ ಪಾಠವೂ ಅಶುದ್ಧ ಎಂದು ತೋರುವಲ್ಲಿ ಶಾಸನದ ಪಡಿಯಚ್ಚಿನ ಫೋಟೊ ಕೊಟ್ಟಿದೆ– ಅದನ್ನು ಗಮನಿಸಬೇಕು– ಸಾಧು ರೂಪಗಳನ್ನು ಸ್ವೀಕರಿಸಬೇಕು.

೪ ಈ ಶುದ್ಧಪಾಠವನ್ನು ಪೂರ್ವೋಕ್ತ ಅ. ಟಿ. ೨ ರಲ್ಲಿನ ಗ್ರಂಥವಲ್ಲಿಯೇ ಶಾಸನಚಿತ್ರ (Facsimile) ದಿಂದ ತಯಾರಿಸಲಾಗಿದೆ.

೫ ಮೂಲತಃ 'ಪ್ಯೋ' ವೇ ಇದ್ದು ಈಗ ಮೇಲಿನ ಕೊಂಬು ಸ್ವಲ್ಪ ಅಳಿಸಿಹೋಗಿದೆ. 'ವ್ಯೇ' ದಂತೆ ಕಾಣುತ್ತದೆ.

೩ ವೃತಕಿರಣನೆನಿಪ ಕಾ–
೪ ನ್ತಿಯುನೊಳಕೊಣ್ಡೀ ಮಹಿಯೊ–
೫ ಳಾತ್ಮವಂಶ ಸಿಖಾಮಣಿ ಜ –
೬ ಸಮೆಸೆಯೆ ಜುದ್ಧಮ[ಲ್ಲಂ] ನೆಗಗ–
೭ ಟ್ಟಿಂ [೧*] ಆತ್ಮಭವನಾಧನಾಧಿ–
೮ ಪನಾತ್ಮಜನಜನಹುಕ್ಷ ಪೃಥುಭ–
೯ ಗೀರತನಳರಾಮಾತ್ಮಜರನಿಳಿ–
೧೦ ಸಿ ನೆಗಟ್ದ ಮಹಾತ್ಮಂ ನರಸಿಂ[ಹ]–
೧೧ ನಱುವಿನೊ[ಳ್] ಪರಮಾತ್ಮಂ [೨*]
೧೨ ಆ ಜಾ[ಕ]ಯ್ಯೆ[ರ್][೬]ಗಮಾ ವಸುಂಧಾ
೧೩ ಜಯಾ[೭]ವಲ್ಲಭಂಗಮತಿವಿಶ–
೧೪ ದೆ (ದ?) ಯಶೋರಾಜಿತನೆನಿಪರಿಕೇ–
೧೫ ಸರಿ ರಾಜತ್ತೇಜೋಗ್ನಿ[ಮ]ಗ್ನರಿ–
೧೬ ಪುನೃಪಶಲಭಂ + [೩*][೮] ಮಗನಾರ್ದ–
೧೭ ನಾಗಿ ಚಾಗ[೧೦]ಂ[ದ] ನೆಗಟ್ತಿಯೊಳ್ಬೀರ–
೧೮ ದೆಸಕದೊಳ್ನೆಗಟಿ[೯] ಮಗಂ ಸಮ–
೧೯ ನೆನೆ ಪುಟ್ಟಲೊಡಂ ಕೋಳ್ಮುಗಗೊಣ್ಡು–
೨೦ ದು ಭುವನಭವನಮರಿಕೇಸರಿ–
೨೧ ಯಾ॥ [೪*] ಚಾಗದ ಕಂಭ

ಎರಡನೆಯ ಮುಖ

೨೨ (ಚಾಗದ ಕಂಭ)[೧೧]ಮ[ನ್ನಿ]ಱಿಸಿ ಬೀ–
೨೩ ರದ ಶಾಸನಮನ್ನೆಗಟ್ಟಿ ಕೋ–

---

೬ 'ಜಾಕಾಯ್ಯೆರ್ಗಮ್' ಎಂದು ಇರಬಹುದು; ಆಗಲೂ ಛಂದಸ್ಸು ಕೆಡುವುದಿಲ್ಲ.

೭ 'ಯಾ' ಇವನ್ನು ಸ್ವೀಕರಿಸಿದರೆ ಛಂದಸ್ಸು ಕೆಡುತ್ತದೆ.

೮ ಈ ಕಂದ, ಛಂದಸ್ಸಿಗೆ ಸರಿಹೊಂದುತ್ತಿಲ್ಲ; ಮಧ್ಯದಲ್ಲಿ ಅಕ್ಷರಸ್ಖಾಲಿತ್ಯವೊದಗಿದೆ.

೯ ಈ ಶಾಸನದಲ್ಲಿ 'ಳ' 'ದ' ಇವು ವಿಶೇಷ ಸದೃಶರೂಪವನ್ನು ಹೊಂದಿರುವುದರಿಂದ ಓದುವಲ್ಲಿ ಓದುಗ ಎಡವಲು ಸಾಧ್ಯತೆ ಇದೆ. ಕಾರಣ ಶಾಸ್ತ್ರಿಗಳು ತಪ್ಪಿದ್ದಾರೆಂದು ನನಗೆ ತೋರುತ್ತದೆ.

೧೦ 'ಚಾ' 'ವಾ' ಗಳೂ ಸದೃಶರೂಪದಿಂದ ವ್ಯವಹರಿಸಲ್ಪಡುತ್ತಿದ್ದವು– ಎಂಬುದನ್ನೂ ಇಲ್ಲಿ ಗಮನದಲ್ಲಿ ತಂದುಕೊಳ್ಳಬೇಕು. 'ದೆ' ಇದೆ. ಕಲ್ಲಿನ ಚಕಳಿ ಕಿಂಚಿತ್ ಸಿಡಿದಿದೆ. 'ಲೈ' ಕ್ಕೆ ಹತ್ತಿರವಾಗಿ ಕಾಣುತ್ತದೆ. ಈ ಕಂದದಲ್ಲಿ ಪ್ರಾಸ ಇಲ್ಲ.

೧೧ ಪುನರುಕ್ತಿದೋಷ.

೨೪ ಲ್ಪೋಗದ ಮಣ್ಡಲಂಗಳನೆ ಕೊಂ[೧೨]–
೨೫ ಣ್ಡು ಜಗತ್ರಿತಯುಂಗಳೊಳ್ ಜ–
೨೬ ಶಕ್ಕಾಗ[ರ*]ಮಾದ ಬದ್ಗೆಗನಿನಾ ನ–
೨೭ ರಸಿಂಘನಿನತ್ತ ನಾಲ್ವರಿಂ ಮೇ–
೨೮ ಗೆ ಪೊದಳ್ದ ಚಾಗದೊಳವೊನ್ದಿ
೨೯ ಬೀರದೊಳಂ ಗುಣಾರ್ಣ್ನವಂ [೫*]
೩೦ ಸ್ವಸ್ತಿ ಸಮಧಿಗತ ಪಞ್ಚಮ–
೩೧ ಹಾಶಬ್ದ ಮಹಾ[ಸಾ]ಮನ್ತಾಧಿ–
೩೨ ಪತಿ ಸಮಸ್ತಭುವನ ಸಂಸ್ತೂ–
೩೩ ಯಮಾನ ಚಾಳುಕ್ಯ ವಂಶೋದ್ಭ–
೩೪ ವಂ ಪಾಂಬರಾಂಕುಶನಮ್ಮನಗ–
೩೫ ನ್ಧವಾರಣಂ ಗನ್ದೇಭ ವಿದ್ಯಾಧ–
೩೬ ರನುದಾತ್ತನಾರಾಯಣಂ ಪ್ರತ್ಯ–
೩೭ ಕ್ಷ ವಾದ್ಧ[ಬಿ]ಯಾರೂಢ ಸರ್ವ್ವ–
೩೮ ಜ್ಞ ಗು[ಣ]ನಿಧಿ ಗು[ಣಾ]ರ್ಣ್ನವ ಪ್ರಿ–
೩೯ ಯಗಳ್ಳಂ ತ್ರಿಭುವನಮಲ್ಲಂ
೪೦ ಸಾಮನ್ತಚೂಡಾಮಣಿ ನೋ[ಡು]–
೪೧ ತ್ತೆ ಗೆಲ್ವಂ ಶ್ರೀಮದರಿಕೇಸ–
೪೨ ರಿಯು[ರ]ಸರಯ್ಯಂಗೋಟೆಯು[ನೆ]–
೪೩ ತ್ತಿಸಿ ಇಪ್ಪ[ತ್ತಿರ್ಛಾ . .]–
೪೪ ಮುಂ ದುಷ್ಟನಿಗ್ರಹ ವಿ .–
೪೫ ಷ್ಟ ಪ್ರತಿಪಾಲನದಿಂ ರಾಜ್ಯ . .

ಮೂರನೆಯ ಮುಖ

೪೬ [ಸ] ಕ ವರ್ಷ ೮೬೯ ನೆ–
೪೭ ಯ ಪರಾಭವ ಸಂ–
೪೮ ವತ್ಸರದ ಕಾರ್ತಿಕ [ಬ]–
೪೯ ಹು[ಳ] ಏಕಾದಸಿ ಸೋಮ–
೫೦ ವಾರದನ್ದು ಶ್ರೀಮದರಿಕೇಸ–

---

೧೨ 'ಎವಿ', 'ಒಓ' ಇತ್ಯಾದಿ ಕನ್ನಡ ಸವರ್ಣಗಳ ಬಗೆಗೆ ನೋಡಿ : ಕ. ಸಾ. ಪ. ಪ; ಸಂ. ೫೭, ಸಂ. ೨ 'ಕನ್ನಡ ವರ್ಣಗಳು: ಒಂದು ವಿವೇಚನೆ' ಪು. ೧–೧೫.

೫೧ ರಿಯರಸಪ್ಪೊ[ರ್]ೞದನ ದಣ್ಡ[ನ*] ಗೋ–
೫೨ ವಿ[ಣ]ತ್ತುವಳ್ಳಿೞ ತಡಿಯ ಬೀ–
೫೩ ಡಿನೊಳ್ [ಕೌವ]ಶಿಕ ಗೋತ್ರ ನಾ–
೫೪ ತುಂಲಪಾಟುಬೋವಂ ವಿಷ್ಣುಭ–
೫೫ ಟ್ಟರ ಮಗಂ ಅಪ್ಪಣಯ್ಯ[ಂ*] ಅ–
೫೬ ಪ್ಪಣಯ್ಯನ ಮಗಂ ಧಾರಪ–
೫೭ ಯ್ಯಂಗೆ ತುಪ್ಪಿದಾನಂ ಅರಿಪ–
೫೮ [ನ]ಪಳ್ಳಿಯ ಬಡಗಣದೆಸೆಯ
೫೯ ಗಾಮುಣ್ಡ[ನೆಯ್ದಾ]ಳಂಗೆ[ಡೆ*] [ನೆ]ಳನಾ–
೬೦ ರೆಯುಲಯ್ವತ್ತು ಮತ್ತರ್ನ್ನೆಲನನ–
೬೧ ರಿಕೇಸರಿಯರಸದ್ದರ್ಯೆಗೆಯ್ದ–
೬೨ ರುದಕ್ಕೆ **[ಪ]ನ್ನಾ**[೧೩]**ಯಂ** ಮುದ್ದರಣ ಗಾ–
೬೩ ಮುಣ್ಡಗೆ ಇಮತ್ತರ್ನ್ನೆಲಕ್ಕೆ ನೀ–
೬೪ ರುಮಂ **ಕುಡುವರು** [ಈ] ಸ್ಥಿತಿ–
೬೫ ಯಂ ತಪ್ಪದಂತು ನಗರೂರ
೬೬ ಅಯ್ಯಪಗಾಮುಣ್ಡನುಂ ರಾವು–
೬೭ **ಲೂರಾ[ದ]ನ್ತೆಯನುಂ ಮೂ[ಲ್ತ]**–
೬೮ ಗೂರ ಬೋ[೧೪]ಮಯುಗಾಮು[ಣ್ಡ]–
೬೯ [ನಾ] ಮೂವುರಲಾದ ಮಹಾಜ–
೭೦ [ನ] ದಿಣ್ಡಮಯ್ಯನುಂ ಕನ್ದರ್ಪಯ–
೭೧ **ನುಂ**[೧೫]............

ನಾಲ್ಕನೆಯ ಮುಖ

೭೨ [ಅ]ಟೂರ ಮಹಾಜನಂ ಕಸಲು–
೭೩ [ನ]ಯ್ಯನುಂ ಅಪ್ಪಣನು[ಂ*] ಚ**[ಟ್ಟ]**–
೭೪ ಯ ರಾಜನುಂ ನಾ[ಜಿ] ರಾಜನು[ಂ]

---

೧೩ 'ಯ' ದ ಬಿಂದುಭಾಗವನ್ನು 'ನಾ'ಕ್ಕೆ ಸೇರಿಸಿ 'ಸಿದ್ಧಾಯಂ' ಎಂದು ಓದಿದ್ದಾರೆ ?

೧೪ ೭–೮ ನೆಯ ಶತಮಾನದ 'ಬೊ' ಅಕ್ಷರವನ್ನು ಬರೆದಿದೆ– ಈ ಶಾಸನದಲ್ಲಿ ಎರಡು ಬಗೆಯ 'ಬ' ರೂಪ ಇದೆ.

೧೫ ೭೦ ನೆಯ ಪಂಕ್ತಿಯಾದ ಮೇಲೆ ಒಂದು 'ನುಂ' ಅಕ್ಷರವಿದೆ ಇದನ್ನು ಗಮನಿಸಿಲ್ಲ. ಅೞಿಸಿದ ಅಕ್ಷರಗಳ ಜೊತೆಗೆ ಇದನ್ನೂ ಕೈಬಿಡಲಾಗಿದೆ. ೯೭ ನೆಯ ಪಂಕ್ತಿಯೂ ಅೞಿಸಿ ಮಸಕಾಗಿದೆ.

೭೫ ರೇಕುಱಿಕಿಯ ಮಲ್ಲಪರಾಜ ನು[ಂ]
೭೬ ಸಾಕ್ಷಿಯಾಗೆ ಗಾಮುಣ್ಡ ಚಟ್ಟ–
೭೭ ಯ್ಯನುಂ ತಮ್ಮಂ ಮಕಯ್ಯನುಂ
೭೮ ಮುನ್ದಿಟ್ದಿಕ್ಕಿಸಿದ ಕಮ್ಭ ॥ ಚನು–
೭೯ ಲೂರ ಗಾವುಣ್ಡಂ ಚಿಂಗಪುಲಿಗೆ
೮೦ ಒನ್ದು ಮತ್ತರು ವೀಱುನುಡಿಯು–
೮೧ ಮಾ[ಯು]ರ ಭೋಗಪತಿ ಗೋವಣ್ಣ–
೮೨ ಯಂಗಮೆರಡುಪಲದೊಳಿಂ ಕೆ–
೮೩ ಱಿಯ ಮುನ್ದ[ಣ್ಣೆ] ಗುಡುವ ನೆಲ್ಲು
೮೪ ಖಣ್ಡುಗ ಪನ್ನೆರಡು [ಈ] ಸ್ಥಿತಿಯಾ–
೮೫ [ಗ್ಗಂ]ರ್[೧೬]ತಪ್ಪ ಸಲ್ಲ ಕುಳವತ್ತಳೆ–
೮೬ ಗೆಯ ಪೆಗೊ[ರ್]ಟೆ ಜುದ್ದಯ್ಯನ ಸಂ–
೮೭ ಧಿಷ್ಟಿತಂ ಸೇನಬೋಜಿಯನ
೮೮ ಪಡಿಯತ್ತಂ ಶ್ರೀಮ್ಮಮ್ಮಂ ಬರೆ–
೮೯ ದೊ ॥ ಸ್ವದತ್ತಂ ಪರದತ್ತಂ ವಾ
೯೦ ಯೋ ಹರೇತಿ ವಸುನ್ಧರಿ ಷ–
೯೧ ಷ್ಟಿವರಿಷ ಸಹಶ್ರಾಣಿ ವಿ–
೯೨ ಷ್ಟಾಯಾಂ ಜಾಯಂತೇ ಕ್ರಿಮಿ ॥ ಇ–
೯೩ ದಂ ತಪ್ಪ(ಪ್ಪಿ ?)ದವ ಪ್ರಯಾಗೆಯು[ಂ*]
೯೪ ಬಾರಣಾಸಿಯುಮಳಿದ ಪ–
೯೫ ಪಮ[ಕು]ಮರಸರಜೇಯಂ–
೯೬ ಮಿಕ್ಕೆ ॥
೯೭ [ಮಾ]ಕ[ಯ]....[೧೫]

II

೧. ಶಾಸನ ಲಭಿಸಿದ ಸ್ಥಳ ಯಾವುದೆಂದು ಗುರುತಿಸಲು ಸಧ್ಯಕ್ಕೆ ಸಾಧ್ಯವಿಲ್ಲ; ಏಕೆಂದರೆ ಅದು ಕರೀಮ್‌ನಗರ ವಸ್ತುಸಂಗ್ರಹಾಲಯದಲ್ಲಿದೆ. ಆದರೆ ಅದು ಇಂದು ಗುರುತಿಸಲು ಸಾಧ್ಯವಿಲ್ಲದ 'ಅರಿಪನಪಳ್ಳಿ' ಯಲ್ಲಿದ್ದಿತೆಂದು ಧೈರ್ಯವಾಗಿ ಹೇಳಬಹುದು. ಧಾರಪಯ್ಯನು 'ತುಷ್ಟಿದಾನ' ಪಡೆದ ದತ್ತಿಭೂಮಿ, ಆ ಊರ ಉತ್ತರ

೧೬ 'ಗ್ಗರ್' ಬರೆದು 'ಗ್ಗಂರ್' ಎಂದು ತಿದ್ದಿದೆ. ಅನಂತರದಲ್ಲಿ 'ಎ'ತ್ವದ ಚಿಹ್ನೆ ಇನ್ನೂ ಮಸಕಾಗಿದೆ. ಅಳಿಸಲು ಪ್ರಯತ್ನಪಟ್ಟಂತೆ ತೋರುತ್ತದೆ.

ದಿಕ್ಕಿನಲ್ಲಿದ್ದಿತೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.೧೬ 'ನೂತುಲಪಾಟು' ದತ್ತಿ ಭೂಮಿಯನ್ನುಳ್ಳ ಗ್ರಾಮವಲ್ಲ. ಅದು ದತ್ತಿಪಡೆದ ವ್ಯಕ್ತಿಯ ಅಯ್ಯನ ಊರು. ಆ ಗ್ರಾಮದಿಂದ ಶಾಸನವನ್ನು ಕರೀಮ್‌ನಗರದ ವಸ್ತುಸಂಗ್ರಹಾಲಯಕ್ಕೆ ತರಲಾಯಿತೆಂದು ಹೇಳಲು ಬರುವುದಿಲ್ಲ. ಮೇಲಾಗಿ 'ನೂತುಲಪಾಟು' ಕರೀಮ್‌ನಗರದ ಹತ್ತಿರದ ಗ್ರಾಮವೂ ಅಲ್ಲ. ಸ್ಥಳಗಳ ವಿವರಣೆಯಲ್ಲಿ 'ನೂತುಲಪಾಟು' ಗ್ರಾಮವನ್ನು ವಿವರಿಸಲಾಗುವುದು.

೨. ಈ ಶಾಸನವನ್ನು ಶಕ ವರ್ಷ ೮೭೮ ನೆಯ ಪರಾಭವ ಸಂವತ್ಸರದ ಕಾರ್ತಿಕ ಬಹುಳ ಏಕಾದಶಿ ಸೋಮವಾರದಂದು ಬರೆಯಲಾಗಿದೆ. ಅದು ಸ್ವಾಮಿ ಕಣ್ಣು ಪಿಳ್ಳೆಯವರ 'ಇಂಡಿಯನ್ ಇಫಿಮರಿಸ್' ಪ್ರಕಾರ ಕ್ರಿ. ಶ. ೯೪೬ಕ್ಕೆ ಸರಿಹೋಗುತ್ತದೆ. ಆದರೂ ಮಿಕ್ಕ ವಿಷಯಗಳು ಸರಿಹೊಂದುವುದಿಲ್ಲ. ಈ ಪ್ರದೇಶದ ಕೆಲವು ಶಾಸನಗಳು ಹಾಗೂ ಪಂಪನ ಕೃತಿ 'ಆದಿಪುರಾಣ' ಇವುಗಳಲ್ಲಿನ ಮಿತಿ ನಿರ್ದೇಶನಗಳು ಈ ಗ್ರಂಥದ ಲೆಕ್ಕಕ್ಕೆ ಸರಿಹೊಂದುವುದಿಲ್ಲ. ಸುಮಾರು ಒಂದು ವರ್ಷದ ಅಂತರ ಇವುಗಳಲ್ಲಿ ಕಂಡು ಬರುತ್ತದೆ.೧೮

೩. ಈ ಶಾಸನವನ್ನು ಶ್ರೀಮಮ್ಮನು ಬರೆದಿದ್ದಾನೆ; ಚ[ಟ್ಟ]ಯ್ಯ ಹಾಗೂ ಆತನ ತಮ್ಮ ಮಾಕಯ್ಯ ಕೆತ್ತಿಸಿ ನಿಲ್ಲಿಸಿದರು; ಇದೊಂದು ಸ್ತಂಭಶಾಸನ; ಇದರ ನಾಲ್ಕು ಮುಖಗಳಲ್ಲಿಯೂ ಬರೆಯಲಾಗಿದೆ. ಶಾಸನವು 'ಸ್ವಸ್ತಿ' ಎಂಬ ಶುಭ ಶಬ್ದದಿಂದ ಆರಂಭವಾಗಿ ರಾಜವಂಶವನ್ನು ವರ್ಣಿಸುವಲ್ಲಿ ಪಂಪ ಕವಿಯ 'ವಿಕ್ರಮಾರ್ಜುನ ವಿಜಯ' ಗ್ರಂಥದಿಂದ ಐದು ಪದ್ಯಗಳನ್ನು (I–೧೫, ೩೧, ೪೧, ೪೨ ಮತ್ತು ೫೦) ಒಳಗೊಂಡಿದೆ. ಶಾಸನಕರ್ತೃ ಆ ಗ್ರಂಥವನ್ನು ನೋಡಿರಬಹುದು. ಈ ಕಾರಣಕ್ಕಾಗಿ ಈ ಶಾಸನಕ್ಕೆ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ವಿಶೇಷ ಸ್ಥಾನ. ಇದರಿಂದ ಕವಿ ಹಾಗೂ ಕವಿಕೃತಿಯ ಬಗೆಗೆ ಹೊಸ ಆಯಾಮ ದೊರಕಿದೆ; ವಿದ್ವಾಂಸರಲ್ಲಿನ ಭಿನ್ನಾಭಿಪ್ರಾಯೊಂದು ಮಾಯವಾಗಲು ಅನುಕೂಲವಾಗಿದೆ. 'ವಿಕ್ರಮಾರ್ಜುನ ವಿಜಯ' ಗ್ರಂಥ, ಕ್ರಿ. ಶ. ೯೪೬ ರಷ್ಟೊತ್ತಿಗೆ ಸಾಕಷ್ಟು ಪ್ರಸಿದ್ಧಿಯನ್ನು ಅದು ನಿರ್ಮಾಣಗೊಂಡ ನಾಡಿನಲ್ಲಿ ಪಡೆದ್ದಿತು ಎಂಬುದು ಈ ಶಾಸನದಿಂದ ಸ್ಪಷ್ಟ. ಆದುದರಿಂದ

ಬೆಳಗುವೆನಿಲ್ಲಿ ಲೌಕಿಕಮನನಲ್ಲಿ ಜಿನಾಗಮಂ ಸಮಸ್ತ ಭೂ ।
ತಳಕೆ ಸಮಸ್ತಭಾರತಮುಮಾದಿಪುರಾಣಮುಮೆಂದು ಮೆಯ್ಯುಸಂ ।
ಗೊಳುತಿರೆ ಪೂಣ್ದು ಪೂಣ್ದ ತೆಜ[ದೊಂ]ದಱುದಿಂಗಳೊಳೊಂದು ಮೂಱು ತಿಂ
ಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ ॥೧೯

---

೧೬ ಶಾಸನ ಪಂಕ್ತಿ : ೫೬–೫೯


೧೮ ಈ ವಿಷಯದ ಚರ್ಚೆ ಬೇರೊಂದು ಲೇಖನದ ವಿಷಯ.

೧೯ 'ವಿಕ್ರಮಾರ್ಜುನ ವಿಜಯ' (ಕ. ಸಾ. ಪ. ಮುದ್ರಣ) ಆ. ೧೪–೬೦. ಪು. ೪೧೭



ಪಂಪಭಾರತದ ಪದ್ಯಗಳನ್ನೊಳಗೊಂಡ ಕರೀಮ್‌ನಗರ ಮ್ಯುಜಿಯಂ ಶಾಸನ

(ಪೂರ್ವಾರ್ಧ)



ಪಂಪಭಾರತದ ಪದ್ಯಗಳನ್ನೊಳಗೊಂಡ ಕರೀಮ್‌ನಗರ ಮ್ಯುಜಿಯಂ ಶಾಸನ

(ಉತ್ತರಾರ್ಧ)

—ಎಂದು ಕವಿ ನುಡಿದಂತೆ ಒಂದೇ ವರ್ಷದಲ್ಲಿ ಆ ಎರಡೂ ಕೃತಿಗಳೂ ರಚಿತವಾಗಿರಬೇಕು. ಕಾರಣ ತೀ.ನಂ.ಶ್ರೀ. ಅವರ ಹೇಳಿಕೆ "ಈ ಎರಡು ಗ್ರಂಥಗಳ ಶೈಲಿಯನ್ನು ಹೋಲಿಸಿದರೆ ಎರಡಕ್ಕೂ ನಡುವೆ ತಕ್ಕಮಟ್ಟಿನ ಕಾಲ ಕಳೆದಿರಬೇಕೆಂದು ಚೆನ್ನಾಗಿ ಗೊತ್ತಾಗುತ್ತದೆ"[೨೦] ಎಂಬುದು ಸಂಪೂರ್ಣ ಬಿದ್ದುಹೋಗುತ್ತದೆ.

ಶಾಸನದಲ್ಲಿನ ಪದ್ಯಗಳಿಗೂ ಗ್ರಂಥದಲ್ಲಿನ ಅವೇ ಪದ್ಯಗಳಿಗೂ ಪಾಠಭೇದಗಳು ಅಷ್ಟು ಸಮೀಪ ಕಾಲದಲ್ಲೇ ಉಂಟಾದುದಕ್ಕೆ, ಹಾಗೆಯೇ ಕೆಲವು ಸ್ಖಾಲಿತ್ಯಗಳೂ ಉಂಟಾಗುವುದಕ್ಕೆ ಕಾರಣ ವಿಶೇಷ ಅಭ್ಯಾಸವನ್ನು ಮಾಡದ ಶಾಸನವನ್ನಿಟ್ಟಿಕ್ಕಿಸಿದ ಸೋದರರೆಂದು ತೋರುತ್ತದೆ. ಅರ್ಥಾತ್ ಮೂಲತಃ ಈ ಶಾಸನವನ್ನು ರಾಜನು ತಾಮ್ರಪಟ್ಟಿಕೆಯಲ್ಲಿ ಹಾಕಿಸಿಕೊಟ್ಟಿರಬೇಕು. ಈ ಸಂದರ್ಭದಲ್ಲಿ "ಕುಳವತ್ತುಳಗೆಯ ಪೆಗ್ಗೋರ್ಟೆಜುದ್ದಯ್ಯನ ಸಂಧಿಪ್ಪಿತ; ಸೇನ ಬೋಜಯನ ಪಡಿಯತ್ತಂ" ಎಂಬ ವಾಕ್ಯಗಳನ್ನೂ ಗಮನಕ್ಕೆ ತಂದುಕೊಳ್ಳಬೇಕು. 'ಬೋದನದ ದಂಡಿನ ಗೋವಿನ ತುರುಪಟ್ಟಿ ಅಳ್ಳೇರು ತಡಿಯ ಬೀಡಿನಲ್ಲಿದ್ದ ಧಾರಪಯ್ಯನಿಗೆ ಮನೆಯಲ್ಲಿಡಲು ಈ ಶಿಲಾಶಾಸನ ಭದ್ರವಾದ ದಾಖಲೆ ಆಗಲು ಸಾಧ್ಯವಿದ್ದಿಲ್ಲ'.[೨೧] ಮೇಲಾಗಿ ರಾಜನೇ ಈ ಶಿಲಾಶಾಸನವನ್ನು ಹಾಕಿಸಿಕೊಟ್ಟಿದ್ದರೆ, ಚಟ್ಟಯ್ಯಗಾಮುಂಡನೂ ಹಾಗೂ ಆತನ ತಮ್ಮ ಮಾಕಯ್ಯನೂ 'ಇಟ್ಟಿಕ್ಕಿಸುವ' ಸಂದರ್ಭವೇ ಉಂಟಾಗುತ್ತಿದ್ದಿಲ್ಲ ಎಂಬುದೂ ಗಮನಿಸಬೇಕಾದ ಸಂಗತಿ. ಅತಏವ ನಿರ್ಧಾರವಾಗುವ ಸಂಗತಿಯೆಂದರೆ ಶಾಸನದಲ್ಲಿನ ಸ್ಖಾಲಿತ್ಯಗಳು ಶಾಸನವನ್ನು ಕಲ್ಕಂಬದಲ್ಲಿ ಕೆತ್ತುವ ಕಾಲಕ್ಕೆ ಪ್ರಾಯಃ ಉಂಟಾಗಿವೆ. ತಪ್ಪುಗಳೇನೇ ಇರಲಿ ಅವರಿಗೆ ಪಂಪ ಕವಿ ಹಾಗೂ ಆತನ ಅಭ್ಯಾಸಿಗಳು ಋಣಿ.

೪. ಈ ಶಾಸನದಲ್ಲಿ ಇಮ್ಮಡಿ ಅರಿಕೇಸರಿಯು ಬೋದನದಲ್ಲಿದ್ದು ರಾಜ್ಯವಾಳುತ್ತಿದ್ದನೆನ್ನುವುದಕ್ಕೆ ಸಾಕಷ್ಟು ಸಾಕ್ಷಿ ಇದೆ. ಈ ಆಧಾರವನ್ನು ಶ್ರೀ ಶಾಸ್ತ್ರಿಗಳು ಗಮನಿಸಿಲ್ಲ. ಆತನ ರಾಜಧಾನಿಯ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು 'ಬೋದನ' ಎಂದರೆ, ಕೆಲವರು 'ವೇಮುಲವಾಡ' ಎಂದು ಇಂದಿಗೂ ಭಾವಿಸಿದ್ದಾರೆ.[೨೨] ನಮಗೆ "ಶ್ರೀಮದರಿಕೇಸರಿಯಾರ ಸರಯ್ಯಂಗೋಟೆಯ[೨೩]ನೆತ್ತಿಸಿ

೨೦ ತೀ. ನಂ. ಶ್ರೀಕಂಠಯ್ಯ, ಪಂಪ (ಮೈ. ವಿ. ವಿ. ಪ್ರ. ಪುಸ್ತಕಮಾಲೆ-೧೦) (ಆರನೆಯ ಮುದ್ರಣ ೧೯೭೦) ಪು. ೧೧

೨೧ ಬೋದನದ ಪಕ್ಕದಲ್ಲಿದ್ದ ಅಳ್ಳೇರಿಗೂ ದತ್ತಿಪಡೆದ ಭೂಮಿಪ್ರಳ್ಳ ಕರೀಮ್‌ನಗರ ಜಿಲ್ಲೆಯಲ್ಲಿನ ಅರಿಪನಪಳ್ಳಿಗೂ ಸುಮಾರು ೪೦ ಮೈಲು ಅಂತರವಿದ್ದಿತೆಂಬುದನ್ನೂ ಇಲ್ಲಿ ಸ್ಮರಣೆಗೆ ತಂದುಕೊಳ್ಳಬೇಕು.

೨೨ P. V. Parabrahma Shastry, Inscriptions from Andhra Pradesh : Karimnagar, Introduction, p. 1

೨೩ 'ಅಯ್ಯಂಗೋಡೆ' ಎಂದು ತಪ್ಪು ಓದಿದ್ದಾರೆ. ಶಾಸ್ತ್ರಿಗಳ ಎರಡು ಬರೆಹಗಳನ್ನು ನೋಡಿ : (ಮೇಲಿನ ಅ. ಟಿ. ೧ ಹಾಗೂ ೨).

ಇಪ್ಪರ್ತ್ತಿ[ರ್ಚ್ಛಾ]ಸಿರಮು ದುಷ್ಟನಿಗ್ರಹ ವಿ[ಶಿ]ಷ್ಟ ಪ್ರತಿಪಾಲನದಿಂ ರಾಜ್ಯ[ಂಗೆಯುತ್ತಿರೆ]" ಎಂಬುದು ಆತನ ರಾಜಧಾನಿಯನ್ನು ಖಚಿತವಾಗಿ ತಿಳಿಸಿಕೊಡುತ್ತದೆ. ಇಲ್ಲಿನ ಅಯ್ಯಂಗೋಟೆ' ಬಹು ಮುಖ್ಯ ಪದ; ಅದರ ಅರ್ಥ 'ತಾತನಕೋಟೆ i.e. Grand-father's fort'. ಇಮ್ಮಡಿ ಅರಿಕೇಸರಿಗೆ ವಂಶಪಾರಂಪರ್ಯದಿಂದ ಬಂದ ರಾಜಧಾನಿ ಎಂದರೆ 'ಬೋದನ'.[೨೪] ಇಮ್ಮಡಿ ಅರಿಕೇಸರಿಯ ರಾಜಧಾನಿ 'ಬೋದನ' ಎಂದು ನಾನು ಈಗಾಗಲೇ ನಿರೂಪಿಸಿದ್ದೇನೆ.[೨೫] ಆ ಮಾತಿಗೆ ಇದು ಇನ್ನೊಂದು ಸಾಕ್ಷಿ. ಈ ಶಾಸನದ ಪ್ರಕಾರ ಅರಿಕೇಸರಿಯು ಅಯ್ಯಂಗೋಟೆ ಎಂದರೆ ಆತನ ಬೋದನದ ಕೋಟೆಯಿಂದ ರಾಜ್ಯವಾಳುತ್ತಿರುವಾಗ, ಆ 'ಬೋದನ'ದ ದಂಡಿನ ಗೋಪಿನ ತುರುಪಟ್ಟಿಯಾದ 'ಅಳ್ಳೇರು ತಡಿಯ ಬೀಡಿ' ನಲ್ಲಿ ವಾಸಿಸುತ್ತಿದ್ದ ಧಾರಪಯ್ಯನಿಗೆ ತುಷ್ಟಿದಾನಗೊಟ್ಟನು.[೨೬] 'ಅಯ್ಯ = ತಾತ' ಎಂಬ ವಿಷಯಕ್ಕೆ 'ಅಯ್ಯ' 'ಅಯ್ಯನ ಗಂಧವಾರಣ' 'ಅಯ್ಯನ ಸಿಂಹ' ಎಂಬ ಶಬ್ದಗಳಿಗೆ ಇರುವ ಅರ್ಥವನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು.[೨೭] 'ಪೊದನ' ಇದನ್ನು 'ಚ್ಛಾದನ' ಎಂದು ಶಾಸ್ತ್ರಿಗಳು ತಪ್ಪು ಓದಿದ್ದಾರೆ. ಈ ಅರಿಕೇಸರಿ ವೇಮುಲವಾಡದಿಂದ ಆಳಿದನೆನ್ನುವುದಕ್ಕೆ ಎಲ್ಲಿಯೂ ಆಧಾರವೇ ಇಲ್ಲ. ಸಾಹಿತ್ಯವನ್ನು ಅಲ್ಲಗಳೆವ ಇತಿಹಾಸಜ್ಞರು– ಶಾಸನತಜ್ಞರು ಪಂಪನ ಕೃತಿಯನ್ನು ಆಧರಿಸಿ ನಾನು ಬರೆದ ಕ. ಸಾ. ಪ. ಪತ್ರಿಕೆ(೫೬–೧)ಯಲ್ಲಿನ ಲೇಖನ ಕಡೆಗಣಿಸಿ ಇಂದಿಗೂ ವೇಮುಲವಾಡವೇ ಎರಡನೆಯ ಅರಿಕೇಸರಿಯ ರಾಜಧಾನಿ ಎಂದು ಬರೆಯುತ್ತಿದ್ದಾರೆ! ಕ್ರಿ. ಶ. ೯೪೬ ಕ್ಕೂ ಮುಂಚಿತವೇ ರಚಿತವಾದ ಪಂಪನ ಕೃತಿ 'ವಿಕ್ರಮಾರ್ಜುನ ವಿಜಯಂ', ಕವಿಯಿಂದ ರಾಜನಿಗೆ ಬೋದನ ರಾಜಧಾನಿಯಲ್ಲೇ ಸಮರ್ಪಿತವಾಯಿತು ಎಂಬುದು ಈಗ ಖಚಿತವಾಗುತ್ತದೆ. ಆ ಅರಿಕೇಸರಿಯಿಂದ ಸನ್ಮಾನಿತನಾದ ಪಂಪಕವಿ ಬೋದನದಲ್ಲೇ ಇದ್ದನೆಂಬುದು ಸ್ಫಟಿಕಶಲಾಕೆಯಷ್ಟು ಸ್ಪಷ್ಟವಾಗುತ್ತದೆ. ಅಂತೆಯೇ ಪಂಪನ ಬಗೆಗೆ ವೇಮುಲವಾಡದಲ್ಲಿ ಇದ್ದನೆಂಬ ಅಸತ್ಯವನ್ನು ಇನ್ನುಮೇಲಾದರೂ ಬರೆಯುವುದನ್ನು ಬಿಡಬೇಕು. ಕರ್ನಾಟಕ ಸರ್ಕಾರ ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಅನೇಕ ಪಠ್ಯಪುಸ್ತಕಗಳಲ್ಲಿನ ಈ ವಿಷಯವನ್ನು ತಿದ್ದಬೇಕೆಂದು ಬಿನ್ನಹ ಉದಾಹರಣೆಗೆ ೭ ನೆಯ ತರಗತಿಯ ಪಠ್ಯಪುಸ್ತಕದಲ್ಲಿನ

---

೨೪ ಅ) ಇಮ್ಮಡಿ ಅರಿಕೇಸರಿಯ ವೇಮುಲವಾಡದ ಶಾಸನ.

ಬ) ವಿಕ್ರಮಾರ್ಜುನ ವಿಜಯ, ಆ. ೧–೧೭.

ಕ) ೩ನೆಯ ಅರಿಕೇಸರಿಯ ಪರಭಣಿತಾಮ್ರಶಾಸನ, ನಾಥುರಾಮ್ ಪ್ರೇಮಿ, ಜೈನ ಸಾಹಿತ್ಯ ಔರ್ ಇತಿಹಾಸ ಪು. ೧೯೩–೯೫.

೨೫ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. ೫೬– ಸಂ. ೧, ಪು. ೧.

೨೬ ಶಾಸನ ಪಂಕ್ತಿಗಳು : ೪೧–೬೨.

೨೭ ಅ) Dr. D. C. Sircar, Indian Epigraphical Glossary, p.42

ಬ) Kittel's Kannada-English Dictionary (Revised) Vol I, p. 96

'ನಾದೋಜ ಪಂಪ' ಎಂಬ ಪಾಠವನ್ನು ಇಲ್ಲಿ ಉಲ್ಲೇಖಿಸಬಹುದು.[೨೮] ನಮ್ಮ ಮಕ್ಕಳಿಗೆ ನಾವು ಸತ್ಯವನ್ನು ಹೇಳಿಕೊಡಬೇಕಷ್ಟೆ ? ಪಂಪನು ಬೋದನವನ್ನೂ ಬನವಾಸಿಯಷ್ಟೇ ಸುಂದರವಾಗಿ ವರ್ಣಿಸಿರುವುದನ್ನು ಎಷ್ಟು ಜನರು ಬಲ್ಲರು?– ಇರಲಿ.

೫. ಈ ಕರೀಮ್‌ನಗರ ಶಾಸನದಲ್ಲಿ ಬಂದ ಊರುಗಳನ್ನು ಅರಿಕೇಸರಿಯ ರಾಜಧಾನಿ ಬೋದನದ ಸುತ್ತಮುತ್ತಣ ಊರುಗಳು ಮತ್ತು ಸಧ್ಯ ಶಾಸನವಿರುವ ಕರೀಮ್‌ನಗರ ಅಥವಾ ದತ್ತಿ ಕೊಟ್ಟ ಭೂಮಿಯನ್ನು ಹೊಂದಿದ 'ಅರಿಪನಪಳ್ಳಿ' ಗ್ರಾಮದ ಸುತ್ತಮುತ್ತಣ ಊರುಗಳೆಂದು ಎರಡು ಭಾಗವಾಗಿ ವಿಭಜಿಸಿ ವಿವರಿಸಬಹುದು.

ಅ ಬೋದನದ ಸುತ್ತಮುತ್ತಣ ಊರುಗಳು :

(೧) **ಬೋದನ :** ಇದು ಈಗ ಆಂಧ್ರಪ್ರದೇಶದ ನಿಜಾಮ್‌ಬಾದ ಜಿಲ್ಲೆಯಲ್ಲಿ ಇದೇ ಹೆಸರಿನ ತಾಲೂಕು ಸ್ಥಳವೂ ಆಗಿದೆ. ಶಾಸನದಲ್ಲಿ ಇದನ್ನು ಬೋದನ, ಆಯ್ಯಂಗೋಟೆ ಹಾಗೂ ಪೆಗ್ಗೋಟೆ ಎಂದು ಮೂರುಸಲ ಪ್ರಸ್ತಾಪಿಸಿದೆ. ಇದು ಪಂಪಕವಿಗೆ ಆಶ್ರಯವನ್ನಿತ್ತ ಅರಿಕೇಸರಿಗೆ ಆತನ ವಂಶದ ಮೂಲಪುರುಷ ಯುದ್ಧಮಲ್ಲನಿಂದ ರಾಜಧಾನಿ ಆಗಿತ್ತು. ಬೋದನ ಬಹು ಪುರಾತನ ಸ್ಥಳ– ಈ ವಿವರ, ಈಗಾಗಲೆ ಹಲವರಿಂದ ವಿವರಿಸಲ್ಪಟ್ಟಿದೆ.[೨೯]

(೨) **ಅಳ್ಳೇಱು :** ಇದು ಬೋದನದಿಂದ ಸುಮಾರು ೧೨ ಮೈಲು ಅಂತರದಲ್ಲಿ ಮಾಂಜರಾನದಿಯ ದಡದಲ್ಲಿ ಇರುವ ಈಗಿನ ಹಳೊರ್ ಅಥವಾ ಹಲೊರ್. ಉರ್ದು ಭಾಷೆಯ ಪ್ರಭಾವದಿಂದ 'ಳ' 'ಲ' ಆಗಿದೆ. 'ಅ''ಹ' ಆಗಿದೆ. ಕನ್ನಡದಲ್ಲೂ 'ಅ > ಹ–ಹ > ಅ' ಆಗುತ್ತವೆ. ಮೈಸೂರುಪ್ರದೇಶದ 'ಅರಸಿಕೇರಿ' 'ಹರಸಿಕೇರಿ' ' ಹಾಸನ ' ' ಆಸನ ', ಎಂದು ಜನರ ಬಾಯಲ್ಲಿ ಉಚ್ಚಾರಗೊಳ್ಳುವುದನ್ನೂ ಹಾಸ್ಯಕ್ಕಾಗಿ ಹೇಳುವ ರೇಲ್ವೆ ಪೋರ್ಟರುಗಳ ವರ್ಗಾವರ್ಗಿ(Transfers) ಕತೆಯನ್ನು ಇಲ್ಲಿ ಜ್ಞಾಪಕಕ್ಕೆ ತಂದುಕೊಳ್ಳಬಹುದು. ಮಥಿತಾರ್ಥವಿಷ್ಟೇ : ಇಲ್ಲಿ ಈಗ ಕೆಲ ವರ್ಣಗಳು ಉಚ್ಚಾರದಲ್ಲಿ ಸ್ವಲ್ಪ ಮಾರ್ಪಾಟುಹೊಂದಿವೆ.

---

೨೮ ಕನ್ನಡ ಏಳನೆಯ ಪುಸ್ತಕ, ಪು. ೨೪–೨೮.

೨೯ ಅ) Early History of The Deccan (Ed. Yazdani) Vol. II, p. 507.

ಬ) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. ೫೭– ಸಂ. ೧, ಪು. ೧೩–೨೯.

ಕ) ಡಾ. ಎಂ. ಎಂ. ಕಲಬುರ್ಗಿ, ಪಂಪ : ಒಂದು ಅಧ್ಯಯನ, ಪು. ೨೦.

ಡ) P. V. Parabramha Shastry, Inscriptions of Andhra Pradesh : Karim nagar, Introduction, Chalukya's of L(V)emulvada.

(೩) **ನೂತುಲಪಾಟು :** ಇದು ಬೋದನದಿಂದ ಗೋದಾವರಿಯ ಸಂಗಮಕ್ಕೆ ಹೋಗುವ ಮಾರ್ಗದಲ್ಲಿ ಇರುವ ಈಗಣ 'ನವೀಪೇಟ್'. 'ನೂತುಲ ಪಾಟು' 'ನವೀಪೇಟ' ಎಂದು ಭಾಷಾಂತರಿತಗೊಂಡು ಇಂದಿಗೂ ಉಳಿದುಕೊಂಡು ಬಂದಿದೆ. ಆದುದರಿಂದ 'ನೂತುಲಪಾಳು' ಕರೀಮ್‌ನಗರಕ್ಕೆ ಸುಮಾರು ಎಂಬತ್ತು ಮೈಲು ಅಂತರದಲ್ಲಿದೆ; ಇಷ್ಟು ದೂರದಿಂದ ಕರೀಮ್‌ನಗರ ವಸ್ತುಸಂಗ್ರಹಾಲಯಕ್ಕೆ ಶಾಸನವನ್ನು ಒಯ್ದರು ಎಂದು ಹೇಳಲು ಬರುವುದಿಲ್ಲ. ನಮಗೆ ಹೀಗೆ ಹೇಳುವುದಕ್ಕೆ ಏನೂ ಆಧಾರವಿಲ್ಲ. ಅಂತೆಯೆ ಈಗಾಗಲೆ ನಿರೂಪಿಸಿದಂತೆ ಅದು ಅರಿಪನಹಳ್ಳಿಗೇ ಸಂಬಂಧಿಸಿದೆ. ಈ ನೂತುಲಪಾಳು 'ಅಳ್ಳೀಱು ತಡಿ'ಗೆ ಸುಮಾರು ೧೦ ಮೈಲು ಅಂತರದಲ್ಲಿದೆ.

(೪) **ರಾವುಲೂರು :** ಬೋದನದಿಂದ ಆಗ್ನೇಯಕ್ಕೆ ಸುಮಾರು ೧೫ ಮೈಲು ಅಂತರದಲ್ಲಿರುವ ಈಗಣ ರಾವ್ಲೂರ್ ಅಥವಾ ರಾವೂರ್.

(೫) **ಚೆನಲೂರು :** ಇದು ಈಗ ಆದಿಲಾಬಾದ ಜಿಲ್ಲೆಯಲ್ಲಿ ಗೋದಾವರಿಯ ದಡದಲ್ಲಿನ ಚೆನ್ನೂರು ಆಗಿರಬಹುದು; ಅರಿಕೇಸರಿಯ ರಾಜ್ಯಾಡಳಿತೆಯ ಕಾಲಕ್ಕೆ ಅದು ಪೋದಣ ನಾಡೊಳಗೆ ಇದ್ದಿತೆನ್ನುವುದಕ್ಕೆ ಅಲ್ಲೊಂದು ಅರಿಕೇಸರಿಯ ಕಾಲದ (ಶಾ. ಶ. ೮೬೨ ಶಾರ್ವರಿ = ೯೪೦ A. D.) ಆತನ ಸಾಮಂತನ ಶಾಸನವು ದೊರಕಿದೆ. ಅರಿಕೇಸರಿಯ ಸ್ತುತಿಯೂ ಅದರಲ್ಲಿದೆ.[೨೦]

ಬ ಕರೀಮ್‌ನಗರ ಅಥವಾ ದತ್ತಿಗ್ರಾಮವಾದ ಅರಿಪನಪಳ್ಳಿಯ ಸುತ್ತ ಮುತ್ತಣ ಊರುಗಳು :

(೧) **ಅರಿಪನಪಳ್ಳಿ :** ಕರೀಮ್‌ನಗರದ ಅಕ್ಕಪಕ್ಕದಲ್ಲಿ ಸಧ್ಯ ಗುರುತಿಸಲು ಸಾಧ್ಯವಿಲ್ಲದ ಊರು. ಪ್ರಕೃತಶಾಸನ, ಈಗ ವಸ್ತುಸಂಗ್ರಹಾಲಯದಲ್ಲಿರುವುದರಿಂದ ಬೇರೆ ಸಾಧನಗಳು ದೊರೆಯುವತನಕ ಖಚಿತವಾಗಿ ಹೇಳಲು ಬರುವುದಿಲ್ಲ.

(೨) **ನಗರೂರು :** ಇದು ಕರೀಮ್‌ನಗರದಿಂದ ಉತ್ತರಕ್ಕೆ ಸುಮಾರು ೧೫ ಮೈಲಿನ ಅಂತರದಲ್ಲಿರುವ ಈಗಿನ ನಗನೂರು.[೨೧] ಇಲ್ಲಿ ಹಲವು ಶಾಸನಗಳು ದೊರೆತಿದ್ದು, ಪ್ರಸಿದ್ಧವಾದ ಊರಾಗಿತ್ತೆಂದು ತಿಳಿದುಬರುತ್ತದೆ.

---

೨೦ (ಅ) P. V. parabrahma Shastry, Inscriptions of Andhra Pradesh : Karimanagar, Introduction, ff. XII
(ಬ) ಕ. ಸಾ. ಪ. ಪತ್ರಿಕೆ, ಸಂ. ೫೬–ಸಂ. ೧. ಪು. ೧೯
(ಕ) A. R. I. E. 1959-60, Andhra Pradesh, Adilabad District Inscriptions

೨೧ P.V. Parabrahma Shastry, Inscriptions of Andhra Pradesh : Karimnagar, Index, p. 152

(೩) **ಮೂಲ್ತಗೂರು :** ಕರೀಮ್‌ನಗರದಿಂದ ಕಾಜಿಪೇಟಕ್ಕೆ ಹೋಗುವ ಮಾರ್ಗದಲ್ಲಿರುವ ಈಗಣ ಮಲ್ತಗೂರು.

(೪) **ರೇಕುಱಿಕಿ :** ಇದು ಈಗಣ ಕುರ್ಕಿಯಾಲ ಆಗಿರಬಹುದು. ಈ ದಿಶೆಯಲ್ಲಿ ಇನ್ನೂ ಸಂಶೋಧನೆ ಆಗಬೇಕು.

(೫) **ಅಱೂರು :** ಇದನ್ನು ಕರೀಮ್‌ನಗರ ಜಿಲ್ಲೆಯ ಶಾಸನಗಳು ಎಂಬ ಗ್ರಂಥದ ಶಾಸನ ಸಂಖ್ಯೆ ೧೬ ರ ಪಂಕ್ತಿ ೬ ರಲ್ಲಿ ಬಂದಿರುವ ‘ ಅಳೂರು ’ ಎಂದು ಹೇಳಬಹುದು. ಅದು ಈಗಿನ ಪೊಟ್ಲಪಲ್ಲಿ ಗ್ರಾಮದ ಹತ್ತಿರವಿದ್ದಿತು.[೩೨]

III

ಬೋದನವು ಇಮ್ಮಡಿ ಅರಿಕೇಸರಿಯ ರಾಜಧಾನಿಯಾಗಿತ್ತೆಂಬುದನ್ನು ಸ್ಪಷ್ಟವಾಗಿ ತಿಳಿಸಿರುವ ಈ ಶಾಸನ, ಆತನ ಆ ಸ್ಥಾನದಲ್ಲಿ ಆತನಿಂದ ‘ ಕವಿತಾಗುಣಾರ್ಣವ ’ ಎಂದು ಸನ್ಮಾನಿತನಾದ ಪಂಪನು ಅಲ್ಲಿ ಬಾಳಿ ಬದುಕಿದನೆನ್ನುವುದಕ್ಕೆ ಬಾಹ್ಯಸಾಕ್ಷಿಯಾಗಿದೆ. ಆತ ಅಲ್ಲಿ ಹೇಗೆ ಬಾಳಿದ ಎನ್ನುವುದು ಇನ್ನೊಂದು ಲೇಖನದ ವಿಷಯ. ವೇಮುಲವಾಡ ಚಾಳುಕ್ಯರ ಹಾಗೂ ಕನ್ನಡ ಸಾಹಿತ್ಯಚರಿತ್ರೆಯ ಅಭ್ಯಾಸಿಗಳಿಗೆ ಇದೊಂದು ಅನುಪಮ ದಾಖಲೆಯಾಗಿದೆ. ಅದನ್ನು ಇಟ್ಟಿದ್ದಿಕ್ಕಿಸಿದವರು, ಕಂಡು ಹಿಡಿದವರು, ಪ್ರಕಟಿಸಿದವರು ಧನ್ಯರು; ಅವರಿಗೆ ನನ್ನ ಧನ್ಯವಾದಗಳು.*

■ ■

೩೨ Ibid, p. 43

* ಈ ಲೇಖನ ಬರೆಯುವಲ್ಲಿ ಪಂಪನನ್ನು ಕುರಿತು ವಿಶೇಷ ಅಭ್ಯಾಸ ಮಾಡಲು ಪ್ರೇರಣೆಯನ್ನಿತ್ತ ಗುರುಗಳಾದ, ಕುಲಪತಿ ಡಾ. ಆರ್. ಸಿ. ಹಿರೇಮಠ ಅವರಿಗೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕ, ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ ಮತ್ತು ಡಾ. ಬಾ. ರಾ. ಗೋಪಾಲ ಅವರಿಗೂ ಋಣಿ ಆಗಿರುವೆ.

ಮೈಸೂರುಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಹಾಗೂ ಅಪ್ರಕಟಿತ ಶಾಸನಗಳ ಸೂಚಿ

ಎಸ್. ಶೆಟ್ಟರ್
ಎಸ್. ರಾಜಶೇಖರ

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೭೭.	ಮುಳಬಾಗಿಲು	ತೀರ್ಥಹಳ್ಳಿ	ಶಿವಮೊಗ್ಗ	೧೬೬೦	ವೆಂಕಟಪ್ಪನಾಯಕ II	ಇಕ್ಕೇರಿ	ತಾಮ್ರಶಾಸನ. ವೆಂಕಟಪ್ಪ ನಾಯಕನು ತನ್ನ ಅಣ್ಣ ಶಿವಪ್ಪ ನಾಯಕನಿಗೆ ಶಿವಲೋಕ ಶಾಶ್ವತ ವಾಗಲೆಂದು ಮುದುವಂಕನಾಡು ಮತ್ತು ಸೀತೂರು ಸೀಮೆಯ ಕೆಲವು ಹಳ್ಳಿಗಳನ್ನು ದಾನ ಮಾಡಿ ದನು.	ಆ. ಸ. ಮೈ. ಆ.ರಿ. ೧೯೧೯. ಪು. ೩೭
೭೮.	,,	,,	,,	೧೬೬೨	ಭದ್ರಪ್ಪನಾಯಕ	,,	ತಾಮ್ರಶಾಸನ. ಭದ್ರಪ್ಪನಾಯಕನು ತನ್ನ ತಂದೆ ಶಿವಪ್ಪನಾಯಕನು ಶಿವಲೋಕಸುಖವನ್ನು ಶಾಶ್ವತ ಹೊಂದಲೆಂದು ಮದುವಂಕನಾಡಂ	ಅದೇ, ಪು. ೭೫

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಸೀತೂರು, ಹೊಕುಳಿ, ಆಲುಮಾನಿ, ಮುತ್ತೂರು ಮತ್ತು ಗಾಜನೂರಿನ ಹಳ್ಳಿಗಳನ್ನು ದಾನ ಮಾಡಿದನು.	
೭೯.	ಮಸ್ಕಲ್	ಹಿರಿಯೂರು	ಚಿತ್ರದುರ್ಗ	೧೭೫೪	ಕಸ್ತೂರಿರಂಗಪ್ಪ ನಾಯಕ	ಚಿತ್ರದುರ್ಗ	ಮಧುಕೇಶ್ವರ ಲಿಂಗದ ಪ್ರತಿಷ್ಠಾಪನಾ ಸಂದರ್ಭ– ಮದಕರಿನಾಯಕನ ಮಗ ಕಸ್ತೂರಿರಂಗಪ್ಪನಾಯಕನಿಂದ ಮುರಾರಿರಾಯ ಗೊರ-ಪದೆಗೆ ಮುಸಕಲು ಅಥವಾ ವೆಂಕಟಪುರದ ದಾನ. ಅದನ್ನೇ ಅವನು ಹಿರೆದೆ ರಾಮಜಯದಾಸನಿಗೆ ನೀಡಿದ. ಅಲ್ಲದೆ ರಂಗಪ್ಪನಾಯಕನಿಂದ ದೇವರಿಗೆ ಭೂದತ್ತಿ.	ಆ.ಸ.ಮೈ. ಆ.ರಿ. ೧೯೧೮, ಪು. ೫೭
೮೦.	ತ್ಯಾಮ-ಗೊಂಡ್ಲು	ನೆಲಮಂಗಲ	ಬೆಂಗಳೂರು	೧೬೬೧	ಕೆಂಪೇಗೌಡ	ಯಲಹಂಕ	ಕೆಂಪೇಗೌಡನಿಂದ ಸೋಮಯ್ಯನಿಗೆ ರಕ್ತಕೊಡುಗೆಯಾಗಿ ಭೂದತ್ತಿ.	ಆ.ಸ.ಮೈ. ಆ.ರಿ. ೧೯೧೭, ಪು. ೫೫

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೮೧.	ಕೋಯಿರ	ದೇವನಹಳ್ಳಿ	ಬೆಂಗಳೂರು	೧೬೬೯	ಚಯಂಗೌಡ	ಆವಟಿ	ಹೆರಿಬೆಡನಾಡಿನಲ್ಲಿ ಮದುವೆ ಸುಂಕವನ್ನು ರಿಯಾಯಿತಿ ಮಾಡಬೇಕೆಂದು ಮಾಚಯ್ಯಗೌಡನು ಸುಂಕಾಧಿಕಾರಿ ಗರಿಗರಸಯ್ಯನಿಗೆ ತಿಳಿಸಿದ ಉಲ್ಲೇಖ.	ಆ.ಸ.ಮೈ. ಆ.ರಿ. ೧೯೧೭, ಪು. ೫೫
೮೨.	ಖಾಜಿ-ಹೊಸಹಳ್ಳಿ	ಹೊಸಕೋಟೆ	,,	೧೪೯೪	ತಮ್ಮೇಗೌಡ	ಸುಗಟೂರು	ಹೊಸಕೋಟೆಯನ್ನು ಕಟ್ಟಿದ ತಮ್ಮೇಗೌಡನಿಂದ ಹೊಸೂರಿನ ನಿಜಗುಣ ಸುಜ್ಞಾನಸ್ವಾಮಿಗೆ ಹೊಸಹಳ್ಳಿ(ಅಯ್ಯನ-ಹೊಸಹಳ್ಳಿ)ಯ ದಾನ.	ಆ.ಸ.ಮೈ. ಆ.ರಿ. ೧೯೧೯, ಪು. ೩೯
೮೩.	ಭಕ್ತರಹಳ್ಳಿ	,,	,,	೧೫೫೮	,,	,,	ತ್ರುಟಿತ. ಇಮ್ಮಡಿ ತಮ್ಮೇಗೌಡನಿಂದ ಬಸವಗೌಡನ ಮಗನಿಗೆ ದತ್ತಿ.	,,
೮೪.	ಗೊಣಕನಹಳ್ಳಿ	,,	,,	ಸಂ.೧೬೧೪	ಮುಮ್ಮಡಿ ತಮ್ಮೇಗೌಡ	,,	ಅರಸನಿಂದ ಸೆಜ್ಜೆ ಸಿದ್ಧಲಿಂಗದೇವನ ಮಗ ಗುರುಬಸವಣ್ಣನಿಗೆ ಮಠ ನಿರ್ಮಾಣವಾದುದು.	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೮೫.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	೧೬೬೮(?)	ಮುಮ್ಮಡಿ ಚಿಕ್ಕರಾಯ-ತಮ್ಮೇಗೌಡ	ಸುಗಟೂರು	ತ್ರುಟಿತ. ಅರಸನಿಂದ ದತ್ತಿ.	ಆ. ಸ. ಮೈ. ಆ.ರಿ. ೧೯೧೯, ಪು. ೪೦
೮೬.	ಬಿಸನಹಳ್ಳಿ	..	..	೧೬೬೦	ಶಿವನಪ್ಪಗೌಡ	..	ಶಿವನಪ್ಪಗೌಡನಿಂದ ಕೆಂಪಣ್ಣಗೌಡನಿಗೆ ದತ್ತಿ.	..
೮೭.	ಕಟಿಗೇನಹಳ್ಳಿ	..	..	—	..	..	ಶಿವಾಚಾರಸಂಪನ್ನ ವಿರಕ್ತ....ಯ ದೇವನಿಗೆ ಶಿವನೆಯಗೌಡನಿಂದ ಮಠದ ದಾನ.	..
೮೮.	ಬೆಂಗಳೂರು	ಬೆಂಗಳೂರು	..	೧೬೬೦ ಮತ್ತು ೧೬೬೨	ಷಹಡಿಲಂ II	ಮೊಘಲ್	ಪರ್ಶಿಯನ್ ಸನದು. ಅಲ್ಲಲ್ಲಿ ಬರೆಹ ಹೋಗಿದೆ. ನಿಜಾಮನು ದೆಹಲಿ ಚಕ್ರವರ್ತಿಯ ಸಾರ್ವ-ಭೌಮತ್ವಕ್ಕೆ ಬದ್ಧನಾದುದು. ಆಡಳಿತ ವ್ಯವಸ್ಥೆಯ ಉಲ್ಲೇಖವೂ ಇದೆ.	..
೮೯.	(ಬೆಂಗಳೂರು ಅಣ್ಣಾಜಿರಾವ್‌ನಲ್ಲಿ ಇದೆ)			೧೯೧೮	ಮುಹಮ್ಮದ್‌ಷಾ	..	ಪರ್ಶಿಯನ್ ಸನದು. ಮೊಘಲ್ ಚಕ್ರವರ್ತಿ, ಅವನ ಅಧಿಕಾರಿಗಳ	ಆ.ಸ.ಮೈ. ಆ.ರಿ. ೧೯೧೮,ಪು.೫೭-೫೮

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ನಾಲ್ಕು ಮೊಹರು ಮತ್ತು ಕಾಲ (೧೭೧೯, ೧೭೨೦, ೧೭೨೨, ೧೯೨೩)ವನ್ನು ಒಳಗೊಂಡ ಇದು ಅಶ್ವದಳದ ಮಾಹಿತಿ ನೀಡುತ್ತದೆ.	
೯೦.	ಶಿರಾ	ಶಿರಾ	ತುಮಕೂರು	೧೭೬೮	—	ಮೊಘಲ್	ಸನದು. ಹಜರತ್ ನವಾಬ್‌ಲಾಲ್ ಮಹಮ್ಮದ್‌ಖಾನ್ ಬಹಾದೂರನು ಹಾಗಲವಾಡಿಯ ಲಿಂಗೇಗೌಡನಿಗೆ ಬರೆದ ಪರವಾನದಲ್ಲಿ ಹತ್ತು ಕೊಳಗ ಭೂಮಿಯನ್ನು ಯದುಲ್ಲಾಷಾ ಸಾಹಿಬ್‌ನ ತಕಿಯಕ್ಕೆ ಸರ್ವಮಾನ್ಯವಾಗಿ ಬಿಟ್ಟ ಉಲ್ಲೇಖವಿದೆ.	ಆ.ಸ.ಮೈ. ಆ.ರಿ. ೧೯೧೮, ಪು. ೫೮
೯೧.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	ಸು. ೧೭೬೧	—	ಮರಾಠ	ಮರಾಠಿ ಸನದು. ಪೇಷ್ವೆಯಿಂದ ವಿಠಲೇಶ್ವರ ದೇವಸ್ಥಾನಕ್ಕೆ ಕೊಟ್ಟ ಮಾಲೂರು ತಾಲೂಕಿನ	ಆ.ಸ.ಮೈ. ಆ.ರಿ. ೧೯೧೯, ಪು. ೪೨

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ತುರುಗಲೂರು ದತ್ತಿಯನ್ನು ಪರ-ಗಣದ ಸುಬೇದಾರ ರಘುನಾಥ ಬಾವಾಜಿಯು ರಾಮಭಟ್ಟನಿಗೆ ತಿಳಿಸಿದುದು.	
೯೨.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	ಸು. ೧೭೬೦	—	ಮರಾಠ	ಮರಾಠಿ ಸನದಿನಲ್ಲಿದ್ದ, ವಿಠಲೇಶ್ವರ ದೇವಸ್ಥಾನಕ್ಕೆ ನೀಡಿದ ದತ್ತಿಯನ್ನು ದಫ್ತರ್‌ನಲ್ಲಿ ನಮೂದಿಸಬೇಕೆಂದು ಸುಬೇದಾರ ರಘುನಾಥ ಬಾವಾಜಿಯಿಂದ ದೇಶಮುಖ ಮತ್ತು ದೇಶಪಾಂಡೆಯವರಿಗೆ ಬರೆದಿದೆ.	ಆ.ಸ.ಮ್ಯೆ. ಆ.ರಿ. ೧೯೧೯, ಪು. ೪೨
೯೩.	ಆನೇಕಲ್	ಆನೇಕಲ್	,,	೧೭೧೧	ವೀರರಾಜಯ್ಯ	ಕಳಲೆ	ಭೂಕ್ರಯಪತ್ರ. ಉಮಾಪತಿ ಶಾಸ್ತ್ರಿಯು ತನ್ನ ತಂದೆಗೆ ವೀರರಾಜಯ್ಯನು ಕೊಟ್ಟಿದ್ದ ಭೂಮಿಯನ್ನು ೧೧೦ ಕಂಠೀರಾಯಿ ವರಹಗಳಿಗೆ ಕ್ರಯಂ ಬರೆದುದು.	ಅದೇ, ಪು. ೪೦

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೯೪.	ದೇವನೂರು	ನಂಜನಗೂಡು	ಮೈಸೂರು	—	ಚಿಕ್ಕದೇವರಾಜ ಒಡೆಯ	ಮೈಸೂರು	ದೇವನೂರು ಚಾಮರಾಜನಗರ ತಾಲೂಕಿಗೆ ಸೇರಿದೆಯೆಂದು ಉಲ್ಲೇಖ.	ಆ.ಸ.ಮೈ. ಆ.ರಿ. ೧೯೧೮, ಪು. ೫೯
೯೫.	ಚಿಕ್ಕಕವಲಂದೆ	,,	,,	—	,,	,,	ಚಿಕ್ಕಕವಲಂದೆಯು ಚಾಮರಾಜ ನಗರ ತಾಲೂಕಿಗೆ ಸೇರಿದೆಯೆಂದು ಉಲ್ಲೇಖ.	,,
೯೬.	ನೇರಳೆ	ನಂಜನಗೂಡು	ಮೈಸೂರು	೧೭೫೯	ಕೃಷ್ಣರಾಜ ಒಡೆಯ II	,,	ನಂಜರಾಜಯ್ಯನಿಂದ ಪಾರುಪತ್ಯಗಾರ ಬಸೆಟ್ಟಿಗೆ ನಿರೂಪ. ಕಪಿಲಾ ದಂಡೆಯ ಮೇಲೆ ಕಟ್ಟಿದ ಪ್ರಸನ್ನ ನಂಜುಂಡೇಶ್ವರ ದೇವಾಲಯ, ಸತ್ರ ಮತ್ತು ಮೈಸೂರಿನ ಜಂಗಮ ಮಠಕ್ಕೆ ತಂದೆಯ ಹಳ್ಳಿಯ ದಾನ.	,,
೯೭.	,,	,,	,,	,,	,,	,,	ಮೈಸೂರು ಸೀಮೆಯ ಅಧಿಕಾರಿ ಚಿಕ್ಕಯ್ಯನಿಗೆ ನಿರೂಪ. ಅರಸನ	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಮದುವೆಯಲ್ಲಿ ಹಸೆಜಗಲಿ ನಿರ್ಮಿಸಿದ ಚೆನ್ನನಿಗೆ ೬೦ ವರಹಗಳ ಆದಾಯವಿದ್ದ ಹಳ್ಳಿಯೊಂದರ ಉಂಬಳಿ.	
೯೮.	ನೇರಳೆ	ನಂಜನಗೂಡು	ಮೈಸೂರು	೧೭೫೯	ಕೃಷ್ಣರಾಜ ಒಡೆಯ II	ಮೈಸೂರು	ಅರಸನಿಂದ ಬೆಣ್ಣೆಯ್ಯನಿಗೆ ನಿರೂಪ. ನಂಜನಗೂಡಿನ ದೇವಾಲಯದ ಸ್ಥಾನಿಕ ಶಂಕರದೀಕ್ಷಿತನ ಸ್ಥಾನದಲ್ಲಿ ಭಗವಾನಶಾಸ್ತ್ರಿಯನ್ನು ನೇಮಿಸಿದ್ದು. ಸ್ಥಾನಿಕನಿಗೆ ಎಲ್ಲ ಹಕ್ಕುಬಾಧ್ಯತೆಗಳನ್ನು ನೀಡಬೇಕು.	ಆ.ಸ.ಮೈ. ಆ.ರಿ. ೧೯೧೮, ಪು. ೫೯
೯೯.	„	„	„	೧೭೬೦	„	„	ಮೈಸೂರು ಹೋಬಳಿ ಅಧಿಕಾರಿ ಲಕ್ಷ್ಮೀಕಾಂತಯ್ಯನಿಗೆ ನಿರೂಪ. ಕಳಲೆ ಚಿಕ್ಕಯ್ಯನು ಕಟ್ಟಿದ ದೇವಾಲಯ, ಸತ್ರ ಮತ್ತು ಮಠಗಳ ಆಗು–ಹೋಗುಗಳಿಗೆ ಅರಸನಿಂದ	„

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							೨೮ ವರಹಗಳ ದಾನ ಮತ್ತು ಹಿಂದೆ ದಾನವಾಗಿತ್ತ ತಂದೆಯ ಹಳ್ಳಿಯ ಉಲ್ಲೇಖವೂ ಆಗಿದೆ.	
೧೦೦.	ನೇರಳೆ	ನಂಜನಗೂಡು	ಮೈಸೂರು	೧೭೬೩	ಕೃಷ್ಣರಾಜ ಒಡೆಯ II	ಮೈಸೂರು	ನಿರೂಪ. ಪಟ್ಟಣ ಹೋಬಳಿಯಲ್ಲಿ ದೇವಸ್ಥಾನ, ಸತ್ರ ಮುಂತಾದವುಗಳಿಗೆ ಕೊಂಡಿದ್ದ ಭೂಮಿಯನ್ನು ಕಳಲೆ ಚಿಕ್ಕಯ್ಯನು ಕ್ರಯಕ್ಕೆ ಪಡೆದನೆಂದು, ಅಲ್ಲಿಯ ಅಧಿಕಾರಿ ನಂಜರಾಜಯ್ಯನಿಗೆ ತಿಳಿಸಿದೆ.	ಆ.ಸ.ಮೈ. ಆ.ರಿ. ೧೯೧೮, ಪು. ೫೯
೧೦೧.	ಮೈಸೂರು	ಮೈಸೂರು	,,	—	ಚಾಮರಾಜ ಒಡೆಯ IX	,,	ದೇವೀರಮ್ಮಣ್ಣಿಯಿಂದ ಶಾಂತೀಶನ ಅಭಿಷೇಕಕಾರ್ಯಕ್ಕೆ ಹಿತ್ತಾಳೆ ಪಾತ್ರೆಗಳ ದಾನ.	ಅದೇ, ಪು. ೬೧
೧೦೨.	,,	,,	,,	—	,,	,,	ಶಾಂತೀಶ್ವರ ಬಸದಿಯ ದೀಪ ಸ್ತಂಭಗಳ ಮೇಲಿರುವ	ಆ.ಸ.ಮೈ. ಆ.ರಿ. ೧೯೧೮, ಪು.೬೦-೬೧

ಅ. ನಂ.	ಗ್ರಾಮ	ತಾಲ್ಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಶಾಸನಗಳು. ದೇವೀರಮ್ಮಣ್ಣಿಯು ಅವುಗಳನ್ನು ಶಾಂತಿಸ್ವಾಮಿಗೆ ದಾನವಾಗಿತ್ತಳು.	
೧೦೩.	ಶಿರಾ	ಶಿರಾ	ತುಮಕೂರು	೧೭೬೯	ಹೈದರ್	ಮೈಸೂರು	ಸುಂಕಾಧಿಕಾರಿ ಲಿಂಗಪ್ಪಯ್ಯನಿಗೆ ನಿರೂಪ. ಹಾಗಲವಾಡಿಯಿಂದ ಪ್ರತಿದಿನ ಬರುವ ಸುಂಕದ ಒಂದೂವರೆ ಭಾಗವು ಯದುಲ್ಲಾ ಷಾಹ ಬಾದಷಾಹ ಹುಸೇನರಿಗೆ ಒಪ್ಪಿತವಾಗಬೇಕು	ಆ.ಸ.ಮೈ. ಆ.ರಿ. ೧೯೧೮, ಪು. ೬೦
೧೦೪.	ನೇರಳೆ	ನಂಜನಗೂಡು	ಮೈಸೂರು	೧೭೭೧	,,	,,	ನಿರೂಪ. ಅರಸನ ಮದುವೆಗೆ ಹಸೆಜಗಲಿ ನಿರ್ಮಿಸಿದ ಚನ್ನಯ್ಯನಿಗೆ ತಗಡೂರಿನ ಅಜಗಳ್ಳಿ ಮತ್ತು ಕಕ್ಕರಹಟ್ಟಿಯನ್ನು ಉಂಬಳಿಯಾಗಿ ಮುಂದುವರಿಸಬೇಕೆಂದು ಆಜ್ಞೆ ಇದೆ.	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೦೫.	ಶಿರಾ	ಶಿರಾ	ತುಮಕೂರು	೧೭೭೫	ಹೈದರ್	ಮೈಸೂರು	ಪ್ರಧಾನ ವೆಂಕಪ್ಪಯ್ಯನಿಂದ ರಘುಪತಯ್ಯನಿಗೆ ನಿರೂಪ. ಹಿಂದೆ ಯದುಲ್ಲಾಷಾಹನ ಫಕೀರನಿಗೆ ಕೊಟ್ಟಿದ್ದ ೫ ಕೊಳಗ ಭೂಮಿಯನ್ನು ಮುಂದುವರಿಸ ಬೇಕೆಂದು ಇರುವ ಆಜ್ಞೆ.	ಆ.ಸ.ಮೈ. ಆ.ರಿ. ೧೯೧೮, ಪು. ೬೦
೧೦೬.	ನೇರಳೆ	ನಂಜನಗೂಡು	ಮೈಸೂರು	೧೭೮೦	,,	,,	ತಾಯೂರಿನ ಪಾರುಪತ್ಯಗಾರ ವೈದ್ಯಲಿಂಗಯ್ಯನಿಗೆ ನಿರೂಪ. ಚನ್ನಯ್ಯನಿಗೆ ಕೊಟ್ಟ ಉಂಬಳಿ ಯನ್ನು ಉಲ್ಲೇಖಿಸುತ್ತದೆ.	,,
೧೦೭.	ಮಧುಗಿರಿ	ಮಧುಗಿರಿ	ತುಮಕೂರು	೧೭೮೭	ಟಿಪ್ಪುಸುಲ್ತಾನ	,,	ಪರ್ಶಿಯನ್ ಸನದು. ಬಿದ ನೂರು ಸರ್ಕಾರದ ಕಂಬದ ಹಳ್ಳಿಯನ್ನು ಮುಹಮ್ಮದ್ ಕಾಸಿಂದರ್‌ವೀಷ್‌ನಿಗೆ ಮಸೀದೆ ಗಾಗಿ (ಎರಡನೆಯ ಸಾರಿ)	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಕೊಟ್ಟಿದೆಯೆಂದು, ಸಿದ್ಧಾಪುರದ ದೇಶಮುಖ ಮತ್ತು ದೇಶಪಾಂಡೆಯವರಿಗೆ ತಿಳಿಸಿದೆ.	
೧೦೮.	ಮಧುಗಿರಿ	ಮಧುಗಿರಿ	ತುಮಕೂರು	೧೭೮೭	ಟಿಪ್ಪುಸುಲ್ತಾನ	ಮೈಸೂರು	ಮೇಲಿನ ಪರ್ಶಿಯನ್ ಸನದಿನ ಮರಾಠಿ ರೂಪದ ಪ್ರತಿ.	ಆ.ಸ.ಮೈ. ಆ.ರಿ. ೧೯೧೮, ಪು. ೬೦
೧೦೯.	,,	,,	,,	,,	,,	,,	ಸನದು. ಮಸೀದೆಯ ನಂದಾದೀವಿಗೆ ಮತ್ತು ಖಾಜಿ ಮುಹಮ್ಮದ್ ಖಾಸಿಮನ ಖರ್ಚಿಗೆಂದು ಹಣ ಕೊಟ್ಟುದನ್ನು ಕಂಬದಹಳ್ಳಿ ಶಾನುಭಾಗನಿಗೆ ತಿಳಿಸಿದೆ.	,,

(ಮುಂದುವರಿಯುವುದು)

ಒರೆಗಲ್ಲು

೧. ದೇವವ್ರತ :

ಅನೇಕ ಕನ್ನಡ ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಬರುವ 'ಪುರುಷವ್ರತ' ಎಂಬ ಶಬ್ದಕ್ಕೆ ಬ್ರಹ್ಮಚರ್ಯ ಎಂಬ ಅರ್ಥವನ್ನು ಎಂ. ವಿ. ಸೀತಾರಾಮಯ್ಯನವರು ಸ್ಥಾಪಿಸಿದ್ದಾರೆ.[೧] ನಾಗಚಂದ್ರನ 'ಮಲ್ಲಿನಾಥ ಪುರಾಣ'ದಲ್ಲಿರುವ ಇಂಥದೇ ಇನ್ನೊಂದು ಪದವನ್ನು ಯಾರೂ ಗಮನಿಸಿದಂತೆ ಕಾಣುವುದಿಲ್ಲ. ಇದು ನಾಗಚಂದ್ರನ ಪದ್ಯ:

ಆವಂ ಸ್ವರ್ಗಾಪವರ್ಗಕ್ಕೆಳಸುವನವನಂ ಗಂಡುದೊತ್ತಾಳ್ವುದಾವಂ
ಕಾವಂ ದೇವವ್ರತ ಖ್ಯಾತಿಯನವನನವಲ್ಮಾಱುದೆಂದಾ ಪುರಸ್ತ್ರೀ
ಭ್ರೂವಿಕ್ಷೇಪಕ್ಕೆ ಸೇನಾಪತಿ ಪದವಿಯುನಿತ್ತಂ ಮನೋಜಾತನಾಟಂ
ದಾ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲ ಕಣ್ಣಂ ಸ್ಮರಂ ನಂದೆವೊಯ್ದಂ
(೨.೪೪)

ಇಲ್ಲಿ 'ದೇವವ್ರತ' ಶಬ್ದ ಸ್ತ್ರೀಸಂಗವರ್ಜನೆಗೆ ಸಂಬಂಧಿಸಿದ ಯಾವುದೋ ವ್ರತವನ್ನು ಸೂಚಿಸುತ್ತಿರುವುದು ಸ್ಪಷ್ಟ. ಈ ಶಬ್ದಕ್ಕೆ ವಿ. ಎಸ್. ಆಪ್ಟೆಯವರ ನಿಘಂಟಿನಲ್ಲಿ "a religious observance, any religious observance, any religious vow. an epithet of 1 Bhisma 2 Kartikeya" ಎಂದು ಅರ್ಥ ಕೊಡಲಾಗಿದೆ.[೨] ಭೀಷ್ಮ, ಕಾರ್ತಿಕೇಯರಿಗೆ ದೇವವ್ರತ ಎಂಬ ಹೆಸರುಂಟೆಂಬುದು ಇಲ್ಲಿ ಗಮನಾರ್ಹ; ಅವರಿಬ್ಬರೂ ಬ್ರಹ್ಮಚಾರಿಗಳೆಂಬುದು ಸುವಿದಿತ. ಆದ್ದರಿಂದ 'ದೇವವ್ರತ' ಶಬ್ದಕ್ಕೆ ಒಟ್ಟಿನಲ್ಲಿ ಯಾವುದೇ ಧಾರ್ಮಿಕವ್ರತವೆಂದೂ ನಿರ್ದಿಷ್ಟವಾಗಿ ಬ್ರಹ್ಮಚರ್ಯವೆಂದೂ ಅರ್ಥ. ಹೀಗಾಗಿ ಪುರುಷವ್ರತ, ದೇವವ್ರತಗಳೆರಡೂ ಬಹುಮಟ್ಟಿಗೆ ಸಮನಾರ್ಥಕವೆಂದು ತಿಳಿದರೆ ತಪ್ಪಾಗಲಾರದು. 'ದೇವವ್ರತ' ಶಬ್ದ ಇತರ ಕನ್ನಡ ಕಾವ್ಯಗಳಲ್ಲಿ, ಶಾಸನಗಳಲ್ಲಿ ಎಲ್ಲಿಯಾದರೂ ಬರುತ್ತದೆಯೋ ನೋಡಬೇಕು.

೨. ಬಿಮ್ಮನಸೆ :

ಕರ್ನಾಟಕದ ಕೆಲವು ಭಾಗಗಳಲ್ಲಿ 'ಬಿಮ್ಮನಸೆ' ಎಂಬ ಮಾತೊಂದು ಗರ್ಭಿಣಿ

---

೧ ನೋಡಿ : 'ಪುರುಷವ್ರತ' ಮತ್ತು 'ಕವಿರಾಜಮಾರ್ಗ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೫೪-೨.

೨ The Student's Sanskrit-English Dictionary, 1965, p. 259

ಎಂಬ ಅರ್ಥದಲ್ಲಿ ಪ್ರಚಾರವಾಗಿದೆ. ಇದು ಪ್ರಾಚೀನಕಾವ್ಯಗಳಲ್ಲಿ ಪ್ರಯುಕ್ತವಾಗಿಲ್ಲ; ಜನಪದಕಾವ್ಯದಲ್ಲಿ ಕಂಡುಬರಬಹುದು; ಆಡುಮಾತಿನಲ್ಲಂತೂ ಬಳಕೆಯಲ್ಲಿದೆ. ಕಿಟೆಲ್ ಕೋಶದಲ್ಲಿ 'ಬಿಮ್ಮನಿಸಿ' ಎಂಬ ಶಬ್ದಕ್ಕೆ 'a pregnant women' ಎಂದು ಅರ್ಥಕೊಡಲಾಗಿದೆ.[೩] ಎಚ್. ಎಲ್. ನಾಗೇಗೌಡರು ತಮ್ಮ 'ನನ್ನೂರು' ಗ್ರಂಥದಲ್ಲಿ 'ಬಿಮ್ಮನಿಸೆ' ಎಂಬ ಶಬ್ದವನ್ನು ಬಳಸಿ, ಟಿಪ್ಪಣಿಗಳಲ್ಲಿ 'ಗರ್ಭಿಣಿಯಾದ ಹೆಂಗಸು. ಭೀಮಮನುಷ್ಯೆ (?)' ಎಂದು ಅರ್ಥ ಸೂಚಿಸಿದ್ದಾರೆ.[೪]

ಬಿಮ್ಮನಸೆ, ಬಿಮ್ಮನಿಸೆ, ಬಿಮ್ಮನಿಸಿ – ಎಂಬ ಮೂರು ರೂಪಗಳಲ್ಲೂ ಮನಸೆ, ಮನಿಸೆ, ಮನಿಸಿ ಎಂಬ ಉತ್ತರಭಾಗಗಳು 'ಮಾನಸ' 'ಮಾನಿಸ' ಎಂಬ ಪುಲ್ಲಿಂಗ ವಾಚಕಗಳಿಗೆ ಸಂವಾದಿಯಾದ ಸ್ತ್ರೀಲಿಂಗವಾಚಕಗಳೆಂಬುದು ಸ್ಪಷ್ಟ. ಆದರೆ ಪೂರ್ವ ಭಾಗದ ನಿಷ್ಪತ್ತಿ ಹೇಗೆ? ಭಾರವಾದುದು, ದಪ್ಪನಾದುದು ಎಂಬರ್ಥದ 'ಬಿಣ್', 'ಬಿಣ್ಣಿತು' ಎಂಬ ಹಳಗನ್ನಡ ವಿಶೇಷಣವನ್ನು ನಾವಿಲ್ಲಿ ಜ್ಞಾಪಿಸಿಕೊಳ್ಳಬೇಕು. ಆಗ 'ಬಿಮ್ಮನ(ನಿ)ಸೆ' ಎಂಬುದು 'ಬಿಣ್ಣಿತು,' 'ಮನ(ನಿ)ಸೆ' ಎಂಬ ಎರಡು ಶಬ್ದಗಳು ಕೂಡಿದ ಸಮಾಸವಾಗಿ ವೇದ್ಯವಾಗುತ್ತದೆ. ಅದರ ನಿಷ್ಪತ್ತಿಯನ್ನು ಹೀಗೆ ತೋರಿಸಬಹುದು: ಬಿಣ್ಣಿತು + ಮನ(ನಿ)ಸೆ(ಸಿ) > ಬಿಣ್ಮನ(ನಿ)ಸೆ(ಸಿ) > ಬಿಮ್ಮನ(ನಿ)ಸೆ(ಸಿ). ಆದ್ದರಿಂದ 'ಭೀಮಮನುಷ್ಯೆ' ಎಂಬ ನಾಗೇಗೌಡರ ಊಹೆ ಆಧಾರರಹಿತ.

ಬಿಣ್, ಬಿಣ್ಣಿತು, ಬಿಣ್ಪು ಎಂಬ ಪದಗಳು ಹಳಗನ್ನಡದಲ್ಲಿ ಧಾರಾಳವಾಗಿ ಸಿಗುತ್ತವೆ. ಆದರೆ ಅವು ಇಂದು ಸ್ವಸ್ವರೂಪದಲ್ಲಿ ಉಳಿಯದೆ, 'ಬಿಮ್ಮನ(ನಿ)ಸೆ'ಯಲ್ಲಿ ಉಳಿದುಬಂದಿರುವುದು ಗಮನಾರ್ಹಸಂಗತಿ. ಹೀಗೆಯೇ ಇನ್ನೂ ಅನೇಕ ಹಳಗನ್ನಡ ನುಡಿಗಳು ವೇಷಮರೆಸಿಕೊಂಡು ಸಮಾಸಗಳಲ್ಲಿ ಮಾತ್ರ ಇಂದಿಗೂ ಉಳಿದುಕೊಂಡಿರುವುದು ಅಭ್ಯಸನೀಯ ವಿಷಯ.

ಸಿ. ಪಿ. ಕೆ.

೩. ಲೀಲಾವತಿಯ ಒಂದು ಪದ್ಯ:

ಚತುರ್ಭಾಷಾಚಕ್ರವರ್ತಿ ನೇಮಿಚಂದ್ರನ 'ಲೀಲಾವತಿ ಪ್ರಬಂಧಂ'ದಲ್ಲಿನ 'ಜಲಕ್ರೀಡಾವರ್ಣನೆ'ಯ ಸಂದರ್ಭದಲ್ಲಿ ಬರುವ ವೃತ್ತವೊಂದು ಪ್ರಕಟಿತ ಕೃತಿಗಳಲ್ಲಿ ಹೀಗಿದೆ:

ತುಡಿಸುತ್ತುಂ ನೀರನಂಗದ್ಯುತಿಯಿಂ ನವಯುವಚ್ಛಾಯೆಯಿಂ ತಮ್ಮ ಸಂದಿ
ಮರ್ಡಿಸುತ್ತುಂ ನೇತ್ರನೀಲೋತ್ಪಲದ ನೆಟಿಳ ಬಂಬಲ್ಗಳಿಂ ನೆಯ್ದಿಲಂ ನೂ

---

[೩] A Kannada-English Dictionary 1894, p. 1120.

[೪] 'ನನ್ನೂರು', ಪು. ೩೪೮.

ಮೞಿಸುತ್ತುಂ..

............ಪೊಕ್ಕುದಬ್ಜಾಕರಮನೊಲವಿನಿಂ ಕಾಂತಕಾಂತಾಕದಂಬಂ (೧೩-೧೧೬)

ಪ್ರಕಟವಾಗಿರುವ[೧] ಲೀಲಾವತಿಯ ಎರಡು ಮುದ್ರಣಗಳಲ್ಲೂ ಮೇಲಿನ ವೃತ್ತದ ಮೂರು ಮತ್ತು ನಾಲ್ಕನೆಯ ಪಂಕ್ತಿಗಳಲ್ಲಿ ಲೋಪವಿದ್ದು, ಅವರು ಬಳಸಿಕೊಂಡ ಹಸ್ತಪ್ರತಿಗಳಲ್ಲಿ ಆ ಭಾಗ ಲೋಪಿತವಾಗಿದೆ ಎಂಬ ಸಂಗತಿ ತಿಳಿದುಬರುತ್ತದೆ.

ಅಷ್ಟಾದಶ ವರ್ಣನೆಗಳ ಕ್ರಮದಲ್ಲಿ ಸಂಕಲಿತವಾದ ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ' (ಸು. ೧೨೪೫) ಕೃತಿಯ ದ್ವಾದಶಾಶ್ವಾಸದಲ್ಲಿನ 'ಜಲಕ್ರೀಡಾವರ್ಣನೆ' ವಿಭಾಗದಲ್ಲಿ ಮೇಲಿನ[೨] ಪದ್ಯ, ಸಂಪೂರ್ಣವಾಗಿ ಲಭಿಸುತ್ತದೆ. ಅಲ್ಲಿನಂತೆ ವೃತ್ತದ ಮೂರು ಹಾಗೂ ನಾಲ್ಕನೆಯ ಪಂಕ್ತಿಗಳು ಇಂತಿವೆ:

ಮೞಿಸುತ್ತುಂ ವಕ್ತ್ರಕಂಜಂಗಳೊಳೆ ಕಮಲ ಪುಂಜಂಗಳಂ ಕೂಡೆ ಸಾಸಿ
ಮೞಿಸುತ್ತುಂ ಪೊಕ್ಕುದಬ್ಜಾಕರಮನೊಲವಿನಿಂ ಕಾಂತಕಾಂತಾಕದಂಬಂ
(೧೨-೨೦)

ಇದೇ ಪದ್ಯ ಮಲ್ಲಕವಿ ಸಂಯೋಜಿತವಾದ "ಕಾವ್ಯಸಾರ"ದಲ್ಲೂ (೧೨-೨೦) ಇದೆ.[೩] ಅಲ್ಲಿ ಕೊನೆಯ ಚರಣದಲ್ಲಿನ ''ನೊಲವಿನಿಂ ಕಾಂತಕಾಂತಾಕದಂಬಂ'' ಎಂಬುದಕ್ಕೆ ''ನೊಲವಿನಂದಂದು ಕಾಂತಾಕದಂಬಂ'' ಎಂಬ ಅನ್ಯಪಾಠ ಲಭಿಸುತ್ತದೆ.

ಎಸ್. ಶಿವಣ್ಣ

---

೧ ಲೀಲಾವತಿ ಪ್ರಬಂಧಂ : (ಸಂ.) ಮಂ. ಆ. ರಾಮಾನುಜಯ್ಯಂಗಾರ್ (ತೃತೀಯ ಸಂಪುಟ) ೧೯೦೯;

ಲೀಲಾವತಿ ಪ್ರಬಂಧಂ :(ಸಂ.) ವೆಂಕಟರಾಮಪ್ಪ ಕೆ. ಮತ್ತು ಜವರೇಗೌಡ. ದೇ. (೧೯೬೭).

೨ ಸೂಕ್ತಿಸುಧಾರ್ಣವಂ : (ಸಂ.) ಅನಂತರಂಗಾಚಾರ್ಯ. ಎನ್. (೧೯೪೭).

೩ ಕಾವ್ಯಸಾರಂ : (ಸಂ.) ಅನಂತರಂಗಾಚಾರ್ಯ. ಎನ್. (೧೯೭೩).

ಗ್ರಂಥಾವಲೋಕನ

ವಾಗ್ದೇವಿಯ ಭಾಂಡಾರ ಒಡೆದ ಕನ್ನಡ ಕವಿಗಳು :

ಲೇ. : ಭೀಮರಾವ ಚಿಟಗುಪ್ಪಿ

ಪ್ರ. : ಶ್ರೀ ದ್ವೈಪಾಯನ ಟ್ರಸ್ಟ, ಮುಂಬಯಿ, ೧೯೭೪

ಬೆಲೆ : ಐದು ರೂಪಾಯಿಗಳು. ಪುಟ : ii + ೧೫೦ + ೨

'ವಾಗ್ದೇವಿಯ ಭಾಂಡಾರ ಒಡೆದ ಕನ್ನಡ ಕವಿಗಳು', ಶ್ರೀ ಭೀಮರಾವ ಚಿಟಗುಪ್ಪಿಯವರ ತೃತೀಯ ಸಂಶೋಧನ ಕೃತಿ. ಕನ್ನಡ ಸಾಹಿತ್ಯ, ಅದರ ಕವಿಗಳು, ಅವರು ಪ್ರತಿಪಾದಿಸಿದ ಮೌಲ್ಯಗಳು ಮತ್ತು ನಂಬಿದ ಶ್ರದ್ಧೆಗಳನ್ನು ಕುರಿತಾಗಿ ಇಂದು ವಿಪುಲ ವಂತ್ತು ವಿವಿಧ ರೀತಿಯಲ್ಲಿ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಹೊರ ಬಂದ ಚಿಟಗುಪ್ಪಿಯವರ ಪ್ರಸ್ತುತ ಗ್ರಂಥ, ವಿವೇಚನಾರ್ಹವಾಗಿದೆ.

ಕನ್ನಡ ಸಾಹಿತ್ಯದ ಹಲವು ಕವಿಗಳನ್ನು ಎತ್ತಿಕೊಂಡು ಇಲ್ಲಿ ಅವರು ಆಯಾ ಕವಿಗಳ ಬಗೆಗೆ ತಮ್ಮ ಸಂಶೋಧಿತ ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ತಾವು ವಿವೇಚಿಸುತ್ತಿರುವ ಕವಿಗಳನ್ನೆಲ್ಲ (ರನ್ನನ) 'ವಾಗ್ದೇವಿಯ ಭಾಂಡಾರವನ್ನೊಡೆದ ಕನ್ನಡ ಕವಿಗಳು' ಎಂಬ ಬಿರುದಿನಿಂದ ಕರೆದಿದ್ದಾರೆ. ಆದರೆ 'ವಾಗ್ದೇವಿಯ ಭಾಂಡಾರವನ್ನೊಡೆ' ಎಂಬುದರ ಅರ್ಥ ವಿವರಣೆ ಏನು ? ಯಾವ ಸ್ಪಷ್ಟವಾದ, ನಿಖರವಾದ ರೀತಿಯಲ್ಲಿ ಅವರು 'ವಾಗ್ದೇವಿಯ ಭಾಂಡಾರವನ್ನೊಡೆ'ದಿದ್ದಾರೆ ಎಂಬುದನ್ನು ವಿವರಿಸಿಲ್ಲ. ಆದುದರಿಂದ ಮೇಲಿನ ಈ ದೊಡ್ಡ, ಆಕರ್ಷಕ ಹೆಸರನ್ನು ನೋಡಿ ಒಳಗಿನ ಕವಿಗಳ ವಿವೇಚನೆಯನ್ನೋದಿದರೆ ಓದುಗನಿಗೆ ನಿರಾಶೆ ಕಟ್ಟಿಟ್ಟದ್ದು. ತಾವು ಆರಿಸಿಕೊಂಡಿರುವ ಕವಿಗಳು ಮಾತ್ರ 'ವಾಗ್ದೇವಿಯ ಭಾಂಡಾರವನ್ನೊಡೆದವರು' ಎಂಬ ಅವರ ದೃಷ್ಟಿ ಖಂಡಿತವಾಗಿಯೂ ಉಚಿತವಾದುದಲ್ಲ.

ಪ್ರಾರಂಭದಲ್ಲಿ ಲೇಖಕರು ತಮ್ಮ ಈ ಕೃತಿಯನ್ನು ಕುರಿತು "ಕನ್ನಡ ಸಾಹಿತ್ಯ ಚರಿತ್ರೆಗೆ ಇದೊಂದು ಪೂರಕ ಹೊತ್ತಿಗೆ" ಎಂದು ಹೇಳಿದ್ದಾರೆ. ಆದರೆ ಅವರ ಈ ಹೇಳಿಕೆ ಕೃತಿಯಲ್ಲಿ ಸಮರ್ಥನೆಗೊಂಡಿಲ್ಲ. "........ ಆಯಾ ಕವಿಗಳ, ಲಾಕ್ಷಣಿಕರ ಒರಿಮೆ, ಸ್ವೋಪಜ್ಞತೆ, ಹೆಮ್ಮೆಯ ನುಡಿಗಳಿಗೆ ಅವೆಂತು ಪೋಷಕವಾಗಿವೆ; ಅವರಿಂದ ಅವುಗಳ ಸ್ಥಾನಮಾನಗಳು ಅವೆಂತು ಹೆಚ್ಚಿವೆ ಎಂಬುದನ್ನಿಷ್ಟೇ ಇಲ್ಲಿ ಪ್ರಸ್ತಾಪಿಸಿದೆ...."

ಎಂದಿದ್ದಾರೆ, ಪ್ರಾರಂಭದಲ್ಲಿ. ಮೂಲದಲ್ಲಿಯೇ ಅಭಿಮಾನನಿಷ್ಠರಾಗಿ ಆಯಾ ಕವಿಗಳನ್ನು ಕಂಡಿರುವುದರಿಂದ ಅವರ ಹಿರಿಮೆ, ಸ್ವೋಪಜ್ಞತೆ, ಮುಂತಾದವುಗಳನ್ನು ಮಾತ್ರ ವಿವರಿಸಲು ಹೊರಟಿರುವುದರಿಂದ ನಿಜವಾಗಿಯೂ ಇದು ಸಾಹಿತ್ಯಚರಿತ್ರೆಗೆ ಪೂರಕ ಗ್ರಂಥವಾಗದೆ ಹೋಗಿದೆ.

ತಾವು ಆರಿಸಿಕೊಂಡಿರುವ ಕವಿಗಳನ್ನು ಕುರಿತು "ಅನೇಕರು ಇವರಿಗಿಂತ ಅಥವಾ ಇವರಷ್ಟೇ ಶ್ರೇಷ್ಠ ಕೃತಿಗಳನ್ನು ರಚಿಸಿರಬಹುದಾದರೂ ಆ ಶ್ರೇಷ್ಠತೆ ಹೆಚ್ಚಾಗಿ ಈಗಾಗಲೇ ಸುಪರಿಚಿತವಿರುವ ಅವುಗಳ ಸಾಹಿತ್ಯಕಗುಣಗಳಿಗೆ ಒಳಪಟ್ಟಿದ್ದರಿಂದ ಅವರನ್ನು ಇಲ್ಲಿ ಲೆಕ್ಕಕ್ಕೆ ಹಿಡಿದಿಲ್ಲ" ಎಂದಿದ್ದಾರೆ. ಆದುದರಿಂದ ಅವರೇ ಹೇಳುವಂತೆ ಇಲ್ಲಿ ಆಯಾ ಕವಿಗಳ ಸಾಹಿತ್ಯಿಕ ಮೌಲ್ಯಮಾಪನವನ್ನು ಅವರು ಮಾಡಿಲ್ಲ.

ಇಲ್ಲಿಯು ಕವಿಗಳನ್ನು ಕಾವ್ಯಕವಿ, ಶಾಸ್ತ್ರಕವಿ, ಉಭಯಕವಿ ಎಂದು ವಿಭಜಿಸಿದ್ದಾರೆ. ಆದರೆ ಪುಸ್ತಕದ ಒಡಲಲ್ಲಿ ಅವರೇ ಈ ವಿಭಾಗಕ್ರಮವನ್ನು ಕಟ್ಟುನಿಟ್ಟಾಗಿ ಅನುಸರಿಸಿಲ್ಲ. ತಿರುಮಲಾರ್ಯನನ್ನು 'ಕಾವ್ಯಕವಿ' ವಿಭಾಗದಲ್ಲೂ ಮತ್ತು ಇಮ್ಮಡಿ ನಾಗವರ್ಮನನ್ನು 'ಶಾಸ್ತ್ರಕವಿ' ವಿಭಾಗದಲ್ಲೂ ವಿವೇಚಿಸಿದ್ದಾರೆ. 'ಉಭಯಕವಿ' ಎಂಬ ವಿಭಾಗಕ್ರಮವನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಹೀಗಾಗಿ ಮೇಲಿನ ಅವರ ಅಭಿಪ್ರಾಯ ಜಾಳು ಜಾಳಾಗಿದೆ. ಕನ್ನಡ ಸಾಹಿತ್ಯಚರಿತ್ರೆಯ ವಿಭಾಗಕ್ರಮಕ್ಕೆ ಕೊಡುಗೆಯಾಗಬಹುದಾಗಿದ್ದ ಇವರ ಹೇಳಿಕೆ, ಕೇವಲ ಅಭಿಪ್ರಾಯಮಟ್ಟದಲ್ಲಿ ಮಾತ್ರ ನಿಂತಿದೆ.

ಪಂಪ, ದ್ರೌಪದಿಯನ್ನು ಏಕವಲ್ಲಭೆಯನ್ನಾಗಿ ಚಿತ್ರಿಸಿದುದನ್ನು ವಿಮರ್ಶಿಸುತ್ತ ಶ್ರೀ ಬಿ. ಎಂ. ಶ್ರೀಕಂಠಯ್ಯನವರು 'ಅರಿಕೇಸರಿಯ ದಾಕ್ಷಿಣ್ಯದಲ್ಲಿ ಭಾರತದ ಕವಿ ಜಾರಿದನು (ಕಣ್ಣು ಬಿಟ್ಟುಕೊಂಡೆ ಜಾರಿರುವನು !)' ಎಂದು ಹೇಳಿದುದನ್ನು ಅಲ್ಲಗಳೆಯಲಿಕ್ಕಾಗಿಯೇ ಪಂಪನನ್ನು ಕುರಿತ ಲೇಖನ ಮೀಸಲಾಗಿದೆ. ಜಾರಿದ ಪಂಪನನ್ನು ತಮ್ಮ ತರ್ಕ ಮತ್ತು ಊಹೆಗಳಿಂದ ಮೇಲೆತ್ತಲು ಪ್ರಯತ್ನಿಸಿದ್ದಾರೆ. "ಪಂಪನ ದೃಷ್ಟಿಯಲ್ಲಿ ಕೂಡ ದ್ರೌಪದಿ ಪಂಚವಲ್ಲಭೆ" ಎಂದು ಪ್ರಸ್ಥಾಪಿಸಲು ಪ್ರಯತ್ನಿಸಿದ್ದಾರೆ. ಅವರು ಎಷ್ಟೇ ಪ್ರಯಾಸಪಟ್ಟು ಪಂಪನನ್ನು ಜಗ್ಗಿ ತಂದು ತಮ್ಮ ವಾದಕ್ಕೆ ಸಮೀಪ ತಂದಿದ್ದರೂ ಪಂಪನ ಪ್ರಾಮಾಣಿಕ ಅಭ್ಯಾಸಿಗೆ, ಸಹೃದಯನಿಗೆ ಮಾತ್ರ ಇವರ ವಾದ ಉಚಿತವೆನಿಸದೇ ಹೋಗುತ್ತದೆ.

'ಪದಿನಾಱಱಲವಲಂಕ್ರಿಯಾರಚನೆ ಮುವತ್ತಾರು ನೇರ್ಪಟ್ಟು' ಎಂಬುದನ್ನು ವಿವರಿಸಿ, ಆ ಹದಿನಾರು ಗುಣಗಳ ಪಟ್ಟಿ ಕೊಡುವುದಕ್ಕೆ ಮಾತ್ರ ರನ್ನನ ಬಗೆಗಿನ ಲೇಖನ ಸೀಮಿತವಾಗಿದೆ. "ಭರತೋಕ್ತ ಮೂವತ್ತಾರು ಕಾವ್ಯಲಕ್ಷಣಗಳನ್ನು ಮಹಾಕಾವ್ಯದ ಇತರ ಲಕ್ಷಣಗಳೊಂದಿಗೆ ಸೇರಿಸಿ ರಚಿಸಿದ ಗದಾಯುದ್ಧವು ವಾಗ್ದೇವಿಯ ಭಾಂಡಾರ

ವನ್ನೊಡೆದು ತಂದ ಅಪೂರ್ವ ಕೃತಿರತ್ನ" ಎಂದು ಸಮರ್ಥಿಸಿದ್ದಾರೆ. ಕೇವಲ ಅಲಂಕಾರ, ಮಹಾಕಾವ್ಯದ ಲಕ್ಷಣಗಳನ್ನು ಒಳಗೊಂಡ ಮಾತ್ರಕ್ಕೆ ಒಂದು ಕಾವ್ಯ ಶ್ರೇಷ್ಠವಾಗುತ್ತದೆಯೋ ? ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಹರಿಹರನ 'ಗಿರಿಜಾಕಲ್ಯಾಣ'ದ ಮೇಲೆ ಅವನ ಮಹತ್ತನ್ನು ಸಾರಿದ್ದಾರೆ. "ಇಷ್ಟೇ ಅಲ್ಲ, ಸಂಸ್ಕೃತವನ್ನು ಹಿಡಿದು ಭಾರತದ ಎಲ್ಲ ಭಾಷೆಗಳಲ್ಲಿ ಭಕ್ತಿಯನ್ನು ಪ್ರಧಾನ ರಸವನ್ನಾಗಿಸಿ ಲಕ್ಷಣಬದ್ಧ ಪ್ರೌಢಕಾವ್ಯದಲ್ಲಿ ಅದಕ್ಕೆ ಎಡೆ ಮಾಡಿಕೊಟ್ಟವರಲ್ಲಿ ಹರಿಹರನೇ ಮೊದಲಿಗ. ಅವನ ಗಿರಿಜಾಕಲ್ಯಾಣ ಇಂಥದು" ಎಂದೂ ಹೇಳಿದ್ದಾರೆ. ಅವರ ಈ ಅಭಿಪ್ರಾಯ ಕೇವಲ ಅಭಿಮಾನನಿಷ್ಠವಾದುದೆಂದು (ಬಾಲಿಶವಾದುದೆಂದು) ಯಾರಿಗಾದರೂ ಅನಿಸುವುದು ಸಹಜ. ಕನ್ನಡದಲ್ಲಿ ಜೈನಪುರಾಣಕಾವ್ಯಗಳನ್ನು ರಚಿಸಿದ ಹರಿಹರನ ಪೂರ್ವದ ಪಂಪ, ನಾಗಚಂದ್ರರನ್ನು ನೆನೆದುಕೊಂಡರೆ ಈ ಮಾತು ಇನ್ನಷ್ಟು ಸ್ಪಷ್ಟವಾಗುತ್ತದೆ. ಭಕ್ತಿತರಂಗಿಣಿ ಓತಪ್ರೋತವಾಗಿ, ಸ್ವಚ್ಛಂದವಾಗಿ ಪ್ರವಹಿಸಿದ್ದು ಹರಿಹರನ ರಗಳೆಗಳ ಒಡಲಲ್ಲಿಯೇ ಹೊರತು, ಗಿರಿಜಾಕಲ್ಯಾಣದ ಮಡಿಲಿನಲ್ಲಲ್ಲ ಎಂಬ ಅಂಶವನ್ನೂ ಇಲ್ಲಿ ಗಮನಿಸಬೇಕು ಕನ್ನಡದಲ್ಲಿ ಉಪಚಂಪೂ ಎಂಬ ಕಾವ್ಯಪ್ರಕಾರವನ್ನು ಆರಂಭಮಾಡಿದ ಶ್ರೇಯಸ್ಸು ಹರಿಹರನದು. ಅವನ ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ ಇಂಥ ರೀತಿಯವು. ೧೪ ನೆಯ ಶತಮಾನದ ವಿಶ್ವೇಶ್ವರನೆಂಬ ಲಾಕ್ಷಣಿಕ ತನ್ನ 'ಚಮತ್ಕಾರ ಚಂದ್ರಿಕೆ' ಎಂಬ ಲಕ್ಷಣ ಗ್ರಂಥದಲ್ಲಿ ಈ ಉಪಚಂಪೂವಿನ ವಿವರಣೆ ನೀಡಿದ್ದಾನೆ ಎಂಬ ಹೊಸ ಅಂಶದತ್ತ ನಮ್ಮ ಗಮನ ಸೆಳೆದಿದ್ದಾರೆ. ಹರಿಹರನ ಛಂದಸ್ಸಿನ ಅಭ್ಯಾಸದಲ್ಲಿ ಶ್ರೀ ಚಿಟಗುಪ್ಪಿಯವರ ಹೊಸತನ ಗಮನಾರ್ಹವಾಗಿದೆ.

ಆಂಡಯ್ಯ ಮತ್ತು ಚೌಂಡರಸರನ್ನು ಕುರಿತ ಭಾಗ ಕವಿಗಳನ್ನೇ ಮರೆಸುತ್ತದೆ. ಆ ಇಬ್ಬರ ಬಗೆಗಿನ ಲೇಖನದಲ್ಲಿ ತತ್ಸಮ–ತದ್ಭವ ಮತ್ತು ಕಾವ್ಯನೀತಿಗಳ ಬಗೆಗಿನ ಸಾಮಾನ್ಯ ಹೇಳಿಕೆಗಳನ್ನು ಚರ್ಚಿಸಿದ್ದಾರೆ. ಅವುಗಳನ್ನು ಆಂಡಯ್ಯ ಮತ್ತು ಚೌಂಡರಸರಿಗೆ ಅನ್ವಯಿಸಿದ ಮಾರ್ಗವೂ ಸಮರ್ಥವಾಗಿಲ್ಲ. ಆ ಕವಿಗಳೀರ್ವರ ಕಾವ್ಯಮೌಲ್ಯದ ಬಗೆಗೆ ಒಂದಿನಿತನ್ನೂ ಹೇಳಿಲ್ಲ. ಕುಮಾರವ್ಯಾಸ–ಚಾಮರಸರನ್ನು ಕುರಿತ ಭಾಗವಂತೂ ತುಂಬ ಬಡವಾಗಿದೆ, ಕೇವಲ ಪ್ರಶಸ್ತಿಯ ಎರಡು ಮಾತುಗಳನ್ನು ಹೇಳಿ ಮುಂದೆ ಸಾಗಿದ್ದಾರೆ.

ತ್ಯಾಗ–ಭೋಗಗಳನ್ನು ಸಮನ್ವಯಿಸಿ, ರತ್ನಾಕರ ಕಾವ್ಯ ರಚಿಸಿ ತನ್ನ ಸ್ವೋಪಜ್ಞತೆಯನ್ನು ಮೆರೆದಿದ್ದಾನೆ ಎಂದು ಹೇಳುವ ಚಿಟಗುಪ್ಪಿಯವರು ಅದಕ್ಕೆ ಉಚಿತವಾದ ಮತ್ತು ಸಮರ್ಥವಾದ ವಿವರಣೆಯನ್ನೇ ಕೊಡುವುದಿಲ್ಲ. ಕೇವಲ "ಇಂದಿನ ವಾತಾವರಣದಲ್ಲಿ ಕೂಡ ಅಶ್ಲೀಲಾನ್ವೇಷಿಗಳಿಗೆ ಅವಕಾಶವಿಲ್ಲದಂತೆ ಒಂದಂಶವನ್ನೂ ಬಿಡದೆ

ಶೃಂಗಾರದ ಎಲ್ಲ ಸನ್ನಿವೇಶಗಳನ್ನು ಹೃದಯಂಗಮವಾಗಿ ಬಣ್ಣಿಸಿದ ರತ್ನಾಕರನ ಪ್ರತಿಭೆ, ಕೌಶಲ್ಯಗಳಿಗೆ ಸಮಕಟ್ಟುವ ಕವಿಗಳು ಸಂಸ್ಕೃತದಲ್ಲಿ ಕೂಡ ಕಡಿಮೆ...." ಎಂಬ ಅಭಿಮಾನದ ಮಾತುಗಳನ್ನು ಹೇಳಿ ತೃಪ್ತಿಪಟ್ಟಿದ್ದಾರೆ.

"ಕನ್ನಡ ಗದ್ಯಕವಿಗಳಲ್ಲಿ ತಿರುಮಲಾರ್ಯನೇ ಆದಿಕವಿ" ಎಂಬ ಪ್ರಶಸ್ತಿವಾಕ್ಯದೊಂದಿಗೇ ಅವನ ವಿಷಯ ಪ್ರಾರಂಭಿಸುತ್ತಾರೆ. ಅವರ ಅಭಿಪ್ರಾಯದಲ್ಲಿ ವಡ್ಡಾರಾಧನೆ ಮತ್ತು ಚಾವುಂಡರಾಯ ಪುರಾಣಗಳು ಗದ್ಯಕೃತಿಗಳಲ್ಲವಂತೆ! ಅವರು ಕೊಡುವ ವಿವರಣೆ: "ವಡ್ಡಾರಾಧನೆ, ಚಾವುಂಡರಾಯ ಪುರಾಣಗಳು ಗದ್ಯದಲ್ಲಿದ್ದರೂ ಆ ಗದ್ಯ, ಕಾವ್ಯಗದ್ಯ. ಅಂದರೆ ಲಾಕ್ಷಣಿಕ ಸಮ್ಮತ ಹರ್ಷಚರಿತ, ಕಾದಂಬರಿ, ದಶಕುಮಾರಚರಿತೆ ಬಗೆಯ ಗದ್ಯವಲ್ಲ. ಅದು ವಸ್ತುನಿಷ್ಠ ಕಥಾಗದ್ಯ...." ನೋಡಿದರೆ ವಿಚಿತ್ರವೆನಿಸುತ್ತದೆ. ಕೇವಲ ಸಂಸ್ಕೃತದ ರೀತಿಯಲ್ಲಿ ಬರೆದುದು ಲಕ್ಷಣಸಮನ್ವಿತವಾದುದು, ವರ್ಣನಿಷ್ಠವಾದುದು ಮಾತ್ರ ಗದ್ಯ ಎಂಬ ಅವರ ಅಭಿಪ್ರಾಯವನ್ನು ನೋಡಿದರೆ ಮೋಜವೆನಿಸುತ್ತದೆ. ಅಭಿಮಾನಪೂರಿತ ವಿಮರ್ಶಕನು ತಾನಾಯ್ದುಕೊಂಡ ಕವಿಗಳ ಬಗೆಗೆ ಎಂಥ ಪ್ರಶಸ್ತಿಯ ಮಾತುಗಳನ್ನು ಹೇಳಬಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಪ್ರಾರಂಭದಲ್ಲಿ ತಿರುಮಲಾರ್ಯನನ್ನು ಉಭಯಕವಿ ಎಂದು ನಿರ್ದೇಶಿಸಿ, ಒಳಗೆ ಅವನ ಶಾಸ್ತ್ರಕವಿತ್ವದ ಬಗೆಗೆ ಒಂದೂ ಮಾತನ್ನಾಡಿಲ್ಲ.

ಕೆಂಪುನಾರಾಯಣ ಮತ್ತು ಮುದ್ದಣರನ್ನು ಕುರಿತ ಭಾಗವೂ ತುಂಬ ಏರುಪೇರಾಗಿದೆ. ಕೆಂಪುನಾರಾಯಣ ಅಮಾತ್ಯರಾಕ್ಷಸನನ್ನು ಚಂದ್ರಗುಪ್ತನ ಮಂತ್ರಿಯಾಗಿ ನಿಯಮಿಸಿ ಸನಾತನಧರ್ಮಸ್ಥಾಪನೆಗೆ ಅನುವುಮಾಡಿದ್ದಾನೆ. ತನ್ಮೂಲಕ ಅದಕ್ಕೆ (ಮುದ್ರಾಮಂಜೂಷ) ಮಹೋದ್ದೇಶದ ಮಹತಿ ಎಂದಿದೆ. ಇದೊಂದು ಅವನು ಮಾಡಿಕೊಂಡಿರುವ ಮಹತ್ವದ ವ್ಯತ್ಯಾಸ ಎಂದೂ ಹೇಳುತ್ತಾರೆ! ಮುದ್ದಣನು ಸಂಪ್ರದಾಯದ ಸೆರೆಯಲ್ಲಿ ಸಿಕ್ಕೂ ಬಡತನವನ್ನುಂಡೂ ಸವ್ಯಸಾಚಿಯಾಗಿ ಹೊಸಗನ್ನಡ ಸಾಹಿತ್ಯದ ದ್ವಾರಪಾಲನಾಗಿದ್ದಾನೆಂಬುದನ್ನು ಹಿತಮಿತವಾಗಿ ಹೇಳಿದ್ದಾರೆ.

ಶಾಸ್ತ್ರಕವಿಗಳು ಎಂಬ ವಿಭಾಗದಲ್ಲಿ ನೃಪತುಂಗ, ಎರಡನೆಯ ನಾಗವರ್ಮ ಮತ್ತು ಕವಿಕಾಮರನ್ನು ವಿವೇಚಿಸಿದ್ದಾರೆ. ನೃಪತುಂಗನ ಬಗೆಗೆ ಈಗಾಗಲೇ ಅವರು 'ಕವಿರಾಜಮಾರ್ಗ ಪ್ರಶಸ್ತಿ'ಯಲ್ಲಿ ಹೇಳಿದ ವಿಚಾರಗಳನ್ನೇ, ಊಹೆಗಳನ್ನೇ ಮತ್ತೆ ಇಲ್ಲಿ ವ್ಯಕ್ತಪಡಿಸಿದ್ದಾರೆ. ಆದರೂ ಕವಿರಾಜಮಾರ್ಗಕಾರ (ಅವರು ಹೇಳುವಂತೆ ನೃಪತುಂಗ) ಭಾವ, ಭಾವಿಕಾಲಂಕಾರ ಮುಂತಾದ ಹೊಸ ಸಂಗತಿಗಳನ್ನು ವ್ಯಕ್ತಪಡಿಸಿ ಭಾರತೀಯ ಕಾವ್ಯಮೀಮಾಂಸೆಗೆ ಹೇಗೆ ಕಾಣ್ಕೆಯಿತ್ತಿದ್ದಾನೆ ಎಂಬುದರ ವಿವರಣೆ ಮೆಚ್ಚುವಂತಹದು.

ಸಂಸ್ಕೃತದಲ್ಲಾಗಲಿ, ಪ್ರಾಕೃತಾದಿ ಇತರ ದೇಶೀ ಭಾಷೆಗಳಲ್ಲಾಗಲಿ ಕಾವ್ಯಶಾಸ್ತ್ರದ

ನಾಲ್ಕೂ ಅಂಗಗಳನ್ನು ಕುರಿತು ಒಂದೊಂದು ಗ್ರಂಥವನ್ನು ಅಂದರೆ ಛಂದಸ್ಸು, ವ್ಯಾಕರಣ, ಅಲಂಕಾರ, ಕೋಶಗಳನ್ನು ರಚಿಸಿದವರು ಸಮಗ್ರ ಭಾರತದಲ್ಲಿ ಇಬ್ಬರೇ ಇಬ್ಬರು. ಅವರಲ್ಲಿ ಕರ್ನಾಟಕದ ಇಮ್ಮಡಿ ನಾಗವರ್ಮ ಒಬ್ಬ. ಸಾಂಪ್ರದಾಯಿಕ ವಿದ್ದರೂ ಅವನ ಅಲಂಕಾರಗ್ರಂಥ, ಕಾವ್ಯಾವಲೋಕನದಲ್ಲಿರುವ ಕಾವ್ಯಲಕ್ಷಣವು ವ್ಯಾಪಕವಿದ್ದು, ನೃಪತುಂಗನ ಭಾವತತ್ವ ಸೇರಿ ಕಾವ್ಯದ ಎಲ್ಲ ಲಕ್ಷಣಗಳನ್ನು ಒಳ ಗೊಂಡಿದೆ (?) ಎಂಬುದು– ಎರಡನೆಯ ನಾಗವರ್ಮನನ್ನು ಕುರಿತ ಇವರ ಅಭಿಪ್ರಾಯ ವಾಗಿದೆ. ಈ ಇಮ್ಮಡಿ ನಾಗವರ್ಮನ 'ವರ್ಧಮಾನಪುರಾಣ' ಇವರ ಲಕ್ಷ್ಯಕ್ಕೆ ಬಂದಿಲ್ಲ ಅಥವಾ ಇವರೇ ಅದನ್ನು ಲಕ್ಷಿಸಿಲ್ಲ ಎಂಬುದನ್ನಿಲ್ಲಿ ಗಮನಿಸಬೇಕು.

ಕೊನೆಗೆ ಅನುಭಾವಸಾಹಿತ್ಯ, ವಚನ, ಉಗಾಭೋಗ, ಸುಳಾದಿಗಳನ್ನು ಪರಿಚ ಯಾತ್ಮಕವಾಗಿ ವಿವರಿಸಿದ್ದಾರೆ, ವಿಮರ್ಶಿಸಿದ್ದಾರೆ. ವಚನ ಹಾಗೂ ಉಗಾ ಭೋಗಗಳಿಗೂ ಇರುವ ಸಾಮ್ಯ-ಸಂಬಂಧ ಕುತೂಹಲಕಾರಿಯಾಗಿದೆ. ಶ್ರೀ ಚಿಟಗುಪ್ಪಿ ಯವರ ಸಂಶೋಧಕಪ್ರಜ್ಞೆ ಇಲ್ಲಿ ಹಸಿಹಸಿಯಾಗಿದೆಂಬುದನ್ನು ನೋಡಬಹುದು.

ನಾಟಕ, ಯಕ್ಷಗಾನ ಭಾಗದಲ್ಲಿ ನಾಟಕದ ಬಗೆಗೆ ಕೆಲವು ಸಾಮಾನ್ಯ ಮಾತುಗಳನ್ನು ಹೇಳಿದ್ದಾರೆ. ಯಕ್ಷಗಾನದ ಮೇಲೆ ಮಾತ್ರ ಅಭ್ಯಾಸಪೂರ್ಣ ವಿವರಣೆಯನ್ನೊದಗಿಸಿ ದ್ದಾರೆ. ಕೊನೆಗೆ ಯಕ್ಷಗಾನವೇ ಕನ್ನಡ ನಾಟಕದ ಮೂಲ ಎಂಬ ನಿರ್ಣಯ ತೆಗೆದು ಕೊಂಡಿದ್ದಾರೆ.

ಅನುಬಂಧದಲ್ಲಿ ರಗಳೆ, ಷಟ್ಪದಿಗಳ ಲಕ್ಷಣ– ಚರಿತ್ರೆಗಳನ್ನು ವಿವರಿಸಿದ್ದಾರೆ. ಅಭ್ಯಾಸಿಗಳಿಗೆ ತುಂಬ ಉಪಯುಕ್ತವಾದ, ವಿವರವಾದ ವಿವರಣೆಯನ್ನು ಇಲ್ಲಿ ನೀಡಿ ದ್ದಾರೆ. ಬೇರೆಬೇರೆ ಆಕರಗಳಿಂದ ಸಂಗ್ರಹಿಸಿದ ವಿಷಯಗಳ ವ್ಯಾಪ್ತಿಯಿಂದ ಈ ಭಾಗ ತುಂಬ ಶಕ್ತಿಪೂರ್ಣವಾಗಿದೆ.

ತಾವು ಎತ್ತಿಕೊಂಡಿರುವ ಕವಿಗಳನ್ನು ಸಮರ್ಥಿಸಲಿಕ್ಕೆ ಟಿ. ಎಸ್. ಈಲಿಯಟ್, ಎಸ್. ಕೇ. ಡೆ, ಪಂಡಿತ ನೆಹರು, ಸಿಸ್ಟರ ನಿವೇದಿತಾ ಮುಂತಾದ ಪ್ರಭೃತಿಗಳ ಇಂಗ್ಲೀಷ ವಾಕ್ಯಖಂಡಗಳನ್ನು ಆರಿಸಿಕೊಟ್ಟಿದ್ದಾರೆ, ಜೊತೆಗೆ ಅವುಗಳ ಕನ್ನಡ ಅನುವಾದವನ್ನು ನೀಡಿದ್ದಾರೆ. ಆದರೆ ಅನುವಾದ ಪ್ರಾಮಾಣಿಕವಾಗಿಲ್ಲ! ಆ ಅನುವದಿತ ಭಾಗದಲ್ಲಿ ತಮ್ಮ ಮನದ ಭಾವಗಳನ್ನು ತುಂಬಿ ಬಿಡುತ್ತಾರೆ. ಉದಾ :

"Greatness is but another name for interpretation" ಸಿಸ್ಟರ ನಿವೇದಿತಾರ ಈ ವಾಕ್ಯವನ್ನು ಶ್ರೀ ಚಿಟಗುಪ್ಪಿಯವರು,

"ಮಹಿತಿಯೆಂಬುದು ಸುಲಭ, ಸುಂದರ ಹೃದಯಸಂವಾದಿ ಪ್ರತಿಪಾದನೆಗಿರುವ ಇನ್ನೊಂದು ಹೆಸರು"— ಎಂದು ಅನುವದಿಸಿರುವುದನ್ನು ಕಂಡಾಗ ಮೇಲಿನ ನಮ್ಮ ಮಾತು ಸ್ಪಷ್ಟವಾಗುತ್ತದೆ.

ಕೃತಿ ಹೀಗೆ ಅಭಿಮಾನನಿಷ್ಠವಾಗಿ ಹುಟ್ಟಿಕೊಂಡಿದ್ದರೂ ಲೇಖಕರು ಹಲವು ಕವಿಗಳ ಮೇಲೆ ಹಲವು ಸಮಸ್ಯೆಗಳ ಮೇಲೆ ಹೊಸಬೆಳಕು ಬೀರಿದ್ದಾರೆ. ಹೊಸ ದೃಷ್ಟಿಯಿಂದ ಆಯಾ ಕವಿಗಳ ಅಭ್ಯಾಸಕ್ಕೆ ತೊಡಗಲು ಪ್ರೇರೇಪಿಸಿದ್ದಾರೆ. ಒಟ್ಟಿನಲ್ಲಿ ಸಹೃದಯನನ್ನು ಸ್ವತಂತ್ರವಾಗಿ, ಹಿಂದಿನವರಿಗಿಂತ ಭಿನ್ನರೀತಿಯಲ್ಲಿ ವಿಚಾರ, ವಿಮರ್ಶೆ ಗೈಯಲು ದಾರಿ ಮಾಡಿಕೊಟ್ಟಿದ್ದಾರೆ. ಈ ಕೃತಿಯ ಮೂಲಕ ಅವರ ವಿಮರ್ಶೆ ಸಮತೋಲನ ಕಾಯ್ದುಕೊಂಡಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಶ್ರೀನಿವಾಸ ಕುಲಕರ್ಣಿ

■ ■

ಗೌರವ ಡಾಕ್ಟರೇಟ ಪದವಿ ಸ್ವೀಕರಿಸಿದ ಮಹನೀಯರ ಪರವಾಗಿ ಪ್ರೊ. ದೇ. ಜ. ಗೌ. ಸಲ್ಲಿಸಿದ ಕೃತಜ್ಞತೆ

ಸರಸ್ವತೀ ಶಕ್ತಿಯ ಪ್ರತಿಮಾಸ್ವರೂಪದಂತೆ ಹಾಗೂ ತಾಯಿ ಭುವನೇಶ್ವರಿಯ ಅವತಾರಶ್ರೀಯಂತೆ ಪ್ರಜ್ವಲಿಸುತ್ತಿರುವ, ನಾಲ್ಕರಲ್ಲೊಂದಾಗಿ ಎಲ್ಲವೂ ತಾನೆಯಾಗಿ ಕಂಗೊಳಿಸುತ್ತಿರುವ ಕರ್ನಾಟಕ ವಿಶ್ವವಿದ್ಯಾನಿಲಯ ತನ್ನ ಬೆಳ್ಳಿಯ ಹಬ್ಬದ ಶುಭ ಮುಹೂರ್ತದಲ್ಲಿ ನನ್ನನ್ನು ತನ್ನ ವಾತ್ಸಲ್ಯದ ಶಿಷ್ಯನನ್ನಾಗಿ, ಕಾರುಣ್ಯದ ಕಂದನನ್ನಾಗಿ ಸ್ವೀಕರಿಸಿ, ತನ್ನ ಪ್ರೇಮಾಲಿಂಗನದ ಶ್ರೀರಕ್ಷೆಯಲ್ಲಿ ಕಾಪಿಟ್ಟುಕೊಂಡು ನನ್ನನ್ನು ಚಿರ ಶ್ರೀಮಂತನನ್ನಾಗಿ, ಪುಣ್ಯನನ್ನಾಗಿ ಮಾಡಿದ್ದರಿಂದ ಪುಲಕಿತಗಾತ್ರನಾಗಿ ಆ ತಾಯಿಯ ಅಡಿದಾವರೆಯಲ್ಲಿ ಪ್ರಪ್ರಥಮವಾಗಿ ನನ್ನ ಭಕ್ತಿಪೂರ್ವಕ ನಮನಗಳನ್ನು ಸಮರ್ಪಿಸುತ್ತೇನೆ. ಈ ಪದವಿ ಪ್ರದಾನಕ್ಕೆ ಪ್ರೇರಕ ಶಕ್ತಿಗಳಂತೆ, ಸೂತ್ರಧಾರಿಗಳಂತೆ, ಪುರೋಹಿತರಂತೆ ಕಾರಣರಾಗಿರುವ ನಿರ್ವ್ಯಾಜಸ್ನೇಹಶೀಲರೂ ನಿರ್ಮತ್ಸರರೂ ಅನಿಮಿತ್ತ ಬಂಧುಗಳೂ ಆದ ಇಲ್ಲಿಯ ಎಲ್ಲ ಸಜ್ಜನರಿಗೆ, ಮುಖ್ಯವಾಗಿ ಶಿವಶರಣರೂ ಮಹಾವಿದ್ವಾಂಸರೂ ನೆಚ್ಚಿನ ಕುಲಪತಿಗಳೂ ಆದ ಡಾ. ಆರ್. ಸಿ. ಹಿರೇಮಠ ಅವರಿಗೂ ಮತ್ತು ಮಹಾಮಾನ್ಯರೂ ರಾಷ್ಟ್ರನಾಯಕರೂ ಕುಲಾಧಿಪತಿಗಳೂ ಆದ ಶ್ರೀ ಮೋಹನಲಾಲ ಸುಖಾದಿಯಾ ಅವರಿಗೂ ನನ್ನ ವಿನಮ್ರ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಮನವಿಂದು ಸಂತೋಷ ಸಂಕೋಚಗಳ ತೂಗುಯ್ಯಾಲೆಯಾಗಿ, ಅವುಗಳ ಸಮ್ಮಿಶ್ರಣದಿಂದ ಇಬ್ಬಗೆಯಾಗಿ ಲಿವಿಲಿವಿ ಒದ್ದಾಡುತ್ತಿದೆ. ಭಗವತ್ಕೃಪೆಯಿಂದ ಹಾಗೂ ಗುರುಮಹಿಮೆಯಿಂದ ಬಿರುದು ಬಾವಲಿ ಪದವಿ ಪ್ರಶಸ್ತಿಗಳೆಂದರೆ ನನ್ನ ಮನಸ್ಸು ಮಾತ್ರವಲ್ಲ, ಇಡೀ ವ್ಯಕ್ತಿತ್ವವೇ ನಾಚಿಕೆಯ ಮುಳ್ಳಾಗಿ ಮುದುಡುತ್ತಿದೆ. ಅಂತರಂಗದ ಭಂಗಿ ಏನಿದ್ದರೂ ಮಿತ್ರರ ಪ್ರೇಮಪಾಶಕ್ಕೂ ಬಲಾತ್ಕಾರಕ್ಕೂ ಕಟ್ಟುಬಿದ್ದು, ನಾನಿಂದು ಹಾಜರಾಗಿದ್ದೇನೆ. ನನ್ನ ಸಂಕೋಚಕ್ಕೆ ಮುಖ್ಯವಾದ ಕಾರಣ ಎರಡು : ನನಗಿಂತ ಹೆಚ್ಚು ಅರ್ಹರೂ ಅರ್ಥಿಗಳೂ ಆದ ಮಹನೀಯರು ಹಲವರಿದ್ದಾರೆಂಬುದು ಒಂದು; ನನ್ನ ಸೇವೆ ಮಹತ್ವವಾದದ್ದಲ್ಲ, ಸ್ವಾರ್ಥದೂರವಾದದ್ದಲ್ಲವೆನ್ನುವುದು ಇನ್ನೊಂದು. ಪೂರ್ವಾಚಾರ್ಯರು ಮಾಡಲಾರದ್ದನ್ನೇನಾದರೂ ನಾನು ಮಾಡಿದ್ದೇನೆಯೆ ? 'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂಬ ಗುರುವಾಣಿಯನ್ನು ನಂಬಿದವ, ನಂಬಿ ಕೃತಾರ್ಥನಾದವ ನಿಜ. ನಿಮ್ಮ ಔದಾರ್ಯ ಅಲ್ಪವನ್ನು ಮಹತ್ವಕ್ಕೇರಿಸುತ್ತಿರುವಾಗ ನಾನಳಿದು ಸೊನ್ನೆಯಾಗುತ್ತ, ನನ್ನೆಲ್ಲ ಶ್ರೇಯಸ್ಸಿಗೆ

ಕಾರಣರಾದ ಹಿರಿಯರ ಹಾಗೂ ಗೆಳೆಯರ ಚೇತನಗಳನ್ನು ನನ್ನ ಹೃದಯಪೀಠಕ್ಕೆ ಆಹ್ವಾನಿಸಿ, ಈ ಎಲ್ಲ ಗೌರವವನ್ನು ಅವರಿಗರ್ಪಿಸುತ್ತೇನೆ.

ಕರ್ನಾಟಕವೆಂಬ ಪುಣ್ಯನಾಮವನ್ನು ತಳೆದಿರುವ, ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ಜ್ಞಾನಪೀಯೂಷವನ್ನೂ ಅಧ್ಯಾತ್ಮತೇಜಸ್ಸನ್ನೂ ತುಂಬುತ್ತಿರುವ ಈ ಮಹಾಸಂಸ್ಥೆಯ ವಿದ್ಯಾರ್ಥಿಯಾಗುವ ಹೆಮ್ಮೆಯಿಂದ, ಕೇಂದ್ರದ ವಿದ್ಯಾಸಚಿವ ಪ್ರೊ. ನೂರುಲ್ ಹಸನ್ ಅವರ, ಜ್ಞಾನವೃದ್ಧರೂ ವಯೋವೃದ್ಧರೂ ಶಿಕ್ಷಣವೇತ್ತರೂ ಕನ್ನಡ ತಾಯಿಯ ವರಪುತ್ರರೂ ಆದ ಶ್ರೀ ನಂದೀಮಠ ಮತ್ತು ಶ್ರೀ ದಿನಕರ ದೇಸಾಯಿ ಅವರ, ಆತ್ಮೀಯ ಬಂಧುಗಳೂ ವರಕವಿಗಳೂ ಹಿರಿಯರಿಟ್ಟ ಹೆಸರನ್ನು ಸಾರ್ಥಕಪಡಿಸಿಕೊಂಡಿರುವವರೂ ಆದ ಶ್ರೀ ಸಿದ್ಧಯ್ಯ ಪುರಾಣಿಕ ಅವರ, ಅಂತೆಯೇ ಕರ್ನಾಟಕದ ಹಾಗೂ ಭಾರತದ ಭವಿಷ್ಯವನ್ನು ರೂಪಿಸಲಿರುವ, ನಮ್ಮೆಲ್ಲರ ಕಣ್ಮಣಿಗಳಾಗಿರುವ ವಿದ್ಯಾರ್ಥಿವೃಂದದ ಜತೆಯಲ್ಲಿ ಪದವಿ ಪಡೆಯುವ ಭಾಗ್ಯವಿಶೇಷದಿಂದ ನನ್ನ ಹೃದಯ ಸಂತೋಷದಿಂದ ಉಕ್ಕುಗಡಲಾಗಿದೆ.

ಸಾಹಿತ್ಯಕ್ಷೇತ್ರದಲ್ಲಾಗಲಿ ಶಿಕ್ಷಣಕ್ಷೇತ್ರದಲ್ಲಾಗಲಿ ನಾನು ಉದ್ದೇಶಿಸಿದ್ದನ್ನೆಲ್ಲ ಮಾಡಲಾಗಿಲ್ಲ. ಕನ್ನಡದ ಸ್ಥಾನಮಾನಗಳು ಗಟ್ಟಿಯಾಗಿಲ್ಲವೆಂಬ ಕೊರಗಂತು ಇದ್ದೇ ಇದೆ. ಆದರೂ ನನ್ನ ಅಧಿಕಾರಾವಧಿಯ ಕೊನೆಯಲ್ಲಿ ಭಗವತ್ಕೃಪೆ ಮತ್ತು ಬಸವಾದಿ ಮಹಾಸಂತರ ಹಾಗೂ ನೃಪತುಂಗ, ಪಂಪ, ಹರಿಹರ, ನಾರಣಪ್ಪಾದಿ ಮಹಾಕವಿಗಳ ಕರುಣೆಯೇ ಈ ಮಹಾ ವಿದ್ಯಾಲಯದ ಆಶೀರ್ವಾದದ ಮೂಲಕ ತನ್ನ ಚೇತನಕ್ಕಿಳಿಯುತ್ತದೆಯೆಂಬ ಸಮಾಧಾನ ನನ್ನ ಉತ್ಸಾಹವನ್ನೂ ಕ್ರಿಯಾಶಕ್ತಿಯನ್ನೂ ಬಹುಮಡಿಗೊಳಿಸುತ್ತಿದೆ. ಇಂದು ರಾಜ್ಯದ ವಿಶ್ವವಿದ್ಯಾನಿಲಯಗಳು ಸ್ಥಿತ್ಯಂತರದ ಪರಿಸ್ಥಿತಿಯಲ್ಲಿದ್ದು ಹೊಸ ಯುಗದಲ್ಲಿ ಕಾಲಿಡುತ್ತಿವೆ. ಯಾವ ಶಾಸನವೂ ಸ್ಥಿರವಲ್ಲ, ಪವಿತ್ರವಲ್ಲ: ರಾಷ್ಟ್ರದ ಉದ್ದೇಶಸಾಧನೆಗೆ ತಕ್ಕಂತೆ ಅದು ಪರಿವರ್ತನೆಗೊಳ್ಳಲೇಬೇಕು. ಪರಿವರ್ತನೆ ಜೀವಂತಿಕೆಯ ಲಕ್ಷಣವೆಂಬ ತತ್ವವನ್ನು ಸಂಪೂರ್ಣವಾಗಿ ಒಪ್ಪಬೇಕಾದರೂ ನಾಡಿನ ಸಕಲ ಸನ್ಮಂಗಳಗಳಿಗೆ, ವಿಚಾರಸ್ವಾತಂತ್ರ್ಯಕ್ಕೆ ಹಾಗೂ ಜ್ಞಾನವಿಕಾಸಕ್ಕೆ ಕಾರಣವಾಗಬೇಕಾದ ವಿಶ್ವವಿದ್ಯಾನಿಲಯಗಳಲ್ಲಿ ಸ್ವತಂತ್ರವಾದ ಆದರೆ ಶಿಸ್ತಿನ ವಾತಾವರಣ ಅತ್ಯಗತ್ಯವೆಂಬುದನ್ನು ಪ್ರಾಜ್ಞರು ಮರೆಯಲಾರರೆಂದೂ, ಅವರ ಗಮನ ಆ ಕಡೆಗೆ ಹರಿಯುತ್ತದೆಂದೂ ಈ ಪವಿತ್ರ ಸಂದರ್ಭದಲ್ಲಿ ನಾನು ನೆನಪುಕೊಡುತ್ತಿದ್ದೇನೆ.

'ಇವನಾರವ ಇವನಾರವ ಇವನಾರವನೆಂದೆನಿಸದೆ', 'ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿ'ಸುವ ಈ ವಿಶ್ವವಿದ್ಯಾನಿಲಯ ಮಹಾಮಾತೆಗೆ ನಾನೇನು ಸೇವೆ ಸಲ್ಲಿಸಿಯೇನು ? ಕಿಂಚಿತ್ ಸೇವೆ ಸಲ್ಲಿಸುವೆನೆಂದರೂ ಅಹಂಕಾರದ ಮಾತಾಗುತ್ತದೆ. ನಾನೆಲ್ಲಿಯೇ ಇರಲಿ, ಯಾವ ಸ್ಥಿತಿಯಲ್ಲಿಯೇ ಇರಲಿ ಕನ್ನಡ ನಾಡಿನ ಅಭ್ಯುದಯದಲ್ಲಿ

ಭಾರತದ ಅಭ್ಯುದಯವಿದೆ, ಭಾರತದ ಕಲ್ಯಾಣವೇ ಕನ್ನಡದ ಕಲ್ಯಾಣ, ಒಂದರ ಹಿತ ಮತ್ತೊಂದರ ಹಿತಕ್ಕೆ ವಿರೋಧವಾಗಬಾರದೆಂದು ತಿಳಿದು, ರಾಷ್ಟ್ರಧ್ಯೇಯಮಂತ್ರಗಳಾದ ಸಮಾಜವಾದ, ಸೆಕ್ಯೂಲರಿಸಮ್, ಪ್ರಜಾಸತ್ತೆ ಮತ್ತು ದೀನದಲಿತೋದ್ಧಾರಗಳ ಸಾಧನೆ ಪಾಲನೆಗಾಗಿ ಆತ್ಮಸಮರ್ಪಣ ಮನೋಭಾವದಿಂದ ಪ್ರಾಮಾಣಿಕವಾಗಿ ದುಡಿಯಲು ಈ ಉತ್ಸವ ಪುನಃಪ್ರೇರಿಸುತ್ತಿದೆ ಎಂದು ಭಾವಿಸಿ, ಕುಲಾಧಿಪತಿಗಳಾದ ಮಹಾಮಾನ್ಯ ಶ್ರೀ ಮೋಹನಲಾಲ ಸುಖಾದಿಯಾ ಅವರನ್ನೂ, ಸನ್ಮಾನ್ಯ ಕುಲಪತಿ ಡಾ. ಹಿರೇಮಠ ಅವರನ್ನೂ, ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಮಿತ್ರರನ್ನೂ, ತಮ್ಮೆಲ್ಲರನ್ನೂ ಮತ್ತೊಮ್ಮೆ ಮನವಾರೆ ವಂದಿಸುತ್ತೇನೆ.

೨೫–೧೦–೧೯೭೫ —ದೇ. ಜವರೇಗೌಡ

ಸಂಪಾದಕೀಯ

ಬೆಳ್ಳಿಹಬ್ಬದ ಪ್ರಾರಂಭೋತ್ಸವ

ಕರ್ನಾಟಕ ವಿಶ್ವವಿದ್ಯಾಲಯ ಸಾರ್ಥಕವಾದ ೨೪ ವರ್ಷಗಳನ್ನು ದಾಟಿ, ೨೫ನೆಯ ವರ್ಷದಲ್ಲಿ ಕಾಲಿಡುತ್ತಿರುವ ಶುಭಪ್ರಸಂಗದಲ್ಲಿ ತನ್ನ 'ಬೆಳ್ಳಿಹಬ್ಬ'ವನ್ನು ಆಚರಿಸುತ್ತಲಿದೆ. ಈ ಹಬ್ಬದ ಪ್ರಾರಂಭೋತ್ಸವವನ್ನು ಕೇಂದ್ರಸರಕಾರದ ಬೃಹದುದ್ಯಮ ಮಂತ್ರಿಗಳಾದ ಡಾ. ಟಿ. ಎ. ಪೈ ಅವರು ನೆರವೇರಿಸಿದರು. ಭಾರತದ ತ್ರಿಕಾಲಚಿತ್ರಗಳನ್ನು ಆತ್ಮೀಕರಿಸಿಕೊಂಡ ಶ್ರೀಯುತರು ಈ ವಿಶ್ವವಿದ್ಯಾಲಯದ ಸಾಧನೆ–ಸಿದ್ಧಿಗಳನ್ನು ಪ್ರಶಂಸಿಸುತ್ತ, ಭಾರತೀಯ ವಿಶ್ವವಿದ್ಯಾಲಯಗಳು ಈ ದೇಶದ ತೀರ ಕೆಳಗಿನ ವ್ಯಕ್ತಿಗೂ ತನ್ನ ಜ್ಞಾನದ ಫಲಗಳನ್ನು ನೀಡಲಿ ಎಂದು ಹಾರೈಸಿದರು. ಒಂದು ವರ್ಷದುದ್ದಕ್ಕೂ ಜರುಗಲಿರುವ ಈ ಮಹೋತ್ಸವ ಜಯಪ್ರದವಾಗಿ ಜರುಗಲಿ ಎಂದು ಭಾರತಿ ಹಾರೈಸುತ್ತದೆ.

೨೬ನೆಯ ಘಟಿಕೋತ್ಸವ

ಕರ್ನಾಟಕ ವಿಶ್ವವಿದ್ಯಾಲಯ ೨೬ನೆಯ ಘಟಿಕೋತ್ಸವವನ್ನು ಅಭೂತಪೂರ್ವವಾಗಿ ಆಚರಿಸಿತು. ಕೇಂದ್ರ ಶಿಕ್ಷಣ ಸಚಿವರೂ ಲೋಕಪ್ರಸಿದ್ಧ ಇತಿಹಾಸ ಪ್ರಾಧ್ಯಾಪಕರೂ ಆದ ಶ್ರೀ ನೂರುಲ್‌ಹಸನ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಬಂಗಾರದ ಭವಿಷ್ಯವನ್ನು ಅನುಭವಿಸಲಿ, ವಿದ್ಯಾರ್ಥಿಗಳು ದೇಶದ ಸುಪ್ರಜೆಗಳಾಗಿ ಬೆಳೆಯಲಿ, ಬೇಗಲಿಯೆಂದು ಹಾರೈಸಿದರು. ಈ ಪ್ರಸಂಗದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ನೂರಲ್‌ಹಸನ್ ಅವರನ್ನೊಳಗೊಂಡು ಡಾ. ಎಸ್. ಸಿ. ನಂದಿಮಠ, ಪ್ರೊ. ದೇ. ಜ. ಗೌ., ಶ್ರೀ ಸಿದ್ಧಯ್ಯ ಪುರಾಣಿಕ, ಶ್ರೀ ದಿನಕರ ದೇಸಾಯಿ ಅವರಿಗೆ ಗೌರವ ಡಾಕ್ಟರೇಟ ಪದವಿಯನ್ನು ದಯಪಾಲಿಸಲಾಯಿತು.

ಕಂಬನಿ

ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸೇವೆ ಸಲ್ಲಿಸುವುದರ ಮೂಲಕ ಕನ್ನಡದ ಕಣಜವನ್ನು ಶ್ರೀಮಂತಗೊಳಿಸಿದ ಡಾ. ಡಿ. ವಿ. ಜಿ., ಡಾ. ಎ. ಎನ್. ಉಪಾಧ್ಯೆ, ಡಾ. ಎಸ್. ಸಿ. ನಂದಿಮಠ ಮತ್ತು ಶ್ರೀ ಎಂ. ಎಸ್. ಬಗಲಿ ಅವರು ನಮ್ಮನ್ನಗಲಿದುದು ಕರ್ನಾಟಕಕ್ಕೆ, ತನ್ಮೂಲಕ ಭಾರತಕ್ಕೆ ತುಂಬಲಾಗದ ಹಾನಿಯುಂಟಾಗಿದೆ.

ಡಿ. ವಿ. ಜಿ. ಹೊಸಗನ್ನಡ ಸಾಹಿತ್ಯದ ನಿರ್ಮಾಪಕರಲ್ಲೊಬ್ಬರು. ಪದ್ಯಕವಿಗಳಾಗಿ, ಗದ್ಯಲೇಖಕರಾಗಿ, ಪತ್ರಿಕಾಕರ್ತರಾಗಿ, ವಿಮರ್ಶಕರಾಗಿ ನಮ್ಮ ನಾಡಿಗೆ ಅವರು ನೀಡಿದ ಕಾಣಿಕೆ "ಅಪೂರ್ವವಾದುದು" ಎಂದು ಹೇಳಿದರೆ ಏನೂ ಹೇಳಿದಂತಲ್ಲ. ಕನ್ನಡ ಸಾಹಿತ್ಯವನ್ನು ಬೆಳೆಸಿದ ಅವರು ಕೀರ್ತಿವಂತರು. ಅವರ ಅಗಲಿಕೆ ಕನ್ನಡಿಗನಿಗೆ ಮರೆಯಲಾಗದ ಆಘಾತವಾಗಿದೆ. ದೇವರು ಶ್ರೀಯುತರ ಆತ್ಮಕ್ಕೆ ಶಾಂತಿಯನ್ನೀಯಲಿ ಯೆಂದು ಭಾರತಿ ಹಾರೈಸುತ್ತದೆ.

ಡಾ. ಎ. ಎನ್. ಉಪಾಧ್ಯೆಯೆಂಬುದು ವಿದ್ವತ್ತಿಗೆ ಇನ್ನೊಂದು ಹೆಸರು. ಸಂಸ್ಕೃತ, ಪ್ರಾಕೃತ ಭಾಷೆ–ಸಾಹಿತ್ಯಗಳಲ್ಲಿ ಅವರನ್ನು ಸರಿಗಟ್ಟುವವರು ಈ ಕಾಲದಲ್ಲಿ ಸಿಗುವುದು ಅಪರೂಪ. 'ಭಾರತೀಯ ಜ್ಞಾನಪೀಠ'ದ ಕ್ರಿಯಾಶೀಲ ಕಾರ್ಯಕರ್ತರಾಗಿ ಅದರ ಅನುಷ್ಠಾನ, ಅಭಿವೃದ್ಧಿಗಳಿಗೆ ಡಾ. ಉಪಾಧ್ಯೆ ಸಲ್ಲಿಸಿದ ಸೇವೆ ಅಪ್ರತಿಮವಾದುದು. ಅವರ ಅಗಲುವಿಕೆಯಿಂದಾದ ಕೊರತೆಯನ್ನು ತುಂಬಿಕೊಡುವ ವಿದ್ವಾಂಸರನ್ನು ಕಾಣಬೇಕಾದರೆ ನಾವು ಎಷ್ಟು ವರ್ಷ ಕಾಯಬೇಕಾಗುವುದೋ, ಅಂಥ ಪಾಂಡಿತ್ಯದ ಪಟ್ಟಗಜ ಅವರು. ಶ್ರೀಯುತರ ಅಗಲಿಕೆ ಭಾರತೀಯ ಮಟ್ಟದ ದೊಡ್ಡ ಹಾನಿ. ಭಾರತಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯ, ಭೋಟಾಮಹಾಬಳೇಶ್ವರದ ಮೇಲೆ ನಿಂತಿದೆ ಯೆಂಬುದು ಭೌಗೋಲಿಕ ಸತ್ಯವಾದರೆ, ಡಾ. ಎಸ್. ಸಿ. ನಂದಿಮಠ ಅಂಥವರ ಶ್ರಮತ್ಯಾಗಗಳ ಮೇಲೆ ನಿಂತಿದೆಯೆಂಬುದು ತ್ರಿಕಾಲಸತ್ಯ. ಬೆಳಗಾಂವ, ಬಾಗಿಲುಕೋಟೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ, ಕರ್ನಾಟಕ ವಿಶ್ವವಿದ್ಯಾಲಯದ ಮಹಾ ಶಿಲ್ಪಿಗಳಲ್ಲಿ ಒಬ್ಬನೆನಿಸಿ, ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಪರಮ ಆರಾಧಕರೆನಿಸಿ ಕಳೆದ ೫೦ ವರ್ಷಗಳಿಂದ ಕರ್ನಾಟಕದಲ್ಲಿ ಜಂಗಮ ಕ್ರಿಯಾಶಕ್ತಿಯಂತೆ ಬದುಕಿದ ಶ್ರೀಯುತರು ಲಿಂಗೈಕ್ಯರಾದುದು ನಮ್ಮೆಲ್ಲರಿಗೂ ಪಶ್ಚಾತ್ತಾಪವನ್ನುಂಟುಮಾಡಿದೆ. ಅವರ ಪಥದಲ್ಲಿ ಮುನ್ನಡೆಯುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯೆಂದು ಬಗೆಯುತ್ತ, 'ಭಾರತಿ' ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಶ್ರೀ ಎಂ. ಎಸ್. ಬಗಲಿ ಅವರ ಸೇವೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕುಲಸಚಿವ ರೂಪದಲ್ಲಿ ಲಭಿಸಿದುದು ತುಂಬ ಸ್ಮರಣೀಯವಾದುದು. ಶ್ರೇಷ್ಠ ನ್ಯಾಯಾಧೀಶರಾಗಿ, ವಿಜಾಪುರದ ಬಿ ಎಲ್ ಡಿ.ಈ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಅವರು ಕಾಯ್ದೆ ಮತ್ತು ಶಿಕ್ಷಣಕ್ಷೇತ್ರಗಳಿಗೆ ತುಂಬ ಶ್ರದ್ಧೆಯಿಂದ ದುಡಿದವರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ ಪರಂಪರೆಯ ಗೌರವ–ಘನತೆಗಳನ್ನು ಅಚ್ಯುತವಾಗಿ ನಡೆಸಿಕೊಂಡು ಬಂದವರು. ಶ್ರೀಯುತರು ನಿಧನರಾದ ನಿಮಿತ್ತ ನಮ್ಮೆಲ್ಲರಿಗೆ ತುಂಬಿಬಾರದ ಹಾನಿಯುಂಟಾಗಿದೆ. 'ಭಾರತಿ' ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಭೈರಪ್ಪನವರಿಗೆ ಪುರಸ್ಕಾರ

ಎಸ್. ಎಲ್. ಭೈರಪ್ಪ, "ಪ್ರಾಯಂ ಕೂಸಾದೊಡಭಿಪ್ರಾಯಂ ಕೂಸಕ್ಕುಮೇ?" ಎಂಬ ಮಾತಿಗೆ ನಿತ್ಯ ನಿದರ್ಶನ. ಕಾದಂಬರಿ ಕ್ಷೇತ್ರದಲ್ಲಿ ಹೊಸದೃಷ್ಟಿಯನ್ನೇ ಮೂಡಿಸಿ, ವಾಚಕಲೋಕವನ್ನೇ ಸೆರೆಹಿಡಿದ ಮಹಾ ಮಾಂತ್ರಿಕರು ಅವರು. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ನಾಯಿ ನೆರಳು ಮೊದಲಾದ ಕಾದಂಬರಿಗಳನ್ನು; ಒಂದೆರಡು ಚಿಂತನಪರ ಕೃತಿಗಳನ್ನೂ ನಿರ್ಮಿಸಿ ಕನ್ನಡದಲ್ಲಿ ಮೈಲುಗಲ್ಲುಗಳನ್ನೇ ನಿಲ್ಲಿಸಿದ ಸಮರ್ಥ ಸಾಹಿತಿಗಳಿವರು. ಶ್ರೀಯುತರ 'ದಾಟು' ಕಾದಂಬರಿ ಭಾರತೀಯಮಟ್ಟಕ್ಕೆ ಏರಿ ಹೋಗಿ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪುರಸ್ಕಾರವನ್ನು ಗೆದ್ದುತಂದುದು ಕರ್ನಾಟಕದ ಕಿರೀಟಕ್ಕೆ ಇನ್ನೊಂದು ಗರಿ. ಈ ವಿಜಯಶಾಲಿ ಸಾಹಿತಿಗೆ 'ಭಾರತಿ' ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಇಂಥ ನೂರು ಮಾನಸನ್ಮಾನಗಳನ್ನು ಅವರು ಗಳಿಸಲಿ ಯೆಂದು ಹಾರೈಸುತ್ತದೆ.

■ ■

ಸಾದರ ಸ್ವೀಕಾರ

೧. **ವಿಯೇಟ್‌ನಾಮ್ ವಿಜಯ :**
ವೆಂಕಟೇಶ ಕುಲಕರ್ಣಿ, ಪ್ರ : ಜಾಗೃತ ಭಾರತ, ಧಾರವಾಡ, ೧೯೭೫
ಬೆಲೆ : ರೂ. ೧–೦೦. ಪುಟ : ೩೫

೨. **ಜಾನಪದದಲ್ಲಿ ಶಲವಡಿ ಗುರುಶಾಂತೇಶ :**
ಸಂ. ಬಸವರಾಜ ಪಾವಟೆ, ಪ್ರ : ಶಾಂತೇಶ್ವರ ಮಠ, ಶಲವಡಿ, ೧೯೭೫
ಬೆಲೆ : ರೂ. ೨–೦೦. ಪುಟ : xii + ೭೨

೩. **ಕಪೋತ ಚರಿತ್ರೆ :**
ಭೋಜರಾಜ ಪಾಟೀಲ, ಪ್ರ : ಶಿವಬಸವ ಪ್ರಕಾಶನ, ಹಾವೇರಿ, ೧೯೭೫
ಬೆಲೆ : ರೂ. ೧–೫೦. ಪುಟ : ೫ + ೪೧

೪. **ಪಡುವನಾಡಿನ ಪ್ರೇಮವೀರ :**
ಅನು: ಬಸವರಾಜ ನಾಯ್ಕರ, ಪ್ರ : ಯುಗಧ್ವನಿ ಪ್ರಕಾಶನ, ಧಾರವಾಡ, ೧೯೭೫
ಬೆಲೆ : ರೂ. ೫–೦೦. ಪುಟ : iv + ೮೨

೫. **ನಿಚ್ಚಳ ನಿಲುವು :**
ಗೋಭಾನು, ಪ್ರ : ನೇಸರ ಪ್ರಕಾಶನ, ನೇಸರಗಿ, ೧೯೭೫
ಬೆಲೆ : ರೂ. ೨–೦೦. ಪುಟ : xi + ೩೮

೬. **ವಚನಕಾರ ಅಂಬಿಗರ ಚೌಡಯ್ಯ :**
ಎಸ್. ಎಸ್. ಭೂಸರಡ್ಡಿ, ಪ್ರ : ಜ. ಗಂ. ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ, ೧೯೭೫
ಬೆಲೆ : ರೂ. ೧–೦೦. ಪುಟ : viii + ೩೦

೭. **ನಮ್ಮ ಪರೀಕ್ಷಾ ಪದ್ಧತಿ :**
ಬಿ. ಸಿ. ಪಾಟೀಲ, ಪ್ರ : ರವಿ ಪ್ರಕಾಶನ, ಧಾರವಾಡ, ೧೯೭೫
ಬೆಲೆ : ರೂ. ೧–೦೦. ಪುಟ : ೨೪

೮. **ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ :**
ಗುಂಡಾ ಜೋಯಿಸ್, ಪ್ರ : ಕೆಳದಿ ಮ್ಯೂಜಿಯಂ ಮತ್ತು ಹಿಸ್ಟಾರಿಕಲ್
ಬ್ಯೂರೋ, ಕೆಳದಿ, ೧೯೭೫
ಬೆಲೆ : ರೂ. ೫–೦೦. ಪುಟ : ೧೦೫

೯. **ಬೊಗಸೆ ತುಂಬದ ಬದುಕು :**

ಸುಬ್ಬರಾಯ ದೇಶಪಾಂಡೆ, ಪ್ರ : ಕಾವ್ಯಧಾರಾ ಪ್ರಕಾಶನ, ಧಾರವಾಡ, ೧೯೭೫
ಬೆಲೆ : ರೂ. ೫-೦೦. ಪುಟ : ೫೨

೧೦. **ಸಂತೆಯಲ್ಲೊಂದು ಮನೆ :**

ಸುಬ್ಬರಾಯ ದೇಶಪಾಂಡೆ, ಪ್ರ : ಕಾವ್ಯಧಾರಾ ಪ್ರಕಾಶನ, ಧಾರವಾಡ, ೧೯೭೫
ಬೆಲೆ : ರೂ. ೪-೫೦. ಪುಟ : ೫೦

ಪತ್ರಿಕೆಗಳು :

ಕನ್ನಡ ನುಡಿ	ರಾಷ್ಟ್ರೋತ್ಥಾನವಾರ್ತಾ
ಸಾಹಿತ್ಯ ಪರಿಷತ್ಪತ್ರಿಕೆ	ಮತ್ಸ್ಯಲೋಕ
ಜೀವನ ವಿಕಾಸ	ಅಭಿರುಚಿ
ಪಂಚಾಚಾರ ಪ್ರಕಾಶ	ಹೇಮಕೂಟ
ಪರಂಜ್ಯೋತಿ	ಶೃಂಗಾರ
ಕೃಷಿವಿಜ್ಞಾನ	

ಈ ಸಂಚಿಕೆಯ ಲೇಖಕರು

೧. **ಶ್ರೀ ಎ. ಸಿದ್ಧೇಶ್ವರ :**
ಗ್ರಾಮ : ಕಡಬಗೆರೆ. ತಾಲೂಕು : ಹರಪನಹಳ್ಳಿ. ಜಿಲ್ಲೆ : ಬಳ್ಳಾರಿ.

೨. **ಶ್ರೀ ಲಿಂಗದೇವರು ಹಳೆಮನೆ :**
ಸಂಶೋಧನ ಸಹಾಯಕರು, ಭಾರತೀಯ ಭಾಷಾ ಸಂಸ್ಥಾನ, ಮೈಸೂರು–೬

೩. **ಶ್ರೀಮತಿ ಎಂ. ಎನ್. ಲೀಲಾವತಿ :**
ಅಧ್ಯಾಪಕಿ, ಭಾರತೀಯ ಭಾಷಾ ಸಂಸ್ಥಾನ, ಮೈಸೂರು–೬

೪. **ಡಾ. ಅ. ಸುಂದರ :**
ರೀಡರ್, ಪ್ರಾಚೀನ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. **ಶ್ರೀ ಬಸವರಾಜ ಸಬರದ :**
ಕನ್ನಡ ಅಧ್ಯಾಪಕರು, ಜೂನಿಯರ ಕಾಲೇಜು, ರಾಯಬಾಗ

೬. **ಶ್ರೀ ವಿಷ್ಣುಸುತ (ಡಿ. ವ್ಹಿ. ದಿವಾಣಜಿ) :**
ಬಸವರಾಜ ರೈಸ್ ಮಿಲ್, ಅಳ್ನಾವರ

೭. **ಶ್ರೀ ಗೌರೀಶ ಕಾಯ್ಕಿಣಿ :**
ಗೋಕರ್ಣ (ದಕ್ಷಿಣ ಕನ್ನಡ ಜಿಲ್ಲೆ)

೮. **ಡಾ. ಎಂ. ಚಿದಾನಂದಮೂರ್ತಿ :**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೯. **ಡಾ. ಬಿ. ಶಿವಮೂರ್ತಿಶಾಸ್ತ್ರಿ :**
'ಶಿವಪ್ರಸಾದ', ೫ ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು–೫೬೦೦೧೦

೧೦. **ಡಾ. ಎಂ. ಎಂ. ಕಲಬುರ್ಗಿ :**
ರೀಡರ್, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. **ಶ್ರೀ ಎಚ್. ಬಾಲರಾಜು :**
C/o ಪ್ರೊ. ಎಸ್. ಎಸ್. ಹಿರೇಮಠ, ವಿಜಯನಗರ ಕಾಲೇಜು, ಹೊಸಪೇಟ

೧೨. **ಶ್ರೀ ಎಸ್. ಎಸ್. ಹಿರೇಮಠ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟ

೧೩. **ಶ್ರೀ ಬಿ. ಬಿ. ಮಹೀಶವಾಡಿ :**
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೧೪. **ಶ್ರೀ ಗುಂಡಾ ಜೋಯಿಸ್ :**
ಕೆಳದಿ ವಸ್ತುಸಂಗ್ರಹಾಲಯ, ಕೆಳದಿ

೧೫. **ಶ್ರೀ ಸಂಗಮೇಶ ಸವದತ್ತಿಮಠ :**
ಸಂಶೋಧನ ಸಹಾಯಕರು, ಕನ್ನಡವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

೧೬. **ಶ್ರೀ ಸಿದ್ಧಲಿಂಗ ದೇಸಾಯಿ :**
ಹೊಸಯಲ್ಲಾಪುರ, ದುಂಡಿಗಲ್ಲಿ, ಧಾರವಾಡ

೧೭. **ಡಾ. ಆರ್. ಎನ್. ಗುರವ :**
ಕೊಪ್ಪದಕೆರೆ, ಧಾರವಾಡ–೫೮೦೦೦೩

೧೮. **ಶ್ರೀ ಕಂಠೀರಾವ್ :**
ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ, ೬೩. ಅರಮನೆ ರಸ್ತೆ,
ವಸಂತ ನಗರ, ಬೆಂಗಳೂರು–೫೬೦೦೫೨

೧೯. **ಶ್ರೀ ಸೀತಾರಾಮ ಜಾಗೀರ್‌ದಾರ್ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು

೨೦. **ಡಾ. ಎಸ್. ಶೆಟ್ಟರ್ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೧. **ಶ್ರೀ ಎಸ್. ರಾಜಶೇಖರ :**
ಇತಿಹಾಸ ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೨. **ಡಾ. ಸಿ. ಪಿ. ಕೆ. :**
ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೩. **ಶ್ರೀ ಎಸ್. ಶಿವಣ್ಣ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೪. **ಶ್ರೀ ಶ್ರೀನಿವಾಸ ಕುಲಕರ್ಣಿ :**
ಕನ್ನಡ ಅಧ್ಯಾಪಕರು, ಸಿದ್ಧೇಶ್ವರ ಆರ್ಟ್ಸ್ ಕಾಲೇಜು. ನರಗುಂದ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗೂ ಪ್ರಕಟನವಿಭಾಗ

ಇತ್ತೀಚಿನ ಪ್ರಕಟನೆಗಳು

ಸಂಶೋಧನ ಗ್ರಂಥಮಾಲೆ

ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮ —ಎಂ. ಎಸ್. ಲಕ್ಕೆ ರೂ. ೨೩=೦೦

ಉಪನ್ಯಾಸಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

ಬಳ್ಳಾರಿ ಜಿಲ್ಲೆಯ ಶಿವಶರಣರು —ಶಾಂತರಸ

ಸಕ್ಕರೆ ರೋಗ —ಪಿ. ಎಸ್. ಶಂಕರ

ಶ್ರಮಜೀವಿಗಳ ಕಲ್ಯಾಣ —ಎಸ್. ಎಂ. ಹಿಪ್ಪರಗಿ

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ —ದು. ನಿಂ. ಬೆಳಗಲಿ

ಮಾನಸಿಕ ರೋಗಗಳು —ಎಂ. ಆರ್. ರೇಣುಕಾರ್ಯ

ಮೊಹರ್ರಂ ಪದಗಳು —ಚೆನ್ನಣ್ಣ ವಾಲೀಕಾರ

ಕಳೆ ನಿಯಂತ್ರಣ —ಎಂ. ಎಂ. ಹೊಸಮನಿ

ನಮ್ಮ ದೇಶದಲ್ಲಿ ಬಡತನ ಹಾಗೂ ಅದರ ನಿವಾರಣೆ —ಎಂ. ಸಿ. ಕೊಡ್ಲಿ

ಬಸವಣ್ಣನವರ ಧ್ಯೇಯಾದರ್ಶಗಳಿಗೆ ಸಮಕಾಲೀನರ ಕಾಣಿಕೆ —ಎಸ್. ಜಿ. ಹಂಡಿ

ಜನಪದ ಸಾಹಿತ್ಯ

ಗಂಗೀ–ಗೌರಿ ಸಂವಾದ —ಸಂ. : ಎಂ.ಎಸ್. ಸುಂಕಾಪುರ ರೂ. ೫=೦೦

ಹೋಳಿ ಹಾಡು —ಸಂ. ; ಎಂ.ಎಸ್. ಸುಂಕಾಪುರ ರೂ. ೫=೦೦

ದುಂದುಮೆ ಪದಗಳು —ಸಂ. : ಎಂ.ಎಸ್. ಸುಂಕಾಪುರ ರೂ. ೫=೦೦

ಪ್ರಮೀಳೆ —ಸಂ. : ಎಂ.ಎಸ್. ಸುಂಕಾಪುರ ರೂ. ೫=೦೦

ಉತ್ತರ ಕನ್ನಡ ಜನಪದ ಕಥೆಗಳು —ಸಂ. : ಎಲ್.ಆರ್. ಹೆಗಡೆ ರೂ. ೧೦=೦೦

ವಚನ ಸಾಹಿತ್ಯ

ಲಿಂಗಚಿದಮೃತ ಬೋಧೆ —ಸಂ.: ಎಂ.ಎಸ್. ಸುಂಕಾಪುರ ರೂ. ೧೨=೦೦

ಇತರ ಪ್ರಕಟನೆಗಳು

ನನ್ನದು ಈ ಕನ್ನಡನಾಡು —ಪಾಟೀಲ ಪುಟ್ಟಪ್ಪ ರೂ. ೫=೦೦

ಕರ್ನಾಟಕ ಮತ್ತು ಜೈನ ಸಂಸ್ಕೃತಿ ರೂ. ೫=೦೦

ಚಿತ್ರ, ಶಿಲ್ಪ, ವಾಸ್ತುಕಲೆಗಳು —ಕೆ. ಶಿವರಾಮ ಕಾರಂತ ರೂ. ೪=೦೦

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ ೧ ರಿಂದ ಮಾರ್ಚ ೩೧ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಶೇ. ೩೩⅓ದಂತೆ ಕಮೀಶನ್ ಕೊಡಲಾಗುವುದು.

*

ವಿಶ್ವವಿದ್ಯಾಲಯದ ರಜತಮಹೋತ್ಸವದ ನೆನಪಿಗಾಗಿ

ವಿಶೇಷ ರಿಯಾಯಿತಿ

- ೧೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಪುಸ್ತಕಗಳ (ಪಠ್ಯಪುಸ್ತಕ ಹೊರತುಪಡಿಸಿ) ಖರೀದಿಗೆ ಶೇ. ೨೫+೧೫.
- ೫,೦೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟು ಖರೀದಿಗೆ ಶೇ. ೩೩⅓+ಶೇ. ೧೫

(೩೯—೨—೧೯೭೭ರ ವರೆಗೆ ಮಾತ್ರ)

*

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ—ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ—ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯಂತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ
ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ'
ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು.
ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು
ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ:

ನಿರ್ದೇಶಕರು,
ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩